ಶುಕ್ರವಾರ, ಸೆಪ್ಟೆಂಬರ್ 8, 2023 | ₹ 7.00
www.prajavani.net
prajavani.net prajavani prajavani prajavani
ಪ್ರಜಾವಾಣಿ@75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಕೃಷ್ಣ ವೇಷ
ಪಶ್ಚಿಮ ಬಂಗಾಳದ ನಾಡಿಯಾದಲ್ಲಿ ಜನ್ಮಾಷ್ಟಮಿ ಪ್ರಯುಕ್ತ ಕೃಷ್ಣ ವೇಷಧಾರಿ ಮಗುವಿಗೆ ಅಲಂಕಾರ ಮಾಡಿದ ಮಹಿಳೆ

ಆಸಿಯಾನ್–ಭಾರತ, ಪೂರ್ವ ಏಷ್ಯಾ ಶೃಂಗಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದನೆ

ಪ್ರಾದೇಶಿಕ ಸಮಗ್ರತೆ ಬಲಪಡಿಸಲು ಯತ್ನ

ಜಕಾರ್ತ(ಪಿಟಿಐ): ರಾಷ್ಟ್ರಗಳ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆ ಬಲಪಡಿಸಲು ಜಂಟಿ ಪ್ರಯತ್ನ ಅಗತ್ಯ ಎಂದು ಪ್ರಧಾನಿ ನರೇಂದ್ರ ಮೋದಿ ಪ್ರತಿಪಾದಿಸಿದ್ದಾರೆ.

ಇಂಡೊನೇಷ್ಯಾ ರಾಜಧಾನಿಯಲ್ಲಿ ಗುರುವಾರ ನಡೆದ ಆಸಿಯಾನ್ (ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘ)- ಭಾರತ ಮತ್ತು ಪೂರ್ವ ಏಷ್ಯಾ ರಾಷ್ಟ್ರಗಳ ಶೃಂಗದಲ್ಲಿ ಮಾತನಾಡಿದ ಅವರು, 'ಮುಕ್ತ ಇಂಡೊ-ಪೆಸಿಫಿಕ್ ಪ್ರದೇಶದ ಖಾತ್ರಿ ಈ ಹೊತ್ತಿನ ಅಗತ್ಯ. ದಕ್ಷಿಣ ಚೀನಾ ಸಮುದ್ರ ನೀತಿ ಸಂಹಿತೆಯು ಪರಿಣಾಮಕಾರಿ ಆಗಿರಬೇಕು ಮತ್ತು ಸಾಗರ ನೀತಿಗೆ ಸಂಬಂಧಿಸಿದ ವಿಶ್ವಸಂಸ್ಥೆಯ ಕಾನೂನಿಗೆ (ಯುಎನ್‌ಸಿಎಲ್‌ಒಎಸ್) ಅನುಗುಣವಾಗಿರಬೇಕು ಎಂದು ಭಾರತ ಅಪೇಕ್ಷಿಸುತ್ತದೆ' ಎಂದು ಹೇಳಿದರು.

ದಕ್ಷಿಣ ಚೀನಾ ಸಮುದ್ರದಲ್ಲಿ ಚೀನಾದ ಸೇನೆಯ ಬಲವರ್ಧನೆ ಬಗ್ಗೆ ಜಾಗತಿಕ ಮಟ್ಟದಲ್ಲಿ ಕಳವಳ ಹೆಚ್ಚುತ್ತಿರುವ ನಡುವೆಯೇ ಜಾಗತಿಕ ವೇದಿಕೆಯಲ್ಲಿ ಮೋದಿ ಈ ವಿಷಯ ಪ್ರಸ್ತಾಪಿಸಿದರು.

ದಕ್ಷಿಣ ಚೀನಾ ಸಮುದ್ರದ ಮೇಲಿನ ಹಕ್ಕು ಪ್ರತಿಪಾದಿಸುವ ಚೀನಾದ ಪ್ರಮಾಣಿತ ನಕ್ಷೆಯನ್ನು ಮಲೇಷಿಯಾ ವಿಯೆಟ್ನಾಂ ಮತ್ತು ಫಿಲಿಪೀನ್ಸ್ ಸೇರಿದಂತೆ ಹಲವು ಅಸಿಯಾನ್ ರಾಷ್ಟ್ರಗಳು ವಿರೋಧಿಸಿದ್ದವು.


ತೈವಾನ್, ದಕ್ಷಿಣ ಚೀನಾ ಸಮುದ್ರ, ಅರುಣಾಚಲ ಪ್ರದೇಶ ಮತ್ತು ಅಕ್ಸಾಯ್ ಚಿನ್ ಅನ್ನು ಒಳಗೊಂಡ 'ಪ್ರಮಾಣಿತ ನಕ್ಷೆ'ಯ 2023 ಆವೃತ್ತಿಯನ್ನು ಚೀನಾ ಆಗಸ್ಟ್ 28 ರಂದು ಬಿಡುಗಡೆ ಮಾಡಿದೆ. ಭಾರತವು ಈ ನಕ್ಷೆಗೆ ಆಕ್ಷೇಪ ವ್ಯಕ್ತಪಡಿಸಿದೆ.

ಇದೆಲ್ಲವನ್ನೂ ಒಳಗೊಂಡಂತೆ, ಭೌಗೋಳಿಕ ರಾಜಕೀಯ ಸಂಘರ್ಷಗಳನ್ನು ಉಲ್ಲೇಖಿಸಿ ಆಸಿಯಾನ್ ಶೃಂಗದಲ್ಲಿ ಮಾತನಾಡಿದ ಮೋದಿ, 'ಇದು ಯುದ್ಧದ ಕಾಲವಲ್ಲ ಮತ್ತು ಸಂಘರ್ಷಗಳ ಪರಿಹಾರಕ್ಕೆ ಮಾತುಕತೆ ಮತ್ತು ರಾಜತಾಂತ್ರಿಕತೆ ಏಕೈಕ ಮಾರ್ಗವಾಗಿದೆ' ಎಂದು ಹೇಳಿದರು.

'ಭಯೋತ್ಪಾದನೆ ಮತ್ತು ಭೌಗೋಳಿಕ ರಾಜಕೀಯ ಸಂಘರ್ಷಗಳು ನಮ್ಮೆಲ್ಲರ ದೊಡ್ಡ ಸವಾಲುಗಳಾಗಿವೆ. ಪ್ರಸ್ತುತ ಜಾಗತಿಕ ಭೌಗೋಳಿಕ ಪರಿಸ್ಥಿತಿಯು ಸವಾಲು ಮತ್ತು ಅನಿಶ್ಚಿತತೆಗಳಿಂದ ಆವರಿಸಿದೆ' ಎಂದು ಪ್ರಧಾನಿ ಹೇಳಿದರು.

'ಅಂತರರಾಷ್ಟ್ರೀಯ ಕಾನೂನುಗಳಿಗೆ ಸಂಪೂರ್ಣವಾಗಿ ಬದ್ಧವಾಗಿರಬೇಕಾದ್ದು ಇಂದಿನ ಅಗತ್ಯವಾಗಿದೆ. ಎಲ್ಲಾ ದೇಶಗಳ ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಯನ್ನು ಬಲಪಡಿಸಲು ಪ್ರತಿಯೊಬ್ಬರ ಬದ್ಧತೆ ಮತ್ತು ಜಂಟಿ ಪ್ರಯತ್ನಗಳೂ ಬೇಕು. ಸಮಸ್ಯೆಗಳ ಪರಿಹಾರಕ್ಕೆ ಚರ್ಚೆ ಮತ್ತು ರಾಜತಾಂತ್ರಿಕತೆಯೇ ದಾರಿ' ಎಂದು ಅವರು ಪ್ರತಿಪಾದಿಸಿದರು.

ಕಳೆದ ವರ್ಷ ಸೆಪ್ಟೆಂಬರ್ 16 ರಂದು ಉಜ್ಬೇಕಿಸ್ತಾನದ ಸಮರ್ಕಂಡ್‌ನಲ್ಲಿ ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರೊಂದಿಗಿನ ದ್ವಿಪಕ್ಷೀಯ ಸಭೆಯಲ್ಲಿ ಮೋದಿ ಇದೇ ಮಾತುಗಳನ್ನು ಆಡಿದ್ದರು. 'ಇದು ಯುದ್ಧದ ಕಾಲವಲ್ಲ. ಉಕ್ರೇನ್ ವಿರುದ್ಧದ ಸಂಘರ್ಷ ಕೊನೆಗೊಳಿಸಬೇಕು' ಎಂದು ಪುಟಿನ್‌ಗೆ ಸಲಹೆ ನೀಡಿದ್ದರು.



ಇಂಡೊನೇಷ್ಯಾ ರಾಜಧಾನಿ ಜಕಾರ್ತದಲ್ಲಿ ನಡೆದ ಭಾರತ–ಆಸಿಯಾನ್ ಶೃಂಗಸಭೆ ವೇಳೆ ಮಲೇಷಿಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರಿಗೆ ಪ್ರಧಾನಿ ನರೇಂದ್ರ ಮೋದಿ ಹಸ್ತಲಾಘವ ಮಾಡಿದರು. ಅಮೆರಿಕ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಇದ್ದಾರೆ –ಪಿಟಿಐ ಚಿತ್ರ

ಆಹಾರ ಭದ್ರತೆ ಖಾತ್ರಿಗೆ ಅಕ್ಕಿ, ಸಿರಿಧಾನ್ಯಗಳ ಮೇಲೆ ಗಮನ

ಅಕ್ಕಿ ಮತ್ತು ಸಿರಿಧಾನ್ಯಗಳ ಬಹು ಪ್ರಯೋಜನಗಳಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳುವುದನ್ನು ಅಂಗೀಕರಿಸಲು, ಪರಸ್ಪರ ವ್ಯಾಪಾರ ಮತ್ತು ಹೂಡಿಕೆ ಉತ್ತೇಜಿಸುವ ಮೂಲಕ ಆಹಾರ ಭದ್ರತೆ ಹಾಗೂ ಪೌಷ್ಟಿಕಾಂಶದ ಮೇಲೆ ಸಹಕಾರ ಬಲಪಡಿಸಲು ಗುರುವಾರ ಇಲ್ಲಿ ನಡೆದ ಆಸಿಯಾನ್-ಭಾರತ ಶೃಂಗಸಭೆಯು ನಿರ್ಧರಿಸಿದೆ.

ಆಗ್ನೇಯ ಏಷ್ಯಾ ರಾಷ್ಟ್ರಗಳ ಸಂಘದ (ಆಸಿಯಾನ್) ಸದಸ್ಯ ರಾಷ್ಟ್ರಗಳು ಮತ್ತು ಭಾರತೀಯ ನಾಯಕರು 'ಆಹಾರ ಭದ್ರತೆ ಮತ್ತು ಬಿಕ್ಕಟ್ಟುಗಳಿಗೆ ಪ್ರತಿಕ್ರಿಯೆಯಾಗಿ ಪೋಷಣೆ ಬಲಪಡಿಸುವುದು' ಕುರಿತ ಜಂಟಿ ಹೇಳಿಕೆಯಲ್ಲಿ ವಿಶೇಷವಾಗಿ ಅಕ್ಕಿ ಮತ್ತು ಇತರ ಆದ್ಯತೆಯ ಬೆಳೆ ಉತ್ಪನ್ನಗಳಿಗೆ ಸಂಬಂಧಿಸಿ ರಾಷ್ಟ್ರೀಯ ನೀತಿಯ ಚೌಕಟ್ಟುಗಳ ಮಾಹಿತಿ ವಿನಿಮಯ ಮಾಡಿಕೊಳ್ಳಲು ನಿರ್ಧಾರ ತೆಗೆದುಕೊಂಡಿದ್ದಾರೆ.

ಏಷ್ಯಾದಾದ್ಯಂತ ಶತಕೋಟಿ ಜನರಿಗೆ ಅಕ್ಕಿಯು ನಿಯಮಿತ ಮತ್ತು ನಿರ್ಣಾಯಕವಾಗಿಯೂ ಪ್ರಮುಖವಾದ ಆಹಾರದ ಅಂಶವಾಗಿದೆ. ಬದಲಾಗುತ್ತಿರುವ ಹವಾಮಾನ ಪರಿಸ್ಥಿತಿಗಳು, ವಿಶೇಷವಾಗಿ ಕಡಿಮೆ ಮಳೆಯು ಅಕ್ಕಿ ಉತ್ಪಾದನೆ ಕುಗ್ಗಿಸಿದೆ.

ಅಲ್ಲದೆ, ಇತರ ಅಂಶಗಳನ್ನು ಒಳಗೊಂಡಂತೆ ಹಲವು ಸವಾಲುಗಳು ಅಕ್ಕಿ ಉತ್ಪಾದನೆಯಲ್ಲಿ ಎದುರಾಗಿದೆ. ಹಾಗಾಗಿ ಶೃಂಗಸಭೆಯಲ್ಲಿ ಈ ಮಹತ್ವದ ನಿರ್ಣಯಕ್ಕೆ ಬಂದಿವೆ.

ಸಹಕಾರ ವಿಸ್ತರಣೆಗೆ 12 ಅಂಶಗಳ ಪ್ರಸ್ತಾವ

ಜಕಾರ್ತ (ಪಿಟಿಐ): ಆಸಿಯಾನ್ ಶೃಂಗದಲ್ಲಿ ಭಾಗವಹಿಸಿದ್ದ ಪ್ರಧಾನಿ ಮೋದಿ, ವ್ಯಾಪಾರ ಮತ್ತು ಡಿಜಿಟಲ್ ರೂಪಾಂತರದಂತಹ ಕ್ಷೇತ್ರಗಳಲ್ಲಿ ಭಾರತ ಮತ್ತು 10-ರಾಷ್ಟ್ರಗಳ ಆಸಿಯಾನ್ ನಡುವಿನ ಸಹಕಾರವನ್ನು ವಿಸ್ತರಿಸಲು 12 ಅಂಶಗಳ ಪ್ರಸ್ತಾವ ಮಂಡಿಸಿದರು.

ಆಗ್ನೇಯ ಏಷ್ಯಾ, ಭಾರತ, ಪಶ್ಚಿಮ ಏಷ್ಯಾ ಮತ್ತು ಯುರೋಪ್ ಅನ್ನು ಬೆಸೆಯುವ ಬಹು-ಮಾದರಿಯ ಸಂಪರ್ಕ, ಆರ್ಥಿಕ ಕಾರಿಡಾರ್ ಸ್ಥಾಪನೆ ಮತ್ತು ಆಸಿಯಾನ್ ಪಾಲುದಾರರೊಂದಿಗೆ ಭಾರತದ ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಪಾಲುದಾರಿಕೆಯನ್ನು ಹಂಚಿಕೊಳ್ಳಲು ನೆರವಾಗುವುದಾಗಿ ಮೋದಿ ಘೋಷಿಸಿದರು.

ಇದರ ಜತೆಗೆ, ಉಗ್ರವಾದ, ಭಯೋತ್ಪಾದನೆಗೆ ಆರ್ಥಿಕ ನೆರವು, ಸೈಬರ್-ತಪ್ಪು ಮಾಹಿತಿಯ ವಿರುದ್ಧ ಸಾಮೂಹಿಕ ಹೋರಾಟ, ಬಹುಪಕ್ಷೀಯ ವೇದಿಕೆಗಳಲ್ಲಿ ದಕ್ಷಿಣದ ರಾಷ್ಟ್ರಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪ್ರಸ್ತಾಪಿಸುವುದೂ ಕೂಡ 12 ಅಂಶಗಳಲ್ಲಿ ಒಳಗೊಂಡಿದ್ದವು ಎಂದು ವಿದೇಶಾಂಗ ಇಲಾಖೆ ತಿಳಿಸಿದೆ.

ಸಾಗರ ನೀತಿ ಸಹಕಾರ ಮತ್ತು ಆಹಾರ ಭದ್ರತೆಗೆ ಸಂಬಂಧಿಸಿದ ಎರಡು ಜಂಟಿ ಹೇಳಿಕೆಗಳಿಗೆ ಶೃಂಗಸಭೆಯಲ್ಲಿ ಅಂಗೀಕಾರ ದೊರೆಯಿತು.

ಕೋವಿಡ್ ನಂತರದ ಪರಿಸ್ಥಿತಿಯಲ್ಲಿ ಜಾಗತಿಕ ಮಟ್ಟದಲ್ಲಿ ದಕ್ಷಿಣದ ಧ್ವನಿಯನ್ನು ಇನ್ನಷ್ಟು ಬಲಪಡಿಸಲು ನಿಯಮ ಆಧಾರಿತ ವ್ಯವಸ್ಥೆಯ ನಿರ್ಮಾಣವಾಗಬೇಕು ಎಂದೂ ಮೋದಿ ಇದೇ ವೇಳೆ ಹೇಳಿದರು.

'ಜಾಗತಿಕ ಅಭಿವೃದ್ಧಿಗೆ ಸಂಬಂಧಿಸಿದಂತೆ ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ಆಸಿಯಾನ್ ಗುಂಪು ಜಗತ್ತಿನ ಬೆಳವಣಿಗೆಯ ಕೇಂದ್ರಬಿಂದುವಾಗಿ ಕೆಲಸ ಮಾಡುತ್ತಿದೆ. 21ನೇ ಶತಮಾನ ಏಷ್ಯಾದ್ದಾಗಿದೆ. ಇದು ನಮ್ಮೆಲ್ಲರ ಶತಮಾನವಾಗಿದೆ' ಎಂದಿದ್ದಾರೆ.

ಭಾರತದ ಜಿ20 ಅಧ್ಯಕ್ಷತೆ, ಚಂದ್ರಯಾನ–3 ಯಶಸ್ಸಿಗೆ ಆಸಿಯಾನ್ ರಾಷ್ಟ್ರಗಳ ನಾಯಕರು ಮೋದಿ ಅವರನ್ನು ಅಭಿನಂದಿಸಿದರು.

ಟಿಮೊರ್ ಲೆಸ್ಟ್‌ನಲ್ಲಿ ರಾಯಭಾರ ಕಚೇರಿ

ಟಿಮೊರ್ ಲೆಸ್ಟ್‌ನ ರಾಜಧಾನಿ ದಿಲಿಯಲ್ಲಿ ಭಾರತೀಯ ರಾಯಭಾರ ಕಚೇರಿ ಆರಂಭಿಸಲು ನಿರ್ಧರಿಸಿರುವುದಾಗಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ತಿಳಿಸಿದ್ದಾರೆ.

ಆಸಿಯಾನ್–ಭಾರತ ಶೃಂಗಸಭೆಯಲ್ಲಿ ಮೋದಿ ಈ ವಿಷಯ ತಿಳಿಸಿದರು ಎಂದು ಭಾರತೀಯ ವಿದೇಶಾಂಗ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಈ ನಿರ್ಧಾರವು ಆಸಿಯಾನ್ ಮತ್ತು ಟಿಮೊರ್ ಲೆಸ್ಟೆಗೆ ಭಾರತ ನೀಡುವ ಪ್ರಾಮುಖ್ಯತೆಯನ್ನು ಪ್ರತಿಬಿಂಬಿಸುತ್ತದೆ ಎಂದು ತಿಳಿಸಿದೆ. 2022ರಲ್ಲಿ ವೀಕ್ಷಕ ರಾಷ್ಟ್ರವಾಗಿ ಆಸಿಯಾನ್ ಸೇರಿದ್ದ ಟಿಮೊರ್ ಲೆಸ್ಟೆ ಸದ್ಯ ಸದಸ್ಯ ರಾಷ್ಟ್ರವಾಗಿದೆ.

ಸುದ್ದಿ 2 ನಿಮಿಷ

ರೋಹಿಣಿ ಸಿಂಧೂರಿ ವಿರುದ್ಧ ಇಲಾಖಾ ತನಿಖೆಗೆ ಆದೇಶ

ಬೆಂಗಳೂರು: ಮೈಸೂರು ಜಿಲ್ಲಾಧಿಕಾರಿ ನಿವಾಸ ನವೀಕರಣ, ಬಟ್ಟೆ ಬ್ಯಾಗ್ ಖರೀದಿಯಲ್ಲಿ ನಿಯಮ ಉಲ್ಲಂಘಿಸಿರುವ ಆರೋಪಕ್ಕೆ ಸಂಬಂಧಿಸಿದಂತೆ ಐಎಎಸ್ ಅಧಿಕಾರಿ ರೋಹಿಣಿ ಸಿಂಧೂರಿ ವಿರುದ್ಧ ಇಲಾಖಾ ತನಿಖೆಗೆ ಸರ್ಕಾರ ಆದೇಶಿಸಿದೆ.



ಈ ಆರೋಪಗಳಿಗೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆ ನಡೆದಾಗ, ರೋಹಿಣಿ ಅವರು ಸರಿಯಾದ ಉತ್ತರ ನೀಡಿಲ್ಲ, ದಾಖಲೆಗಳನ್ನೂ ನೀಡಿಲ್ಲ. ಹೀಗಾಗಿ ಇಲಾಖೆ ತನಿಖೆ ನಡೆಸಲು ಸೂಚಿಸಲಾಗಿದೆ.

ನಿವೃತ್ತ ಐಎಎಸ್ ಅಧಿಕಾರಿ ಯೋಗೇಂದ್ರ ತ್ರಿಪಾಠಿ, ಐಎಎಸ್ ಅಧಿಕಾರಿ ಉಜ್ವಲ್ ಕುಮಾರ್ ಘೋಷ್ ನೇತೃತ್ವದಲ್ಲಿ ತನಿಖಾ ಸಮಿತಿ ರಚನೆ ಮಾಡಲಾಗಿದೆ.

ರೋಹಿಣಿ ಸಿಂಧೂರಿ ಮೈಸೂರು ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಕೆ.ಆರ್. ನಗರ ಶಾಸಕರಾಗಿದ್ದ ಸಾ.ರಾ. ಮಹೇಶ್ ಕೂಡ ಜಟಾಪಟಿ ನಡೆಸಿದ್ದರು. ವಿಧಾನಸಭೆಯಲ್ಲೂ ಇದರ ಪ್ರಸ್ತಾಪವಾಗಿತ್ತು.

ರಾಜ್ಯಸಭೆಯಲ್ಲಿ 25 ಮಸೂದೆಗಳಿಗೆ ಒಪ್ಪಿಗೆ ಬಾಕಿ

ನವದೆಹಲಿ(ಪಿಟಿಐ): ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಎರಡಕ್ಕಿಂತ ಹೆಚ್ಚು ಮಕ್ಕಳು ಇರಬಾರದೆಂದು 1992ರಲ್ಲಿ ಮಂಡಿಸಿರುವ ಮಸೂದೆಯೂ ಸೇರಿದಂತೆ ಒಟ್ಟು 25 ಮಸೂದೆಗಳಿಗೆ ರಾಜ್ಯಸಭೆಯಲ್ಲಿ ಇನ್ನೂ ಒಪ್ಪಿಗೆ ಸಿಕ್ಕಿಲ್ಲ.

ಲೋಕಸಭೆಯು ವಿಸರ್ಜನೆಯಾದಾಗಷ್ಟೇ ಅಲ್ಲಿ ಮಂಡಿಸಿರುವ ಮಸೂದೆಗಳ ಅಂಗೀಕಾರಕ್ಕೆ ವಿಳಂಬವಾಗುತ್ತದೆ. ಆದರೆ, ಮೇಲ್ಮನೆಯು ಎಂದಿಗೂ ವಿಸರ್ಜನೆಯಾಗುವುದಿಲ್ಲ. ಅದು ಸಂಸತ್‌ನ ಶಾಶ್ವತ ಸದನವಾಗಿದೆ. ಸರ್ಕಾರ ವಾಪಸ್ ಪಡೆಯದ ಹೊರತು ರಾಜ್ಯಸಭೆಯಲ್ಲಿಯೇ ಮಸೂದೆ ಉಳಿಯುತ್ತದೆ.

ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಮನೆ ಬಾಡಿಗೆಗೆ ಮಿತಿಹೇರಿಕೆ, ಮನೆಗಳ ದುರಸ್ತಿ ಹಾಗೂ ಬಾಡಿಗೆದಾರರ ಹಿತರಕ್ಷಣೆಗೆ ಸಂಬಂಧಿಸಿ ದೆಹಲಿ ಬಾಡಿಗೆ (ತಿದ್ದುಪಡಿ) ಮಸೂದೆ, ಭಾರತೀಯ ಟೆಲಿಕಾಂ ನಿಯಂತ್ರಣ ಪ್ರಾಧಿಕಾರ (ಟ್ರಾಯ್) ತಿದ್ದುಪಡಿ ಮಸೂದೆಗೆ ಮೇಲ್ಮನೆಯಲ್ಲಿ ಅಂಗೀಕಾರ ನೀಡಿಲ್ಲ ಎಂದು ರಾಜ್ಯಸಭೆಯ ಪ್ರಕಟಣೆ ತಿಳಿಸಿದೆ.

ಸಂವಿಧಾನ (79ನೇ ತಿದ್ದುಪಡಿ) ಮಸೂದೆಯು ಮೇಲ್ಮನೆಯಲ್ಲಿ ಅಂಗೀಕಾರಕ್ಕೆ ದೀರ್ಘಕಾಲದಿಂದ ಕಾದು ಕುಳಿತಿದೆ. ಪಂಚಾಯಿತಿ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿಗಳಿಗೆ ಎರಡಕ್ಕಿಂತ ಹೆಚ್ಚು ಮಕ್ಕಳು ಇರಬಾರದು ಎಂದು ಇದರಲ್ಲಿ ಪ್ರಸ್ತಾಪಿಸಲಾಗಿದೆ.

'ವೈಫಲ್ಯ ಮರೆಮಾಚಲು ಅಪಪ್ರಚಾರ'

ಮಣಿಪುರ ಕುರಿತು ಮೌನ, ಧರ್ಮದ ಬಗ್ಗೆ ಪ್ರಧಾನಿ ಹೇಳಿಕೆ: ಉದಯನಿಧಿ

ಚೆನ್ನೈ (ಪಿಟಿಐ): 'ಜನತೆಗೆ 9 ವರ್ಷ ಸುಳ್ಳು ಭರವಸೆಗಳನ್ನೇ ನೀಡಿದ ಪ್ರಧಾನಿ ನರೇಂದ್ರ ಮೋದಿ ಮತ್ತು ಅವರ ಸಂಪುಟದ ಸಚಿವರು ಈಗ ಜನರ ಗಮನವನ್ನು ಬೇರೆಡೆ ಸೆಳೆಯಲು ಸನಾತನ ಧರ್ಮ ಕುರಿತ ಹೇಳಿಕೆ ಬಗ್ಗೆ ಅಪಪ್ರಚಾರ ಮಾಡುತ್ತಿದ್ದಾರೆ' ಎಂದು ಡಿಎಂಕೆ ಸಚಿವ ಉದಯನಿಧಿ ಟೀಕಿಸಿದ್ದಾರೆ.



ಉದಯನಿಧಿ ಸ್ಟಾಲಿನ್

'ಜಗತ್ತು ಸುತ್ತುತ್ತಿರುವ ಮೋದಿ ಅವರು ಮಣಿಪುರದ ಹಿಂಸಾಚಾರ ಕುರಿತ ಪ್ರಶ್ನೆಗಳಿಗೆ ಉತ್ತರಿಸಲು ಹಿಂಜರಿಯುತ್ತಾರೆ. ಸನಾತನ ಧರ್ಮ ಕುರಿತ ತಮ್ಮ ಹೇಳಿಕೆ ಬಗ್ಗೆ ಸಂಪುಟ ಸಭೆಯಲ್ಲಿ ಸಚಿವರ ಜೊತೆಗೆ ಚರ್ಚಿಸುತ್ತಾರೆ' ಎಂದು ವ್ಯಂಗ್ಯವಾಗಿ ತರಾಟೆಗೆ ತೆಗೆದುಕೊಂಡಿದ್ದಾರೆ.

'ಸನಾತನ ಧರ್ಮವ ಕುರಿತಂತೆ ತಾವು ಮಾತನಾಡಿದ್ದನ್ನು ಬಿಜೆಪಿ ನಾಯಕರು ಈಗ ತಿರುಚುತ್ತಿದ್ದಾರೆ. ಈ ವಿವಾದಕ್ಕೆ ಸಂಬಂಧಿಸಿದಂತೆ ತಮ್ಮ ವಿರುದ್ಧ ದಾಖಲಾಗಿರುವ ಮೊಕದ್ದಮೆಗಳನ್ನು ನಾನು ಕಾನೂನು ಪ್ರಕಾರವೇ ಎದುರಿಸುತ್ತೇನೆ' ಎಂದು ಗುರುವಾರ ಪ್ರತಿಕ್ರಿಯಿಸಿದ್ದಾರೆ.

ಬುಧವಾರವಷ್ಟೇ ಸನಾತನ ಧರ್ಮ ಹೇಳಿಕೆಯ ವಿವಾದವನ್ನು ಉಲ್ಲೇಖಿಸಿದ್ದ ಪ್ರಧಾನಿ ಮೋದಿ, 'ಇಂತಹ ಹೇಳಿಕೆಯ ಹಿಂದಿರುವ ಪಕ್ಷ, ನಾಯಕರ ವ್ಯಕ್ತಿತ್ವ ಬಯಲು ಮಾಡಬೇಕು, ಜನರಿಗೆ ಸತ್ಯ ತಿಳಿಸಬೇಕು' ಎಂದು ಕರೆ ನೀಡಿದ್ದರು.

ಗುರುವಾರ ಇದಕ್ಕೆ ಪ್ರತಿಕ್ರಿಯಿಸಿರುವ ಉದಯನಿಧಿ, 'ಸುಳ್ಳು ಸುದ್ದಿಗಳನ್ನೇ ಆಧರಿಸಿ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಬಿಜೆಪಿ ಆಡಳಿತವಿರುವ ರಾಜ್ಯಗಳ ಮುಖ್ಯಮಂತ್ರಿಗಳು ತಮ್ಮ ವಿರುದ್ಧ ಕ್ರಮಕ್ಕೆ ಒತ್ತಾಯಿಸುತ್ತಿರುವುದು ಆಶ್ಚರ್ಯ ಮೂಡಿಸುತ್ತಿದೆ' ಎಂದು ಕಿಡಿಕಾರಿದ್ದಾರೆ.

'ವಾಸ್ತವವಾಗಿ, ಜವಾಬ್ದಾರಿ ಸ್ಥಾನದಲ್ಲಿದ್ದೂ ಸುಳ್ಳು ಪ್ರಚಾರ ಮಾಡುತ್ತಿರುವುದಕ್ಕೆ ನಾನೇ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಬೇಕು. ಆದರೆ, ಇದು ಅವರಿಗೆ ತಮ್ಮ ಅಸ್ತಿತ್ವ ಉಳಿಸಿಕೊಳ್ಳುವ ಶೈಲಿಯಾಗಿದೆ ಎಂಬುದು ನನಗೆ ಗೊತ್ತಿದೆ' ಎಂದು ವ್ಯಂಗ್ಯವಾಡಿದ್ದಾರೆ.

'ಹೇಳಿಕೆ ತಿರುಚಿ ಸುಳ್ಳು ಪ್ರಚಾರ ಮಾಡದಿದ್ದರೆ ಅವರಿಗೆ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗುವುದಿಲ್ಲ. ಹೀಗಾಗಿ, ನಾನು ಅವರ ವಿರುದ್ಧ ಪ್ರಕರಣವನ್ನು ದಾಖಲಿಸುತ್ತಿಲ್ಲ. ಡಿಎಂಕೆ ಪಕ್ಷ, ನಾವು ಯಾವುದೇ ಧರ್ಮದ ವಿರುದ್ಧ ಇಲ್ಲ ಎಂಬುದು ಎಲ್ಲರಿಗೂ ತಿಳಿದಿದೆ' ಎಂದು ಹೇಳಿದ್ದಾರೆ.

ವಸ್ತುಸ್ಥಿತಿ ತಿಳಿಯದೇ ಪ್ರಧಾನಿ ಹೇಳಿಕೆ: ಸ್ಟಾಲಿನ್ ಟೀಕೆ

ಸನಾತನ ಧರ್ಮದ ಕೆಲ 'ಅಮಾನವೀಯ ಸಿದ್ಧಾಂತ'ಗಳ ಬಗ್ಗೆ ಪುತ್ರ, ಸಚಿವ ಉದಯನಿಧಿ ಹೇಳಿದ್ದಾರೆ. ಹತಾಶ ಬಿಜೆಪಿ ಇದೇ ನೆಪದಲ್ಲಿ 'ಇಂಡಿಯಾ'ದಲ್ಲಿ ಬಿರುಕು ಮೂಡಿಸಲು ಯತ್ನಿಸುತ್ತಿದೆ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ಆರೋಪಿಸಿದ್ದಾರೆ.

'ಸನಾತನ ಧರ್ಮದ ದಮನಕಾರಿ ಸಿದ್ಧಾಂತ ಕುರಿತಂತೆ ಉದಯನಿಧಿಯವರ ನಿಲುವು ಸಹಿಸಲಾಗದ ಬಿಜೆಪಿ ಪರ ಶಕ್ತಿಗಳು, ಅವರು ನರಮೇಧಕ್ಕೆ ಕರೆ ನೀಡಿದರು ಎಂದು ಅಪಪ್ರಚಾರ ಮಾಡುತ್ತಿವೆ' ಎಂದು ಟೀಕಿಸಿದ್ದಾರೆ.

ಈ ಕುರಿತು ಹೇಳಿಕೆ ನೀಡಿರುವ ಅವರು, 'ಅಪಪ್ರಚಾರವನ್ನು ಮಾಡುವವರ ಜೊತೆಗೆ ಈಗ ಪ್ರಧಾನಿ ನರೇದ್ರ ಮೋದಿ ಅವರು ಕೈಜೋಡಿಸಿರುವುದು ತಮಗೆ ಆಶ್ಚರ್ಯ ಮೂಡಿಸುತ್ತಿದೆ' ಎಂದು ಅಭಿಪ್ರಾಯಪಟ್ಟಿದ್ದಾರೆ.

> ಸಿಎಜಿ ವರದಿಯಲ್ಲಿ ಉಲ್ಲೇಖಿಸಿರುವ ₹7.5 ಲಕ್ಷ ಕೋಟಿ ಅಕ್ರಮ ಕುರಿತು ಮೋದಿ ಇದುವರೆಗೆ ಮಾತನಾಡಿಲ್ಲ. ಆದರೆ, ಸನಾತನ ಧರ್ಮ ಕುರಿತು ಚರ್ಚೆಗೆ ಸಂಪುಟ ಸಭೆಯನ್ನು ಕರೆಯುತ್ತಾರೆ
>
> **ಎಂ.ಕೆ.ಸ್ಟಾಲಿನ್**
> ತಮಿಳುನಾಡು ಮುಖ್ಯಮಂತ್ರಿ

'ಬಿಜೆಪಿ ಬೆಳೆಸಿರುವ ಸಮೂಹವು ಉತ್ತರದ ರಾಜ್ಯಗಳಲ್ಲಿ, ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಪ್ರಚಾರ ಮಾಡುತ್ತಿದೆ. ಉದಯನಿಧಿ ತಮಿಳು ಅಥವಾ ಇಂಗ್ಲಿಷ್‌ನಲ್ಲಿ ನರಮೇಧ ಪದ ಬಳಸಿಲ್ಲ. ಆದರೆ, ಸುಳ್ಳು ವ್ಯಾಪಕವಾಗುತ್ತಿದೆ' ಎಂದಿದ್ದಾರೆ.

'ಉದಯನಿಧಿ ನಿರಾಕರಣೆಯ ನಂತರವೂ ಕೇಂದ್ರ ಸಚಿವರು ಸುಳ್ಳುಪ್ರಚಾರಕ್ಕೆ ಕಡಿವಾಣ ಹಾಕುತ್ತಿಲ್ಲ. ಈಗ ಪ್ರಧಾನಿ ತಕ್ಕ ಉತ್ತರ ನೀಡಬೇಕು ಎಂದಿದ್ದಾರೆ. ವಾಸ್ತವ ಪರಿಶೀಲಿಸುವ, ವರದಿ ಪಡೆಯುವ ಎಲ್ಲ ಅವಕಾಶ ಇರುವ ಪ್ರಧಾನಿ, ಸುಳ್ಳು ಪ್ರಚಾರದ ಅರಿವಿಲ್ಲದೆಯೇ ಈಗ ಹೇಳಿಕೆ ನೀಡಿದ್ದಾರೆಯೇ? ಗೊತ್ತಿದ್ದೂ ನೀಡಿದ್ದಾರೆಯೇ' ಎಂದು ಪ್ರಶ್ನಿಸಿದ್ದಾರೆ.

ಹಿಂದೆಯೂ ವಾಸ್ತವ ಸ್ಥಿತಿ ತಿಳಿಯದೆಯೇ ಪ್ರಧಾನಿ ಸಂಸತ್ತಿನಲ್ಲಿ ಸಂಪುಟ ಸಹೋದ್ಯೋಗಿ ಇ.ವಿ. ವೇಲು ಕುರಿತು ಮಾತನಾಡಿ, ಕೆಲ ವಿವಾದಾತ್ಮಕ ಹೇಳಿಕೆ ನೀಡಿದ್ದರು ಎಂದು ಉಲ್ಲೇಖಿಸಿದ್ದಾರೆ.

'ಇದನ್ನು ಗಮನಿಸಿದರೆ ಭರವಸೆಗಳನ್ನು ಈಡೇರಿಸದ ಪ್ರಧಾನಿ ಜನರ ಗಮನ ಬೇರೆಡೆ ಸೆಳೆಯಲು ಹೀಗೆ ಮಾಡುತ್ತಿದ್ದಾರೆ. ಇಂಥ ನಾಯಕರು ನಿಜವಾಗಿ ಹಿಂದುಳಿದವರು, ಪರಿಶಿಷ್ಟರು, ಮಹಿಳೆಯರ ಹಿತಾಸಕ್ತಿ ರಕ್ಷಿಸುತ್ತಾರಾ?' ಎಂದು ಪ್ರಶ್ನಿಸಿದ್ದಾರೆ.

'ಡಿಎಂಕೆ ವಿಷಯದಲ್ಲಿ ನಮ್ಮ ಚಿಂತನೆ ಮತ್ತು ಗುರಿಯು ಸ್ಪಷ್ಟ ಮತ್ತು ಪಾರದರ್ಶಕವಾಗಿದೆ. ಬಡವರ ಸಂತೋಷವೇ ನಮ್ಮ ಗುರಿ. ಅದಕ್ಕೆ ಜನರು ಆರನೇ ಬಾರಿಗೆ ಆಡಳಿತ ನಡೆಸುವ ಹೊಣೆಯನ್ನು ನೀಡಿದ್ದಾರೆ' ಎಂದು ಸ್ಟಾಲಿನ್ ಪ್ರತಿಪಾದಿಸಿದ್ದಾರೆ.

ಪ್ರತಿಪಕ್ಷದವರಿಗೆ ಹಿಂದೂ ಫೋಬಿಯಾ – ಬಿಜೆಪಿ ಟೀಕೆ

ನವದೆಹಲಿ (ಪಿಟಿಐ): 'ಸನಾತನ ಧರ್ಮ ಕುರಿತ ಡಿಎಂಕೆ ಮುಖಂಡರ ಹೇಳಿಕೆ 'ಅತಿರೇಕತನ ಹಾಗೂ ಕಟುವಾದುದು'. ವಿಪಕ್ಷಗಳದ್ದು 'ಮಾನಸಿಕ ದಿವಾಳಿತನ', ಅವರಿಗೆ ಹಿಂದೂಫೋಬಿಯಾ ಇದೆ' ಎಂದು ಬಿಜೆಪಿ ಪ್ರತಿಕ್ರಿಯಿಸಿದೆ

ಬಿಜೆಪಿ ಹಿರಿಯ ನಾಯಕ ಧರ್ಮೇಂದ್ರ ಪ್ರಧಾನ್ ಅವರು, 'ಎಕ್ಸ್'ನಲ್ಲಿ ಸಂದೇಶ ಪೋಸ್ಟ್ ಮಾಡಿದ್ದು ಹೆಸರಿನ ಬದಲಾವಣೆಯು ಒಬ್ಬರ ಉದ್ದೇಶ ಮತ್ತು ವ್ಯಕ್ತಿತ್ವವನ್ನು ಬದಲಿಸುವುದಿಲ್ಲ ಎಂದು ಪ್ರತಿಕ್ರಿಯಿಸಿದ್ದಾರೆ.

ಪಕ್ಷದ ಹಿರಿಯ ನಾಯಕ ರವಿಶಂಕರ್ ಪ್ರಸಾದ್, ಮುಂಬೈನಲ್ಲಿ ಇತ್ತೀಚೆಗೆ ನಡೆದಿದ್ದ 'ಇಂಡಿಯಾ' ಮೈತ್ರಿಕೂಟ ಸಭೆಯಲ್ಲೇ ಹಿಂದೂಗಳಿಗೆ ಕಳಂಕ ತರುವ ನಿರ್ಧಾರ ಕೈಗೊಳ್ಳಲಾಗಿತ್ತೆ' ಎಂದು ಪಟ್ನಾದಲ್ಲಿ ಸುದ್ದಿಗೋಷ್ಠಿಯಲ್ಲಿ ಪ್ರಶ್ನಿಸಿದರು.

'ಹಿಂದೂಗಳ ನಂಬಿಕೆಗೆ ಕಳಂಕ ತರುವುದನ್ನು ಬಿಜೆಪಿ ಎಂದಿಗೂ ಒಪ್ಪುವುದಿಲ್ಲ. ಈ ವಿಷಯದಲ್ಲಿ ಸೋನಿಯಾಗಾಂಧಿ, ರಾಹುಲ್‌ಗಾಂಧಿ ಮತ್ತು ಪ್ರಿಯಾಂಕಾಗಾಂಧಿ ಅವರ ಮೌನವು ಜನರನ್ನು ದಿಗ್ಭ್ರಮೆಗೊಳಿಸಿದೆ' ಎಂದು ಹೇಳಿದರು.

'ಸನಾತನ ಧರ್ಮವು ಸಾಮಾಜಿಕ ಕಳಂಕ'

ಚೆನ್ನೈ/ನವದೆಹಲಿ (ಪಿಟಿಐ): 'ಸನಾತನ ಧರ್ಮವು ಹಿಂದೆ ಸಾಮಾಜಿಕ ಕಳಂಕ ಎಂದೇ ಭಾವಿಸಲಾಗುತ್ತಿದ್ದ ಕುಷ್ಠರೋಗ ಮತ್ತು ಇತ್ತೀಚಿನ ಎಚ್‌ಐವಿ ಸೋಂಕು ಇದ್ದ ಹಾಗೆ' ಎಂದು ಡಿಎಂಕೆಯ ಉಪ ಪ್ರಧಾನ ಕಾರ್ಯದರ್ಶಿ, ಸಂಸದ ಎ.ರಾಜಾ ಹೋಲಿಕೆ ಮಾಡಿದ್ದಾರೆ.



ಎ.ರಾಜಾ

ಸಚಿವ ಉದಯನಿಧಿ ಅವರ ಹೇಳಿಕೆಯನ್ನು ಸಮರ್ಥಿಸಿರುವ ಅವರು, 'ಸನಾತನ ಧರ್ಮದ ಬಗ್ಗೆ ಜಿಗುಪ್ಸೆಯಿಂದಲೇ ಮಾತನಾಡಬೇಕು. ಸಚಿವರು ಮೃದುವಾಗಿ ಮಾತನಾಡಿದ್ದಾರೆ. ಅವರು ಕೇವಲ ಡೆಂಗಿ, ಮಲೇರಿಯಾ ರೀತಿ ನಿರ್ಮೂಲನೆ ಮಾಡಬೇಕು ಎಂದಿದ್ದಾರೆ ಅಷ್ಟೆ' ಎಂದು ಹೇಳಿದರು.

'ಉದಯನಿಧಿ ಮೃದುವಾಗಿ ಹೇಳಿದ್ದಾರೆ. ನಾನು ಕಟುವಾಗಿ ಹೇಳುತ್ತೇನೆ. ಪ್ರಧಾನಿ ಮೋದಿ ಅವರು ಸನಾತನ ಧರ್ಮವನ್ನು ಪ್ರತಿಪಾದಿಸುತ್ತಾರೆ. ಆದರೆ, ಅದನ್ನು ಅವರು ಪಾಲಿಸಿದ್ದರೆ ಅಷ್ಟೊಂದು ವಿದೇಶಗಳಿಗೆ ಭೇಟಿ ನೀಡುತ್ತಿರಲಿಲ್ಲ' ಎಂದು ರಾಜಾ ಗುರುವಾರ ಹೇಳಿದರು.

'ಒಬ್ಬ ಉತ್ತಮವಾದ ಹಿಂದೂ ಸಮುದ್ರಗಳನ್ನು ದಾಟಿ ವಿದೇಶಗಳಿಗೆ ಹೋಗುವುದಿಲ್ಲ. ಆದರೆ, ನಿಮ್ಮ (ಮೋದಿ) ಕೆಲಸವೇ ವಿವಿಧ ಸ್ಥಳಗಳಿಗೆ ಹೋಗುವುದಾಗಿದೆ. ಸನಾತನ ಧರ್ಮದ ಸಿದ್ಧಾಂತಗಳನ್ನೇ ಉಲ್ಲಂಘಿಸಿದ್ದಾರೆ. ಈಗ ಅಪ್ರಾಮಾಣಿಕವಾದ ಆ ಧರ್ಮವನ್ನು ರಕ್ಷಿಸುವುದಾಗಿ ಹೇಳಿಕೊಳ್ಳುತ್ತಿದ್ದಾರೆ' ಎಂದು ಪ್ರಧಾನಿ ವಿರುದ್ಧ ಹರಿಹಾಯ್ದರು.

ಶಂಕರಾಚಾರ್ಯರ ಉಪಸ್ಥಿತಿಯಲ್ಲಿ ನವದೆಹಲಿಯಲ್ಲಿಯೇ ಸನಾತನ ಧರ್ಮ ಮತ್ತು ವರ್ಣಾಶ್ರಮ ಕುರಿತಂತೆ ಸಂವಾದವನ್ನು ಏರ್ಪಡಿಸಬೇಕು ಎಂದು ಅವರು ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಿಗೆ ಸವಾಲು ಹಾಕಿದರು.

'ನವದೆಹಲಿಯಲ್ಲಿಯೇ ಚರ್ಚಾಗೋಷ್ಠಿಯನ್ನು ಆಯೋಜಿಸಿ ದಿನಾಂಕವನ್ನು ನಿಗದಿಪಡಿಸಲಿ. ಅದರಲ್ಲಿ ನಾನು ಖಂಡಿತವಾಗಿ ಭಾಗವಹಿಸುತ್ತೇನೆ' ಎಂದು ರಾಜಾ ಬಿಜೆಪಿ ನಾಯಕರಿಗೆ

ರಾಜಾ ಹೇಳಿಕೆ ಒಪ್ಪುವುದಿಲ್ಲ –ಕಾಂಗ್ರೆಸ್

ನವದೆಹಲಿ (ಪಿಟಿಐ): 'ಸನಾತನ ಧರ್ಮದ ಬಗ್ಗೆ ಡಿಎಂಕೆ ಸಚಿವ ಉದಯನಿಧಿ, ಸಂಸದ ಎ.ರಾಜಾ ಅವರ ಹೇಳಿಕೆ ಒಪ್ಪುವುದಿಲ್ಲ. ಎಲ್ಲ ಧರ್ಮಗಳ ಬಗ್ಗೆಯೂ ಪಕ್ಷಕ್ಕೆ ಸಮಾನಗೌರವವಿದೆ' ಎಂದು ಕಾಂಗ್ರೆಸ್ ಪಕ್ಷ ಪ್ರತಿಕ್ರಿಯಿಸಿದೆ.

'ಇಂಡಿಯಾ' ಮೈತ್ರಿಕೂಟದ ಪ್ರತಿಯೊಬ್ಬ ಸದಸ್ಯರು ಎಲ್ಲ ಧರ್ಮ, ಸಮುದಾಯ ಮತ್ತು ನಂಬಿಕೆಗಳ ಕುರಿತು ಅಮಿತ ಗೌರವವನ್ನು ಹೊಂದಿದ್ದಾರೆ ಎಂದು ಪ್ರತಿಪಾದಿಸಿದೆ.

ಪಕ್ಷದ ಮಾಧ್ಯಮ ಮತ್ತು ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ ಅವರು, 'ಕಾಂಗ್ರೆಸ್‌ಗೆ ಸರ್ವಧರ್ಮಗಳ ಸಮನ್ವಯದಲ್ಲಿ ನಂಬಿಕೆ ಇದೆ. ಅಲ್ಲಿ, ಎಲ್ಲ ಧರ್ಮಗಳು, ಪ್ರತಿಯೊಂದು ನಂಬಿಕೆಗೂ ಸ್ಥಾನವಿದೆ ಎಂದು ಪ್ರತಿಕ್ರಿಯಿಸಿದರು. 'ನೀವು ಯಾರದ್ದಾದರೂ ಹೇಳಿಕೆಯನ್ನು ತಿರುಚಬೇಕು ಎಂದು ಬಯಸಿದ್ದರೆ ಅದಕ್ಕಾಗಿ ನೀವು ಸ್ವತಂತ್ರರು. ಪ್ರಧಾನಿ ಅವರಿಗೆ ಸೂಕ್ತ ಎನಿಸುವುದಾದರೆ ಅವರು ಹೇಳಿಕೆಯನ್ನು ತಿರುಚಲಿ. ಆದರೆ, 'ಇಂಡಿಯಾ'ದ ಪ್ರತಿಯೊಬ್ಬ ಸದಸ್ಯರಿಗೂ ಎಲ್ಲ ನಂಬಿಕೆ, ಧರ್ಮ, ಸಮುದಾಯಗಳ ಬಗ್ಗೆ ಅತೀವ ಗೌರವವಿದೆ' ಎಂದು ಖೇರಾ ಪ್ರತಿಕ್ರಿಯಿಸಿದರು.

ಉದಯನಿಧಿ, ರಾಜಾ ವಿರುದ್ಧ ಎಫ್‌ಐಆರ್‌ಗೆ ಮನವಿ

ನವದೆಹಲಿ: ಸನಾತನ ಧರ್ಮ ಕುರಿತು 'ದ್ವೇಷ ಭಾಷಣ' ಮಾಡಿರುವ ಡಿಎಂಕೆ ಸಚಿವ ಉದಯನಿಧಿ ಸ್ಟಾಲಿನ್ ಮತ್ತು ಸಂಸದ ಎ.ರಾಜಾ ವಿರುದ್ಧ ಎಫ್‌ಐಆರ್ ದಾಖಲಿಸಬೇಕು ಎಂದು ಕೋರಿ ಸುಪ್ರಿಂ ಕೋರ್ಟ್‌ಗೆ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಸಲ್ಲಿಸಲಾಗಿದೆ.

ವಕೀಲ ವಿನೀತ್ ಜಿಂದಾಲ್ ಅರ್ಜಿಯನ್ನು ಸಲ್ಲಿಸಿದ್ದು, 'ಇವರ ಹೇಳಿಕೆಯಿಂದ ಸನಾತನ ಧರ್ಮ ಪಾಲಿಸುತ್ತಿರುವ ನನ್ನ ಧಾರ್ಮಿಕ ಭಾವನೆಗಳಿಗೆ ಧಕ್ಕೆಯಾಗಿದೆ. ಅವರು ಬಳಸಿರುವ ಪದಗಳು, ಸನಾತನ ಧರ್ಮ ಕುರಿತ ಅವರ ದ್ವೇಷವನ್ನು ಬಿಂಬಿಸುತ್ತಿವೆ. ಧರ್ಮದ ಆಧಾರದಲ್ಲಿ ಪರಸ್ಪರ ದ್ವೇಷ ಮೂಡಿಸುವುದು' ಎಂದು ತಿಳಿಸಿದ್ದಾರೆ. ವಕೀಲ ರಾಜ್ ಕಿಶೋರ್ ಚೌಧರಿ ಮೂಲಕ ಅರ್ಜಿ ಸಲ್ಲಿಸಿದ್ದಾರೆ.

ಪ್ರಥಮ ವರ್ತಮಾನ ವರದಿ ದಾಖಲು ವಿಳಂಬ

ಸಾಕ್ಷಿಗಳ ಸಮಗ್ರ ಪರಿಶೀಲನೆಗೆ ಸೂಚನೆ

ನವದೆಹಲಿ (ಪಿಟಿಐ): ಯಾವುದೇ ಪ್ರಕರಣದಲ್ಲಿ ಪ್ರಥಮ ವರ್ತಮಾನ ವರದಿ ದಾಖಲಿಸಲು ವಿಳಂಬವಾಗಿರುವುದಕ್ಕೆ ಸಂಬಂಧಿಸಿದಂತೆ ಪ್ರಾಸಿಕ್ಯೂಷನ್ ನೀಡುವ ವಿವರಣೆಯಲ್ಲಿ ಅಸತ್ಯತೆ ಇಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಲು ನ್ಯಾಯಾಲಯಗಳು ಸಾಕ್ಷಿಗಳನ್ನು ಸಮಗ್ರವಾಗಿ ಪರಿಶೀಲಿಸಬೇಕಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ.



1989ರಲ್ಲಿ ದಾಖಲಾಗಿದ್ದ ವ್ಯಕ್ತಿಯೊಬ್ಬರ ಕೊಲೆ ಪ್ರಕರಣಕ್ಕೆ ಸಂಬಂಧಿಸಿ 1991ರ ಜುಲೈನಲ್ಲಿ ವಿಚಾರಣಾ ನ್ಯಾಯಾಲಯವು ಅಪರಾಧಿಗಳಾದ ಹರಿಲಾಲ್ ಹಾಗೂ ಪರಶ್ರಾಮ್ ಎಂಬುವರಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. 2010ರಲ್ಲಿ ಛತ್ತೀಸ್‌ಗಢ ಹೈಕೋರ್ಟ್ ಕೂಡ ಈ ತೀರ್ಪನ್ನು ಎತ್ತಿಹಿಡಿದಿತ್ತು. ಇದನ್ನು ಪ್ರಶ್ನಿಸಿ ಈ ಇಬ್ಬರು ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದ್ದರು.

ಈ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ವಿಭಾಗೀಯ ನ್ಯಾಯಪೀಠವು, ಕೊಲೆ ನಡೆದ ಮಾರನೇ ದಿನ ಎಫ್‌ಐಆರ್ ದಾಖಲಿಸಿರುವುದನ್ನು ಗಮನಿಸಿತು.

ಎಫ್‌ಐಆರ್ ವಿಳಂಬ ಕುರಿತು ಪ್ರಾಸಿಕ್ಯೂಷನ್ ಸೂಕ್ತ ವಿವರಣೆ ನೀಡದಿದ್ದಾಗ ನ್ಯಾಯಾಲಯಗಳು ಕಾವಲುಗಾರನ ಪಾತ್ರ ನಿರ್ವಹಿಸಬೇಕಾಗುತ್ತದೆ ಎಂದು ನ್ಯಾಯಪೀಠವು ಹೇಳಿತು.

ರಾತ್ರಿ ವೇಳೆ ಸಾರ್ವಜನಿಕ ಸ್ಥಳದಲ್ಲಿ ನಡೆದಿರುವ ಈ ಕೊಲೆಗೆ ಸಂಬಂಧಿಸಿದಂತೆ ಯಾರೊಬ್ಬರೂ ಪ್ರತ್ಯಕ್ಷದರ್ಶಿಗಳಿಲ್ಲ ಎಂದು ಹೇಳಿದ ನ್ಯಾಯಪೀಠವು, ಅಪರಾಧಿಗಳನ್ನು ಖುಲಾಸೆಗೊಳಿಸಿತು.

'ವಿಚ್ಛೇದನ: ವ್ಯಕ್ತಿ ಅನುಭವಿಸುವ ಕ್ರೌರ್ಯ ಪರಿಗಣಿಸಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಹಿಂದೂ ವಿವಾಹ ಕಾಯ್ದೆಯಡಿ ವಿಚ್ಛೇದನ ಕೋರಿದ ಪ್ರಕರಣಗಳಲ್ಲಿ ಕ್ರೌರ್ಯದ ವಿಚಾರವಾಗಿ ವಸ್ತುನಿಷ್ಠವಾಗಿ ಆಲೋಚಿಸುವುದಕ್ಕಿಂತಲೂ ಅದನ್ನು ಅನುಭವಿಸುವ ವ್ಯಕ್ತಿಯ ದೃಷ್ಟಿಯಿಂದ ಅವಲೋಕಿಸುವುದು ಮುಖ್ಯ ಎಂದು ಸುಪ್ರೀಂಕೋರ್ಟ್ ಹೇಳಿದೆ.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ಸಂಜೀವ್ ಖನ್ನಾ ಹಾಗೂ ಎಂ.ಎಂ.ಸುಂದರೇಶ್ ಅವರಿದ್ದ ನ್ಯಾಯಪೀಠ, ವಿಚ್ಛೇದನ ಕೋರಿ ಮಹಿಳೆ ಸಲ್ಲಿಸಿದ್ದ ಅರ್ಜಿಯನ್ನು ಪುರಸ್ಕರಿಸಿತು. 'ಪ್ರಕರಣವೊಂದರಲ್ಲಿ, ಒಬ್ಬ ಮಹಿಳೆ ಪಾಲಿಗೆ ಕ್ರೌರ್ಯ ಎನಿಸುವುದು ಪುರುಷನಿಗೆ ಕ್ರೌರ್ಯವಾಗಲಿಕ್ಕಿಲ್ಲ. ಅದರಲ್ಲೂ ವಿಚ್ಛೇದನ ಕೋರಿ ಪತ್ನಿ ಅರ್ಜಿ ಸಲ್ಲಿಸಿದ ಪ್ರಕರಣದಲ್ಲಿ ಸಮಗ್ರ ಅವಲೋಕನ ಅಗತ್ಯ' ಎಂದು ನ್ಯಾಯಪೀಠ ಹೇಳಿದೆ. ಕಕ್ಷಿಗಾರರು 15 ವರ್ಷಗಳ ಕಾಲ ಪ್ರತ್ಯೇಕವಾಗಿ ವಾಸಿಸುತ್ತಿದ್ದಾರೆ. ಪರಸ್ಪರರತ್ತ ಗಂಭೀರ ಆರೋಪಗಳನ್ನೂ ಅವರು ಮಾಡಿಲ್ಲ ಎಂದು ಅಭಿಪ್ರಾಯ ಪಟ್ಟ ನ್ಯಾಯಪೀಠ, ದಂಪತಿಗೆ ವಿಚ್ಛೇದನ ನೀಡಿದೆ.

ಒಂದು ತಾಸಲ್ಲಿ ನಾಲ್ಕು ಕಿ.ಮೀ. ಹೆಜ್ಜೆ ಹಾಕಿದ ಸಿಎಂ, ಡಿಸಿಎಂ; ಸಾವಿರಾರು ಮಂದಿ ಭಾಗಿ

ಕತ್ತಲಲ್ಲೇ 'ಭಾರತ ಜೋಡೊ' ನೆನಪಿನ ಪಾದಯಾತ್ರೆ

ಪ್ರಜಾವಾಣಿ ವಾರ್ತೆ

ರಾಮನಗರ: ವರ್ಷದ ಹಿಂದೆ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದಿದ್ದ 'ಭಾರತ ಜೊಡೊ ಯಾತ್ರೆ'ಗೆ ಒಂದು ವರ್ಷ ಸಂದ ನೆನಪಿಗಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ನಗರದಲ್ಲಿ ಶುಕ್ರವಾರ ರಾತ್ರಿ ನಡೆದ ಪಾದಯಾತ್ರೆಯಲ್ಲಿ ಉತ್ಸಾಹ ಕಂಡುಬಂತು.

ತಮ್ಮ ನೆಚ್ಚಿನ ನಾಯಕರೊಂದಿಗೆ ಸ್ಥಳೀಯ ಜನಪ್ರತಿನಿಧಿಗಳು, ಮುಖಂಡರು ಸೇರಿದಂತೆ ಸಾವಿರಾರು ಕಾರ್ಯಕರ್ತರು ಅಭಿಮಾನದಿಂದ ಹೆಜ್ಜೆ ಹಾಕಿದರು. ಕಿವಿಗಡಚಿಕ್ಕುವ ಸಂಗೀತ, ಜಾನಪದ ಕಲಾ ತಂಡಗಳ ನೃತ್ಯ, ವಾದ್ಯ ಮೇಳದ ಸದ್ದು ಪಾದಯಾತ್ರೆಯಲ್ಲಿ ಭಾಗವಹಿಸಿದವರಿಗೆ ಮತ್ತಷ್ಟು ಹುಮ್ಮಸ್ಸು ತುಂಬಿತು.

ಪಾದಯಾತ್ರೆಯುದ್ದಕ್ಕೂ ಕಾಂಗ್ರೆಸ್, ರಾಹುಲ್ ಗಾಂಧಿ, ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಪರ ಘೋಷಣೆಗಳು ಮೊಳಗಿದವು. ಮಾರ್ಗಮಧ್ಯೆ ಪಕ್ಷದ ಕಾರ್ಯಕರ್ತರು ಹಾಗೂ ಅಭಿಮಾನಿಗಳು ತಮ್ಮ ನೆಚ್ಚಿನ ನಾಯಕರಿಗೆ ಪುಷ್ಪವೃಷ್ಟಿಗರೆದು ಅಭಿಮಾನ ಮೆರೆದರು. ಮಾರುದ್ದದ ಪಟಾಕಿ ಸರಗಳನ್ನು ಸಿಡಿಸಿ ಸಂಭ್ರಮಿಸಿದರು. ಕಾರ್ಯಕರ್ತರರ 'ಹುಲಿಯಾ' ಮತ್ತು 'ಡಿ.ಕೆ... ಡಿ.ಕೆ' ಘೋಷಣೆಗಳು ಮುಗಿಲು ಮುಟ್ಟಿದವು.

ಜಿಲ್ಲಾಧಿಕಾರಿ ಕಚೇರಿ ಎದುರಿನಿಂದ ಸಂಜೆ ಸುಮಾರು 6.45ಕ್ಕೆ ಆರಂಭವಾದ ಪಾದಯಾತ್ರೆಯು ಎಸ್.ಪಿ. ಕಚೇರಿ ವೃತ್ತ, ನೀರಿನ ಟ್ಯಾಂಕ್ ವೃತ್ತ, ಎಂ.ಜಿ. ರಸ್ತೆ, ಕಾಮಣ್ಣನ ಗುಡಿ ಸರ್ಕಲ್, ಶೋಭಾ ಹೋಟೆಲ್, ಕೆಂಗಲ್ ಹನುಮಂತಯ್ಯ ವೃತ್ತವನ್ನು ಹಾದು ಐಜೂರು ವೃತ್ತದಲ್ಲಿ ನಿರ್ಮಿಸಿದ್ದ ಬೃಹತ್ ವೇದಿಕೆ ತಲುಪಲು ಒಂದು ತಾಸು ಬೇಕಾಯಿತು.

ಪಾದಯಾತ್ರೆ ಒಂದು ಮುಕ್ಕಾಲು ತಾಸು ತಡವಾಗಿ ಆರಂಭವಾದರೂ, ನಾಯಕರು ಹಾಗೂ ಕಾರ್ಯಕರ್ತರು ಉತ್ಸಾಹ ಕಳೆದುಕೊಳ್ಳದೆ ಹೆಜ್ಜೆ ಹಾಕಿದರು. ಎರಡೂವರೆ ತಾಸು ನಡೆದ ವೇದಿಕೆ ಕಾರ್ಯಕ್ರಮದಲ್ಲಿ ಕಡೆಯಲ್ಲಿ ಸಿದ್ದರಾಮಯ್ಯ ಅವರ ಭಾಷಣ ಆಲಿಸಿ ತಾಳ್ಮೆ ಮೆರೆದರು.

ಪಾದಯಾತ್ರೆ ಮಾರ್ಗದುದ್ದಕ್ಕೂ ವಿದ್ಯುತ್ ದೀಪದ ಬೆಳಕಿನ ವ್ಯವಸ್ಥೆ ಮಾಡಲಾಗಿತ್ತು. ಕಣ್ಣು ಹಾಯಿಸಿದ್ದತ್ತೆಲ್ಲಾ ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಸೇರಿದಂತೆ ಕಾಂಗ್ರೆಸ್ ನಾಯಕರ ಕಟೌಟ್‌ಗಳು ಹಾಗೂ ಕಾಂಗ್ರೆಸ್ ಬಾವುಟ ರಾರಾಜಿಸುತ್ತಿದ್ದವು.

ಮೀನುಗಾರಿಕೆ ಮತ್ತು ಬಂದರು ಸಚಿವ ಮಂಕಾಳ ವೈದ್ಯ, ಸಂಸದ ಡಿ.ಕೆ. ಸುರೇಶ್, ಶಾಸಕರಾದ ಎಚ್‌.ಎ. ಇಕ್ಬಾಲ್ ಹುಸೇನ್, ಎಚ್‌. ಸಿ. ಬಾಲಕೃಷ್ಣ, ವಿಧಾನ ಪರಿಷತ್ ಸದಸ್ಯ ಎಸ್‌. ರವಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಚಂದ್ರಪ್ಪ ಸೇರಿದಂತೆ ಪ್ರಮುಖರು ಮುಖ್ಯಮಂತ್ರಿಯೊಂದಿಗೆ ಹೆಜ್ಜೆ ಹಾಕಿದರು.

ರಾಮನಗರ ಜಿಲ್ಲಾ ಕುರುಬರ ಸಂಘದ ಪದಾಧಿಕಾರಿಗಳು ಸಿದ್ದರಾಮಯ್ಯ ಅವರಿಗೆ ಕಂಬಳಿ ಹೊದಿಸಿ, ಕುರಿಯನ್ನು ಉಡುಗೊರೆಯಾಗಿ ನೀಡಿದರು.



ಭಾರತ ಜೋಡೊ ಯಾತ್ರೆ ನೆನಪಿನಾರ್ಥವಾಗಿ ರಾಮನಗರದಲ್ಲಿ ಗುರುವಾರ ರಾತ್ರಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಪಾದಯಾತ್ರೆ ಜರುಗಿತು. ಸಚಿವ ಮಂಕಾಳ ವೈದ್ಯ, ಶಾಸಕರಾದ ಎಚ್‌.ಎ. ಇಕ್ಬಾಲ್ ಹುಸೇನ್, ಎಚ್‌.ಸಿ. ಬಾಲಕೃಷ್ಣ, ವಿಧಾನ ಪರಿಷತ್ ಸದಸ್ಯ ಎಸ್‌. ರವಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಚಂದ್ರಪ್ಪ ಇದ್ದಾರೆ –ಪ್ರಜಾವಾಣಿ ಚಿತ್ರ: ಚಂದ್ರೇಗೌಡ

'ವಿವಿಧತೆ ಒಗ್ಗೂಡಿಸಿ ಏಕತೆ'

'ಭಾರತ ವಿವಿಧತೆಯನ್ನು ಹೊಂದಿರುವ ದೇಶ. ನಮ್ಮ ಹಿರಿಯರು ಈ ವಿವಿಧತೆಯನ್ನು ಒಗ್ಗೂಡಿಸಿ ಏಕತೆ ಸಾಧಿಸಿದರು. ಆದರೆ, ಬಿಜೆಪಿಯವರು ಇದನ್ನೇ ಬಂಡವಾಳ ಮಾಡಿಕೊಂಡು ಭಾವನಾತ್ಮಕವಾಗಿ ಜನರ ಮನಸ್ಸುಗಳನ್ನ ಒಡೆದರು. ಅದನ್ನು ಒಗ್ಗೂಡಿಲು ರಾಹುಲ್ ಗಾಂಧಿ ಅವರು ಸುಮಾರು 4 ಸಾವಿರ ಕಿ.ಮೀ. ಪಾದಯಾತ್ರೆ ನಡೆಸಿದರು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿದರು.

ಶುಕ್ರವಾರ, ಸೆಪ್ಟೆಂಬರ್ 8, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 250 | ಪುಟ 16
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
‘ಅಭಿನಯವೇ ನನಗೆ ಚಿಕಿತ್ಸೆ’ ಎನ್ನುತ್ತಿದ್ದಾರೆ ರಾಘವೇಂದ್ರ ರಾಜ್‌ಕುಮಾರ್



ಆಳ-ಅಗಲ
ಜಿ-20 ಶೃಂಗಸಭೆ: ಒಂದು ಭೂಮಿಗೆ ಒಂದು ಭವಿಷ್ಯ

ಬಿಎಸ್‌ಇ ಮಾರುಕಟ್ಟೆ ಮೌಲ್ಯ ₹319 ಲಕ್ಷ ಕೋಟಿಗೆ ಏರಿಕೆ 11

‘ಮುಕ್ತ ವ್ಯಾಪಾರ ದೇಶದ ರೈತರಿಗೆ ಮಾರಕ’ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
66,265 ▲	19,727 ▲	₹60,980 (ಬೆಂಗಳೂರು) ▼	₹73,400 (ಬೆಂಗಳೂರು) ▼	83.23 ▼

ಶಾಶ್ವತವಾದ ಕೇಂದ್ರ ಉನ್ನತಾಧಿಕಾರ ಸಮಿತಿ ರಚನೆಗೆ ಅಧಿಸೂಚನೆ • ಸರ್ಕಾರದ ನಡೆಗೆ ಆಕ್ಷೇಪ

ಉನ್ನತಾಧಿಕಾರಕ್ಕೆ ‘ಕೇಂದ್ರ’ ಕತ್ತರಿ

• ಮಂಜುನಾಥ ಹೆಬ್ಬಾರ್

ನವದೆಹಲಿ: ಪರಿಸರಕ್ಕೆ ಸಂಬಂಧಿಸಿದ ವಿಷಯಗಳ ಪರಿಶೀಲನೆಗೆ ಶಾಶ್ವತವಾದ ‘ಕೇಂದ್ರ ಉನ್ನತಾಧಿಕಾರ ಸಮಿತಿ (ಸಿಇಸಿ)’ ರಚನೆಗೆ ಕೇಂದ್ರ ಅರಣ್ಯ, ಪರಿಸರ ಹಾಗೂ ತಾಪಮಾನ ಬದಲಾವಣೆ ಸಚಿವಾಲಯವು ಸೆಪ್ಟೆಂಬರ್ 5ರಂದು ಅಧಿಸೂಚನೆ ಹೊರಡಿಸಿದೆ. ಸುಪ್ರೀಂ ಕೋರ್ಟ್ ಆದೇಶವನ್ನು ನೆಪವನ್ನಾಗಿ ಇಟ್ಟುಕೊಂಡು ಕೇಂದ್ರ ಸರ್ಕಾರವು ಸಮಿತಿಯ ಉನ್ನತ ಅಧಿಕಾರಕ್ಕೆ ಕತ್ತರಿ ಪ್ರಯೋಗ ಮಾಡಿದೆ ಎಂಬ ಆಕ್ಷೇಪ ವ್ಯಕ್ತವಾಗಿದೆ.

ಅರಣ್ಯ, ಪರಿಸರ ಹಾಗೂ ವನ್ಯಜೀವಿಗೆ ಸಂಬಂಧಿಸಿದ ವಿಷಯಗಳ ಪರಿಶೀಲನೆಗೆ ಸುಪ್ರೀಂ ಕೋರ್ಟ್ 2002ರಲ್ಲಿ ಸಿಇಸಿಯನ್ನು ರಚಿಸಿತ್ತು. ಸುಪ್ರೀಂ ಕೋರ್ಟ್‌ನ ಶಿಫಾರಸಿನ ಮೇರೆಗೆ ಅಧ್ಯಕ್ಷರು ಹಾಗೂ ಸದಸ್ಯರನ್ನು ನೇಮಕ ಮಾಡಲಾಗುತ್ತಿತ್ತು. ಪರಿಸರಕ್ಕೆ ಸಂಬಂಧಿಸಿದ ದೂರುಗಳನ್ನು ಸಮಿತಿಯು ಪರಿಶೀಲಿಸಿ ಸುಪ್ರೀಂ ಕೋರ್ಟ್‌ಗೆ ವರದಿ ಸಲ್ಲಿಸುತ್ತಿತ್ತು. ಸಮಿತಿಯ ಬಹುತೇಕ ವರದಿಗಳನ್ನು ಸುಪ್ರೀಂ ಕೋರ್ಟ್ ಒಪ್ಪಿಕೊಂಡಿತ್ತು. ಜಮ್ಮುವಿನ ಸಮಾವೇಶ ಸಭಾಂಗಣಕ್ಕೆ ಸಂಬಂಧಿಸಿದ ಪ್ರಕರಣವೊಂದರಲ್ಲಿ ಸುಪ್ರೀಂ ಕೋರ್ಟ್‌ನ ಆದೇಶಕ್ಕೆ ಭಿನ್ನವಾಗಿ ಸಿಇಸಿ ವರದಿ ನೀಡಿತ್ತು. ಇದು ಸುಪ್ರೀಂ ಕೋರ್ಟ್‌ನ ಅಸಮಾಧಾನಕ್ಕೆ ಕಾರಣವಾಗಿತ್ತು. ತಾತ್ಕಾಲಿಕ ಸಮಿತಿ ಬದಲು ಶಾಶ್ವತವಾದ ಉನ್ನತಾಧಿಕಾರ ಸಮಿತಿಯನ್ನು ರಚಿಸುವಂತೆ ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ಆಗಸ್ಟ್ 18ರಂದು ನಿರ್ದೇಶನ ನೀಡಿತ್ತು. ಇದೀಗ ‘ಶಾಶ್ವತ ಸಮಿತಿ’ ರಚನೆಗೆ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ಹೊಸ ಸಮಿತಿಯ ರಚನೆಯು ಹಿಂದಿನ ಸಮಿತಿಗಿಂತ ಸಂಪೂರ್ಣ ಭಿನ್ನವಾಗಿದೆ. ಇದು ಹೆಚ್ಚು ಕೇಂದ್ರೀಕೃತವಾಗಿದೆ ಹಾಗೂ ಪರಿಸರ ಸಚಿವಾಲಯದ ಅಧೀನದಲ್ಲಿ ಕಾರ್ಯ-ನಿರ್ವಹಿಸಲಿದೆ. ಇದು ಯಾವುದೇ ಸ್ವತಂತ್ರ ಸದಸ್ಯರನ್ನು ಹೊಂದಿರುವುದಿಲ್ಲ. ಅಧ್ಯಕ್ಷರು ಹಾಗೂ ಸದಸ್ಯರನ್ನು ಪರಿಸರ ಸಚಿವಾಲಯವೇ ನೇಮಕ ಮಾಡಲಿದೆ.

‘ಉನ್ನತಾಧಿಕಾರ ಸಮಿತಿಯು ಶಕ್ತಿಶಾಲಿಯಾಗಿತ್ತು. ಗಣಿಗಾರಿಕೆ, ರಸ್ತೆ ಹಾಗೂ ರೈಲ್ವೆ ಯೋಜನೆ ಹಾಗೂ ಅರಣ್ಯ ಅತಿಕ್ರಮಣ ಪ್ರಕರಣಗಳಲ್ಲಿ ಮಹತ್ವದ ವರದಿಗಳನ್ನು ನೀಡಿತ್ತು. ಸಮಿತಿಯ ಶಿಫಾರಸುಗಳನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರದ ಅಧೀನ ಸಂಸ್ಥೆಗಳು ಒಪ್ಪಿ ಅನುಷ್ಠಾನ ಮಾಡುತ್ತಿದ್ದವು. ಈಗ ಸಮಿತಿಗೆ ಸರ್ಕಾರಿ ಅಧಿಕಾರಿಗಳ ನೇಮಕಕ್ಕೆ ಅವಕಾಶ ಮಾಡಿಕೊಡಲಾಗಿದೆ. ಅವರು ಸರ್ಕಾರಗಳ ವಿರುದ್ಧ ವರದಿಗಳನ್ನು ಕೊಡುತ್ತಾರೆ ಎಂಬ ವಿಶ್ವಾಸ ಇಲ್ಲ. ಉನ್ನತಾಧಿಕಾರ ಸಮಿತಿಯನ್ನು ದುರ್ಬಲಗೊಳಿಸುವ ಕೆಲಸವನ್ನು ಪರಿಸರ ಸಚಿವಾಲಯ ಮಾಡಿದೆ’ ಎಂದು ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ್ ಕುಲಕರ್ಣಿ ಅಭಿಪ್ರಾಯ ವ್ಯಕ್ತಪಡಿಸಿದರು.

7ನೇ ಪುಟ ನೋಡಿ

ಶಾಶ್ವತ ಸಮಿತಿ ಹೀಗಿರಲಿದೆ

ಪ್ರಜಾವಾಣಿ ವಿಶೇಷ

ಸಮಿತಿಯ ಅಧ್ಯಕ್ಷರು: ಪರಿಸರ, ಅರಣ್ಯ ಹಾಗೂ ವನ್ಯಜೀವಿ ಕ್ಷೇತ್ರದಲ್ಲಿ 25 ವರ್ಷಗಳ ಅನುಭವ ಹೊಂದಿರುವವರು ಅಥವಾ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಲ್ಲಿ 25 ವರ್ಷಗಳ ಆಡಳಿತಾತ್ಮಕ ಅಧಿಕಾರ ಅನುಭವ ಹೊಂದಿರುವವರು ಅಧ್ಯಕ್ಷರಾಗಲು ಅರ್ಹರು. ಅಧ್ಯಕ್ಷರ ಅವಧಿ ಮೂರು ವರ್ಷಗಳು. ಅವರ ಅವಧಿಯನ್ನು ಒಂದು ವರ್ಷ ವಿಸ್ತರಿಸಲು ಅವಕಾಶ ಇದೆ. ಅಧ್ಯಕ್ಷರ ವಯಸ್ಸಿನ ಮಿತಿ 66 ವರ್ಷ. ಕೇಂದ್ರ ಸರ್ಕಾರದ ಹೆಚ್ಚುವರಿ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳು ಅಧ್ಯಕ್ಷರಾಗಲು ಅರ್ಹರು.

ಸದಸ್ಯ ಕಾರ್ಯದರ್ಶಿ: ಅರಣ್ಯ ಸಚಿವಾಲಯದ ಉಪ ಮಹಾನಿರೀಕ್ಷಕ ಅಥವಾ ಭಾರತ ಸರ್ಕಾರದಲ್ಲಿ ನಿರ್ದೇಶಕರ ಶ್ರೇಣಿಗಿಂತ ಕಡಿಮೆಯಿಲ್ಲದ ಅಧಿಕಾರಿಯ ನೇಮಕ ಮಾಡಲಾಗುತ್ತದೆ. ಈ ಅಧಿಕಾರಿಯು ಪರಿಸರ, ಅರಣ್ಯ ಅಥವಾ ವನ್ಯಜೀವಿ ಕ್ಷೇತ್ರದಲ್ಲಿ ವಿಶೇಷ ಜ್ಞಾನ ಹೊಂದಿರಬೇಕು ಮತ್ತು ಕನಿಷ್ಠ 12 ವರ್ಷಗಳ ಅನುಭವ ಹೊಂದಿರಬೇಕು.

ಪರಿಣಿತ ಸದಸ್ಯರು: ಮೂವರು ಪರಿಣಿತ ಸದಸ್ಯರು ಸಮಿತಿಯಲ್ಲಿ ಇರಲಿದ್ದಾರೆ. ಕನಿಷ್ಠ 20 ವರ್ಷಗಳ ಅನುಭವ ಹೊಂದಿರುವ ಪರಿಸರ, ಅರಣ್ಯ ಮತ್ತು ವನ್ಯಜೀವಿ ಕ್ಷೇತ್ರಗಳಿಂದ ತಲಾ ಒಬ್ಬರನ್ನು ನೇಮಕ ಮಾಡಲಾಗುತ್ತದೆ. ಅವರ ಅಧಿಕಾರದ ಅವಧಿ ಮೂರು ವರ್ಷ. ಗರಿಷ್ಠ ಒಂದು ವರ್ಷದ ಅವಧಿಗೆ ವಿಸ್ತರಿಸಬಹುದು. ಕೇಂದ್ರ ಸರ್ಕಾರದ ಜಂಟಿ ಕಾರ್ಯದರ್ಶಿ ದರ್ಜೆಯ ಅಧಿಕಾರಿಗಳು ಈ ಹುದ್ದೆಗೆ ಅರ್ಹರು.

‘ವಿವಿಪ್ಯಾಟ್ ಪೂರ್ಣ ಪರಿಶೀಲನೆ ಇಲ್ಲ’

ಪ್ರಜಾವಾಣಿ ವಾರ್ತೆ

ನವದೆಹಲಿ: ಮತದಾನ ಪ್ರಕ್ರಿಯೆಯಲ್ಲಿ ವಿದ್ಯುನ್ಮಾನ ಮತಯಂತ್ರದ (ಇವಿಎಂ) ಜೊತೆಗೆ ಬಳಕೆ ಮಾಡುವ ವಿವಿಪ್ಯಾಟ್ ಚೀಟಿಗಳ ಶೇ 100ರಷ್ಟು ಪರಿಶೀಲನೆಯು ವಾಸ್ತವವಾಗಿ ಸಾಧ್ಯವಿಲ್ಲ. ಒಂದು ವೇಳೆ ಇದಕ್ಕೆ ಅನುಮತಿ ನೀಡಿದರೆ ಹಳೆಯ ಬ್ಯಾಲೆಟ್ ಪದ್ಧತಿಗೆ (ಮತಪತ್ರಕ್ಕೆ ಮುದ್ರೆ ಒತ್ತಿ ಮತಪೆಟ್ಟಿಗೆಗೆ ಹಾಕುವುದು) ಮರಳಿದಂತಾಗುತ್ತದೆ ಎಂದು ಕೇಂದ್ರ ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ತಿಳಿಸಿದೆ.



ಜೊತೆಗೆ, ತಾವು ನಿರ್ದಿಷ್ಟ ಅಭ್ಯರ್ಥಿಗೆ ಮತದಾನ ಮಾಡಿದ್ದೇವೆಯೇ ಎಂಬುದನ್ನು ವಿವಿಪ್ಯಾಟ್‌ಗಳ ಮೂಲಕ ಖಚಿತಪಡಿಸಿಕೊಳ್ಳುವುದು ಮತದಾರರ ಮೂಲಭೂತ ಹಕ್ಕಲ್ಲ ಎಂದು ಆಯೋಗವು ಪ್ರತಿಪಾದಿಸಿದೆ.

ಇವಿಎಂನಲ್ಲಿ ದಾಖಲಾಗಿರುವ ಮತಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಗಳು ಅನುಮಾನ ವ್ಯಕ್ತಪಡಿಸಿದಾಗ ಮಾತ್ರ ವಿವಿಪ್ಯಾಟ್‌ಗಳಲ್ಲಿನ ಎಲ್ಲ ಚೀಟಿಗಳನ್ನು ಎಣಿಕೆ ಮಾಡಲಾಗುತ್ತದೆ ಎಂದು ತಿಳಿಸಿದೆ.

7ನೇ ಪುಟ ನೋಡಿ

ಮೋದಿ–ಬೈಡನ್ ಚರ್ಚೆ ಇಂದು

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಅಮೆರಿಕ ಅಧ್ಯಕ್ಷ ಜೋ ಬೈಡನ್ ಶುಕ್ರವಾರ ಇಲ್ಲಿ ಭೇಟಿಯಾಗಲಿದ್ದಾರೆ. ಸಮಗ್ರ ಜಾಗತಿಕ ಮತ್ತು ಕಾರ್ಯತಂತ್ರ ಪಾಲುದಾರಿಕೆ ಸದೃಢಗೊಳಿಸುವ ನಿಟ್ಟಿನಲ್ಲಿ ದ್ವಿಪಕ್ಷೀಯ ಮಾತುಕತೆ ನಡೆಸುವರು.

ಶುದ್ಧ ಇಂಧನ, ವ್ಯಾಪಾರ, ಉನ್ನತ ತಂತ್ರಜ್ಞಾನ, ರಕ್ಷಣಾ ಕ್ಷೇತ್ರಗಳಲ್ಲಿ ಉಭಯ ದೇಶಗಳ ನಡುವಿನ ಸಹಕಾರವನ್ನು ಪರಿಶೀಲಿಸಲಿದ್ದು, ಜಾಗತಿಕ ಸವಾಲುಗಳಿಗೆ ಪರಿಹಾರಕ್ಕೆ ಉಭಯ ದೇಶಗಳ ಕೊಡುಗೆ ಕುರಿತು ಚರ್ಚಿಸುವರು.

ಅಲ್ಲದೆ, ಪ್ರಧಾನಿ ಅವರು ಬಾಂಗ್ಲಾದೇಶದ ಪ್ರಧಾನಿ ಶೇಖ್ ಹಸೀನಾ ಮತ್ತು ಮಾರಿಷಸ್‌ನ ಪ್ರಧಾನಿ ಪ್ರವಿಂದ್ ಜುಗ್‌ನೌತ್ ಜೊತೆಗೂ ಪ್ರತ್ಯೇಕವಾಗಿ ಚರ್ಚಿಸುವರು.

ಜಿ 20 ಶೃಂಗಸಭೆಗಾಗಿ ಬೈಡನ್ ಆಗಮಿಸುತ್ತಿದ್ದಾರೆ. ಅಧ್ಯಕ್ಷರಾಗಿ ಇದು ಭಾರತಕ್ಕೆ ಅವರ ಮೊದಲ ಭೇಟಿ. 2020ರ ಫೆಬ್ರುವರಿಯಲ್ಲಿ ಆಗ ಅಧ್ಯಕ್ಷರಾಗಿದ್ದ ಡೊನಾಲ್ಡ್ ಟ್ರಂಪ್ ಭಾರತಕ್ಕೆ ಭೇಟಿ ನೀಡಿದ್ದರು. ಬೈಡನ್ ಭಾನುವಾರ ಇಲ್ಲಿಂದ ವಿಯೆಟ್ನಾಂಗೆ ತೆರಳುವರು.

ವೀಸಾ ಅವಧಿ ಇನ್ನಷ್ಟು ಮುಕ್ತಗೊಳಿಸುವುದು, ಸಹಭಾಗಿತ್ವದಲ್ಲಿ ಸಣ್ಣ ಮಾಡುಲರ್ ರಿಯಾಕ್ಟರ್ ತಂತ್ರಜ್ಞಾನದ ಅಭಿವೃದ್ಧಿ ಕುರಿತು ಹಿಂದೆ ವಾಷಿಂಗ್ಟನ್‌ನಲ್ಲಿ ನಡೆದಿದ್ದ ಸಭೆಯಲ್ಲಿ ಉಭಯ ಮುಖಂಡರು ಚರ್ಚಿಸಿದ್ದರು. ಶುಕ್ರವಾರ ಈ ವಿಷಯ ಪ್ರಸ್ತಾಪವಾಗುವ ಸಾಧ್ಯತೆಗಳಿವೆ.

ಕಳಪೆ ಸಮವಸ್ತ್ರ: ತನಿಖೆಗೆ ನಿರ್ಧಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲಾ ಮಕ್ಕಳ ಸಮವಸ್ತ್ರಕ್ಕೆ ಕಳಪೆ ಬಟ್ಟೆ ಪೂರೈಕೆ ಮತ್ತು ಅದಕ್ಕೆ ₹117 ಕೋಟಿ ಹಣ ಪಾವತಿಸಿರುವ ಪ್ರಕರಣದ ಬಗ್ಗೆ ಇಲಾಖಾ ತನಿಖೆ ನಡೆಸಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ.ಪಾಟೀಲ ಅವರು ಸಚಿವ ಸಂಪುಟ ಸಭೆಯ ಬಳಿಕ ಸುದ್ದಿಗೋಷ್ಠಿಯಲ್ಲಿ ಈ ಕುರಿತು ವಿವರ ನೀಡಿ, ಇದೊಂದು ಗಂಭೀರ ಅವ್ಯವಹಾರವಾಗಿದ್ದು, ತನಿಖೆ ಅಗತ್ಯ ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು ಎಂದರು.

2022–23 ಮತ್ತು 2023–24ನೇ ಸಾಲಿಗೆ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ, ಶಿಕ್ಷಣ ಇಲಾಖೆಯಿಂದ ಮಕ್ಕಳಿಗೆ ಸಮವಸ್ತ್ರ ಸಿದ್ಧಪಡಿಸಲು ಬಟ್ಟೆಯನ್ನು ಪೂರೈಕೆ ಮಾಡಿತ್ತು. ಆದರೆ, ಪೂರೈಕೆ ಮಾಡಿದ ಬಟ್ಟೆ ಶೇ 90 ರಷ್ಟು ಕಳಪೆ ಗುಣಮಟ್ಟದ್ದಾಗಿತ್ತು. ಆದರೆ, ಈ ಬಟ್ಟೆ ಪೂರೈಕೆಗೆ ಪೂರ್ಣ ಪ್ರಮಾಣದಲ್ಲಿ ಹಣ ಪಾವತಿಸಲಾಗಿತ್ತು. ಕಳಪೆ ಬಟ್ಟೆ ಪೂರೈಕೆಗೆ ಯಾರು ಕಾರಣರು ಎಂಬುದನ್ನು ಪತ್ತೆ ಮಾಡಿ ಅಂತಹವರ ವಿರುದ್ಧ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆ ದಾಖಲಿಸಲಾಗುವುದು ಎಂದು ಪಾಟೀಲ ತಿಳಿಸಿದರು.

ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಈಗಾಗಲೇ ಕೆಎಚ್‌ಡಿಸಿ ವ್ಯವಸ್ಥಾಪಕ ನಿರ್ದೇಶಕರನ್ನು ಅಮಾನತುಗೊಳಿಸಲಾಗಿದೆ ಎಂದು ಹೇಳಿದರು.

2022–23ನೇ ಸಾಲಿಗೆ ಉತ್ತಮ ಗುಣಮಟ್ಟದ ಬಟ್ಟೆ ಪೂರೈಕೆ ಮಾಡಿದ ಸಮವಸ್ತ್ರಗಳ ಬಟ್ಟೆಗೆ ಮಾತ್ರ ಕೆಎಚ್‌ಡಿಸಿ ಸಂಸ್ಥೆಗೆ ಪಾವತಿಸಬೇಕಾಗಿರುವ ಬಾಕಿ ಮೊತ್ತ ₹14.48 ಕೋಟಿ ಬಿಡುಗಡೆ ಮಾಡಲು ಸಭೆಯಲ್ಲಿ ತೀರ್ಮಾನಿಸಲಾಗಿದೆ. 2023–24ನೇ ಸಾಲಿಗೆ ಎರಡನೇ ಜೊತೆ ಕಳಪೆ ಗುಣಮಟ್ಟದ ಬಟ್ಟೆ ಪೂರೈಸಿದ್ದಕ್ಕಾಗಿ ವಿಳಂಬ ದಂಡ ಮತ್ತು ಶಿಕ್ಷಣ ಇಲಾಖೆ ತಡೆ ಹಿಡಿದಿದ್ದ ₹2.43 ಕೋಟಿಯನ್ನು ನೇಕಾರರ ಹಿತದೃಷ್ಟಿಯಿಂದ ಬಿಡುಗಡೆ ಮಾಡಲು ತೀರ್ಮಾನಿಸಲಾಯಿತು ಎಂದರು.

7ನೇ ಪುಟ ನೋಡಿ

‘2 ತಿಂಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿ’

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೇಲೆ ನಡೆಯುವ ಜಾತಿ ದೌರ್ಜನ್ಯ ಪ್ರಕರಣಗಳಲ್ಲಿ ಎರಡು ತಿಂಗಳ ಒಳಗೆ ದೋಷಾರೋಪಪಟ್ಟಿ ಸಲ್ಲಿಸಲು ಎಸ್‌ಪಿ, ಡಿಸಿಪಿಗಳು ಕಟ್ಟುನಿಟ್ಟಿನ ಸೂಚನೆ ನೀಡಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದರು. 6

ರೂಪಾಯಿ ಸಾರ್ವಕಾಲಿಕ ಕನಿಷ್ಠ

ನವದೆಹಲಿ (ಪಿಟಿಐ): ಅಮೆರಿಕದ ಡಾಲರ್ ಎದುರು ಸತತ ನಾಲ್ಕನೆಯ ದಿನವೂ ಕುಸಿತ ದಾಖಲಿಸಿರುವ ರೂಪಾಯಿ ಮೌಲ್ಯವು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಗುರುವಾರದ ವಹಿವಾಟಿನ ಅಂತ್ಯಕ್ಕೆ ₹83.23ಕ್ಕೆ ತಲುಪಿದೆ. ಇದು ಅಮೆರಿಕದ ಡಾಲರ್ ಎದುರು ರೂಪಾಯಿಯ ಸಾರ್ವಕಾಲಿಕ ಕನಿಷ್ಠ ಮೌಲ್ಯ. 11

ಒಳ ಪುಟ



ಭೂಮಿ, ಚಂದ್ರನ ಜತೆಗೆ ಸೆಲ್ಫಿ ತೆಗೆದ ಆದಿತ್ಯ ಎಲ್1 6

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಬಿಎಂಪಿ ವ್ಯಾಪ್ತಿಯಲ್ಲಿ ತಿಂಗಳಲ್ಲೇ 416 ಮಂದಿಗೆ ಸೋಂಕು; ಮುನ್ಸೂಚನಾ ತಂತ್ರಾಂಶ ಅನಾವರಣ

ಹೆಚ್ಚಿದ ಡೆಂಗಿ: ನಿಯಂತ್ರಣಕ್ಕೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಡೆಂಗಿ ಪ್ರಕರಣಗಳು ಹೆಚ್ಚಾಗುತ್ತಿದ್ದು, ಅದನ್ನು ನಿಯಂತ್ರಿಸಲು ಎಲ್ಲ ರೀತಿಯ ಕ್ರಮಗಳನ್ನೂ ಕೂಡಲೇ ಕೈಗೊಳ್ಳಬೇಕು ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಸೂಚಿಸಿದರು.

ಡೆಂಗಿ ಮತ್ತು ಆರೋಗ್ಯ ವಿಷಯಕ್ಕೆ ಸಂಬಂಧಿದಂತೆ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಸಚಿವರು, ಬಿಬಿಎಂಪಿ ಮುಖ್ಯ ಆರೋಗ್ಯಾಧಿಕಾರಿ ಅವರು ಹೆಚ್ಚಿನ ಕಾಳಜಿ ವಹಿಸಿ ಕ್ರಮಗಳನ್ನು ಕೈಗೊಳ್ಳಬೇಕು. ಔಷಧಿ ಸಿಂಪಡಣೆ ಹಾಗೂ ಜಾಗೃತಿ ಕಾರ್ಯಕ್ರಮ ನಡೆಸಬೇಕು ಎಂದರು.

ನಗರದಲ್ಲಿ ಎರಡು ತಿಂಗಳಿಂದ ಹೆಚ್ಚು ಡೆಂಗಿ ಪ್ರಕರಣಗಳು ದಾಖಲಾಗಿವೆ. ಜುಲೈನಲ್ಲಿ 1,649, ಆಗಸ್ಟ್‌ನಲ್ಲಿ 1,589, ಸೆಪ್ಟೆಂಬರ್‌ನಲ್ಲಿ 416 ಪ್ರಕರಣಗಳು ಪತ್ತೆಯಾಗಿವೆ. ಮಳೆ ನೀರು ನಿಂತಿರುವ ಕಾರಣ ಸೊಳ್ಳೆಗಳ ಲಾರ್ವಾ ಉತ್ಪತ್ತಿಯಾಗಿ ಹೆಚ್ಚು ಪ್ರಕರಣಗಳು ಕಂಡುಬರುತ್ತಿವೆ ಎಂದು ಹೇಳಿದರು.

ಪಾಲಿಕೆ ವ್ಯಾಪ್ತಿಯಲ್ಲಿ 6 ಹೈಟೆಕ್ ಲ್ಯಾಬ್‌ಗಳಿವೆ. ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ನಮ್ಮ ಕ್ಲಿನಿಕ್‌ಗಳಲ್ಲಿ ಸಂಗ್ರಹ ಮಾಡಿ ರಕ್ತದ ಮಾದರಿಗಳನ್ನು ಪ್ರಯೋಗಾಲಯಕ್ಕೆ ರವಾನಿಸುವ (ಹಬ್ ಆ್ಯಂಡ್ ಸ್ಪೋಕ್ ಮಾಡಲ್) ವ್ಯವಸ್ಥೆ ಅಗತ್ಯವಿದೆ. ಈ ಸೌಲಭ್ಯಗಳಿಗೆ ಅನುದಾನದ ಅಗತ್ಯವಿದ್ದು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹಾಗೂ ಪಾಲಿಕೆ ಸಹಯೋಗದೊಂದಿಗೆ ಎನ್.ಎಚ್.ಎಂ ಅನುದಾನದಿಂದ ಒದಗಿಸಲಾಗುವುದು ಎಂದು ಸಚಿವರು ಭರವಸೆ ನೀಡಿದರು.

ಡೆಂಗಿ ಮುನ್ಸೂಚನಾ ತಂತ್ರಾಂಶ ಅನಾವರಣ: ಡೆಂಗಿ ಪ್ರಕರಣಗಳನ್ನು ಒಂದು ತಿಂಗಳ ಮುಂಚಿತವಾಗಿಯೇ ತಿಳಿಯುವ ಉದ್ದೇಶದಿಂದ ಭಾರತೀಯ ವಿಜ್ಞಾನ ಸಂಸ್ಥೆಯಿಂದ ಒಂದು ತಂತ್ರಾಂಶವನ್ನು ಅಭಿವೃದ್ಧಿಪಡಿಸಿದೆ. ಇದರಿಂದ ಮುಂಚಿತವಾಗಿಯೇ ಮಾಹಿತಿ ಲಭ್ಯವಾಗಲಿದ್ದು, ಸೊಳ್ಳೆಗಳ ನಿಯಂತ್ರಣಕ್ಕೆ ಅಗತ್ಯ ಕ್ರಮಗಳನ್ನು ಕೈಗೊಂಡು ಡೆಂಗಿ ಪ್ರಕರಣಗಳ ನಿಯಂತ್ರಣಕ್ಕೆ ಅನುಕೂಲವಾಗಲಿದೆ ಎಂದು ತಿಳಿಸಿದರು.

ನಮ್ಮ ಕ್ಲಿನಿಕ್ ಸೇವೆ: ಬಿಬಿಎಂಪಿ ವ್ಯಾಪ್ತಿಯಲ್ಲಿ 50 'ನಮ್ಮ ಕ್ಲಿನಿಕ್'ಗಳು ಬೆಳಿಗ್ಗೆ 8ರಿಂದ ರಾತ್ರಿ 8ರವರೆಗೆ ಕಾರ್ಯನಿರ್ವಹಿಸುವಂತೆ ಸೂಚಿಸಲಾಗಿದೆ. ಬೆಳಗ್ಗೆ 8 ರಿಂದ ಸಂಜೆ 4ರವರೆಗೆ ಲ್ಯಾಬ್ ಟೆಕ್ನಿಷಿಯನ್‌ಗಳು ಹಾಗೂ ಮಧ್ಯಾಹ್ನ 12ರಿಂದ ರಾತ್ರಿ 8ರವರೆಗೆ ವೈದ್ಯರು, ನರ್ಸ್‌ಗಳಿರುವಂತೆ ವ್ಯವಸ್ಥೆ ಮಾಡಲಾಗುತ್ತಿದೆ ಎಂದು ಹೇಳಿದರು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ಆಯುಕ್ತರಾದ ಡಿ. ರಂದೀಪ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಬಿಬಿಎಂಪಿ ಆರೋಗ್ಯ ವಿಭಾಗದ ವಿಶೇಷ ಆಯುಕ್ತ ಡಾ. ತ್ರಿಲೋಕ್ ಚಂದ್ರ, ಎನ್.ಎಚ್.ಎಂ ಅಭಿಯಾನ ವೀಕ್ಷಕರಾದ ನವೀನ್ ಭಟ್ ಇದ್ದರು.



ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಸಚಿವ ದಿನೇಶ್ ಗುಂಡೂರಾವ್ ಬಿಬಿಎಂಪಿ ಅಧಿಕಾರಿಗಳೊಂದಿಗೆ ಬುಧವಾರ ಸಭೆ ನಡೆಸಿದರು. ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇದ್ದರು

ಬಿಬಿಎಂಪಿ ಪ್ರತ್ಯೇಕ ಆರೋಗ್ಯ ಜಿಲ್ಲೆ!

ನಗರದಲ್ಲಿ ಎಲ್ಲಾ ಆರೋಗ್ಯ ಸೇವೆಗಳನ್ನು ಸಮನಾಂತರವಾಗಿ ನೀಡುವ ಉದ್ದೇಶದಿಂದ ಬಿಬಿಎಂಪಿಯನ್ನು ಪ್ರತ್ಯೇಕ ಜಿಲ್ಲೆ ಎಂದು ಪರಿಗಣಿಸಲು ನಿರ್ಧಾರ ಮಾಡಲಾಗಿದೆ. ಈ ಬಗ್ಗೆ ಉನ್ನತ ಮಟ್ಟದಲ್ಲಿ ಚರ್ಚಿಸಿ ಅಗತ್ಯ ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಬಿಬಿಎಂಪಿ ವ್ಯಾಪ್ತಿಯ ಪ್ರಾಥಮಿಕ ಆರೋಗ್ಯ ಕೇಂದ್ರಗಳು ಹಾಗೂ 'ನಮ್ಮ ಕ್ಲಿನಿಕ್'ಗಳನ್ನು ಮಹಾನಗರ ಪಾಲಿಕೆ ನಿರ್ವಹಿಸುತ್ತಿದೆ. ಆದರೆ ಹಲವು ಆರೋಗ್ಯ ಸೇವೆಗಳನ್ನು ಒದಗಿಸಲು ಪಾಲಿಕೆಗೆ ಸಾಧ್ಯವಿಲ್ಲ. ಹೀಗಾಗಿ ಆಡಳಿತಾತ್ಮಕ ದೃಷ್ಟಿಯಿಂದ ಬಿಬಿಎಂಪಿಯನ್ನು ಪ್ರತ್ಯೇಕ ಆರೋಗ್ಯ ವಿಭಾಗ ಅಥವಾ ಕಮಿಷನರೇಟ್ ರಚಿಸಲಾಗುವುದು ಎಂದರು.

ಆರೋಗ್ಯ ನಿರೀಕ್ಷಣಾ ಅಧಿಕಾರಿಗಳು, ಕಿರಿಯ ಆರೋಗ್ಯ ಮಹಿಳಾ ಸಹಾಯಕಿಯರ ಸಂಖ್ಯೆಯನ್ನು ಹೆಚ್ಚಿಸಬೇಕಿದೆ. ಅಲ್ಲದೆ, ಅವರ ವೇತನವನ್ನೂ ಕೂಡಾ ಕಾರ್ಮಿಕ ಇಲಾಖೆ ಕಾಯ್ದೆಯಂತೆ ಕನಿಷ್ಠ ವೇತನ ಹೆಚ್ಚಳ ಮಾಡಬೇಕಿದೆ, ಅದಕ್ಕೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ಕೆ.ಜಿ ಟೊಮೆಟೊಗೆ ಈಗ ಕೇವಲ ₹10!

ಪ್ರಜಾವಾಣಿ ವಾರ್ತೆ

ಕೋಲಾರ: ನಗರದ ಎಪಿಎಂಸಿ ಮಾರುಕಟ್ಟೆಯಲ್ಲಿ ಗುರುವಾರ ನಡೆದ ಹರಾಜಿನಲ್ಲಿ ಅತ್ಯಂತ ಕಡಿಮೆ ಬೆಲೆಗೆ ಟೊಮೆಟೊ ಹರಾಜಾಗಿದೆ.

15 ಕೆ.ಜಿ 'ನಾಟಿ' ಟೊಮೆಟೊ ಬಾಕ್ಸ್ ಕನಿಷ್ಠ ₹ 50 ಹಾಗೂ ಗರಿಷ್ಠ ₹ 150 ಕ್ಕೆ ಮಾರಾಟವಾಗಿದೆ. ಕಡಿಮೆ ಗುಣಮಟ್ಟದ ಕೆ.ಜಿ ಟೊಮೆಟೊಗೆ ಸರಾಸರಿ ₹3 ಹಾಗೂ ಗುಣಮಟ್ಟದ ಟೊಮೆಟೊಗೆ ಗರಿಷ್ಠ ₹10 ಸಿಕ್ಕಿದೆ. ಕಳೆದ ಎರಡೂವರೆ ತಿಂಗಳಲ್ಲಿ ಅತಿ ಕಡಿಮೆ ದರಕ್ಕೆ ಮಾರಾಟವಾಗಿದೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಟೊಮೆಟೊ ಬೆಲೆ ಕೆ.ಜಿ.ಗೆ ₹ 10ರಿಂದ ₹ 15 ಇದೆ. 15 ಕೆ.ಜಿ 'ಸೀಡ್' ಟೊಮೆಟೊ ಬಾಕ್ಸ್ ದರ ₹ 100ಕ್ಕೆ ಕುಸಿದಿದೆ. ಇಲ್ಲಿನ ಎಪಿಎಂಸಿ ಮಾರುಕಟ್ಟೆಯಲ್ಲಿ ಗುರುವಾರ 19,774 ಕ್ವಿಂಟಲ್ ಟೊಮೆಟೊ ಆವಕವಾಗಿದೆ.

ಸಂಕೇಶ್ವರ ಮೀಡಿಯಾ ಸ್ಕೂಲ್ ಶೀಘ್ರ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿ ಹಾಗೂ ವಿಆರ್‌ಎಲ್ ಸಮೂಹ ಸಂಸ್ಥೆಗಳ ಅಧ್ಯಕ್ಷ ವಿಜಯ ಸಂಕೇಶ್ವರ ಅವರ ಹೆಸರಿನಲ್ಲಿ ಉತ್ತರ ಕನ್ನಡದ ಯಲ್ಲಾಪುರದಲ್ಲಿ ನಿರ್ಮಿಸಿರುವ ಮೀಡಿಯಾ ಸ್ಕೂಲ್ ಶೀಘ್ರದಲ್ಲಿಯೇ ಕಾರ್ಯಾರಂಭಿಸಲಿದೆ ಎಂದು ವಿಶ್ವದರ್ಶನ ಎಜುಕೇಶನ್ ಸೊಸೈಟಿ ತಿಳಿಸಿದೆ.

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನದಲ್ಲಿ ಒಂದು ವರ್ಷದ ಪಿಜಿ ಡಿಪ್ಲೊಮಾ ಕೋರ್ಸ್ ಇದಾಗಿದೆ. ಪದವೀಧರರು ಅಥವಾ ಈಗ ಅಂತಿಮ ಪದವಿ ಪರೀಕ್ಷೆ ಬರೆಯುತ್ತಿರುವವರು ಪ್ರವೇಶಕ್ಕೆ ಅರ್ಜಿ ಸಲ್ಲಿಸಬಹುದು. ಸೆ.15ರಿಂದ 30ರವರೆಗೆ ಅರ್ಜಿ ಸಲ್ಲಿಕೆಗೆ ಅವಕಾಶ ಇರಲಿದೆ. ಅ.1 ಮತ್ತು 2ರಂದು ಪ್ರವೇಶ ಪರೀಕ್ಷೆ ನಡೆಸಿ, ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗುತ್ತದೆ. ವಿವರಗಳಿಗೆ ಮೀಡಿಯಾ ಸ್ಕೂಲ್ ಪ್ರಾಂಶುಪಾಲ ನಾಗರಾಜ ಇಳೆಗುಂಡಿ (8884432196) ಅಥವಾ ವಿಶ್ವದರ್ಶನ ಎಜುಕೇಶನ್ ಸೊಸೈಟಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಜಯ್ ಭಾರತೀಯ (8904134073) ಸಂಪರ್ಕಿಸಬಹುದು.

ಸುದ್ದಿ 2 ನಿಮಿಷ

ಯುರೋಪಿಯನ್ ಪಾರ್ಲಿಮೆಂಟ್ ಸದಸ್ಯರೊಂದಿಗೆ ರಾಹುಲ್ ಸಭೆ


ಲಂಡನ್ (ಪಿಟಿಐ): ಮೂರು ರಾಷ್ಟ್ರಗಳ ಯುರೋಪ್ ಪ್ರವಾಸ ಕೈಗೊಂಡಿರುವ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಬ್ರಸೆಲ್ಸ್‌ನಲ್ಲಿ ಯುರೋಪಿಯನ್ ಪಾರ್ಲಿಮೆಂಟ್‌ನ ಕೆಲ ಸದಸ್ಯರೊಂದಿಗೆ ಮಾತ್ರ ಸಭೆ ನಡೆಸಿ ಚರ್ಚಿಸಿದರು.

ಬೆಲ್ಜಿಯಂ ರಾಜಧಾನಿಯಲ್ಲಿ ನಡೆದ ಈ ಸಭೆಯಲ್ಲಿ, ಮಣಿಪುರದ ಮಾನವ ಹಕ್ಕುಗಳ ಪರಿಸ್ಥಿತಿ ಸೇರಿದಂತೆ ಕೆಲ ವಿಷಯಗಳ ಬಗ್ಗೆ ಚರ್ಚೆ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಆದರೆ ಚರ್ಚೆಗಳು ದಿನದ ಅಧಿಕೃತ ಚರ್ಚೆಯ ಭಾಗವಾಗಿರಲಿಲ್ಲ.

ಆದರೆ ಯುರೋಪಿಯನ್ ಪಾರ್ಲಿಮೆಂಟ್‌ನ ಕೆಲ ಸದಸ್ಯರ ಜತೆಗೆ ರಾಹುಲ್ ಅವರು ಸಭೆ ನಡೆಸಿದ್ದನ್ನು ಕಾಂಗ್ರೆಸ್ 'ಎಕ್ಸ್' ವೇದಿಕೆಯಲ್ಲಿ ದೃಢೀಕರಿಸಿದೆ.

ಈ ಸಭೆಯ ಬಳಿಕ ರಾಹುಲ್ ಅವರು ಮಾನವ ಹಕ್ಕುಗಳ ವಿಷಯ ಕುರಿತು ಅಲ್ಲಿನ ನಾಗರಿಕ ಸಮಾಜ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಬೆಲ್ಜಿಯಂನಲ್ಲಿರುವ ಭಾರತೀಯ ಮೂಲದವರ ಜತೆಗೆ ಸಂವಾದವನ್ನೂ ನಡೆಸಿದರು.

ಮಣಿಪುರ ಘರ್ಷಣೆಯನ್ನು ಉಲ್ಲೇಖಿಸಿ ಭಾರತದಲ್ಲಿನ ಮಾನವ ಹಕ್ಕುಗಳ ಪರಿಸ್ಥಿತಿ ಕುರಿತು ಯುರೋಪಿಯನ್ ಪಾರ್ಲಿಮೆಂಟ್ ಜುಲೈನಲ್ಲಿ ನಿರ್ಣಯ ಅಂಗೀಕರಿಸಿತ್ತು. ಆಗ ಪ್ರತಿಕ್ರಿಯಿಸಿದ್ದ ಭಾರತದ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ಅರಿಂದಮ್ ಬಾಗ್ಚಿ, 'ಭಾರತದ ಆಂತರಿಕ ವ್ಯವಹಾರಗಳಲ್ಲಿ ಹಸ್ತಕ್ಷೇಪ ಮಾಡುವುದು ಸ್ವೀಕಾರಾರ್ಹವಲ್ಲ. ಇದು ವಸಾಹತುಶಾಹಿ ಮನಸ್ಥಿತಿಯನ್ನು ಪ್ರತಿಬಿಂಬಿಸುತ್ತದೆ' ಎಂದು ಹೇಳಿದ್ದರು.



ಐವರು ಸಾಧಕರಿಗೆ 'ಕನ್ನಡ ನಿತ್ಯೋತ್ಸವ ಪ್ರಶಸ್ತಿ' ಪ್ರಕಟ

ಬೆಂಗಳೂರು: ಆದರ್ಶ ಸುಗಮ ಸಂಗೀತ ಅಕಾಡೆಮಿ ನೀಡುವ 2023ನೇ ಸಾಲಿನ 'ಕನ್ನಡ ನಿತ್ಯೋತ್ಸವ ಪ್ರಶಸ್ತಿ'ಗೆ ಗಾಯಕಿ ಶಶಿಕಲಾ ಸುನಿಲ್ ಸೇರಿ ಐವರು ಆಯ್ಕೆಯಾಗಿದ್ದಾರೆ.

ಕವಿ ಮಹಿಪಾಲ್ ರೆಡ್ಡಿ, ವೀಣಾ ಮ್ಯೂಸಿಕಲ್ಸ್ ಮಾಲೀಕ ಪಿ. ನಾಗರಾಜ್, ಕನ್ನಡ ಕಾರ್ಯಕರ್ತ ಜಾವಗಲ್ ಪ್ರಸನ್ನ ಕುಮಾರ್ ಹಾಗೂ ರಂಗಕರ್ಮಿ ಬೆಳ್ಳಿಚುಕ್ಕಿ ವೀರೇಂದ್ರ ಅವರು ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಇಲ್ಲಿನ ಗವಿಪುರದ ಗುಟ್ಟಹಳ್ಳಿಯಲ್ಲಿರುವ ಉದಯಭಾನು ಕಲಾಸಂಘದಲ್ಲಿ ಇದೇ ಭಾನುವಾರ ಸಂಜೆ 6 ಗಂಟೆಗೆ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಹಮ್ಮಿಕೊಳ್ಳಲಾಗಿದ್ದು, ಕಾಂಗ್ರೆಸ್ ಮುಖಂಡ ಬಿ.ಕೆ. ಚಂದ್ರಶೇಖರ್ ಅವರು ಸಮಾರಂಭ ಉದ್ಘಾಟಿಸಲಿದ್ದಾರೆ. ಬಸವನಗುಡಿ ಶಾಸಕ ಎಲ್.ಎ. ರವಿ ಸುಬ್ರಹ್ಮಣ್ಯ ಅವರು ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ ಎಂದು ಅಕಾಡೆಮಿ ಅಧ್ಯಕ್ಷ ಕಿಕ್ಕೇರಿ ಕೃಷ್ಣಮೂರ್ತಿ ತಿಳಿಸಿದ್ದಾರೆ.

ನಾಡಿನ ಖ್ಯಾತ ಕಲಾವಿದರಿಂದ ಸುಗಮ ಸಂಗೀತ ಗಾಯನ, ಎಚ್.ಬಿ. ಜಯರಾಂ, ರಾಘವೇಂದ್ರ ಜೋಶಿ, ಜೈಕುಮಾರ್ ತಂಡದಿಂದ ವಾದ್ಯ ವೈಭವ ಹಾಗೂ ಅಕಾಡೆಮಿಯ ಹಿರಿಯ ಮತ್ತು ಕಿರಿಯ ವಿದ್ಯಾರ್ಥಿಗಳಿಂದ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಹೇಳಿದ್ದಾರೆ.

ಬಿಬಿಎಂಪಿ 225 ವಾರ್ಡ್‌ಗಳ ಕರಡು ಪಟ್ಟಿ ಅಧಿಸೂಚನೆ

ಯಶವಂತಪುರದಿಂದ 1800 ಆಕ್ಷೇಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ಪುನರ್ ವಿಂಗಡಿಸಲಾಗಿರುವ 225 ವಾರ್ಡ್‌ಗಳ ಕರಡು ಪಟ್ಟಿಗೆ ಮೂರು ಸಾವಿರಕ್ಕೂ ಹೆಚ್ಚು ಆಕ್ಷೇಪಣೆಗಳು ಬಂದಿದ್ದು, ಯಶವಂತಪುರ ವಿಧಾನಸಭೆ ಕ್ಷೇತ್ರದಿಂದಲೇ 1,800 ತಕರಾರುಗಳು ಬಂದಿವೆ.

ಬ್ಯಾಡರಹಳ್ಳಿ ಭಾಗದಿಂದ ಹೆಚ್ಚು ಆಕ್ಷೇಪ ವ್ಯಕ್ತವಾಗಿದೆ. ಒಂದೇ ರೀತಿಯ ಆಕ್ಷೇಪಗಳು ಹಲವು ಹೆಸರಿನಲ್ಲಿ ಬಂದಿದ್ದು, ಬಿಬಿಎಂಪಿ ವ್ಯಾಪ್ತಿಯಿಂದ ಕೆಲವು ಮನೆಗಳನ್ನು ಬಿಟ್ಟಿರುವುದಕ್ಕೆ ಅಸಮಾಧಾನ ವ್ಯಕ್ತವಾಗಿದೆ.

ಆಗಸ್ಟ್ 18ರಂದು 225 ವಾರ್ಡ್‌ಗಳ ಕರಡು ಪಟ್ಟಿಯನ್ನು ಅಧಿಸೂಚಿಸಲಾಗಿದ್ದು, ಆಕ್ಷೇಪಣೆ ಸಲ್ಲಿಸುವ ಅವಧಿ ಮುಗಿದಿದೆ. ಯಶವಂತಪುರದ ನಂತರ ಯಲಹಂಕ ವಿಧಾನಸಭೆ ಕ್ಷೇತ್ರದಿಂದ ಒಟ್ಟು 520 ಆಕ್ಷೇಪಗಳು ಬಂದಿವೆ. ಮಾಜಿ ಕಾರ್ಪೊರೇಟರ್‌ಗಳ ವಾರ್ಡ್ ವ್ಯಾಪ್ತಿಯನ್ನು ಬೇರೆ ವಾರ್ಡ್‌ಗೆ ಸೇರಿಸಿರುವುದು ಆಕ್ಷೇಪಗಳಲ್ಲಿದೆ.

ಕಲ್ಕೆರೆ– 300, ವಸಂತನಗರ –109, ಬನಶಂಕರಿ ದೇವಸ್ಥಾನ ವಾರ್ಡ್‌ನಿಂದ 27 ಆಕ್ಷೇಪಗಳು ಬಂದಿವೆ. ಮಲ್ಲೇಶ್ವರ, ಹೆಬ್ಬಾಳ, ವಿಜಯನಗರ, ಚಿಕ್ಕಪೇಟೆ, ಶಾಂತಿನಗರ ವಿಧಾನಸಭೆ ಕ್ಷೇತ್ರಗಳಿಂದ ಹೆಚ್ಚಿನ ಆಕ್ಷೇಪಗಳು ಬಂದಿಲ್ಲ. ಮಹದೇವಪುರ ವಿಧಾನಸಭೆ ಕ್ಷೇತ್ರದಿಂದ 20 ಹಾಗೂ ಸಿ.ವಿ. ರಾಮನ್ ವಿಧಾನಸಭೆ ಕ್ಷೇತ್ರದಿಂದ 10 ಸಲಹೆಗಳು ಮಾತ್ರ ಬಂದಿವೆ.

ಹೈಕೋರ್ಟ್ ಆದೇಶದಂತೆ ಸೆ.16ರೊಳಗೆ ವಾರ್ಡ್ ಪುನರ್ ವಿಂಗಡಣೆ, ಮೀಸಲು ಪ್ರಕ್ರಿಯೆ ಮುಗಿಯಬೇಕಿದೆ.

ಈಸ್ಟ್ ಪಾಯಿಂಟ್ ವಿದ್ಯಾಸಂಸ್ಥೆ ವಿರುದ್ಧ ತಮಟೆ ಚಳವಳಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಬಿದರಹಳ್ಳಿ ಸಮೀಪವಿರುವ ಈಸ್ಟ್ ಪಾಯಿಂಟ್ ವಿದ್ಯಾಸಂಸ್ಥೆಗಳ ಸಮೂಹ ಸಂಸ್ಥೆಯು 20 ವರ್ಷಗಳಿಂದ ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆಯನ್ನು ಪಾವತಿಸುವಂತೆ ಆಗ್ರಹಿಸಿ ಬಿದರಹಳ್ಳಿ ಗ್ರಾಮ ಪಂಚಾಯತಿ ಸದಸ್ಯರು ಕಾಲೇಜಿನ ಎದುರು ಗುರುವಾರ ತಮಟೆ ಚಳವಳಿ ನಡೆಸಿದರು.

ಬಿದರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಹಿರೇಂಡಹಳ್ಳಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಈಸ್ಟ್ ಪಾಯಿಂಟ್ ಸಮೂಹ ವಿದ್ಯಾಸಂಸ್ಥೆ, 2003ರಿಂದ ಈವರೆಗೆ ಸುಮಾರು ₹ 2.89 ಕೋಟಿ ಆಸ್ತಿ ತೆರಿಗೆ ಪಾವತಿಸದೆ ವಂಚನೆ ಮಾಡಿದೆ ಎಂದು ಗ್ರಾಮ ಪಂಚಾಯತಿ ಸದಸ್ಯರು ಆರೋಪಿಸಿದರು.

'ಸಾವಿರಾರು ವಿದ್ಯಾರ್ಥಿಗಳಿಗೆ ವಿದ್ಯೆ ಕಲಿಸುವ ಜವಾಬ್ದಾರಿಯುತ ಶಿಕ್ಷಣ ಸಂಸ್ಥೆ ಇಪ್ಪತ್ತು ವರ್ಷಗಳಿಂದ ಆಸ್ತಿ ತೆರಿಗೆ ಪಾವತಿಸಿಲ್ಲ. ಗ್ರಾಮ ಪಂಚಾಯತಿಯಿಂದ ನೀಡಿರುವ ಆಸ್ತಿ ತೆರಿಗೆಗಳ ಬೇಡಿಕೆಗೆ ಸಕಾರಾತ್ಮಕವಾಗಿ ಸ್ಪಂದಿಸದೆ ಬೇಜವಾಬ್ದಾರಿತನದಿಂದ ನಡೆದುಕೊಳ್ಳುತ್ತಿದೆ. ತೆರಿಗೆ ಪಾವತಿಸುವಂತೆ ತಿಳಿವಳಿಕೆ ಪತ್ರ ನೀಡಲು ಹೋದರೆ ಕಾಲೇಜಿನ ಆಡಳಿತ ಮಂಡಳಿ ಒಳಗೆ ಹೋಗಲು ಅವಕಾಶ ನೀಡದೆ ಉದ್ಧಟತನ ಪ್ರದರ್ಶಿಸಿದೆ' ಎಂದು ಗ್ರಾಮ ಪಂಚಾಯತಿ ಅಧ್ಯಕ್ಷೆ ಕವಿತಾ ದೂರಿದರು.

'ಮೂವತ್ತು ದಿನದೊಳಗೆ ಬಾಕಿ ಉಳಿಸಿಕೊಂಡಿರುವ ಆಸ್ತಿ ತೆರಿಗೆ ಮೊತ್ತವನ್ನು ಪಾವತಿ ಮಾಡಬೇಕು. ತೆರಿಗೆ ಪಾವತಿ ಮಾಡದಿರುವ ಬಗ್ಗೆ ಸ್ಪಷ್ಟನೆ ನೀಡಲು ವಿಫಲವಾದರೆ ಗ್ರಾಮ ಪಂಚಾಯತಿಗೆ ಇರುವ ಕಾನೂನು ಬಳಸಿಕೊಂಡು ಖರ್ಚು ಸಹಿತ ಹಣ ವಸೂಲಿ ಮಾಡಲು ಜಪ್ತಿ ವಾರೆಂಟ್ ಆದೇಶ ಹೊರಡಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಈಸ್ಟ್ ಪಾಯಿಂಟ್ ಸಮೂಹ ಸಂಸ್ಥೆಯ ಆಡಳಿತ ಮಂಡಳಿಯ ಮುಖ್ಯ ಅಧಿಕಾರಿ ಹೊನ್ನಪ್ಪ ಈ ಬಗ್ಗೆ ಪ್ರತಿಕ್ರಿಯಿಸಿ, 'ವಿದ್ಯಾಸಂಸ್ಥೆ ಟ್ರಸ್ಟ್ ಮೂಲಕ ಕಾರ್ಯನಿರ್ವಹಿಸುತ್ತಿದ್ದು, ಸ್ಥಳೀಯರಿಗೆ ಉದ್ಯೋಗಾವಕಾಶ ಕಲ್ಪಿಸಿದೆ. ಅಲ್ಲದೆ, ವಿದ್ಯಾರ್ಥಿ ವೇತನ ನೀಡಲಾಗಿದೆ. ಮಾಲೀಕರೊಂದಿಗೆ ಚರ್ಚಿಸಿ ನೋಟಿಸ್‌ಗೆ ಉತ್ತರಿಸಲಾಗುವುದು' ಎಂದು ತಿಳಿಸಿದರು.

ಗ್ರಾ.ಪಂ ಉಪಾಧ್ಯಕ್ಷೆ ಅಂಜಿನಮ್ಮ, ಗ್ರಾ.ಪಂ ಮಾಜಿ ಅಧ್ಯಕ್ಷ ರಾಜೇಶ್, ವರುಣ್, ಜಿ.ಪಂ ಮಾಜಿ ಸದಸ್ಯ ಗಣೇಶ್, ಪಿಡಿಒ ಲೋಹಿತ್, ಕಾರ್ಯದರ್ಶಿ ಮುನಿರಾಜ್ ಹಾಗೂ ಸದಸ್ಯರು ಇದ್ದರು.

ಬ್ಯಾಂಕಾಕ್‌ನಿಂದ ತಂದಿದ್ದ 78 ವನ್ಯಜೀವಿ ಪತ್ತೆ

ದೇವನಹಳ್ಳಿ: ಆಕರ್ಷಕ ಬಣ್ಣದ 55 ಬಗೆಯ ಹೆಬ್ಬಾವು ಮರಿಗಳು, ರೋಷದಿಂದ ಬುಸ್‌ಗುಡುತ್ತಿದ್ದ 17 ಕಿಂಗ್ ಕೋಬ್ರಾ, ಉಸಿರಾಡಲು ಗಾಳಿ ಇಲ್ಲದೆ ಚೀಲದಲ್ಲಿಯೇ ಮೃತಪಟ್ಟ ಆರು ಕಪ್ಪು ಕಾಪುಚಿನ್ ಕೋತಿ ಮರಿಗಳು...

ಥಾಯ್ಲೆಂಡ್ ರಾಜಧಾನಿ ಬ್ಯಾಂಕಾಕ್‌ನಿಂದ ಬುಧವಾರ ರಾತ್ರಿ ಏರ್ ಏಷ್ಯಾ ವಿಮಾನದಲ್ಲಿ ದೇವನಹಳ್ಳಿಯ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕರೊಬ್ಬರ ಬ್ಯಾಗ್ ಪರಿಶೀಲಿಸಿದಾಗ ಕಂಡುಬಂದ ಪ್ರಾಣಿಗಳಿವು.

ಬ್ಯಾಂಕಾಕ್‌ನಿಂದ ಕದ್ದು ತಂದ ಒಟ್ಟು 78 ಕಾಡುಪ್ರಾಣಿಗಳನ್ನು ಕಸ್ಟಮ್ಸ್ ಅಧಿಕಾರಿಗಳು ಪತ್ತೆ ಮಾಡಿ ಸುರಕ್ಷಿತವಾಗಿ ವಾಪಸ್ ಬ್ಯಾಂಕಾಕ್‌ಗೆ ಕಳಿಸಿದ್ದಾರೆ.

ಪ್ಲಾಸ್ಟಿಕ್ ಬ್ಯಾಸ್ಕೆಟ್‌ನಲ್ಲಿ ತರಲಾಗಿದ್ದ ಆರು ಕಪ್ಪು ಕಾಪುಚಿನ್ ಕೋತಿಗಳು ಉಸಿರಾಡಲು ಸೂಕ್ತ ಗಾಳಿ ಇಲ್ಲದೆ ಬ್ಯಾಸ್ಕೆಟ್‌ನಲ್ಲಿಯೇ ಮೃತಪಟ್ಟಿವೆ. ಕಾಪುಚಿನ್ ಕೋತಿಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಭಾರಿ ಬೇಡಿಕೆ ಇದೆ. ಮೂರು ಲಕ್ಷದಿಂದ ಹತ್ತು ಲಕ್ಷ ರೂಪಾಯಿವರೆಗೆ ಮಾರಾಟವಾಗುತ್ತವೆ.

ವನ್ಯಜೀವಿಗಳ ಅಕ್ರಮ ಸಾಗಾಟ ತಡೆ ಕಾಯಿದೆ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.



ಕಪ್ಪು ಚುನ್ ಕೋತಿಗಳ ಕಳೇಬರಗಳು

'ಭೂಕುಸಿತಕ್ಕೆ ಮಾಂಸ ಭಕ್ಷಣೆ ಕಾರಣ'

ನವದೆಹಲಿ: 'ಹಿಮಾಲಯ ಪ್ರದೇಶದಲ್ಲಿ ಭಾರಿ ಭೂಕುಸಿತ ಹಾಗೂ ಮೇಘಸ್ಫೋಟದಂತಹ ನೈಸರ್ಗಿಕ ವಿಪತ್ತು ಸಂಭವಿಸಲು ಮೂಕ ಪ್ರಾಣಿಗಳ ಹತ್ಯೆ ಹಾಗೂ ಮಾಂಸ ಭಕ್ಷಣೆಯೇ ಮೂಲ ಕಾರಣವಾಗಿದೆ' ಎಂದು ಐಐಟಿ–ಮಂಡಿ ನಿರ್ದೇಶಕ ಲಕ್ಷ್ಮಿಧರ್ ಬೆಹೆರಾ ನೀಡಿರುವ ಹೇಳಿಕೆಯು ವಿವಾದಕ್ಕೆ ಗ್ರಾಸವಾಗಿದೆ.

ವಿದ್ಯಾರ್ಥಿಗಳನ್ನು ಉದ್ದೇಶಿಸಿ ಬೆಹೆರಾ ಮಾತನಾಡಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಪ್ರಾಣಿಗಳು ಮತ್ತು ನಿಸರ್ಗದ ನಡುವೆ ಸಹಜೀವನ ಸಂಬಂಧವಿದೆ. ಆದರೆ, ಇದು ನಿಮ್ಮ ಕಣ್ಣಿಗೆ ಕಾಣುವುದಿಲ್ಲ. ಮೂಕಜೀವಿಗಳ ಹತ್ಯೆ ಮುಂದುವರಿದರೆ ನಿಸರ್ಗವೂ ಅವನತಿ ಕಾಣಲಿದೆ. ಜೊತೆಗೆ, ಹಿಮಾಚಲ ಪ್ರದೇಶವು ಅವನತಿ ಹೊಂದಲಿದೆ ಎಂದು ಹೇಳಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.

ಹಿಮಾಚಲ ಪ್ರದೇಶವು ಪದೇ ಪದೇ ನೈಸರ್ಗಿಕ ವಿಕೋಪಕ್ಕೆ ತುತ್ತಾಗುತ್ತಿದೆ. ಪ್ರಾಣಿಗಳ ಮೇಲೆ ನಡೆಯುತ್ತಿರುವ ಕ್ರೌರ್ಯ ಹಾಗೂ ಮಾಂಸ ಭಕ್ಷಣೆಯೇ ಇದಕ್ಕೆ ಕಾರಣ ಎಂದು ಹೇಳಿದ್ದಾರೆ.



ಕ್ಷೀರ ಭಾಗ್ಯದ ದಶಮಾನೋತ್ಸವ

ತುಮಕೂರು ಜಿಲ್ಲೆಯ ಮಧುಗಿರಿಯಲ್ಲಿ ಬುಧವಾರ ನಡೆದ ಕ್ಷೀರ ಭಾಗ್ಯದ ದಶಮಾನೋತ್ಸವ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೆಎಂಎಫ್ ಮಾಜಿ ವ್ಯವಸ್ಥಾಪಕ ನಿರ್ದೇಶಕ ಎ.ಎಸ್. ಪ್ರೇಮನಾಥ್ ಮತ್ತು ನಿವೃತ್ತ ಮುಖ್ಯ ಕಾರ್ಯದರ್ಶಿ ಎಸ್.ವಿ. ರಂಗನಾಥ್ ಅವರನ್ನು ಸನ್ಮಾನಿಸಿದರು. ಗೃಹ ಸಚಿವ ಜಿ. ಪರಮೇಶ್ವರ್, ದೆಹಲಿ ವಿಶೇಷ ಪ್ರತಿನಿಧಿ ಟಿ.ಬಿ. ಜಯಚಂದ್ರ ಇದ್ದರು.

ನಗರದಲ್ಲಿ ಇಂದು

ಪೂರ್ಣಚಂದ್ರ ತೇಜಸ್ವಿ ಜನ್ಮದಿನ ಪುಷ್ಪನಮನ: ಉದ್ಘಾಟನೆ: ಎಸ್.ಟಿ. ಸೋಮಶೇಖರ್, ಅತಿಥಿಗಳು: ಪ್ರಕಾಶಮೂರ್ತಿ, ಕೆ.ವಿ. ನಾಗರಾಜಮೂರ್ತಿ, ಆಯೋಜನೆ: ಗಾಂಧಿ ಪಾರ್ಕ್ ನಡಿಗೆದಾರರ ಕೂಟ, ಬೆಂಗಳೂರು ನಗರ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಗಾಂಧಿ ಪುತ್ಥಳಿ ಬಳಿ, ಗಾಂಧಿ ಪಾರ್ಕ್, ಭಾರತನಗರ, ಬೆಳಿಗ್ಗೆ 7.30

ಜಿಲ್ಲಾಮಟ್ಟದ ಬ್ಯಾಡ್ಮಿಂಟನ್ ಟೂರ್ನಾಮೆಂಟ್: ಅಧ್ಯಕ್ಷತೆ: ಬಿ.ಎಂ. ಪಾರ್ಥಸಾರಥಿ, ಅತಿಥಿಗಳು: ಆನಂದ ರಾಜ ಎ., ಜಗದೀಶ್ ಯಾದವ್ ಕೆ., ಆಯೋಜನೆ: ಶಿಕ್ಷಣ ಇಲಾಖೆ, ಸ್ಥಳ: ಶೇಷಾದ್ರಿಪುರ ಇಂಡಿಪೆಂಡೆಂಟ್ ಪಿ.ಯು. ಕಾಲೇಜು, ಕೆಂಗೇರಿ ಉಪನಗರ, ಬೆಳಿಗ್ಗೆ 10

ಕಮಲಾ ಹಂಪನಾ ಅವರ 'ಬೆಳಕು ಬಿತ್ತಿದವರು' ಹಂ.ಪ. ನಾಗರಾಜಯ್ಯ ಅವರ 'ಪ್ರಾಕೃತ ಕಥಾ ಸಾಹಿತ್ಯ', ಪ್ರತಿಭಾ ಪಾರ್ಶ್ವನಾಥ್ ಅವರ 'ದಿ ಜರ್ನಿ ಆಫ್ ಲೈಫ್' ಪುಸ್ತಕಗಳ ಬಿಡುಗಡೆ: ಸಿದ್ದರಾಮಯ್ಯ, ಅತಿಥಿಗಳು: ಬರಗೂರು ರಾಮಚಂದ್ರಪ್ಪ, ಜಿ.ಎನ್. ಮೋಹನ್, ಅಧ್ಯಕ್ಷತೆ: ಹಂ.ಪ. ನಾಗರಾಜಯ್ಯ, ಆಯೋಜನೆ: ಕಮಲಾ ಹಂಪನಾ ಸಾಹಿತ್ಯ ವೇದಿಕೆ, ಸ್ಥಳ: ಮಹದೇವ ದೇಸಾಯಿ ಸಭಾಂಗಣ, ಗಾಂಧಿಭವನ, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

'ತೇಜಸ್ವಿ ಜೀವಲೋಕ–11 ಏರೋಪ್ಲೇನ್ ಚಿಟ್ಟೆಲೋಕ' ಪ್ರದರ್ಶನ: ಆಯೋಜನೆ: ಪರಿಸರ ನಿಸರ್ಗ ಸಂರಕ್ಷಣಾ ಸಂಸ್ಥೆ, ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಪ್ರತಿಷ್ಠಾನ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಹಾಸ್‌ಮಟ್ ಆಸ್ಪತ್ರೆಯ ಉದ್ಘಾಟನೆ: ಅತಿಥಿಗಳು: ಡಿ.ಕೆ. ಶಿವಕುಮಾರ್, ಕೆ.ಜೆ. ಜಾರ್ಜ್, ಡಾ.ಸಿ.ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ಡಾ. ಥಾಮಸ್ ಚಾಂಡೆ, ಆಯೋಜನೆ ಮತ್ತು ಸ್ಥಳ: ಹಾಸ್‌ಮಟ್ ಆಸ್ಪತ್ರೆ, ಸದಾಶಿವನಗರ, ಬೆಳಿಗ್ಗೆ 11

ಬೆಂಗಳೂರು ರಾಯಭಾರಿ ಮಿತ್ರ ರಾಜ್ಯ ಪ್ರಶಸ್ತಿ ಪ್ರದಾನ: ಸಾನ್ನಿಧ್ಯ: ನಂಜಾವಧೂತ ಸ್ವಾಮೀಜಿ, ಉದ್ಘಾಟನೆ: ಗಂಡಸಿ ಸದಾನಂದ, ಅತಿಥಿಗಳು: ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಎಸ್. ಸುರೇಶ್ ಕುಮಾರ್, ಚಕ್ರಪಾಣಿ ಕೆ.ಎನ್., ನಂದಿದುರ್ಗ ಬಾಲುಗೌಡ, ಆಯೋಜನೆ: ಕರ್ನಾಟಕ ರಾಜ್ಯ ಒಕ್ಕಲಿಗರ ಹಿತರಕ್ಷಣ ಪರಿಷತ್, ಸ್ಥಳ: ಎನ್.ಜಿ.ಓ ಹಾಲ್, ಕಬ್ಬನ್ ಉದ್ಯಾನ, ಬೆಳಿಗ್ಗೆ 11.30

ವಿಶ್ವ ಸಾಕ್ಷರತೆ ದಿನಾಚರಣೆ: ಉದ್ಘಾಟನೆ: ಇಂದಿರಾ ಕೃಷ್ಣಪ್ಪ, ಅಧ್ಯಕ್ಷತೆ: ಗಣಪತಿ ಹೆಗಡೆ, ಉಪಸ್ಥಿತಿ: ಎಚ್.ಎಸ್. ಸುರೇಶ್, ಪ್ರಾಸ್ತಾವಿಕ ನುಡಿ: ಯ.ಚಿ. ದೊಡ್ಡಯ್ಯ, ಆಯೋಜನೆ ಮತ್ತು ಸ್ಥಳ: ಕರ್ನಾಟಕ ಸರ್ವೋದಯ ಮಂಡಲ, ಎಂ.ಎಲ್.ಎ. ಪದವಿಪೂರ್ವ ಕಾಲೇಜು, ಮಲ್ಲೇಶ್ವರ, ಮಧ್ಯಾಹ್ನ 2

ಶಿಕ್ಷಕರ ದಿನಾಚರಣೆ: ಅತಿಥಿಗಳು: ವಿನೋದ್ ಕುಮಾರ್, ಬಿ.ಎಸ್. ರಾಗಿಣಿ ನಾರಾಯಣ್, ಅಧ್ಯಕ್ಷತೆ: ಪಿ ದಯಾನಂದ ಪೈ, ಆಯೋಜನೆ ಮತ್ತು ಸ್ಥಳ: ಬಿಎಂಎಸ್ ಕಾಲೇಜ್ ಆಫ್ ಎಂಜನಿಯರಿಂಗ್, ಬಸವನಗುಡಿ, ಸಂಜೆ 4

'ಡಾ. ರಾಜ್‌ಕುಮಾರ್ ಸಂಸ್ಕೃತಿ ದತ್ತಿ ಪ್ರಶಸ್ತಿ' ಪ್ರದಾನ: ಉದ್ಘಾಟನೆ: ಎಸ್.ಎ. ಚನ್ನೇಗೌಡ, ಪ್ರಶಸ್ತಿ ಪುರಸ್ಕೃತರು: ಬಿ. ಸರೋಜಾದೇವಿ, ಅಧ್ಯಕ್ಷತೆ: ಮಹೇಶ ಜೋಶಿ, ಪ್ರಶಸ್ತಿ ಪ್ರದಾನ: ಬಿ.ಕೆ. ಸುಮಿತ್ರಾ, ಆಯೋಜನೆ ಮತ್ತು ಸ್ಥಳ: ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ ರಸ್ತೆ, ಸಂಜೆ 5

ಮಾತಿನ ಮುತ್ತು–299 'ಸಾಹಿತ್ಯ ಮತ್ತು ಯುಗ ಧರ್ಮ ಹಾಗೂ ಹಿರಿಯ ನಾಗಕರಿಕರಿಗೆ ಸರ್ಕಾರದ ಸೌಲಭ್ಯಗಳು': ಪ್ರಸ್ತುತಿ: ಲಕ್ಷ್ಮೀಪತಿ ಎಂ.ಎ., ಉಪಸ್ಥಿತಿ: ಎಂ.ಸಿ. ಪೂಣಚ್ಚ, ನಿರ್ವಹಣೆ: ಎಚ್.ಪಿ. ಕುಂಟೋಜಿ, ಎಚ್.ಆರ್. ಗೋವಿಂದರಾಜ್, ಸಿ.ವಿ. ಅಶ್ವತ್ಥನಾರಾಯಣ, ಆಯೋಜನೆ ಮತ್ತು ಸ್ಥಳ: ವಿದ್ಯಾರಣ್ಯಪುರ ಹಿರಿಯ ನಾಗರಿಕರ ವೇದಿಕೆ, ವಿದ್ಯಾರಣ್ಯಪುರ, ಸಂಜೆ 6

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ 'ಅಣ್ಣನ ನೆನಪು' ನಾಟಕ ಪ್ರದರ್ಶನ: ನಿರ್ದೇಶನ: ಹನು ರಾಮಸಂಜೀವ, ರಂಗರೂಪ: ಕರಣಂ ಪವನ್ ಪ್ರಸಾದ್, ಸಂಗೀತ: ಅಕ್ಷಯ್ ಭೊಂಸ್ಲೆ, ಬೆಳಕು: ಸೂರ್ಯ ಸಾಥಿ, ನಿರ್ವಹಣೆ: ಅಜಯ್ ಕುಮಾರ್, ಆಯೋಜನೆ: ಪ್ರವರ ಥಿಯೇಟರ್, ಸ್ಥಳ: ಕೆ.ಎಚ್. ಕಲಾಸೌಧ, ಹನುಮಂತನಗರ, ಸಂಜೆ 7

'ಕಾಯ' ನಾಟಕ ಪ್ರದರ್ಶನ: ನಿರ್ದೇಶನ: ವೀಣಾ ಬಸವರಾಜಯ್ಯ, ಸಂಗೀತ: ಮುರಳಿ ಮೋಹನ್ ಗೌಡ, ಕಲಾವಿದರು: ಲಕ್ಷ್ಮಿ ಚಂದ್ರಶೇಖರ್, ಅನಘಾ ಕಶ್ಯಪ್, ದೀಪ್ತಿ ನಾಗೇಂದ್ರ, ಶ್ರೀಪ್ರಿಯಾ, ಪ್ರಿಯಾಂಕ್ ಜೆ. ರಾವ್, ಆಯೋಜನೆ: ಕ್ರಿಯೇಟಿವ್ ಥಿಯೇಟರ್, ಸ್ಥಳ: ರಂಗಶಂಕರ, ಜೆ.ಪಿ. ನಗರ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
ಇ-ಮೇಲ್ ವಿಳಾಸ: nagaradalli_indu@prajavani.co.in



'ಕಾಯ' ನಾಟಕದ ದೃಶ್ಯ

ಕಮಿಷನರ್‌ಗೆ 'ಕನ್ನಡ' ಗೌರವ ವಂದನೆ: ಮೆಚ್ಚುಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಪೊಲೀಸ್ ಕಮಿಷನರ್ ಬಿ.ದಯಾನಂದ್ ಅವರಿಗೆ ಕನ್ನಡದಲ್ಲಿ ಗೌರವ ವಂದನೆ ಸಲ್ಲಿಸಲಾಗಿದ್ದು, ಈ ಕೆಲಸಕ್ಕೆ ಜನರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಕನ್ನಡದಲ್ಲಿ ಗೌರವ ವಂದನೆ ನೀಡಿರುವ ವಿಡಿಯೊವನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿರುವ ದಯಾನಂದ್, 'ಕನ್ನಡದ ಮಾತು ಚಂದ; ಕನ್ನಡದ ಕಮಾಂಡ್‌ಗಳು ಇನ್ನೂ ಚಂದ. ಏನಂತೀರಾ' ಎಂದು ಬರೆದುಕೊಂಡಿದ್ದಾರೆ.

ಇದೇ ವಿಡಿಯೊಗೆ ಪ್ರತಿಕ್ರಿಯಿಸಿರುವ ಜನರು, 'ಕನ್ನಡದಲ್ಲಿ ಗೌರವ ವಂದನೆ ಸಲ್ಲಿಸುತ್ತಿರುವುದು ಒಳ್ಳೆಯ ಬೆಳವಣಿಗೆ' ಎಂದಿದ್ದಾರೆ.

ಬಾಡಿವೋರ್ನ್ ಕ್ಯಾಮೆರಾದಲ್ಲಿ ಸೆರೆ: ಕಮಿಷನರ್ ಬಿ. ದಯಾನಂದ್ ಅವರು ಹಲವು ದಿನಗಳಿಂದ ಬಾಡಿವೋರ್ನ್ ಕ್ಯಾಮೆರಾ ಧರಿಸುತ್ತಿದ್ದಾರೆ. ಇದೇ ಕ್ಯಾಮೆರಾದಲ್ಲಿ ಕನ್ನಡದ ಗೌರವ ವಂದನೆ ದೃಶ್ಯ ಸೆರೆಯಾಗಿದ್ದು, ಅದೇ ವಿಡಿಯೊವನ್ನು ಕಮಿಷನರ್ ಹಂಚಿಕೊಂಡಿದ್ದಾರೆ.

ಕಮಿಷನರ್ ಅವರು ಕಚೇರಿ ಎದುರು ಬಂದು ನಿಲ್ಲುತ್ತಿದ್ದಂತೆ, 'ವಾಹನ ಪಡೆ ವಂದನಾ ಶಸ್ತ್ರ' ಎಂದು ಕಮಾಂಡ್ ನೀಡುವ ಸಿಬ್ಬಂದಿ ಶಸ್ತ್ರಾಸ್ತ್ರಗಳನ್ನು ಶಿಸ್ತುಬದ್ಧವಾಗಿ ಮೇಲಕ್ಕೆ ಎತ್ತಿದ್ದರು. ನಂತರ, 'ವಾಹನ ಪಡೆ ಕೆಳ ಶಸ್ತ್ರ' ಎಂದು ಕಮಾಂಡ್ ನೀಡಿ ಶಸ್ತ್ರಾಸ್ತ್ರಗಳನ್ನು ಕೆಳಕ್ಕೆ ಇಳಿಸಿದ್ದರು.

'ಮಾನ್ಯರೆ, ವಾಹನ ಪಡೆಯು ಪರಿವೀಕ್ಷಣೆಗೆ ಸಜ್ಜಾಗಿದೆ' ಎನ್ನುವ ಮೂಲಕ ಸಿಬ್ಬಂದಿ ಕಮಿಷನರ್ ಅವರಿಗೆ ಸೆಲ್ಯೂಟ್ ಮಾಡಿ ಸ್ಥಳದಿಂದ ತೆರಳಿದರು. ಇದೇ ದೃಶ್ಯ ವಿಡಿಯೊದಲ್ಲಿದೆ.

ಸ್ನೇಹಿತರ ಪಾರ್ಟಿ: ಆಟೊ ಚಾಲಕ ಕೊಲೆ

ಬೆಂಗಳೂರು: ಉಪ್ಪಾರಪೇಟೆ ಠಾಣೆ ವ್ಯಾಪ್ತಿಯಲ್ಲಿ ಸುರೇಶ್ (35) ಅವರನ್ನು ಕೊಲೆ ಮಾಡಲಾಗಿದ್ದು, ಸ್ನೇಹಿತರೇ ಕೃತ್ಯ ಎಸಗಿರುವ ಅನುಮಾನ ವ್ಯಕ್ತವಾಗಿದೆ.

‘ತುಮಕೂರು ಜಿಲ್ಲೆಯ ಹುಲಿಯೂರು ದುರ್ಗದ ಸುರೇಶ್, ಕೆಲಸ ಹುಡುಕಿಕೊಂಡು ಹಲವು ವರ್ಷಗಳ ಹಿಂದೆಯೇ ನಗರಕ್ಕೆ ಬಂದಿದ್ದರು. ಆಟೊ ಚಾಲಕರಾಗಿ ದ್ದರು. ಬುಧವಾರ ತಡರಾತ್ರಿ ಅವರ ಕೊಲೆಯಾಗಿದ್ದು, ಗುರುವಾರ ಬೆಳಿಗ್ಗೆ ಮೃತದೇಹ ಪತ್ತೆಯಾಗಿದೆ’ ಎಂದು ಪೊಲೀಸರು ಹೇಳಿದರು.

‘ಬಳೇಪೇಟೆ ರಸ್ತೆಯಲ್ಲಿರುವ ಡಾ. ರಾಜ್‌ಕುಮಾರ್ ಪ್ರತಿಮೆ ಬಳಿಯ ಜಾಗದಲ್ಲಿ ಬುಧವಾರ ರಾತ್ರಿ ಸೇರಿದ್ದ ಸುರೇಶ್ ಹಾಗೂ ಸ್ನೇಹಿತರು, ಮದ್ಯದ ಪಾರ್ಟಿ ಮಾಡಿದ್ದರು. ಮದ್ಯದ ಅಮಲಿನಲ್ಲಿದ್ದ ಸ್ನೇಹಿತರು ಹಾಗೂ ಸುರೇಶ್ ನಡುವೆ ಜಗಳ ಶುರುವಾಗಿತ್ತು. ಪರಿಸ್ಥಿತಿ ವಿಕೋಪಕ್ಕೆ ಹೋಗಿತ್ತು’

‘ಸುರೇಶ್ ಹಾಗೂ ಸ್ನೇಹಿತರು, ಪರಸ್ಪರ ಕೈ ಕೈ ಮಿಲಾಯಿಸಿದ್ದರು. ಸುರೇಶ್ ಮೇಲೆ ಹಲ್ಲೆ ಮಾಡಿದ್ದ ಆರೋಪಿಗಳು, ಸ್ಥಳದಿಂದ ಪರಾರಿಯಾಗಿದ್ದಾರೆ. ಕುಸಿದು ಬಿದ್ದ ಸ್ಥಳದಲ್ಲಿಯೇ ಸುರೇಶ್ ಮೃತಪಟ್ಟಿದ್ದರು. ಗುರುವಾರ ಬೆಳಿಗ್ಗೆ ಮೃತದೇಹ ಗಮನಿಸಿದ್ದ ಸ್ಥಳೀಯರು ಠಾಣೆಗೆ ಮಾಹಿತಿ ನೀಡಿದ್ದರು’ ಎಂದರು.

ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ಕೃತ್ಯ • ಸಂತ್ರಸ್ತೆಯ ಪ್ರಿಯಕರನೇ ಆರೋಪಿ

ತಾಯಿ– ಮಗನ ಕೊಲೆ: ಪ್ರಿಯಕರ ಬಂಧನ

ಪ್ರಜಾವಾಣಿ ವಾರ್ತೆ


ನವನೀತಾ


ಶೇಖಪ್ಪ

ಬೆಂಗಳೂರು: ಬಾಗಲಗುಂಟೆ ಠಾಣೆ ವ್ಯಾಪ್ತಿಯಲ್ಲಿ ನಡೆದಿದ್ದ ತಾಯಿ– ಮಗನ ಕೊಲೆ ಪ್ರಕರಣ ಭೇದಿಸಿರುವ ಪೊಲೀಸರು, ಆರೋಪಿ ಶೇಖಪ್ಪ ಅಲಿಯಾಸ್ ಶೇಖರಪ್ಪನನ್ನು (29) ಬಂಧಿಸಿದ್ದಾರೆ.

‘ರವೀಂದ್ರನಗರದಲ್ಲಿ ವಾಸವಿದ್ದ ನವನೀತಾ (33) ಹಾಗೂ ಮಗ ಸೃಜನ್‌ನನ್ನು (11) ಮಂಗಳವಾರ ರಾತ್ರಿ ಕೊಲೆ ಮಾಡಲಾಗಿತ್ತು. ನವನೀತಾ ಅವರ ಪತಿಯೇ ಕೃತ್ಯ ಎಸಗಿರುವ ಶಂಕೆ ಇತ್ತು. ಆದರೆ, ತನಿಖೆ ಕೈಗೊಂಡಾಗ ನವನೀತಾ ಪ್ರಿಯಕರ ಶೇಖಪ್ಪನೇ ಆರೋಪಿ ಎಂಬುದು ತಿಳಿಯಿತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಗದಗ ಜಿಲ್ಲೆಯ ನರಗುಂದದ ಶೇಖಪ್ಪ, ವೃತ್ತಿಯಲ್ಲಿ ಎಲೆಕ್ಟ್ರಿಷಿಯನ್. ಜಾಲಹಳ್ಳಿ ಬಳಿಯ ಕಚೇರಿಯೊಂದರಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ’ ಎಂದು ತಿಳಿಸಿವೆ.

ಮನೆ ಬಳಿಯೇ ಆರೋಪಿ ಕಚೇರಿ: ‘ಆಂಧ್ರಪ್ರದೇಶದ ನವನೀತಾ, ಪತಿಯಿಂದ ದೂರವಾಗಿದ್ದರು. ಕಾಲ್‌ಸೆಂಟರ್‌ನಲ್ಲಿ ಕೆಲಸ ಮಾಡುತ್ತಿದ್ದರು. ಇಬ್ಬರು ಮಕ್ಕಳ ಜೊತೆ ರವೀಂದ್ರನಗರದಲ್ಲಿ ನೆಲೆಸಿದ್ದರು. ಇವರ ಮನೆ ಬಳಿಯೇ ಆರೋಪಿ ಶೇಖಪ್ಪನ ಕಚೇರಿ ಇತ್ತು. ನವನೀತಾ ಅವರನ್ನು ಪರಿಚಯ ಮಾಡಿಕೊಂಡಿದ್ದ ಆರೋಪಿ, ಸ್ನೇಹ ಬೆಳೆಸಿದ್ದ. ಇದಾದ ನಂತರ, ಇಬ್ಬರ ನಡುವೆ ಸಲುಗೆ ಬೆಳೆದಿತ್ತು’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಅಪರಾಧ ಸುದ್ದಿ

‘ಆರೋಪಿ ಶೇಖಪ್ಪ, ನವನೀತಾ ಮನೆಗೆ ಆಗಾಗ ಬಂದು ಹೋಗುತ್ತಿದ್ದ. ಇತ್ತೀಚೆಗೆ ಇಬ್ಬರ ನಡುವೆ ಜಗಳ ಆಗಿತ್ತು. ಮನೆಗೆ ಬಾರದಂತೆ ನವನೀತಾ ತಾಕೀತು ಮಾಡಿದ್ದರು. ಅಷ್ಟಾದರೂ ಆರೋಪಿ, ಹಿಂಬಾಲಿಸಲಾರಂಭಿಸಿದ್ದ’ ಎಂದು ತಿಳಿಸಿವೆ.

ಮತ್ತೊಬ್ಬರ ಜೊತೆ ಸಲುಗೆ ಅನುಮಾನ: ‘ನವನೀತಾ ಅವರು ಬೇರೊಬ್ಬ ಪುರುಷನ ಜೊತೆ ಸಲುಗೆ ಇಟ್ಟುಕೊಂಡಿರುವ ಬಗ್ಗೆ ಆರೋಪಿಗೆ ಅನುಮಾನ ಬಂದಿತ್ತು. ಇದೇ ವಿಚಾರವಾಗಿ ನವನೀತಾ ಜೊತೆ ಜಗಳ ಮಾಡಿದ್ದ. ತನ್ನ ತಂಟೆಗೆ ಬಾರದಂತೆ ನವನೀತಾ ಪುನಃ ಎಚ್ಚರಿಕೆ ನೀಡಿದ್ದರು’ ಎಂದು ಮೂಲಗಳು ಹೇಳಿವೆ.

‘ಮಂಗಳವಾರ ರಾತ್ರಿ ಮನೆಗೆ ನುಗ್ಗಿದ್ದ ಆರೋಪಿ, ಪುನಃ ಜಗಳ ತೆಗೆದಿದ್ದ. ನವನೀತಾ ಅವರಿಗೆ ಚಾಕುವಿನಿಂದ ಇರಿದು ಕೊಂದಿದ್ದ. ಅದನ್ನು ನೋಡಿದ್ದ ಮಗ ಸೃಜನ್ ಕಿರುಚಾಡಿದ್ದ. ಕೊಲೆ ಸಂಗತಿಯನ್ನು ಬೇರೆಯವರಿಗೆ ಹೇಳುತ್ತಾನೆಂದು ತಿಳಿದು ಮಗನನ್ನೂ ಉಸಿರುಗಟ್ಟಿಸಿ ಆರೋಪಿ ಕೊಂದಿದ್ದ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪತಿಯೇ ಕೊಲೆ ಮಾಡಿರುವುದಾಗಿ ನವನೀತಾ ತಾಯಿ ಅನುಮಾನ ವ್ಯಕ್ತಪಡಿಸಿದ್ದರು. ಆದರೆ, ಪತಿ ಬೆಂಗಳೂರಿಗೆ ಬಂದಿಲ್ಲವೆಂಬುದು ಗೊತ್ತಾಗಿತ್ತು. ಸಿ.ಸಿ.ಟಿ.ವಿ ಕ್ಯಾಮೆರಾ ಹಾಗೂ ಮೊಬೈಲ್ ನೆಟ್‌ವರ್ಕ್ ಮಾಹಿತಿ ಆಧರಿಸಿ ತನಿಖೆ ಕೈಗೊಂಡಾಗ ಆರೋಪಿ ಶೇಖಪ್ಪ ಸುಳಿವು ಸಿಕ್ಕಿತ್ತು’ ಎಂದು ಹೇಳಿವೆ.

ನೈಸ್ ರಸ್ತೆಯಲ್ಲಿ ಅಪಘಾತ: ಇಬ್ಬರು ಸಾವು

ಬೆಂಗಳೂರು: ನೈಸ್ ರಸ್ತೆಯಲ್ಲಿ ನಿಲ್ಲಿಸಿದ್ದ ಟ್ರಕ್‌ಗೆ ದ್ವಿಚಕ್ರ ವಾಹನವೊಂದು ಡಿಕ್ಕಿ ಹೊಡೆದು ಅಪಘಾತ ಸಂಭವಿಸಿದ್ದು, ಇಬ್ಬರು ಮೃತಪಟ್ಟಿದ್ದಾರೆ.

‘ಟಿ. ನರಸೀಪುರ ತಾಲ್ಲೂಕಿನ ಕೊಳತ್ತೂರಿನ ಮಹೇಶ್ (43) ಹಾಗೂ ಬನ್ನೂರು ಬಳಿಯ ನುಗ್ಗಹಳ್ಳಿಕೊಪ್ಪಲು ಗ್ರಾಮದ ಅಭಿಲಾಷಾ (26) ಮೃತರು. ಇವರಿಬ್ಬರೂ ಸಂಬಂಧಿಕರು. ನಗರದಲ್ಲಿ ನೆಲೆಸಿದ್ದರು. ದ್ವಿಚಕ್ರ ವಾಹನದಲ್ಲಿ ಹೊರಟಿದ್ದಾಗ ಈ ಅವಘಡ ಸಂಭವಿಸಿದೆ’ ಎಂದು ತಲಘಟ್ಟಪುರ ಸಂಚಾರ ಠಾಣೆ ಪೊಲೀಸರು ತಿಳಿಸಿದರು.

‘ಚಾಲಕ, ಸರಕು ತುಂಬಿದ್ದ ಟ್ರಕ್ ಚಲಾಯಿಸಿಕೊಂಡು ನೈಸ್ ರಸ್ತೆಯಲ್ಲಿ ಹೊರಟಿದ್ದ. ನಾಗೇಗೌಡನ ಪಾಳ್ಯ ಮೇಲ್ಸೇತುವೆ ಬಳಿ ಟ್ರಕ್ ನಿಲ್ಲಿಸಿದ್ದ. ಯಾವುದೇ ಸೂಚನೆ ಸಹ ನೀಡಿರಲಿಲ್ಲ. ಪಾರ್ಕಿಂಗ್ ದೀಪಗಳನ್ನು ಆನ್ ಮಾಡಿರಲಿಲ್ಲ. ನಿರ್ಲಕ್ಷ್ಯದಿಂದ ಟ್ರಕ್ ನಿಲ್ಲಿಸಿ ಚಾಲಕ ಬೇರೆಡೆ ತೆರಳಿದ್ದ.’

‘ಕಂಪನಿಯೊಂದರಲ್ಲಿ ಕೆಲಸ ಮಾಡುತ್ತಿದ್ದ ಅಭಿಲಾಷಾ, ಸಂಜೆ ಕೆಲಸ ಮುಗಿಸಿದ್ದರು. ಸಂಬಂಧಿ ಮಹೇಶ್ ಅವರ ಜೊತೆಯಲ್ಲಿ ದ್ವಿಚಕ್ರ ವಾಹನದಲ್ಲಿ ಮನೆಯತ್ತ ಹೊರಟಿದ್ದರು. ಮಹೇಶ್ ಅವರು ವಾಹನ ಚಲಾಯಿಸುತ್ತಿದ್ದರು. ನಾಗೇಗೌಡನ ಪಾಳ್ಯ ಮೇಲ್ಸೇತುವೆ ಬಳಿ ಟ್ರಕ್ ನಿಂತಿದ್ದನ್ನು ಅವರು ಗಮನಿಸಿರಲಿಲ್ಲ. ಟ್ರಕ್‌ಗೆ ದ್ವಿಚಕ್ರ ವಾಹನ ಡಿಕ್ಕಿ ಹೊಡೆದಿತ್ತು’ ಎಂದು ಹೇಳಿದರು.

‘ದ್ವಿಚಕ್ರ ವಾಹನ ಸಮೇತ ಉರುಳಿಬಿದ್ದಿದ್ದ ಮಹೇಶ್ ಹಾಗೂ ಅಭಿಲಾಷಾ, ತೀವ್ರವಾಗಿ ಗಾಯಗೊಂಡು ಮೃತಪಟ್ಟಿದ್ದಾರೆ’ ಎಂದು ಪೊಲೀಸರು ತಿಳಿಸಿದರು.

‘ನೈಸ್ ರಸ್ತೆಯಲ್ಲಿ ನಿಗದಿತ ಸ್ಥಳಗಳನ್ನು ಹೊರತುಪಡಿಸಿ ಬೇರೆಡೆ ವಾಹನ ನಿಲುಗಡೆಗೂ ಅವಕಾಶವಿಲ್ಲ. ಈ ನಿಯಮ ಉಲ್ಲಂಘಿಸಿದ್ದ ಚಾಲಕ, ರಸ್ತೆಬದಿ ಟ್ರಕ್ ನಿಲ್ಲಿಸಿದ್ದ. ಚಾಲಕ ನಿರ್ಲಕ್ಷ್ಯದಿಂದ ಈ ಅಪಘಾತ ಸಂಭವಿಸಿದೆ. ಆತನ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಟ್ರಕ್ ಜಪ್ತಿ ಮಾಡಲಾಗಿದೆ’ ಎಂದು ಹೇಳಿದರು.

‘ಲವ್ ಜಿಹಾದ್ ಸಂತ್ರಸ್ತೆ: ಜೀವಕ್ಕೆ ಅಪಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನು ಲವ್ ಜಿಹಾದ್ ಸಂತ್ರಸ್ತೆ. ನನ್ನ ಜೀವಕ್ಕೆ ಅಪಾಯವಿದೆ’ ಎಂಬುದಾಗಿ ಯುವತಿಯೊಬ್ಬರು ಪೋಸ್ಟ್ ಪ್ರಕಟಿಸಿದ್ದು, ಈ ಪ್ರಕರಣದ ಬಗ್ಗೆ ಬೆಳ್ಳಂದೂರು ಠಾಣೆ ಪೊಲೀಸರು ಮಾಹಿತಿ ಕಲೆ ಹಾಕುತ್ತಿದ್ದಾರೆ.

ಸಾಮಾಜಿಕ ಮಾಧ್ಯಮದ ‘ಎಕ್ಸ್ (ಟ್ವಿಟರ್)’ನಲ್ಲಿರುವ ‘ಗುಪ್ತ ಭಾರತ’ ಹೆಸರಿನ ಖಾತೆಯಲ್ಲಿ ಪೋಸ್ಟ್ ಪ್ರಕಟಿಸಲಾಗಿದೆ. ಪ್ರಧಾನ ಮಂತ್ರಿ, ಬೆಂಗಳೂರು ಪೊಲೀಸ್ ಕಮಿಷನರ್ ಹಾಗೂ ಡಿಜಿ– ಐಜಿಪಿ ಅವರಿಗೆ ಟ್ಯಾಗ್ ಮಾಡಲಾಗಿದೆ.

‘ನನ್ನ ಮೇಲೆ ಅತ್ಯಾಚಾರ ಎಸಗಲಾಗಿದೆ. ಒತ್ತಾಯದಿಂದ ಮತಾಂತರ ಮಾಡಲಾಗಿದೆ. ಜೀವಕ್ಕೆ ಅಪಾಯವಿರುವುದರಿಂದ, ಬೆಂಗಳೂರು ಪೊಲೀಸರು ನನಗೆ ರಕ್ಷಣೆ ನೀಡಬೇಕು’ ಎಂದು ಯುವತಿ ಬರೆದುಕೊಂಡಿದ್ದಾರೆ.

‘ಸಾಮಾಜಿಕ ಮಾಧ್ಯಮದ ಮೂಲಕ ಕಾಶ್ಮೀರದ ಯುವಕನೊಬ್ಬನ ಪರಿಚಯವಾಗಿತ್ತು. ಮದುವೆಯಾಗುವುದಾಗಿ ನಂಬಿಸಿದ್ದ ಆತ, ಹಣ ಪಡೆದಿದ್ದ. ಅತ್ಯಾಚಾರ ಎಸಗಿದ್ದ. ಇದೀಗ, ಪ್ರಾಣ ಬೆದರಿಕೆಯೊಡ್ಡುತ್ತಿದ್ದಾನೆ’ ಎಂದೂ ಹೇಳಿಕೊಂಡಿದ್ದಾರೆ.

ಪೋಸ್ಟ್ ಗಮನಿಸಿದ್ದ ಪೊಲೀಸರು, ಯುವತಿ ಯಾರು ಎಂಬುದನ್ನು ಪತ್ತೆ ಮಾಡುತ್ತಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಪೊಲೀಸ್ ಅಧಿಕಾರಿಯೊಬ್ಬರು, ‘ಯುವತಿ ಹೆಸರು ಹಾಗೂ ವಿಳಾಸ ಗೊತ್ತಾಗಿಲ್ಲ. ಯುವತಿಯನ್ನು ಪತ್ತೆ ಮಾಡಿ, ಆರೋಪದ ಬಗ್ಗೆ ದೂರು ಪಡೆಯಲು ಪ್ರಯತ್ನಿಸಲಾಗುವುದು. ದೂರು ನೀಡಿದ ಬಳಿಕವೇ ಮುಂದಿನ ಕ್ರಮ’ ಎಂದಿದ್ದಾರೆ.

ಸ್ಕ್ಯಾನಿಂಗ್ ವೇಳೆ ಲೈಂಗಿಕ ದೌರ್ಜನ್ಯ: ಟೆಕ್ನಿಷಿಯನ್ ಬಂಧನ

ಬೆಂಗಳೂರು: ಸ್ಕ್ಯಾನಿಂಗ್ ನೆಪದಲ್ಲಿ ಮಹಿಳೆಯನ್ನು ವಿವಸ್ತ್ರಗೊಳಿಸಿ ಲೈಂಗಿಕ ದೌರ್ಜನ್ಯ ಎಸಗಿದ್ದ ಆರೋಪದಡಿ ಅಶೋಕನನ್ನು (24) ಕೊಡಿಗೇಹಳ್ಳಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಪಶ್ಚಿಮ ಬಂಗಾಳದ ಅಶೋಕ, ಹೆಬ್ಬಾಳದಲ್ಲಿರುವ ಲ್ಯಾಬ್‌ವೊಂದರ ಟೆಕ್ನಿಷಿಯನ್. ಆ ಮಹಿಳೆ ನೀಡಿದ್ದ ದೂರು ಆಧರಿಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ ಅಶೋಕ, ಹೆಬ್ಬಾಳದಲ್ಲಿ ವಾಸವಿದ್ದ. ಲ್ಯಾಬ್‌ನಲ್ಲಿ ಕೆಲಸಕ್ಕೆ ಸೇರಿದ್ದ. ಆರೋಗ್ಯ ಸಮಸ್ಯೆ ಎದುರಿಸುತ್ತಿರುವ ದೂರುದಾರ ಮಹಿಳೆ, ಸ್ಕ್ಯಾನಿಂಗ್ ಮಾಡಿಸುವುದಕ್ಕಾಗಿ ಆಗಸ್ಟ್ 30ರಂದು ಲ್ಯಾಬ್‌ಗೆ ಹೋಗಿದ್ದರು.’

‘ಸ್ಕ್ಯಾನಿಂಗ್ ಯಂತ್ರದ ಮೇಲೆ ಮಹಿಳೆಯನ್ನು ಮಲಗಿಸಿದ್ದ ಆರೋಪಿ, ಬಟ್ಟೆಗಳನ್ನು ಬಿಚ್ಚಿಸಿ ವಿವಸ್ತ್ರಗೊಳಿಸಿದ್ದ. ನಂತರ, ಅಂಗಾಂಗಗಳನ್ನು ಮುಟ್ಟಿ ಅಸಭ್ಯವಾಗಿ ವರ್ತಿಸಿದ್ದ. ಹೆದರಿದ್ದ ಮಹಿಳೆ, ಆರೋಪಿಯಿಂದ ತಪ್ಪಿಸಿಕೊಂಡು ಹೊರಗೆ ಓಡಿ ಬಂದಿದ್ದರು’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ತನಿಖೆಯಿಂದ ಮಾಹಿತಿ: ‘ತಮ್ಮ ಮೇಲೆ ಲೈಂಗಿಕ ದೌರ್ಜನ್ಯ ನಡೆದಿರುವುದಾಗಿ ಮಹಿಳೆ ದೂರಿನಲ್ಲಿ ತಿಳಿಸಿದ್ದಾರೆ. ಈ ಆರೋಪವನ್ನು ಅಶೋಕ ತಳ್ಳಿಹಾಕುತ್ತಿದ್ದಾರೆ. ಪ್ರಕರಣ ದಾಖಲಿಸಕೊಂಡು ಕಾನೂನು ಪ್ರಕಾರ ಕ್ರಮ ಜರುಗಿಸಲಾಗಿದೆ. ನಿಜಾಂಶ ಏನು ಎಂಬುದು ತನಿಖೆಯಿಂದ ತಿಳಿಯಬೇಕಿದೆ’ ಎಂದು ಮೂಲಗಳು ಮಾಹಿತಿ ನೀಡಿವೆ.

ಬಿಬಿಎಂಪಿ ನೌಕರ ಮರಣ ಪತ್ರ 30 ದಿನಗಳಲ್ಲಿ ನೀಡಲು ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 6 ವರ್ಷಗಳ ಹಿಂದೆ ಮಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಎಕ್ಸಿಕ್ಯುಟಿವ್ ಆಪರೇಟರ್ ಮರಣ ದೃಢೀಕರಣ ಪತ್ರವನ್ನು ಅವರ ಪತ್ನಿಗೆ 30 ದಿನಗಳಲ್ಲಿ ನೀಡಿ" ಎಂದು ಹೈಕೋರ್ಟ್, ಬಿಬಿಎಂಪಿಗೆ ಖಡಕ್ ತಾಕೀತು ಮಾಡಿದೆ.

‘ಪತಿಯ ಮರಣ ದೃಢೀಕರಣ ಪತ್ರ ವಿತರಿಸಲು ಬಿಬಿಎಂಪಿ ನಿರಾಕರಿಸುತ್ತಿದೆ’ ಎಂದು ಆಕ್ಷೇಪಿಸಿ ಎಸ್.ಪಿ. ಸರಸ್ವತಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದ ರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಪುರಸ್ಕರಿಸಿ ಈ ಕುರಿತಂತೆ ಆದೇಶಿಸಿದೆ.

‘ಅರ್ಜಿದಾರರ ಪತಿ 2017ರಲ್ಲಿ ಸಾವನ್ನಪ್ಪಿದ್ದಾರೆ. ಅವರ ಮರಣ ಧೃಢೀಕರಣ ಪ್ರಮಾಣ ಪತ್ರ ಪಡೆಯಲು ಅರ್ಜಿದಾರರು ಆರು ವರ್ಷಗಳಿಂದ ವಂಚಿತರಾಗಿದ್ದಾರೆ. ಇದನ್ನು ಒಂದು ವಿಶೇಷ ಪ್ರಕರಣ ಎಂದು ಪರಿಗಣಿಸಿ 30 ದಿನಗಳಲ್ಲಿ ಅರ್ಜಿದಾರರಿಗೆ ಪತಿಯ ಮರಣ ದೃಢೀಕರಣ ಪತ್ರ ನೀಡಬೇಕು’ ಎಂದು ಆದೇಶಿಸಿದೆ.

‘ಅರ್ಜಿದಾರರ ಪತಿ ಕರ್ತವ್ಯ ನಿರ್ವಹಣೆ ವೇಳೆ ಮಳೆ ನೀರಲ್ಲಿ ಕೊಚ್ಚಿ ಹೋಗಿದ್ದಾರೆ. ಖುದ್ದು ಪಾಲಿಕೆಯ ಅಧಿಕಾರಿಗಳೇ ಹುಡುಕಾಟ ನಡೆಸಿದ್ದರೂ ದೇಹ ಪತ್ತೆಯಾಗಿಲ್ಲ. ಹೀಗಾಗಿ, ಮಾನವೀಯ ನೆಲೆಗಟ್ಟಿನಲ್ಲಿ ಮೃತರ ಪತ್ನಿಗೆ ಬಿಬಿಎಂಪಿ ₹10 ಲಕ್ಷ ಪರಿಹಾರ ಪಾವತಿಸಿದೆ. ಹೀಗಿದ್ದೂ ವೈದ್ಯರು ಸಾವು ಸಂಭವಿಸಿದೆ ಎಂಬುದಾಗಿ ದೃಢೀಕರಿಸಿ ಕರ್ನಾಟಕ ಮರಣ ಮತ್ತು ಜನನ ನೋಂದಣಿ ಅಧಿನಿಯಮ-199ರ ನಿಯಮ 10(3)ರ ಅಡಿಯಲ್ಲಿ ಫಾರಂ ನಂ. 4ಎ ಪ್ರಮಾಣಪತ್ರ ನೀಡಬೇಕು ಎನ್ನುವ ಬಿಬಿಎಂಪಿ ವಾದ ಅಸಮರ್ಥನೀಯ. ಬಿಬಿಎಂಪಿಯ ಈ ನಡೆ ಅರ್ಜಿದಾರರಿಗೆ ಅನ್ಯಾಯ ಉಂಟು ಮಾಡಿದೆ’ ಎಂದು ಪೀಠ ಅಭಿಪ್ರಾಯಪಟ್ಟಿದೆ.

ವಿಶ್ವ ಫಿಸಿಯೊಥೆರಪಿಸ್ಟ್ ದಿನ ಇಂದು

ಬೆಂಗಳೂರು: ಬೆಂಗಳೂರು ಫಿಸಿಯೊಥೆರಪಿಸ್ಟ್ ನೆಟ್‌ವರ್ಕ್‌ದಿಂದ ಶುಕ್ರವಾರ ವಿಶ್ವ ಫಿಸಿಯೊಥೆರಪಿಸ್ಟ್ ದಿನ ಆಚರಿಸಲಾಗುವುದು ಎಂದು ನೆಟ್‌ವರ್ಕ್‌ನ ಅಧ್ಯಕ್ಷೆ ಡಾ. ಆರತಿ ಪ್ರಸಾದ್ ತಿಳಿಸಿದರು.

ಬುಧವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ನಗರದ ಕೆಲವು ಆಸ್ಪತ್ರೆಗಳಲ್ಲಿ ಶುಕ್ರವಾರ ಉಚಿತ ಫಿಸಿಯೊಥೆರಪಿ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಜತೆಗೆ ಸರ್ಕಾರ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲೂ ಫಿಸಿಯೊಥೆರಪಿ ಕೇಂದ್ರಗಳನ್ನು ಪ್ರಾರಂಭಿಸಬೇಕು’ ಎಂದು ಒತ್ತಾಯಿಸಿದರು.

ಗಣೇಶೋತ್ಸವ: ಶಾಂತಿ ಸೌಹಾರ್ದತೆಯಿಂದ ಆಚರಣೆ

ಒಂದೇ ಸೂರಿನಡಿ ಅನುಮತಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯಾವುದೇ ಜಾತಿ ಧರ್ಮ ಭೇದ ಇಲ್ಲದೇ ಶಾಂತಿ ಸೌಹಾರ್ದತೆಯಿಂದ ಗಣೇಶ ಹಬ್ಬವನ್ನು ಆಚರಿಸಲು ಬದ್ಧ’ ಎಂದು ಸಾರ್ವಜನಿಕರು ಭರವಸೆ ನೀಡಿದರು.

ಗಣೇಶ ಹಾಗೂ ಈದ್–ಮಿಲಾದ್ ಹಬ್ಬದ ಅಂಗವಾಗಿ ನಗರ ಪೊಲೀಸ್ ಕಮಿಷನರೇಟ್ ವತಿಯಿಂದ ಪುರಭವನದಲ್ಲಿ ಗುರುವಾರ ಆಯೋಜಿಸಿದ್ದ ಶಾಂತಿ ಪಾಲನಾ ಸಭೆಯಲ್ಲಿ ‘ಎಲ್ಲ ಧರ್ಮದವರು ಸೇರಿ ಗೌರಿ–ಗಣೇಶ ಮತ್ತು ಈದ್ ಮಿಲಾದ್ ಹಬ್ಬಗಳನ್ನು ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ಆಚರಣೆ ಮಾಡುತ್ತೇವೆ’ ಎಂದು ತಿಳಿಸಿದರು.

ರಸ್ತೆಯಲ್ಲೇ ಮೂರ್ತಿಗಳು: ‘ಹಲಸೂರಿನಲ್ಲಿ ಒಂದೇ ಕಲ್ಯಾಣಿ ಇದೆ. ರಾತ್ರಿ 10ಕ್ಕೆ ಬಂದ್ ಮಾಡಲಾಗುತ್ತದೆ. ಅದಾದ ನಂತರ, ಜನರೆಲ್ಲ ಮೂರ್ತಿಗಳನ್ನು ರಸ್ತೆಯಲ್ಲೇ ಇಟ್ಟು ಹೋಗುತ್ತಾರೆ. ದೇವರಿಗೆ ಅವಮಾನ ಆಗುತ್ತಿದೆ. ಇದುವರೆಗೂ ಇಲ್ಲಿನ ಕಲ್ಯಾಣಿಯನ್ನು ಇನ್ನೂ ಸ್ವಚ್ಛಗೊಳಿಸಿಲ್ಲ’ ಎಂದು ಭಾರತಿನಗರದ ಜಯರಾಮ್ ದೂರಿದರು.

ಸಾರ್ವಜನಿಕವಾಗಿ ಪ್ರತಿಷ್ಠಾಪಿಸುವ ಗಣೇಶ ಮೂರ್ತಿಗಳ ಅಕ್ಕಪಕ್ಕದಲ್ಲಿ ಫ್ಲೆಕ್ಸ್ ಮತ್ತು ಬ್ಯಾನರ್‌ಗಳನ್ನು ಅಳವಡಿಸಲು ಅನುಮತಿ ನೀಡಬೇಕು ಎಂದು ಜೆ.ಸಿ. ನಗರದ ಪ್ರಕಾಶ್ ಮನವಿ ಮಾಡಿದರು. ಅದಕ್ಕೆ ಪ್ರತಿಕ್ರಿಯೆಸಿದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅದಕ್ಕೆ ಅವಕಾಶವಿಲ್ಲ ಎಂದು ಸ್ಪಷ್ಟಪಡಿಸಿದರು.

‘ಸ್ಯಾಂಕಿ ಕೆರೆಯ ಕಲ್ಯಾಣಿಯಲ್ಲಿ ವಿದ್ಯುತ್ ದೀಪಗಳು ಕಾರ್ಯನಿರ್ಹಿಸುತ್ತಿಲ್ಲ. ಹಬ್ಬಕ್ಕೂ ಮುನ್ನ ಅವುಗಳನ್ನು ಸರಿಪಡಿಸಬೇಕು. ಪಾದಚಾರಿ ಮಾರ್ಗದಲ್ಲಿರುವ ಕೇಬಲ್ ಸಮಸ್ಯೆ ನಿವಾರಿಸಬೇಕು. ಗಣೇಶ ವಿಸರ್ಜನೆ ಸಂದರ್ಭದಲ್ಲಿ ಸಂಚಾರ ದಟ್ಟಣೆಯಾಗದಂತೆ ಕ್ರಮಕೈಗೊಳ್ಳಬೇಕು’ ಎಂದು ವಿಜಯ ಕುಮಾರ್ ಅವರು ಒತ್ತಾಯಿಸಿದರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ‘ನಗರದಲ್ಲಿ ಗೌರಿ–ಗಣೇಶ ಹಬ್ಬ ಆಚರಣೆಗೆ ಅನುಮತಿ ಪಡೆಯಲು 63 ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗಿದ್ದು, 48 ಗಂಟೆಯೊಳಗೆ ಅನುಮತಿ ಪತ್ರ ನೀಡಲಾಗುವುದು’ ಎಂದು ಹೇಳಿದರು.

‘ಬಿಬಿಎಂಪಿ, ಪೊಲೀಸ್, ಬೆಸ್ಕಾಂ ಮತ್ತು ಅಗ್ನಿಶಾಮಕ ಅಧಿಕಾರಿಗಳನ್ನು ಒಳಗೊಂಡ ಸಮಿತಿ ರಚಿಸಿ ಏಕಗವಾಕ್ಷಿ ಕೇಂದ್ರಗಳನ್ನು ತೆರೆಯಲಾಗುತ್ತಿದೆ. ಒಂದೇ ಸೂರಿನಡಿ ಅನುಮತಿ ಪತ್ರವನ್ನು ವಿತರಿಸಲಾಗುವುದು’ ಎಂದು ತಿಳಿಸಿದರು.

‘ಗಣೇಶ ಮೂರ್ತಿಗಳ ವಿಸರ್ಜನೆಗೆ ಕೆರೆಗಳ ಬಳಿ ಕೌಂಟರ್‌ಗಳ ವ್ಯವಸ್ಥೆ ಮಾಡಲಾಗುವುದು, ಅದಕ್ಕೇ ಬೇಕಾದ ಅಗತ್ಯ ಸಿಬ್ಬಂದಿಯನ್ನು ನಿಯೋಜನೆ ಮಾಡಲಾಗುವುದು. ಪಿಒಪಿ ಗಣೇಶ ಮೂರ್ತಿಗಳನ್ನು ನಿಷೇಧಿಸಿದ್ದು, ಯಾರೂ ಕೂಡಾ ಪಿಒಪಿ ಗಣೇಶ ಮೂರ್ತಿಗಳನ್ನು ಖರೀದಿಸದೇ ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಬೇಕು. ವಿಸರ್ಜನೆ ಸಂದರ್ಭದಲ್ಲಿ ತ್ಯಾಜ್ಯವನ್ನು ಒಂದು ನಿಗದಿಪಡಿಸಿದ ಸ್ಥಳದಲ್ಲಿ ಹಾಕಬೇಕು’ ಎಂದು ಸಲಹೆ ನೀಡಿದರು.

ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್, ‘ಪ್ರತಿ ವರ್ಷದಂತೆ ಶಾಂತಿ ಸೌಹಾರ್ದತೆಯಿಂದ ಗೌರಿ–ಗಣೇಶ ಹಬ್ಬವನ್ನು ಆಚರಿಸಬೇಕು. ಈಗಾಗಲೇ ಎಲ್ಲಾ ಕಡೆ ಶಾಂತಿ ಸಭೆಗಳನ್ನು ಆಯೋಜಿಸಲಾಗುತ್ತಿದೆ. ಈ ಬಾರಿ ಯಾವುದೇ ರೀತಿಯ ಅವಘಡಗಳು ಸಂಭವಿಸದಂತೆ ಅಗತ್ಯ ಕ್ರಮ ಕೈಗೊಳ್ಳಲಾಗುವುದು’ ಎಂದು ಹೇಳಿದರು.


ನಗರ ಪೊಲೀಸ್ ಕಮಿಷನರೇಟ್ ಆಯೋಜಿಸಿದ್ದ ಗೌರಿ–ಗಣೇಶ ಶಾಂತಿ ಸಭೆಯಲ್ಲಿ ನಗರ ಪೊಲೀಸ್ ಆಯುಕ್ತ ಬಿ. ದಯಾನಂದ್, ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್, ಹೆಚ್ಚುವರಿ ಪೊಲೀಸ್ ಕಮಿಷನರ್ ರಮಣ ಗುಪ್ತ, ಸಂಚಾರ ವಿಭಾಗದ ಜಂಟಿ ಪೊಲೀಸ್ ಕಮಿಷನರ್ ಎಂ.ಎನ್. ಅನುಚೇತ್ ಇದ್ದರು – ಪ್ರಜಾವಾಣಿ ಚಿತ್ರ

‘ಮೂರ್ತಿಗಳ ವಿಸರ್ಜನೆಗೆ ಕ್ರಮ’

‘ಬಿಬಿಎಂಪಿ ವ್ಯಾಪ್ತಿಯ ಸ್ಯಾಂಕಿ ಕೆರೆ, ಹಲಸೂರು ಕೆರೆ, ಯಡಿಯೂರು ಕೆರೆ, ಹೆಬ್ಬಾಳ ಕೆರೆ ಹಾಗೂ ಇತರೆ ಪ್ರಮುಖ ಕೆರೆ ಕಲ್ಯಾಣಿಗಳಲ್ಲಿ ಗಣೇಶ ವಿಸರ್ಜನೆಗೆ ಸೂಕ್ತ ವ್ಯವಸ್ಥೆ ಮಾಡಿಕೊಳ್ಳಲಾಗುತ್ತಿದೆ. ಪ್ರಮುಖ ವೃತ್ತಗಳಲ್ಲಿ ಮತ್ತು ಅವಶ್ಯಕತೆ ಇರುವ ವಾರ್ಡ್‌ಗಳಲ್ಲಿ ತಾತ್ಕಾಲಿಕ ಸಂಚಾರಿ ವಿಸರ್ಜನಾ ಘಟಕಗಳ (ಮೊಬೈಲ್ ಟ್ಯಾಂಕರ್) ವ್ಯವಸ್ಥೆ ಮಾಡಲಾಗುವುದು’ ಎಂದು ತುಷಾರ್ ಗಿರಿನಾಥ್ ಹೇಳಿದರು.

‘ಗಣೇಶ ಮೂರ್ತಿಗಳ ವಿಸರ್ಜನೆಗೆ ಗುರುತಿಸಿರುವ ಕೆರೆಗಳ ಕಲ್ಯಾಣಿಗಳ ಬಳಿ ಭದ್ರತೆಯ ದೃಷ್ಟಿಯಿಂದ ಪೊಲೀಸ್ ವ್ಯವಸ್ಥೆಯ ಜೊತೆಗೆ ಬ್ಯಾರಿಕೇಡ್, ಸಿಸಿಟಿವಿ, ನುರಿತ ಈಜುಗಾರರು, ಕ್ರೇನ್‌ಗಳ ಸೌಲಭ್ಯವನ್ನು ಕಲ್ಪಿಸಲಾಗುವುದು’ ಎಂದರು.

ಈಜಿಪುರ ಮೇಲ್ಸೇತುವೆ ವೆಚ್ಚ ₹307 ಕೋಟಿಗೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಈಜಿಪುರ ಮೇಲ್ಸೇತುವೆಯ ಬಾಕಿ ಕಾಮಗಾರಿ ಟೆಂಡರ್‌ಗೆ ಕೊನೆಗೂ ಅನುಮತಿ ದೊರೆತಿದ್ದು, ಎಂಜಿನಿಯರ್‌ಗಳ ವಿಳಂಬ ಧೋರಣೆಯಿಂದ ಯೋಜನೆಯ ವೆಚ್ಚ ₹103 ಕೋಟಿ ಹೆಚ್ಚಾಗಿದೆ.

2017ರಲ್ಲಿ ₹203.20 ಕೋಟಿ ವೆಚ್ಚದಲ್ಲಿ ಈಜಿಪುರ ಮೇಲ್ಸೇತುವೆ ನಿರ್ಮಿಸಲು ಟೆಂಡರ್‌ಗೆ ಅನುಮೋದನೆ ನೀಡಲಾಗಿತ್ತು. ಇದೀಗ ಅದು ₹307 ಕೋಟಿಗೆ ತಲುಪಿದೆ.

ಬಿಬಿಎಂಪಿ ಎಂಜಿನಿಯರ್‌ಗಳು, ಗುತ್ತಿಗೆದಾರರ ವಿಳಂಬದಿಂದ ಪ್ರಕರಣ ಹೈಕೋರ್ಟ್ ಮೆಟ್ಟಿಲೇರಿತ್ತು. ಗುತ್ತಿಗೆ ರದ್ದಾಗಿತ್ತು. 2022ರ ಮಾರ್ಚ್‌ನಲ್ಲಿ ಮೂರು ತಿಂಗಳಲ್ಲಿ ಹೊಸ ಟೆಂಡರ್ ಕರೆದು ಗುತ್ತಿಗೆ ನೀಡಬೇಕು ಎಂದು ಹೈಕೋರ್ಟ್ ತಾಕೀತು ಮಾಡಿದ್ದರೂ ಬಿಬಿಎಂಪಿ ಎಂಜಿನಿಯರ್‌ಗಳು ವಿಳಂಬ ನೀತಿ ಅನುಸರಿಸಿದ್ದರು. ನಿರ್ಮಾಣ ವೆಚ್ಚಗಳು ಅಧಿಕವಾದ್ದರಿಂದ ₹103.80 ಕೋಟಿ ಹೆಚ್ಚುವರಿ ನೀಡಬೇಕಾಗಿದೆ.



ಕಾಮಗಾರಿ ಸ್ಥಗಿತಗೊಂಡಿರುವ ಈಜಿಪುರ ಮೇಲ್ಸೇತುವೆ ಪ್ರದೇಶದ ದುಃಸ್ಥಿತಿ

ಈಜಿಪುರ ಮೇಲ್ಸೇತುವೆ ಬಾಕಿ ಉಳಿದಿರುವ ಕಾಮಗಾರಿಗೆ ನಾಲ್ಕನೇ ಬಾರಿಗೆ 2023 ಮಾರ್ಚ್ 1ರಂದು ನಾಲ್ಕನೇ ಬಾರಿಗೆ ಟೆಂಡರ್ ಆಹ್ವಾನಿಸಿತ್ತು. 17ರಂದು ತಾಂತ್ರಿಕ ಬಿಡ್ ತೆರೆದು, ಏಕೈಕ ಅರ್ಹ ಬಿಡ್‌ದಾರರೊಂದಿಗೆ ಮಾತುಕತೆ ನಡೆಸಲಾಗಿತ್ತು. ಅದನ್ನು ಇನ್ನೂ ಪೂರ್ಣಗೊಳಿಸದೆ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಆದರೆ, ಇದೇ ಸಂದರ್ಭದಲ್ಲಿ ಮಾರ್ಚ್ 17ರಂದು ಕರೆದಿದ್ದ ಹೈಡೆನ್ಸಿಟಿ ಕಾರಿಡಾರ್ ಟೆಂಡರ್‌ಗೆ ಮಾರ್ಚ್ 23ರಂದೇ ಅನುಮೋದನೆ ನೀಡಿ, ಕಾರ್ಯಾದೇಶ-ವನ್ನೂ ನೀಡಲಾಗಿದೆ.

ಕ್ರಮಕ್ಕೆ ಸಿ.ಎಂ ಸೂಚನೆ: ಈಜಿಪುರ ಮೇಲ್ಸೇತುವೆ ಕಾಮಗಾರಿ ವಿಳಂಬ, ಟೆಂಡರ್ ಪ್ರಕ್ರಿಯೆ ಕ್ಷಿಪ್ರವಾಗಿ ನಿರ್ವಹಿಸಲು ನಿರ್ಲಕ್ಷ್ಯ ವಹಿಸಿ ಆರ್ಥಿಕ ಹೊರೆಗೆ ಕಾರಣವಾಗಿರುವ ಎಂಜಿನಿಯರ್‌ಗಳ ಮೇಲೆ ಕ್ರಮ ಕೈಗೊಂಡು ವರದಿ ಸಲ್ಲಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಈಗಾಗಲೇ ಬಿಬಿಎಂಪಿ ಮುಖ್ಯ ಆಯುಕ್ತರಿಗೆ ಸೂಚಿಸಿದ್ದಾರೆ.

ಸಚಿವ ಸಂಪುಟ ಅನುಮೋದನೆ

ಈಜಿಪುರ ಮೇಲ್ಸೇತುವೆಗೆ ಒಟ್ಟಾರೆ ಪರಿಷ್ಕೃತ ಮೊತ್ತ ₹307 ಕೋಟಿಗೆ ಸಚಿವ ಸಂಪುಟದಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ ಎಂದು ಸಚಿವ ಎಚ್.ಕೆ. ಪಾಟೀಲ ಅವರು ಗುರುವಾರ ತಿಳಿಸಿದರು.

ಕೋರಮಂಗಲ 100 ಅಡಿ ಒಳ ವರ್ತುಲ ರಸ್ತೆಯಲ್ಲಿ ಕೇಂದ್ರೀಯ ಸದನ ಜಂಕ್ಷನ್‌ನಿಂದ ಈಜಿಪುರ ಸಿಗ್ನಲ್‌ವರೆಗೆ, ಕೇಂದ್ರೀಯ ಸದನ ಜಂಕ್ಷನ್, ಬಿಡಿಎ ಕಾಂಪ್ಲೆಕ್ಸ್ ಜಂಕ್ಷನ್, ಕೋರಮಂಗಲ 60 ಅಡಿ ರಸ್ತೆ, ಕೋರಮಂಗಲ 8ನೇ ಮುಖ್ಯರಸ್ತೆ, ಸೋನಿ ವರ್ಲ್ಡ್ ಜಂಕ್ಷನ್‌ಗಳಲ್ಲಿ ಉಂಟಾಗುತ್ತಿರುವ ಸಂಚಾರ ದಟ್ಟಣೆಯನ್ನು ನಿವಾರಿಸಲು ಎಲಿವೇಟೆಡ್ ಕಾರಿಡಾರ್ ಅನ್ನು ನಿರ್ಮಿಸಲು ಈ ಹಿಂದೆ ನಿರ್ಧರಿಸಲಾಗಿತ್ತು ಎಂದು ವಿವರಿಸಿದರು.

ಮೇಲ್ಸೇತುವೆಯ ಬಾಕಿ ಕಾಮಗಾರಿ ಮುಗಿಸಲು ಅನುಮೋದನೆ ದೊರೆತಿದೆ. ಈ ಪ್ರಕ್ರಿಯೆ ವಿಳಂಬವಾಗಿದೆ. ಈಗ ಕಾಮಗಾರಿಯನ್ನು ನಿಗದಿತ ಅವಧಿಯಲ್ಲಿ ಪೂರ್ಣಗೊಳಿಸಲಾಗುತ್ತದೆ

ರಾಮಲಿಂಗಾರೆಡ್ಡಿ, ಸಾರಿಗೆ ಸಚಿವ

ಕೃಷಿ ವಿ.ವಿಯಲ್ಲಿ ರೈತ ತರಬೇತಿ ಭವನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಶೋಧನೆಯ ಜತೆಗೆ ರೈತರಿಗೆ ಕೌಶಲ ಅಭಿವೃದ್ಧಿ ಮತ್ತು ತರಬೇತಿ ನೀಡುವುದನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆರಂಭಿಸಿದೆ.

ಹೆಬ್ಬಾಳದಲ್ಲಿರುವ ಕೃಷಿ ವಿವಿಯಲ್ಲಿ ಕೇಂದ್ರ ಸರ್ಕಾರದ ಸಹಯೋಗದಲ್ಲಿ ರೈತ ಭವನ ನಿರ್ಮಿಸಲಾಗಿದೆ. ಇಲ್ಲಿ ರೈತರಿಗೆ ಕೌಶಲ ಅಭಿವೃದ್ಧಿ ತರಬೇತಿಗಾಗಿ ಉಚಿತ ಊಟ, ವಸತಿಯ ಸೌಲಭ್ಯವಿದೆ. ಈ ಭವನವು ಅಕ್ಟೋಬರ್ ತಿಂಗಳಿಂದ ಕಾರ್ಯಾರಂಭ ಮಾಡಲಿದೆ. ಈ ಭವನದಲ್ಲಿ ಏಕಕಾಲದಲ್ಲಿ 45 ರೈತರು ವಾಸ್ತವ್ಯ ಮಾಡಬಹುದು.

‘ಕೃಷಿಯಿಂದ ಬರುವ ಆದಾಯವು ಅನಿಶ್ಚಿತತೆಯಿಂದ ಕೂಡಿದ್ದು, ರೈತರು ಆರ್ಥಿಕವಾಗಿ ತೊಂದರೆ ಅನುಭವಿ-ಸಬಾರದು ಎಂಬ ಉದ್ದೇಶದಿಂದ ಈ ತರಬೇತಿ ಕೇಂದ್ರವನ್ನು ಪ್ರಾರಂಭಿಸಲಾಗುತ್ತಿದೆ. ಇದರಿಂದ, ರೈತರು ಹೆಚ್ಚುವರಿ ಆದಾಯಗಳಿಸಲು ಸಹಾಯವಾಗಲಿದೆ. ಇಲ್ಲಿ ರೇಷ್ಮೆ, ಅಣಬೆ ಕೃಷಿ, ಬೀಜ ಉತ್ಪಾದನೆ, ಜೈವಿಕ ಗೊಬ್ಬರ ತಯಾರಿಕೆ, ಸಸ್ಯ ಸಂರಕ್ಷಣಾ ಉಪಕರಣಗಳ ದುರಸ್ತಿ, ಡ್ರೋನ್ ಚಾಲನೆ, ಕೃಷಿ ಉತ್ಪನ್ನಗಳ ಮಾರುಕಟ್ಟೆಯ ಕುರಿತು ತರಬೇತಿಗಳನ್ನು ನೀಡಲಾಗುವುದು’ ಎಂದು ಕೃಷಿ ವಿಶ್ವವಿದ್ಯಾಲಯ ಕುಲಪತಿ ಎಸ್. ವಿ. ಸುರೇಶ್ ತಿಳಿಸಿದರು.

ಕೃಷಿ ಚಟುವಟಿಕೆಗಳು, ತಂತ್ರಜ್ಞಾನ, ಮಿಶ್ರ ಬೆಳೆಗಳು, ಪ್ರಾಂತ್ಯವಾರು ಬೆಳೆಗಳು ಬಗ್ಗೆ ತರಬೇತಿ ನೀಡಲಾಗುತ್ತಿದೆ. ರೈತರು ಆಯ್ಕೆ ಮಾಡಿಕೊಳ್ಳುವ ವಿಷಯಗಳ ತರಬೇತಿ ಮುಗಿಯುವವರೆಗೂ ಅವರು ರೈತ ಭವನದಲ್ಲಿ ತಂಗಬಹುದು. ರಾಜ್ಯದ ಯಾವುದೇ ಜಿಲ್ಲೆಯ ರೈತರು ಇಲ್ಲಿಗೆ ಬರಬಹುದು. ಕೃಷಿ ವಿಕಾಸ ಕೇಂದ್ರಗಳು ಹಾಗೂ ಇತರೆ ಸಂಸ್ಥೆಗಳು ರೈತರನ್ನು ಗುಂಪುಗಳಾಗಿ ಆಯ್ಕೆ ಮಾಡಿ ತರಬೇತಿಗೆ ನಿಯೋ-ಜಿಸಲಾಗುವುದು’ ಎಂದು ಅವರು ವಿವರಿಸಿದರು.



ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ನೂತನವಾಗಿ ನಿರ್ಮಿಸಿರುವ ರೈತ ಭವನ.

ಮುಖ್ಯಾಂಶಗಳು

- ಕೇಂದ್ರ ಸರ್ಕಾರದ ಸಹಯೋಗದಲ್ಲಿ ರೈತ ಭವನ
- ಏಕಕಾಲದಲ್ಲಿ 45 ರೈತರು ವಾಸ್ತವ್ಯಕ್ಕೆ ಅವಕಾಶ
- ಅಕ್ಟೋಬರ್ 30ಗಳಿಂದ ಕಾರ್ಯಾರಂಭ

ಉಚಿತ ಕಂಪ್ಯೂಟರ್ ತರಬೇತಿ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆನರಾ ಬ್ಯಾಂಕ್ ಸಂಸ್ಥೆಯಿಂದ ಉಚಿತ ಕಂಪ್ಯೂಟರ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಕಂಪ್ಯೂಟರ್ ಆಫೀಸ್ ಅಡ್ಮಿನಿಸ್ಟ್ರೇಶನ್ ಹಾಗೂ ಹಾರ್ಡ್‌ವೇರ್ ಮತ್ತು ನೆಟ್‌ವರ್ಕ್ ಅಡ್ಮಿನಿಸ್ಟ್ರೇಶನ್‌ನಲ್ಲಿ ಮೂರು ತಿಂಗಳ ಉಚಿತ ಕಂಪ್ಯೂಟರ್ ತರಬೇತಿ ಶಿಕ್ಷಣ ನೀಡಲಿದೆ. ತರಗತಿಗಳು ಅಕ್ಟೋಬರ್ 3ರಂದು ಪ್ರಾರಂಭವಾಗಲಿದ್ದು, ಆಸಕ್ತರು ಕೂಡಲೇ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ನಿರ್ದೇಶಕರು, ಕೆನರಾ ಬ್ಯಾಂಕ್ ಮಾಹಿತಿ ತಂತ್ರಜ್ಞಾನ ತರಬೇತಿ ಸಂಸ್ಥೆ, ಚಿತ್ರಾಪುರ ಭವನ, ಮಲ್ಲೇಶ್ವರ, ಬೆಂಗಳೂರು, ಮಾಹಿತಿಗೆ: 080-23440036/ 94485 38107ಗೆ ಸಂಪರ್ಕಿಸಬಹುದು.

ಸಿನಿಮಾ ಪುರವಣಿ



‘ಅಭಿನಯವೇ ನನಗೆ ಚಿಕಿತ್ಸೆ’

13
ರಾಘವೇಂದ್ರ ರಾಜ್‌ಕುಮಾರ್

ರಾಘವೇಂದ್ರ ರಾಜ್‌ಕುಮಾರ್, ಶ್ರುತಿ ಮುಖ್ಯ ಭೂಮಿಕೆಯಲ್ಲಿರುವ ‘13’ ಚಿತ್ರ ಮುಂದಿನ ವಾರ ತೆರೆ ಕಾಣುತ್ತಿದೆ. ಈ ಚಿತ್ರ ಹಾಗೂ ತಮ್ಮ ಐದು ದಶಕಗಳ ಸಿನಿ ಪಯಣದ ಕುರಿತು ರಾಘವೇಂದ್ರ ರಾಜ್‌ಕುಮಾರ್ ‘ಸಿನಿಮಾ ಪುರವಣಿ’ಯೊಂದಿಗೆ ಮಾತಿಗೆ ಸಿಕ್ಕರು...

ವಿನಾಯಕ ಕೆ.ಎಸ್.

- **‘13’ ಸಿನಿಮಾದಲ್ಲಿ ನಿಮ್ಮ ಪಾತ್ರವೇನು?**

ನಿವೃತ್ತ ಸೈನಿಕ. ನಿವೃತ್ತಿ ಬಳಿಕ ಗುಜರಿ ಅಂಗಡಿ ಮಾಲೀಕ ಮೋಹನ್ ಕುಮಾರ್ ಆಗಿ ಕಾಣಿಸಿಕೊಂಡಿದ್ದೇನೆ. ಮಾಮೂಲಿ ನಾಯಕ–ನಾಯಕಿ ಕಥೆ ಹೊಂದಿರುವ ಚಿತ್ರ ಇದಲ್ಲ. ಗಟ್ಟಿಯಾದ ಕಥಾವಸ್ತು, ಚಿತ್ರಕಥೆಯೇ ಇಲ್ಲಿ ನಾಯಕ. ನಟಿ ಶ್ರುತಿ ಜೊತೆಗೆ ಬಹಳ ವರ್ಷದ ನಂತರ ನಟಿಸಿರುವೆ. ನಾವಿಬ್ಬರು ಚಿತ್ರದಲ್ಲಿ ಗಂಡ–ಹೆಂಡತಿ. ನಾನು ಹಿಂದೂ. ಶ್ರುತಿ ಅವರು ಮುಸ್ಲಿಂ. ಆದಾಗ್ಯೂ ಇಬ್ಬರ ಬದುಕಿಗೆ ಜಾತಿ, ಧರ್ಮ ಅಡ್ಡ ಬರುವುದಿಲ್ಲ. ಒಂದೇ ಮನೆಯಲ್ಲಿ ಇಬ್ಬರೂ ಪೂಜೆ ಮತ್ತು ನಮಾಜ್‌ನಲ್ಲಿ ಭಾಗಿಯಾಗುತ್ತೇವೆ.

- **ಚಿತ್ರದಲ್ಲಿ ನಿಮ್ಮ ಸ್ಕ್ರೀನ್ ಸ್ಪೇಸ್ ಎಷ್ಟಿದೆ?**

ಸಿನಿಮಾದಲ್ಲಿ ಪೂರ್ತಿಯಾಗಿಯೇ ಕಾಣಿಸಿಕೊಳ್ಳುತ್ತೇನೆ. ಆದರೆ ನಾಯಕನನ್ನು ವಿಜೃಂಭಿಸುವ ಕಥೆಯಲ್ಲ. ಈಗೆಲ್ಲ ಸಿನಿಮಾದಲ್ಲಿ ರಾಘಣ್ಣ ಇರುತ್ತಾರೆ ಹೊರತು, ರಾಘಣ್ಣನದ್ದೇ ಸಿನಿಮಾ ಆಗಿರುವುದಿಲ್ಲ. ಲಕ್ವ ಹೊಡೆದು ಚೇತರಿಸಿಕೊಂಡ ನಂತರ ನನಗೆ ಸಿನಿಮಾ ಚಿತ್ರೀಕರಣದಲ್ಲಿ ಭಾಗವಹಿಸುವುದು ಒಂದು ರೀತಿಯ ಚಿಕಿತ್ಸೆಯಂತೆ ಭಾಸವಾಗುತ್ತದೆ. ಸೆಟ್‌ನಲ್ಲಿ ಎಲ್ಲರ ಜೊತೆ ಬೆರೆಯುತ್ತೇನೆ, ಓಡಾಡುತ್ತೇನೆ, ಉತ್ಸಾಹದಿಂದ ಭಾಗಿಯಾಗುತ್ತೇನೆ. ಇದೆಲ್ಲ ಒಂದು ರೀತಿ ನನ್ನನ್ನು ಸಕ್ರಿಯವಾಗಿಡುತ್ತದೆ.

- **ನಿಮ್ಮ ಮುಂದಿನ ಯೋಜನೆಗಳು...**

‘ಸರ್ಕಾರಿ ಶಾಲೆ’ ಎಂಬ ಚಿತ್ರವೊಂದು ‘ಅಪ್ಪು’ ಶಾಲಾದಿನಗಳನ್ನು ನೆನಪಿಸುವ ಚಿತ್ರ. ಹೀಗಾಗಿ ಈ ಚಿತ್ರದಲ್ಲೊಂದು ಪಾತ್ರ ಮಾಡಿರುವೆ. ‘ರಂಗಸಮುದ್ರ’ ಚಿತ್ರದಲ್ಲಿ ನಟಿಸಿರುವೆ. ವಿಜಯ್ ರಾಜ್‌ಕುಮಾರ್ ‘ಪೆಪೆ’ ಚಿತ್ರದಲ್ಲಿ ಇದ್ದೇನೆ. ಆದರೆ ಅಪ್ಪನಾಗಿ ಅಲ್ಲ, ಬದಲಿಗೆ ಒಂದು ಪಾತ್ರದಲ್ಲಿ ನಟಿಸಿರುವೆ. ಇವತ್ತಿನ ಸಿನಿಮಾ ಬೇರೆ ರೀತಿಯೇ ಇದೆ. ಹೊಸಬರ ಜೊತೆ ನಾನು ಒಂದಷ್ಟು ಕಲಿಯಲು ಯತ್ನಿಸುತ್ತಿರುವೆ.

- **ನೀವು ನಾಯಕರಾಗಿ ನಟಿಸುತ್ತಿದ್ದ ದಿನಗಳಿಗೂ, ಇವತ್ತಿಗೂ ಚಿತ್ರರಂಗ ಎಷ್ಟು ಬದಲಾಗಿದೆ ಎನ್ನಿಸುತ್ತದೆ?**

ಬಹಳ ಒಳ್ಳೆ ಪ್ರಶ್ನೆ ಕೇಳಿದ್ದೀರಿ. ಆವಾಗ ನನ್ನ ಚಿತ್ರಗಳಿಗೆ ಅಮ್ಮನೇ ನಿರ್ಮಾಪಕಿ. ನಮ್ಮದೇ ನಿರ್ಮಾಣ ಸಂಸ್ಥೆ. ಒಂದು ರೀತಿ ಯಜಮಾನನಾಗಿದ್ದೆ. ಇಡೀ ಸೆಟ್ ನಾನು ಹೇಳಿದಂತೆ ಕೇಳುತ್ತಿತ್ತು. ಜನ ನಮ್ಮ ಸಿನಿಮಾಗಳನ್ನು ನೋಡುತ್ತಿದ್ದರು. ಹೀಗಾಗಿ ಅಷ್ಟೊಂದು ಆಸಕ್ತಿಯಿಂದ ನಟನೆಯಲ್ಲಿ ತೊಡಗಿಸಿಕೊಳ್ಳಲಿಲ್ಲ. ಈಗ ಹಾಗಲ್ಲ. ನಾನು ಸಂಬಳಕ್ಕೆ ಕೆಲಸ ಮಾಡುವ ನೌಕರ. ನನ್ನ ನಿರ್ಮಾಪಕನಿಗೆ ಮೋಸವಾಗಬಾರದೆಂದು ಹೊಸಬರ ಜೊತೆ ತೊಡಗಿಸಿಕೊಂಡು ಸಾಕಷ್ಟು ಕಲಿಯುತ್ತಿದ್ದೇನೆ. ಕಳೆದ 10 ವರ್ಷಗಳಲ್ಲಿ ನಟನಾಗಿ ಸಾಕಷ್ಟು ಕಲಿತಿರುವೆ. ಆವತ್ತೂ ಹೀಗೆ ಆಸಕ್ತಿಯಿಂದ ಕಲಿತಿದ್ದರೆ ನಾನು ಶಿವಣ್ಣ, ಅಪ್ಪು ರೀತಿಯೇ ಬೆಳೆದಿರುತ್ತಿದ್ದೆ ಎಂದು ಈಗ ಅನ್ನಿಸುತ್ತದೆ.

- **ನೀವು ಅಂದುಕೊಂಡು ಈವರೆಗೂ ಮಾಡಲಾಗದ ಪಾತ್ರಗಳು ಅಥವಾ ಸಿನಿಮಾಗಳು ಯಾವುವು?**

ನಾನು ರಾಜ್‌ಕುಮಾರ್ ಮಗನಾಗಿರಬಹುದು. ಅವರ ವರ್ಚಸ್ಸಿನಿಂದಲೇ ನಟನಾಗಿರಬಹುದು. ಆದರೆ ನಟನಾಗಿ ಅವರ ಸಮೀಪ ಸುಳಿಯಲೂ ಸಾಧ್ಯವಿಲ್ಲ. ಅಪ್ಪಾಜಿ ಮಾಡಿದಂತೆ ಐತಿಹಾಸಿಕ, ಪೌರಾಣಿಕ ಪಾತ್ರಗಳನ್ನು ಮಾಡಬೇಕು ಎಂಬ ಆಸೆ ಕನಸಾಗಿಯೇ ಉಳಿದಿದೆ. ರಾಘವೇಂದ್ರ ಸ್ವಾಮಿಗಳು, ಕನಕದಾಸರ ಪಾತ್ರಗಳನ್ನು ಹೊಂದಿರುವ ಕಥೆಗಳು, ಆ ರೀತಿ ಸಿನಿಮಾ ಮಾಡಬಲ್ಲ ನಿರ್ದೇಶಕರು ನನಗೆ ಸಿಗಲಿಲ್ಲ. ಸಿಕ್ಕರೆ ಈಗಲೂ ಮಾಡುವ ಹಂಬಲವಿದೆ.

- **ನಿಮ್ಮ ನಿರ್ಮಾಣ ಸಂಸ್ಥೆಯಿಂದ ಹೊಸ ಸಿನಿಮಾಗಳ ಆಲೋಚನೆ ಇದೆಯಾ?**

‘ವಜ್ರೇಶ್ವರಿ ಕಂಬೈನ್ಸ್’ ಅಮ್ಮ ಕಟ್ಟಿದ ಸಂಸ್ಥೆ. ನೂರಾರು ಅತ್ಯುತ್ತಮ ಸಿನಿಮಾಗಳನ್ನು ಮಾಡಿದ್ದರು. ಈಗ ಆ ಸಂಸ್ಥೆಯ ಮೂಲಕ ಏನೂ ಮಾಡುತ್ತಿಲ್ಲ. ಅವರು ಮಾಡಿಟ್ಟ ಹೆಸರನ್ನು ಹಾಳು ಮಾಡಬಾರದು, ಕನಿಷ್ಠ ಉಳಿಸಿಕೊಳ್ಳಬೇಕು. ‘ಶಿವಣ್ಣ’, ‘ಅಪ್ಪು’ ಅವರವರದ್ದೇ ನಿರ್ಮಾಣ ಸಂಸ್ಥೆಗಳನ್ನು ಕಟ್ಟಿದ್ದಾರೆ. ಮುಂದೆ ಒಳ್ಳೆ ಕಥೆ ಸಿಕ್ಕಿ, ಮಕ್ಕಳು ಸಂಸ್ಥೆಯನ್ನು ಬೆಳೆಸಿಕೊಂಡು ಹೋಗಲು ಬಯಸಿದರೆ ಈ ಸಂಸ್ಥೆಯಿಂದ ಸಿನಿಮಾಗಳು ಬರಬಹುದು. ಸದ್ಯಕ್ಕಂತು ಯಾವ ಆಲೋಚನೆಯೂ ಇಲ್ಲ.



ಮೀಟ್ ಮಾಡೋಣ ಎಂದ ಬೃಂದಾ

‘ಪ್ರೇಮಂ ಪೂಜ್ಯಂ’ ಸಿನಿಮಾ ಮೂಲಕ ಕಿರುತೆರೆಯಿಂದ ಬೆಳ್ಳಿತೆರೆಯ ಪಯಣ ಆರಂಭಿಸಿದ ನಟಿ ಬೃಂದಾ ಆಚಾರ್ಯ ಹೊಸ ಪ್ರಾಜೆಕ್ಟ್ ಒಪ್ಪಿಕೊಂಡಿದ್ದಾರೆ. ಇತ್ತೀಚೆಗಷ್ಟೇ ರಿಲೀಸ್ ಆದ ‘ಕೌಸಲ್ಯಾ ಸುಪ್ರಜಾ ರಾಮ’ ಸಿನಿಮಾ ಯಶಸ್ಸಿನ ಬೆನ್ನಲ್ಲೇ ಎಸ್. ನಾರಾಯಣ್ ಆ್ಯಕ್ಷನ್ ಕಟ್ ಹೇಳಲಿರುವ ಹೊಸ ಸಿನಿಮಾಗೆ ಗ್ರೀನ್ ಸಿಗ್ನಲ್ ಕೊಟ್ಟಿದ್ದಾರೆ ಬೃಂದಾ.

ಎಸ್. ನಾರಾಯಣ್ ನಿರ್ದೇಶನದಲ್ಲಿ ಶ್ರೇಯಸ್ ಮಂಜು ನಾಯಕನಾಗಿ ನಟಿಸುತ್ತಿರುವ ‘ಒಂದ್ಸಲ ಮೀಟ್ ಮಾಡೋಣ’ ಚಿತ್ರದ ಚಿತ್ರೀಕರಣ ಇತ್ತೀಚೆಗಷ್ಟೇ ಚಿಕ್ಕಮಗಳೂರಿನಲ್ಲಿ ಪ್ರಾರಂಭಗೊಂಡಿದೆ. ಇದರಲ್ಲಿ ಶ್ರೇಯಸ್‌ಗೆ ಬೃಂದಾ ಜೋಡಿಯಾಗಿದ್ದಾರೆ. ‘ಕೆ.ಮಂಜು ಹಾಗೂ ರಮೇಶ್ ಯಾದವ್ ಈ ಚಿತ್ರವನ್ನು ನಿರ್ಮಾಣ ಮಾಡುತ್ತಿದ್ದಾರೆ. ಈ ಚಿತ್ರ ಪ್ರೀತಿಯ ಕಥೆ ಹೊಂದಿದ್ದು, ಸಕಲೇಶಪುರ, ವಿರಾಜಪೇಟೆ, ಕಣ್ಣೂರು, ಮೈಸೂರು, ಬೆಂಗಳೂರು, ಬೆಳಗಾವಿ, ಗೋವಾ ಮುಂತಾದೆಡೆ ಚಿತ್ರೀಕರಣಗೊಳ್ಳಲಿದೆ. ಇದೊಂದು ಟ್ರಾವೆಲಿಂಗ್ ಲವ್ ಸ್ಟೋರಿ’ ಎಂದಿದ್ದಾರೆ ನಿರ್ದೇಶಕರು.

ಎಸ್.ನಾರಾಯಣ್ ಚಿತ್ರಕಥೆ, ಸಂಭಾಷಣೆ ಬರೆದು ಗೀತರಚನೆ ಮಾಡಿರುವ ಈ ಚಿತ್ರಕ್ಕೆ ಜಸ್ಸಿ ಗಿಫ್ಟ್ ಸಂಗೀತ ನೀಡುತ್ತಿದ್ದಾರೆ. ಕುಮಾರ್ ಗೌಡ ಛಾಯಾಗ್ರಹಣ, ಶಿವಪ್ರಸಾದ್ ಯಾದವ್ ಸಂಕಲನ ಚಿತ್ರಕ್ಕಿದೆ.

ತಾರಾ ಅನುರಾಧ, ಶರತ್ ಲೋಹಿತಾಶ್ವ, ಸಾಧುಕೋಕಿಲ, ಪ್ರಮೋದ್ ಶೆಟ್ಟಿ, ಕಲ್ಯಾಣಿ, ರಂಗಾಯಣ ರಘು, ಪಾವಗಡ ಮಂಜು ಮುಂತಾದವರು ತಾರಾಬಳಗದಲ್ಲಿದ್ದಾರೆ.



ಮೂರು ಸಿನಿಮಾಗಳು ತೆರೆಗೆ



ವಿಜಯ ರಾಘವೇಂದ್ರ ನಟನೆಯ ‘ಕದ್ದಚಿತ್ರ’ ಸೇರಿದಂತೆ ಮೂರು ಸಿನಿಮಾಗಳು ಇಂದು(ಸೆ.8)ತೆರೆಕಾಣುತ್ತಿವೆ.

ಕದ್ದಚಿತ್ರ: ವಿಜಯ ರಾಘವೇಂದ್ರ ಮುಖ್ಯ ಭೂಮಿಕೆಯಲ್ಲಿರುವ ಸಿನಿಮಾ ‘ಕದ್ದಚಿತ್ರ’. ಸುಹಾಸ್ ಕೃಷ್ಣ ಈ ಚಿತ್ರವನ್ನು ನಿರ್ದೇಶಿಸಿದ್ದಾರೆ. ‘ಶಿವಾಜಿ ಸುರತ್ಕಲ್’ ಚಿತ್ರದಲ್ಲಿ ನಟಿಸಿದ್ದ ನಮ್ರತಾ ಸುರೇಂದ್ರನಾಥ್ ಇಲ್ಲಿ ನಾಯಕಿ. ಕೃತಿ ಚೌರ್ಯದ ಕಥಾಹಂದರವನ್ನು ಹೊಂದಿದ ಸೈಕಾಲಾಜಿಕಲ್ ಥ್ರಿಲ್ಲರ್ ಸಿನಿಮಾದಲ್ಲಿ ವಿಜಯ ರಾಘವೇಂದ್ರ ಅವರು ಮೂರು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದಾರೆ. ಶಾನ್ವಿ ಟಾಕೀಸ್ ನಿರ್ಮಾಣದ ಚಿತ್ರಕ್ಕೆ ಕೃಷ್ಣರಾಜ್ ಸಂಗೀತ, ಶ್ರೀ ಕ್ರೇಜಿ ಮೈಂಡ್ಸ್ ಛಾಯಾಚಿತ್ರಗ್ರಹಣ, ಗೌತಮ್ ಮನು ಸಂಕಲನವಿದೆ.

ಅವಳು ಲೈಲಾ ಅಲ್ಲ, ನಾನು ಮಜ್ನು ಅಲ್ಲ: ಯಲ್ಲು ಪುಣ್ಯಕೋಟಿ ಅವರ ನಿರ್ದೇಶನದಲ್ಲಿ, ಅಜಯ್ ನಾಯಕನಾಗಿ ನಟಿಸಿರುವ ‘ಅವಳು ಲೈಲಾ ಅಲ್ಲ ನಾನ್ ಮಜ್ನು ಅಲ್ಲ’ ಚಿತ್ರ ರಾಜ್ಯದಾದ್ಯಂತ ತೆರೆಕಾಣುತ್ತಿದೆ. ನಿಹಾರಿಕಾ ಹಾಗೂ ಅಶ್ವಿನಿ ಎಂಬ ಇಬ್ಬರು ನಾಯಕಿಯರು. ಕೌಶಿಕ್ ಸಂಗೀತ ಸಂಯೋಜನೆ ಮಾಡಿದ್ದಾರೆ. ಹಳ್ಳಿ ಮತ್ತು ನಗರದಲ್ಲಿ ನಡೆಯುವ ಈ ಕಥೆಯನ್ನು ಚಿತ್ರದುರ್ಗ, ಹೊಸಪೇಟೆ, ಬೆಂಗಳೂರು, ಹಿರಿಯೂರು, ಬಳ್ಳಾರಿ, ರಾಯಚೂರು, ಕೊಪ್ಪಳ ಸುತ್ತಮುತ್ತ ಚಿತ್ರೀಕರಿಸಲಾಗಿದೆ.

ಪರ್ಯಾಯ: ಮೂವರು ಅಂಗವಿಕಲರ ಸುತ್ತ ನಡೆಯುವ ಕಥೆಯನ್ನು ಹೇಳುವ ಚಿತ್ರ ‘ಪರ್ಯಾಯ’. ಮಮತಾ ಕ್ರಿಯೇಶನ್ಸ್ ಮೂಲಕ ರಾಜಕುಮಾರ್ ಹಾಗೂ ಶ್ರೀಮತಿ ಇಂದುಮತಿ ರಾಜ್ ಕುಮಾರ್ ಅವರ ನಿರ್ಮಾಣದ ಈ ಚಿತ್ರದಲ್ಲಿ ರಾಜ್ ಕುಮಾರ್ ಅವರೇ ಅಂಧನ ಪಾತ್ರವನ್ನೂ ನಿರ್ವಹಿಸಿದ್ದಾರೆ. ಬೆಳಗಾವಿ, ಗೋವಾ ಗಡಿಯ ಚಿಗುಳೆ ಎಂಬ ಹಳ್ಳಿಯೊಂದರಲ್ಲಿ ಹೆಚ್ಚಿನ ಭಾಗದ ಚಿತ್ರೀಕರಣ ನಡೆಸಲಾಗಿದೆ. ಕಿವುಡನ ಪಾತ್ರದಲ್ಲಿ ಮುರುಗೇಶ್, ಕಿವುಡನ ಪಾತ್ರದಲ್ಲಿ ರಂಜನ್ ಕುಮಾರ್ ನಟಿಸಿದ್ದಾರೆ. ಎ.ಟಿ.ರವೀಶ್ ಸಂಗೀತ ನಿರ್ದೇಶನ, ಜಿ.ರಂಗಸ್ವಾಮಿ ಛಾಯಾಗ್ರಹಣ ಚಿತ್ರಕ್ಕಿದೆ.



ನಮ್ರತಾ ಸುರೇಂದ್ರನಾಥ್

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

ಕಿರುತೆರೆಯತ್ತ ‘ಸಿಂಪಲ್’ ಸುನಿ



‘ಸಿಂಪಲ್ಲಾಗ್ ಒಂದ್ ಲವ್ ಸ್ಟೋರಿ’ ಸಿನಿಮಾ ಮೂಲಕ ಬೆಳ್ಳಿತೆರೆಯಲ್ಲಿ ಮೋಡಿ ಮಾಡಿದ್ದ ನಿರ್ದೇಶಕ ಸುನಿ ಇದೀಗ ಕಿರುತೆರೆಗೂ ಹೆಜ್ಜೆ ಇಟ್ಟಿದ್ದಾರೆ. ಉದಯ ಟಿ.ವಿಯಲ್ಲಿ ಆರಂಭವಾಗಲಿರುವ ‘ಶಾಂಭವಿ’ ಎನ್ನುವ ಧಾರಾವಾಹಿಯನ್ನು ಸುನಿ ನಿರ್ಮಿಸಿ, ನಿರ್ದೇಶಿಸುತ್ತಿದ್ದಾರೆ.

‘ಶಿವಗಾಮಿ’ ಸಾವಿರಾರು ಕೋಟಿ ಆಸ್ತಿಯ ಒಡತಿ. ಶ್ರೀ ಶಾಂಭವಿ ಶಿಕ್ಷಣ ಸಂಸ್ಥೆ ಜೊತೆ ಇನ್ನೂ ಹಲವು ಉದ್ಯಮಗಳನ್ನು ನಡೆಸುವಾಕೆ. ಅವಳ ಅಣ್ಣ ಹರಿಪ್ರಸಾದ್. ಈ ಕುಟುಂಬದ ಸುತ್ತ ಧಾರಾವಾಹಿಯ ಕಥೆ ಇದೆ ಎಂದಿದೆ ತಂಡ. ಸುನಿ ಸಿನಿಮಾಸ್ ಸಂಸ್ಥೆಯ ಅಡಿಯಲ್ಲಿ ‘ಶಾಂಭವಿ’ ನಿರ್ಮಾಣವಾಗುತ್ತಿದೆ. ಈ ಧಾರಾವಾಹಿಗೆ ವೈಬಿಆರ್ ಮನು ಛಾಯಾಚಿತ್ರಗ್ರಹಣ, ಪರಂ ಅವರ ಸಂಕಲನ, ಜಗದೀಶ್ ದೊಡ್ಡೇರಿ ಸಹ-ನಿರ್ದೇಶನ, ಪುಗಳ್ಮಣಿ ಅವರ ಕಥೆ ಚಿತ್ರಕಥೆ, ರಾಧಾ ವೆಂಕಟ್ ಅವರ ಸಂಭಾಷಣೆ, ನಾಗೇಂದ್ರ ಪ್ರಸಾದ್ ಅವರ ಸಂಗೀತ ಮತ್ತು ಸಾಹಿತ್ಯ ಇದೆ. ‘ಶಾಂಭವಿ’ಯ ಪಾತ್ರವನ್ನು ಬೇಬಿ ರಚನಾ ಟಿ.ಬಿ ನಿರ್ವಹಿಸಿದ್ದಾರೆ. ಪ್ರಮುಖ ಪಾತ್ರಗಳಲ್ಲಿ ಐಶ್ವರ್ಯ ಸಿಂಧೋಗಿ, ಹರೀಶ್ ಟಿವಿ, ವಿನಯ ಗೌಡ, ಅಂಬುಜಾಕ್ಷಿ ನಟಿಸಿದ್ದು, ಪೂಜಿತಾ, ಡಾಲಿ ರಾಜೇಶ್, ಸೂರ್ಯ ಕುಂದಾಪುರ, ರೋಹಿತ್ ನಾಯರ್, ಶ್ಯಾಮಲಮ್ಮ ಮುಂತಾದವರು ತಾರಾಗಣದಲ್ಲಿದ್ದಾರೆ. ಸೆ.11ರಿಂದ ಸೋಮವಾರದಿಂದ ಶನಿವಾರ ರಾತ್ರಿ 7.30ಕ್ಕೆ ಪ್ರಸಾರವಾಗಲಿದೆ.




ಐಶ್ವರ್ಯ ಸಿಂಧೋಗಿ

ಬಾನದಾರಿಯಲ್ಲಿ ತೆಂಗಿನಮರದ ಕಥೆ!

‘ತೆಂಗಿನ ಮರ ಹಾಕಿದ್ರೆ ತೆಂಗಿನಕಾಯಿ ಕೊಡ್ತದೆ
ಮಾವಿನ ಮರ ಹಾಕಿದ್ರೆ ಮಾವಿನಕಾಯಿ ಕೊಡ್ತದೆ
ನಿಂಬೆ ಮರ ಹಾಕಿದ್ರೆ ನಿಂಬೆಕಾಯಿ ಕೊಡ್ತದೆ...’

ನಟಿ ರೀಷ್ಮಾ ನಾಣಯ್ಯ ಕೀನ್ಯಾದ ದಟ್ಟ ಕಾಡಿನಲ್ಲಿ ರಚಿಸಿದ ಈ ಕವಿತೆಗೆ ಧ್ವನಿಯಾದರು ರಂಗಾಯಣ ರಘು ಹಾಗೂ ನಟ ಗೋಲ್ಡನ್ ಸ್ಟಾರ್ ಗಣೇಶ್. ಈ ಹಾಸ್ಯಮಯ ಸನ್ನಿವೇಶಕ್ಕೆ ವೇದಿಕೆ ಒದಗಿಸಿದ್ದು ‘ಬಾನದಾರಿಯಲ್ಲಿ’ ಚಿತ್ರದ ಟ್ರೇಲರ್ ಬಿಡುಗಡೆ ಸಮಾರಂಭ.



ಬಾನದಾರಿಯಲ್ಲಿ
ರೀಷ್ಮಾ, ಗಣೇಶ್

ಚಿತ್ರದ ಟ್ರೇಲರ್ ಬಿಡುಗಡೆಗೊಳಿಸಿ ಮಾತನಾಡಿದ ರಂಗಾಯಣ ರಘು, ಕಾಡಿನಲ್ಲಿ ಭಯಾನಕ ವನ್ಯಜೀವಿಗಳ ನಡುವೆ ಚಿತ್ರೀಕರಣ ಮಾಡಿದ್ದು, ಹುಲಿ, ಸಿಂಹಗಳು ತಾವಿದ್ದ ವಾಹನದ ಬಳಿಗೆ ಬಂದಾಗ ಭಯಗೊಂಡ ಸನ್ನಿವೇಶಗಳನ್ನು ಹಾಸ್ಯಮಯವಾಗಿ ಮೆಲುಕು ಹಾಕಿದರು. ಜೊತೆಗೆ ನಟಿ ರೀಷ್ಮಾ ನಾಣಯ್ಯ ರಚಿಸಿದ ಕವಿತೆಯನ್ನು ವಾಚಿಸಿ ಸಭಿಕರನ್ನು ನಗೆಗಡಲಿನಲ್ಲಿ ತೇಲಿಸಿದರು.

ಪ್ರೀತಂ ಗುಬ್ಬಿ ನಿರ್ದೇಶನದಲ್ಲಿ ಗಣೇಶ್, ರುಕ್ಮಿಣಿ ವಸಂತ್, ರೀಷ್ಮಾ ನಾಣಯ್ಯ ಮುಖ್ಯಭೂಮಿಕೆಯಲ್ಲಿರುವ ‘ಬಾನದಾರಿಯಲ್ಲಿ’ ಸೆ.28ರಂದು ತೆರೆಗೆ ಬರುತ್ತಿದೆ. ಶ್ರೀವಾರಿ ಸಂಸ್ಥೆ ನಿರ್ಮಾಣದ ಚಿತ್ರಕ್ಕೆ ಅರ್ಜುನ್ ಜನ್ಯ ಸಂಗೀತ, ಅಭಿಲಾಶ್ ಛಾಯಾಚಿತ್ರಗ್ರಹಣವಿದೆ. ಇದೊಂದು ಪ್ರೇಯಸಿ ಕಳೆದುಕೊಂಡವನ ಕಥೆ ಎಂಬುದನ್ನು ಟ್ರೇಲರ್ ಹೇಳುತ್ತಿದೆ.

‘ಪ್ರೀತಂ ಯಾವಾಗಲೂ ಪ್ರೇಮಕಥೆಗಳನ್ನೇ ಹೇಳುತ್ತಾನೆ. ನಾನು ಮತ್ತು ಪ್ರೀತಂ ಕ್ಲಾಸ್‌ಮೇಟ್ಸ್. ಜೊತೆಗೆ ಒಟ್ಟಿಗೆ ಸಿನಿಮಾ ಪಯಣ ಆರಂಭಿಸಿ ಕಷ್ಟ-ಸುಖಗಳನ್ನು ಒಟ್ಟಿಗೆ ಕಂಡವರು. ಕಥೆಯ ಶೀರ್ಷಿಕೆಗೆ ತಲೆಕೆಡಿಸಿಕೊಂಡು ಕುಳಿತಿದ್ದೆವು. ಆಗ ನೆನಪಿಗೆ ಬಂದಿದ್ದು ಅಪ್ಪು ಹಾಡಿನ ಸಾಲು. ‘ಮಿಕ್ಸ್’ ಮಾಡುವುದರಲ್ಲಿ ಪ್ರೀತಂ ಪರಿಣತ. ಹಾಗಾಗಿ ಭಾವನೆ ಮತ್ತು ಮಾಸ್ ಅಂಶಗಳನ್ನು ಸಿನಿಮಾದಲ್ಲಿ ಚೆನ್ನಾಗಿ ಮಿಕ್ಸ್ ಮಾಡಿದ್ದಾನೆ. 36 ದಿನಗಳ ಕಾಲ ಕೀನ್ಯಾದಲ್ಲಿನ ಚಿತ್ರೀಕರಣ ಅನುಭವ ಭಿನ್ನವಾಗಿತ್ತು. ದಟ್ಟ ಅರಣ್ಯದಲ್ಲಿ ವನ್ಯಜೀವಿಗಳ ನಡುವೆ ಚಿತ್ರೀಕರಣ ಮಾಡುವಾಗ ಜೀವವೇ ಬಾಯಿಗೆ ಬಂದಂತಾಗುತ್ತಿತ್ತು. ಆದರೆ ರಂಗಾಯಣ ರಘು, ರೀಷ್ಮಾ ಅವರ ಆಫ್‌ಸ್ಕ್ರೀನ್ ಹಾಸ್ಯದ ಸನ್ನಿವೇಶಗಳು ನಮ್ಮನ್ನು ತುಸು ನಿರಾಳವಾಗಿಸುತ್ತಿತ್ತು’ ಎಂದರು ಗಣೇಶ್.

ರೀಷ್ಮಾ ಕವಿತೆಯಲ್ಲಿ ರಂಗಾಯಣ ರಘು ಒಂದು ಸಾಲನ್ನು ಬಿಟ್ಟಿದ್ದಾರೆ ಎಂದ ಗಣೇಶ್, ‘ಜಾಲಿ ಮರ ಹಾಕಿದ್ರೆ ಏನು ಕೊಡ್ತದೆ?’ ಎಂಬ ಸಾಲನ್ನು ಸೇರಿಸಿ ಎಲ್ಲರನ್ನೂ ನಗಿಸಿದರು.

ಬಂಡೀಪುರ: ಬಾಚಹಳ್ಳಿಯಲ್ಲಿ ಅಕ್ರಮವಾಗಿ ನಿರ್ಮಿಸಲಾಗಿರುವ ಕಾಟೇಜ್‌ಗಳು

ಕಟ್ಟಡ ತೆರವು: ಕ್ರಮಕ್ಕೆ ಸೂಚಿಸಿ ಪತ್ರ

• ಸೂರ್ಯನಾರಾಯಣ ವಿ.


ಗುಂಡ್ಲುಪೇಟೆ ತಾಲ್ಲೂಕಿನ ಬಾಚಹಳ್ಳಿಯಲ್ಲಿ ರೆಸಾರ್ಟ್ ಕಟ್ಟಡಗಳು ಇರುವ ಪ್ರದೇಶ

ಚಾಮರಾಜನಗರ: ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಸೂಕ್ಷ್ಮ ವಲಯದ (ಇಎಸ್‌ಝಡ್) ವ್ಯಾಪ್ತಿಗೆ ಬರುವ ಬಾಚಹಳ್ಳಿಯಲ್ಲಿರುವ ಅಶ್ವಿನಿ ಆಯುರ್ವೇದಿಕ್ ಜಂಗಲ್ ರೆಸಾರ್ಟ್‌ನ ಕಟ್ಟಡಗಳನ್ನು ತೆರವುಗೊಳಿಸಿ, ಮಾಲೀಕರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ಅರಣ್ಯ ಇಲಾಖೆಯ ಜಾಗೃತ ಘಟಕದ ಪಿಸಿಸಿಎಫ್ ವಿಜಯ್ ರಂಜನ್ ಅವರು ಇಎಸ್‌ಝಡ್‌ನ ಮೇಲ್ವಿಚಾರಣಾ ಸಮಿತಿ ಅಧ್ಯಕ್ಷ ಹಾಗೂ ಮೈಸೂರು ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದಿದ್ದಾರೆ.

ಆಶಾ ಬಬಲಾನಿ ಎಂಬವರ ಮಾಲೀಕತ್ವದ ಈ ರೆಸಾರ್ಟ್ ಈಗ ಕಾರ್ಯಾಚರಿಸುತ್ತಿಲ್ಲ. ಆದರೆ, ಕಟ್ಟಡಗಳು ಈಗಲೂ ಇವೆ. ವಾಸದ ಉದ್ದೇಶಕ್ಕೆ ಅವುಗಳನ್ನು ಬಳಸಲು ಅನುಮತಿ ನೀಡುವಂತೆ ಆಶಾ ಅವರು 2019ರಲ್ಲಿ ಮೇಲ್ವಿಚಾರಣಾ ಸಮಿತಿಗೆ ಮನವಿ ಸಲ್ಲಿಸಿದ್ದರು. ಸಮಿತಿ ಅನುಮತಿ ನೀಡಿತ್ತು. ಇದನ್ನು ಪ್ರಶ್ನಿಸಿ ಬೆಳಗಾವಿಯ ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ಅವರು ಅರಣ್ಯ ಇಲಾಖೆ, ರಾಷ್ಟ್ರೀಯ ಹುಲಿ ಸಂರಕ್ಷಿತ ಪ್ರಾಧಿಕಾರಕ್ಕೆ ಈ ವರ್ಷದ ಮಾರ್ಚ್ 27ರಂದು ಪತ್ರ ಬರೆದಿದ್ದರು.

ಅವರ ಪತ್ರದ ಆಧಾರದಲ್ಲಿ ಅರಣ್ಯ ಇಲಾಖೆಯ ಜಾಗೃತ ಘಟಕವು ಮೈಸೂರಿನ ಜಾಗೃತ ವಿಭಾಗದ ಡಿಸಿಎಫ್ ಅವರಿಗೆ ತನಿಖೆ ನಡೆಸಲು ಸೂಚಿಸಿತ್ತು. ತನಿಖಾ ವರದಿಯನ್ನು ಜುಲೈ 7ರಂದು ಡಿಸಿಎಫ್ ಸಲ್ಲಿಸಿದ್ದರು. ಆಶಾ ಅವರು ಇಎಸ್‌ಝಡ್ ನಿಯಮಗಳನ್ನು ಉಲ್ಲಂಘಿಸಿದ್ದು, ಕಟ್ಟಡಗಳನ್ನು ತೆರವುಗೊಳಿಸಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ವರದಿಯಲ್ಲಿ ಅವರು ಹೇಳಿದ್ದರು.

‘ಪ್ರಾಣಿಗಳ ಓಡಾಟಕ್ಕೆ ತೊಂದರೆ’

‘ರೆಸಾರ್ಟ್‌ಗಳ ಕಾರ್ಯಾಚರಣೆ ಸ್ಥಗಿತಗೊಂಡಿದೆ. ಆದರೆ, ಕಟ್ಟಡ ಇನ್ನೂ ಇರುವುದರಿಂದ ಪ್ರಾಣಿಗಳ ಓಡಾಟಕ್ಕೆ ತೊಂದರೆಯಾಗುತ್ತದೆ. ಈ ಪ್ರದೇಶವು ಆನೆ ಮತ್ತು ಹುಲಿ ಕಾರಿಡಾರ್ ಆಗಿದ್ದು, ಅತ್ಯಂತ ಮಹತ್ವದ್ದಾಗಿದೆ. ಇಂತಹ ಪ್ರದೇಶದಲ್ಲಿರುವ ಕಟ್ಟಡ ತೆರವುಗೊಳಿಸದಿದ್ದರೆ ವನ್ಯಜೀವಿ ಸಂರಕ್ಷಣೆಗೆ ಯಾವ ಅರ್ಥವೂ ಇರುವುದಿಲ್ಲ’ ಎಂದು ದೂರುದಾರ, ವನ್ಯಜೀವಿ ಸಂರಕ್ಷಣಾವಾದಿ ಗಿರಿಧರ ಕುಲಕರ್ಣಿ ‘ಪ್ರಜಾವಾಣಿ’ಗೆ ತಿಳಿಸಿದರು.

ಈ ವರದಿಯ ಅನ್ವಯ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ವಿಜಯ್ ರಂಜನ್ ಆ.5ರಂದು ಮೈಸೂರಿನ ಪ್ರಾದೇಶಿಕ ಆಯುಕ್ತರಿಗೆ ಪತ್ರ ಬರೆದು ಕಟ್ಟಡ ತೆರವಿಗೆ ಮತ್ತು ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಮತ್ತು ಈ ಸಂಬಂಧ ವರದಿ ನೀಡುವಂತೆ ತಿಳಿಸಿದ್ದಾರೆ.

33 ಕಾಟೇಜು: ಆಶಾ ಬಬಲಾನಿ ಅವರು ಬಾಚಹಳ್ಳಿಯ ಸರ್ವೆ ನಂಬರ್ 497/1ರಲ್ಲಿ 3 ಎಕರೆ 32 ಗುಂಟೆ ಜಮೀನನ್ನು ವಸತಿ ಉದ್ದೇಶಕ್ಕೆ 2009ರ ಸೆ.17ರಂದು ಭೂ ಪರಿವರ್ತನೆ ಮಾಡಿಸಿಕೊಂಡು ಅಲ್ಲಿ ಆಯುರ್ವೇದ ರೆಸಾರ್ಟ್ ನಿರ್ಮಿಸಿದ್ದರು. 33 ಕಾಟೇಜುಗಳನ್ನು ನಿರ್ಮಿಸಲಾಗಿತ್ತು.

ಪರಿಸರ ಸೂಕ್ಷ್ಮ ವಲಯದ ಅಧಿಸೂಚನೆ ಪ್ರಕಾರ, ಈ ವಲಯದಲ್ಲಿ ಯಾವುದೇ ವಾಣಿಜ್ಯ ಚಟುವಟಿಕೆಗಳನ್ನು ನಡೆಸುವಂತಿಲ್ಲ.

ರೆಸಾರ್ಟ್ ನಡೆಸುತ್ತಿರುವುದರ ವಿರುದ್ಧ ಬಂಡೀಪುರ ಹುಲಿ ಯೋಜನೆ ನಿರ್ದೇಶಕರು ಬರೆದ ಪತ್ರದ ಅನುಸಾರ ಚಾಮರಾಜನಗರ ಜಿಲ್ಲಾಧಿಕಾರಿ 2011ರ ಆಗಸ್ಟ್ 26ರಂದು ಭೂಪರಿವರ್ತನೆ ಆದೇಶ ರದ್ದುಗೊಳಿಸಿದ್ದರು. 2012ರ ಏ.21ರಂದು ಗುಂಡ್ಲುಪೇಟೆ ತಹಶೀಲ್ದಾರ್ ಕಟ್ಟಡ ತೆರವಿಗೆ ನೋಟಿಸ್ ನೀಡಿದ್ದರು. ಇದನ್ನು ಆಶಾ ಅವರು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಕ್ರಮ ಕೈಗೊಳ್ಳುವುದಕ್ಕೂ ಮೊದಲು ಅರ್ಜಿದಾರರಿಗೆ ನ್ಯಾಯಸಮ್ಮತ ಅವಕಾಶ ನೀಡುವಂತೆ ಹೈಕೋರ್ಟ್ ಸೂಚಿಸಿತ್ತು. ಆ ಬಳಿಕ



ಅರಣ್ಯ ಇಲಾಖೆಯ ತನಿಖಾ ತಂಡದ ಮುಂದೆ ನಾನೂ ವಿಚಾರಣೆಗೆ ಹಾಜರಾಗಿದ್ದೇನೆ. ನಿಯಮದಂತೆ ಎಲ್ಲ ಕಟ್ಟಡಗಳನ್ನೂ ಅಧಿಕಾರಿಗಳು ತೆರವುಗೊಳಿಸಬೇಕು **ಗಿರಿಧರ ಕುಲಕರ್ಣಿ,** ದೂರುದಾರ

ಆಶಾ ಅವರು ವಾಸದ ಉದ್ದೇಶಕ್ಕೆ ಕಟ್ಟಡ ಬಳಸಲು ಅವಕಾಶ ನೀಡುವಂತೆ ಪರಿಸರ ಸೂಕ್ಷ್ಮ ವಲಯ ಮೇಲ್ವಿಚಾರಣಾ ಸಮಿತಿಗೆ ಮನವಿ ಮಾಡಿದ್ದರು.

ಚಾಮರಾಜನಗರ ಜಿಲ್ಲಾಧಿಕಾರಿಯು, ಈ ಹಿಂದೆ ಭೂಪರಿವರ್ತನೆ ಆದೇಶ ರದ್ದುಗೊಳಿಸಿ ಹೊರಡಿಸಿದ್ದ ಆದೇಶವನ್ನು 2021ರ ಜುಲೈ 16ರಂದು ವಾಪಸ್ ಪಡೆದಿದ್ದರು. ಇದೇ ಸಮಯದಲ್ಲಿ ಇಎಸ್‌ಝಡ್ ಮೇಲ್ವಿಚಾರಣಾ ಸಮಿತಿಯು ಆಶಾ ಅವರಿಗೆ ವಾಸದ ಉದ್ದೇಶಕ್ಕೆ ಕಟ್ಟಡಗಳನ್ನು ಬಳಸಲು ಅನುಮತಿ ನೀಡಿತ್ತು.

‘ಅನುಮತಿ ನೀಡುವ ಮೂಲಕ ಪರಿಸರ ಸೂಕ್ಷ್ಮ ವಲಯ ಮೇಲ್ವಿಚಾರಣಾ ಸಮಿತಿಯು 1986ರ ಪರಿಸರ (ಸಂರಕ್ಷಣಾ) ಕಾಯ್ದೆ, 1972ರ ವನ್ಯಜೀವಿ ಕಾಯ್ದೆಯ ಬಫರ್ ವಲಯದ ನಿಯಮಗಳನ್ನು ಉಲ್ಲಂಘಿಸಿದೆ’ ಎಂದು ಗಿರಿಧರ ಕುಲಕರ್ಣಿ ದೂರಿದ್ದರು.

ಪ್ರತಿಕ್ರಿಯೆಗೆ ಪ್ರಾದೇಶಿಕ ಆಯುಕ್ತ ಜಿ.ಸಿ.ಪ್ರಕಾಶ್ ಲಭ್ಯವಾಗಲಿಲ್ಲ.

ಹೆಬ್ಬಾರ್ ಕಾಂಗ್ರೆಸ್ ಅಭ್ಯರ್ಥಿ?

ಲೋಕಸಭೆ ಚುನಾವಣೆಯಲ್ಲಿ ಕಣಕ್ಕಿಳಿಸಲು ಚಿಂತನೆ

• ಗಣಪತಿ ಹೆಗಡೆ


ಶಿವರಾಮ ಹೆಬ್ಬಾರ್

ಕಾರವಾರ: ಯಲ್ಲಾಪುರದ ಶಾಸಕ ಶಿವರಾಮ ಹೆಬ್ಬಾರ್ ಅವರು ಬಿಜೆಪಿಯಲ್ಲೇ ಉಳಿಯುವರೇ ಅಥವಾ ಕಾಂಗ್ರೆಸ್‌ಗೆ ಮರಳುವರೇ ಎಂಬುದು ಇನ್ನೂ ನಿಗೂಢವಾಗಿದೆ. ಆದರೆ, ರಾಜಕೀಯ ವಲಯದಲ್ಲಿ ಅವರ ಮುಂದಿನ ನಡೆ, ಸಾಧಕ–ಬಾಧಕಗಳ ಕುರಿತು ವ್ಯಾಪಕ ಚರ್ಚೆ ನಡೆದಿದೆ.

2019ರ ಜುಲೈ ತಿಂಗಳಲ್ಲಿ ಅಂದಿನ ಕಾಂಗ್ರೆಸ್–ಜೆಡಿಎಸ್ ಸಮ್ಮಿಶ್ರ ಪತನಕ್ಕೆ ಕಾರಣರಾದವರಲ್ಲಿ ಮುಂಚೂಣಿಯಲ್ಲಿದ್ದ ಅವರು ಈಗ ಇಡುವ ಮುಂದಿನ ಹೆಜ್ಜೆ ಜಿಲ್ಲೆಯ ರಾಜಕೀಯ ಚಿತ್ರಣ ಬದಲಿಸುವ ಸಾಧ್ಯತೆ ಹೆಚ್ಚಿದೆ ಎಂದು ರಾಜಕೀಯ ನಾಯಕರು ಅಭಿಪ್ರಾಯಪಡುತ್ತಾರೆ.

ಈ ಎಲ್ಲಾ ಬೆಳವಣಿಗೆಗಳಿಗೆ ಪೂರಕವಾಗಿ ಹೆಬ್ಬಾರ್ ಅವರು ಬೇರೆ ಬೇರೆ ಸಂದರ್ಭಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿಯಾಗಿದ್ದಾರೆ.

> **ಪಕ್ಷಾಂತರದ ವಿಷಯಕ್ಕೆ ಸಂಬಂಧಿಸಿದಂತೆ ನನಗೆ ಪ್ರತಿಕ್ರಿಯೆ ನೀಡಿ ಸಾಕಾಗಿದೆ. ಯಾವುದೇ ಕಾರಣಕ್ಕೂ ನಾನು ಬಿಜೆಪಿ ತೊರೆಯುವುದಿಲ್ಲ**
> **ಶಿವರಾಮ ಹೆಬ್ಬಾರ್,** ಶಾಸಕ, ಯಲ್ಲಾಪುರ

‘ಲೋಕಸಭೆ ಚುನಾವಣೆಗೆ ಉತ್ತರ ಕನ್ನಡ ಕ್ಷೇತ್ರದಿಂದ ಸ್ಪರ್ಧಿಸಲು ಕಾಂಗ್ರೆಸ್‌ನಲ್ಲಿ ಹಲವರು ಆಕಾಂಕ್ಷಿಗಳಿದ್ದರೂ ಪಕ್ಷ ಸಮರ್ಥ ಅಭ್ಯರ್ಥಿಯ ಹುಡುಕಾಟದಲ್ಲಿದೆ. ಜಿಲ್ಲೆಯ ರಾಜಕಾರಣದಲ್ಲಿ ಪ್ರಭಾವ ಹೊಂದಿರುವ ಹೆಬ್ಬಾರ್ ಸೂಕ್ತ ಎಂಬ ಕಾರಣಕ್ಕೆ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡು, ಕಣಕ್ಕಿಳಿಸಲು ಪಕ್ಷದ ಕೆಲ ಪ್ರಭಾವಿಗಳು ಆಸಕ್ತಿ ಹೊಂದಿದ್ದಾರೆ. ಕೆಲವರ ವಿರೋಧವೂ ಇದೆ’ ಎಂದು ಕಾಂಗ್ರೆಸ್ ಮುಖಂಡರೊಬ್ಬರು ತಿಳಿಸಿದರು.


‘2013ರಿಂದ ತಲಾ ಎರಡು ಬಾರಿ ಕಾಂಗ್ರೆಸ್ ಮತ್ತು ಬಿಜೆಪಿಯಿಂದ ಶಾಸಕರಾದ ಅವರು ಉತ್ತರ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ಎರಡೂ ಪಕ್ಷಗಳಲ್ಲೂ ಆಪ್ತರನ್ನು ಹೊಂದಿರುವ ಅವರು ಜಿಲ್ಲೆಯ ರಾಜಕಾರಣದಲ್ಲಿ ಹಿಡಿತ ಹೊಂದಿದ್ದಾರೆ. 1999ರ ಬಳಿಕ ಉತ್ತರ ಕನ್ನಡ ಲೋಕಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆಲುವು ಸಾಧಿಸಿಲ್ಲ. ಈ ಬಾರಿ ಗೆಲ್ಲಲೇಬೇಕೆಂದು ನಾಯಕರು ಪಣತೊಟ್ಟಿದ್ದಾರೆ’ ಎಂದರು.

‘ಶಿವರಾಮ ಹೆಬ್ಬಾರ್ ಅವರನ್ನು ಸೇರ್ಪಡೆ ಮಾಡಿಕೊಳ್ಳುವ ಕುರಿತು ಪಕ್ಷದ ಹೈಕಮಾಂಡ್ ನಿರ್ಧರಿಸಲಿದೆ. ನಮ್ಮ ಹಂತದಲ್ಲಿ ಯಾವುದೇ ಚರ್ಚೆ, ಅಭಿಪ್ರಾಯ ಸಂಗ್ರಹ ನಡೆದಿಲ್ಲ’ ಎಂದು ಕಾಂಗ್ರೆಸ್ ಜಿಲ್ಲಾ ಘಟಕದ ಅಧ್ಯಕ್ಷ ಸಾಯಿ ಗಾಂವಕರ್ ತಿಳಿಸಿದರು.

‘ಪಕ್ಷದ ಸಭೆಗಳಲ್ಲಿ ಶಿವರಾಮ ಹೆಬ್ಬಾರ್ ಪಾಲ್ಗೊಳ್ಳುತ್ತಿದ್ದಾರೆ. ಅವರು ನೀಡಿದ್ದ ದೂರು ಆಧರಿಸಿ ಪಕ್ಷ ವಿರೋಧಿ ಚಟುವಟಿಕೆ ಕೈಗೊಂಡವರ ಮೇಲೆ ಕ್ರಮವಾಗಿದೆ. ಅವರು ಪಕ್ಷದಲ್ಲಿ ಮುಂದುವರಿಯುವರು ಎಂಬ ವಿಶ್ವಾಸವಿದೆ’ ಎಂದು ಬಿಜೆಪಿ ಜಿಲ್ಲಾ ಘಟಕದ ಅಧ್ಯಕ್ಷ ವೆಂಕಟೇಶ ನಾಯಕ ಹೇಳಿದರು.

ಕಾಂಗ್ರೆಸ್‌ನತ್ತ ಸುಕುಮಾರ ಶೆಟ್ಟಿ

ಪ್ರಜಾವಾಣಿ ವಾರ್ತೆ


ಸುಕುಮಾರ ಶೆಟ್ಟಿ

ಬೈಂದೂರು (ಉಡುಪಿ): ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೈತಪ್ಪಿದ್ದರಿಂದ ಅಸಮಾಧಾನಗೊಂಡಿರುವ ಬೈಂದೂರು ಮಾಜಿ ಶಾಸಕ ಬಿ.ಎಂ. ಸುಕುಮಾರ ಶೆಟ್ಟಿ, ಬಿಜೆಪಿ ತೊರೆದು ಕಾಂಗ್ರೆಸ್ ಸೇರುವುದಾಗಿ ತಿಳಿಸಿದ್ದಾರೆ.

ಕಾಂಗ್ರೆಸ್ ಮುಖಂಡ ಕೆ.ಗೋಪಾಲ ಪೂಜಾರಿ ಹಾಗೂ ಶೃಂಗೇರಿ ಶಾಸಕ ಡಿ. ರಾಜೇಗೌಡ ಅವರ ಜತೆ ಬೆಂಗಳೂರಿನಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿ ಚರ್ಚಿಸಿದ್ದಾರೆ.

‘ಮುಂದೆ ಬಿಜೆಪಿಗೆ ಭವಿಷ್ಯವಿಲ್ಲ, ಕರಾವಳಿಯಲ್ಲಿ ಬಿಜೆಪಿ ಪರವಾದ ಅಲೆ ಇದ್ದರೂ ಕರ್ನಾಟಕದ ಬೇರೆ ಭಾಗಗಳಲ್ಲಿ ಬಿಜೆಪಿ ನೆಲೆ ಕಳೆದುಕೊಂಡಿದೆ. ವಿರೋಧ ಪಕ್ಷದ ನಾಯಕನನ್ನು ಆಯ್ಕೆಮಾಡಲಾಗದ ಬಿಜೆಪಿಗೆ ಏನೂ ಮಾಡಲು ಸಾಧ್ಯವಿಲ್ಲ’ ಎಂದು ಸುಕುಮಾರ ಶೆಟ್ಟಿ ಟೀಕಿಸಿದ್ದಾರೆ.

ಈಚೆಗೆ ವಿಧಾನ ಪರಿಷತ್ ಸದಸ್ಯ ಜಗದೀಶ ಶೆಟ್ಟರ್ ಕೊಲ್ಲೂರಿಗೆ ಭೇಟಿನೀಡಿದ್ದಾಗ ಅವರೊಂದಿಗೆ ಸುಕುಮಾರ ಶೆಟ್ಟಿ ಮಾತುಕತೆ ನಡೆಸಿದ್ದರು. ಅಂತಿಮವಾಗಿ ಈಗ ಬಿಜೆಪಿ ತೊರೆಯುವ ನಿರ್ಧಾರ ತೆಗೆದುಕೊಂಡಿದ್ದಾರೆ.

‘ಬಿಜೆಪಿಯ 20 ಶಾಸಕರು ಕಾಂಗ್ರೆಸ್‌ಗೆ’


ರಾಜು ಕಾಗೆ

ಕಾಗವಾಡ (ಬೆಳಗಾವಿ ಜಿಲ್ಲೆ): ‘ಬಿಜೆಪಿಯ 20 ಶಾಸಕರು ಕಾಂಗ್ರೆಸ್‌ಗೆ ಬರುವರು. ಅವರನ್ನು ಕರೆದುಕೊಂಡು ನಾವು ಲೋಕಸಭಾ ಚುನಾವಣೆ ಎದುರಿಸುತ್ತೇವೆ’ ಎಂದು ಕಾಗವಾಡ ಶಾಸಕ ರಾಜು ಕಾಗೆ ಹೇಳಿದ್ದಾರೆ.

ತಾಲ್ಲೂಕಿನ ಉಗಾರ ಪಟ್ಟಣದಲ್ಲಿ ಬುಧವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಕಾಂಗ್ರೆಸನಲ್ಲಿ ಒಳ ಜಗಳವಿಲ್ಲ. ಇದು ಮಾಧ್ಯಮಗಳ ಸೃಷ್ಟಿ. 135 ಶಾಸಕರೂ ಒಟ್ಟಾಗಿದ್ದೇವೆ. ರಾಜ್ಯದಲ್ಲಿ ಒಳ್ಳೆಯ ಆಡಳಿತ ನಡೆಸುತ್ತಿದ್ದೇವೆ. ಮುಂದಿನ 15ರಿಂದ 20 ವರ್ಷ ರಾಜ್ಯದಲ್ಲಿ ಕಾಂಗ್ರೆಸ್ ಆಡಳಿತ ನಡೆಸಲಿದೆ’ ಎಂದರು.

ಕಾಂಗ್ರೆಸ್‌ನಲ್ಲಿ ಅತೃಪ್ತ ಶಾಸಕರಿದ್ದಾರೆ ಎಂಬ ಶಾಸಕ ರಮೇಶ ಜಾರಕಿಹೊಳಿ ಹೇಳಿಕೆ ಕುರಿತು ಪ್ರತಿಕ್ರಿಯಿಸಿದ ಅವರು, ‘ರಮೇಶ ಜಾರಕಿಹೊಳಿ ಅವರಿಗೆ ಮಾಡುವುದಕ್ಕೆ ಯಾವುದೇ ಕೆಲಸವಿಲ್ಲ. ಅದಕ್ಕಾಗಿ ನಮ್ಮ ಪಕ್ಷದಲ್ಲಿ ಅತೃಪ್ತ ಶಾಸಕರಿದ್ದಾರೆ ಎನ್ನುವ ಸುದ್ದಿ ಹಬ್ಬಿಸುತ್ತಿದ್ದಾರೆ’ ಎಂದರು.

ಶಾಂತ್ ತಿಮ್ಮಯ್ಯ ಅಧಿಕಾರವಧಿ ಮೊಟಕು ಆದೇಶಕ್ಕೆ ತಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷ ಶಾಂತ್ ಎ. ತಿಮ್ಮಯ್ಯ ಅವರ ಅಧಿಕಾರಾವಧಿಯನ್ನು ಮೊಟಕುಗೊಳಿಸಿ ತಿದ್ದುಪಡಿ ಮಾಡಲಾಗಿರುವ ರಾಜ್ಯ ಸರ್ಕಾರದ ಆದೇಶಕ್ಕೆ ಮುಂದಿನ ವಿಚಾರಣೆವರೆಗೂ ಹೈಕೋರ್ಟ್ ತಡೆ ನೀಡಿದೆ.

ಕೆಎಸ್‌ಪಿಸಿಬಿ ಅಧ್ಯಕ್ಷರ ಅಧಿಕಾರಾವಧಿ ಮೊಟಕುಗೊಳಿಸಿ ರಾಜ್ಯ ಸರ್ಕಾರ 2023ರ ಆಗಸ್ಟ್ 31ರಂದು ಹೊರಡಿಸಿದ್ದ ಆದೇಶವನ್ನು ಪ್ರಶ್ನಿಸಿ ಶಾಂತ್ ಎ. ತಿಮ್ಮಯ್ಯ ಹಾಗೂ ಮತ್ತಿತರರು ಸಲ್ಲಿಸಿರುವ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಅರ್ಜಿದಾರರು ಮುಂದಿನ ವಿಚಾರಣೆಯವರೆಗೆ ಅಧ್ಯಕ್ಷರಾಗಿ ಕರ್ತವ್ಯ ನಿರ್ವಹಿಸಬಹುದು. ಮುಂದಿನ ಆದೇಶದವರೆಗೆ ಯಾವುದೇ ನೀತಿ ನಿರೂಪಣೆಯ ನಿರ್ಧಾರ ಕೈಗೊಳ್ಳುವಂತಿಲ್ಲ. ತುರ್ತಾಗಿ ಯಾವುದೇ ನೀತಿಯ ಭಾಗವಾಗಿ ನಿರ್ಧಾರ ಕೈಗೊಳ್ಳಬೇಕಾದರೆ ಪಕ್ಷಕಾರರು ನ್ಯಾಯಾಲಯವನ್ನು ಸಂಪರ್ಕಿಸಬಹುದು’ ಎಂದು ನ್ಯಾಯಪೀಠ ಆದೇಶಿಸಿದೆ.

‘ತಿದ್ದುಪಡಿಗೆ ತಡೆನೀಡಿರುವುದನ್ನೇ, ಅರ್ಜಿದಾರರ ನೇಮಕಾತಿಗೆ ನ್ಯಾಯಾಲಯ ಸಮ್ಮತಿಸಿದೆ ಎಂದು ಭಾವಿಸಬಾರದು’ ಎಂದೂ ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದ್ದು, ವಿಚಾರಣೆಯನ್ನು ಅಕ್ಟೋಬರ್ 6ಕ್ಕೆ ಮುಂದೂಡಿದೆ.

ಈ ಹಿಂದಿನ ವಿಚಾರಣೆಯಲ್ಲಿ 2023ರ ಆಗಸ್ಟ್ 31ರಂದು ತಿದ್ದುಪಡಿ ಆದೇಶವನ್ನು ಅಮಾನತಿನಲ್ಲಿಡುವಂತೆ ಹಾಗೂ ಮುಂದಿನ ವಿಚಾರಣೆಯವರೆಗೆ ಜಾರಿಗೊಳಿಸದಂತೆ ರಾಜ್ಯ ಸರ್ಕಾರಕ್ಕೆ ಆದೇಶಿಸಲಾಗಿತ್ತು.

200 ವಿದ್ಯಾರ್ಥಿ ನಿಲಯ ಶೀಘ್ರ ಹಸ್ತಾಂತರ

ಪ್ರಜಾವಾಣಿ ವಾರ್ತೆ


ಎಂ.ಸಿ.ಸುಧಾಕರ್

ಚಿಂತಾಮಣಿ (ಚಿಕ್ಕಬಳ್ಳಾಪುರ): ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿರುವ 200 ವಿದ್ಯಾರ್ಥಿ ನಿಲಯಗಳನ್ನು ಸಮಾಜ ಕಲ್ಯಾಣ ಇಲಾಖೆ, ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಸುಪರ್ದಿಗೆ ಒಪ್ಪಿಸಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದ್ದಾರೆ.

ಪಟ್ಟಣದಲ್ಲಿ ಗುರುವಾರ ಆಯೋಜಿಸಲಾಗಿದ್ದ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ವಿದ್ಯಾರ್ಥಿ ನಿಲಯಗಳ ಹಸ್ತಾಂತರ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಜತೆ ಚರ್ಚಿಸಲಾಗಿದೆ. ಅವರು ಒಪ್ಪಿಗೆ ಸೂಚಿಸಿದ್ದಾರೆ. ಶೀಘ್ರ ಹಸ್ತಾಂತರ ಅಧಿಕೃತ ಆದೇಶ ಹೊರಬೀಳಲಿದೆ ಎಂದು ಅವರು ಹೇಳಿದರು.

ಸಮಾಜ ಕಲ್ಯಾಣ ಇಲಾಖೆ ಮತ್ತು ಹಿಂದುಳಿದ ವರ್ಗಗಳ ಇಲಾಖೆ ವ್ಯಾಪ್ತಿಗೆ ಒಳಪಟ್ಟಿರುವ ವಿದ್ಯಾರ್ಥಿ ನಿಲಯಗಳಲ್ಲಿ ವಿದ್ಯಾರ್ಥಿಗಳಿಗೆ ಊಟ, ತಿಂಡಿ ಹಾಗೂ ಇತರ ಸೌಲಭ್ಯಗಳು ಉಚಿತವಾಗಿ ದೊರೆಯುತ್ತವೆ. ಆದರೆ, ಉನ್ನತ ಶಿಕ್ಷಣ ಇಲಾಖೆ ವ್ಯಾಪ್ತಿಯಲ್ಲಿರುವ ವಿದ್ಯಾರ್ಥಿ ನಿಲಯಗಳಲ್ಲಿ ಎಲ್ಲ ವೆಚ್ಚಗಳನ್ನೂ ವಿದ್ಯಾರ್ಥಿಗಳೇ ಭರಿಸಬೇಕು. ಇದರಿಂದ ಉನ್ನತ ಶಿಕ್ಷಣ ಇಲಾಖೆಯ ವಿದ್ಯಾರ್ಥಿ ನಿಲಯಗಳಿಗೆ ದಾಖಲಾಗಲು ಬಡ ವಿದ್ಯಾರ್ಥಿಗಳು ಹಿಂಜರಿಯುತ್ತಾರೆ. ಇದೊಂದು ಅವೈಜ್ಞಾನಿಕ ಪದ್ಧತಿ ಎಂದು ಮುಖ್ಯಮಂತ್ರಿಗೆ ಮನವರಿಕೆ ಮಾಡಿಕೊಡಲಾಗಿದೆ ಎಂದರು.

ವಿದ್ಯುತ್ ಸಮಸ್ಯೆ ಸರ್ಕಾರದ ಗ್ಯಾರಂಟಿ ಯೋಜನೆ ‘ಗೃಹಜ್ಯೋತಿ’ಯಿಂದ ಎದುರಾಗಿರುವ ಸಮಸ್ಯೆ ಅಲ್ಲ. ರಾಜ್ಯದಲ್ಲಿ ಮಳೆಯ ಕೊರತೆಯಿಂದ ವಿದ್ಯುತ್ ಲೋಡ್ ಶೆಡ್ಡಿಂಗ್ ಅನಿವಾರ್ಯವಾಗಿದೆ. ಉತ್ತಮ ಮಳೆಯಾಗಿದ್ದರೆ ವಿದ್ಯುತ್ ಸಮಸ್ಯೆ ಉದ್ಭವಿಸುತ್ತಿರಲಿಲ್ಲ. ಅಪಪ್ರಚಾರಗಳಿಗೆ ಜನರು ಕಿವಿಕೊಡಬಾರದು ಎಂದು ಮನವಿ ಮಾಡಿದರು.

ಬೇಸಿಗೆಗಿಂತಲೂ ಈಗ ವಿದ್ಯುತ್ ಬೇಡಿಕೆ ಹೆಚ್ಚಿದೆ. ಜಲಾಶಯಗಳಲ್ಲಿ ನೀರು ಕಡಿಮೆಯಾಗುತ್ತಿದ್ದು, ವಿದ್ಯುತ್ ಉತ್ಪಾದನೆಯೂ ಕುಂಠಿತಗೊಂಡಿದೆ. ಎರಡರಿಂದ ಮೂರು ರಾಜ್ಯಗಳನ್ನು ಹೊರತುಪಡಿಸಿ ಇಡೀ ದೇಶದಲ್ಲಿ ವಿದ್ಯುತ್ ಕೊರತೆ ಎದುರಾಗಿದೆ. ವಿದ್ಯುತ್ ಖರೀದಿಸಲೂ ಆಗುತ್ತಿಲ್ಲ. ಹೆಚ್ಚಿನ ವಿದ್ಯುತ್ ಪಡೆಯಲು ಸಾಧ್ಯವಾದ ಎಲ್ಲ ವ್ಯವಸ್ಥೆಗಳನ್ನು ಸರ್ಕಾರ ಮಾಡುತ್ತಿದೆ ಎಂದರು.

‘2 ತಿಂಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸಿ’

ಎಸ್‌ಸಿ, ಎಸ್‌ಟಿ ಮೇಲೆ ದೌರ್ಜನ್ಯ: ನಾಲ್ಕು ಇಲಾಖೆ ಸಮನ್ವಯದಿಂದ ನ್ಯಾಯ ಒದಗಿಸಿ– ಸಿ.ಎಂ ಕಟ್ಟುನಿಟ್ಟಿನ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮೇಲೆ ನಡೆಯುವ ಜಾತಿ ದೌರ್ಜನ್ಯ ಪ್ರಕರಣಗಳಲ್ಲಿ ಎರಡು ತಿಂಗಳ ಒಳಗೆ ದೋಷಾರೋಪಪಟ್ಟಿ ಸಲ್ಲಿಸಲು ಎಸ್‌ಪಿ, ಡಿಸಿಪಿಗಳು ಕಟ್ಟುನಿಟ್ಟಿನ ಸೂಚನೆ ನೀಡಬೇಕು’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶಿಸಿದರು.

ವಿಧಾನಸೌಧದ ಸಮ್ಮೇಳನ ಸಭಾಂಗಣದಲ್ಲಿ ಗುರುವಾರ ನಡೆದ ರಾಜ್ಯಮಟ್ಟದ ಜಾಗೃತ ಮತ್ತು ಉಸ್ತುವಾರಿ ಸಮಿತಿ ಸಭೆಯಲ್ಲಿ ಅವರು ಈ ಆದೇಶ ನೀಡಿದರು.

ಐದು ವರ್ಷಗಳಲ್ಲಿ 53 ಕೊಲೆ ಪ್ರಕರಣಗಳಲ್ಲಿ ದೋಷಾರೋಪ ಪಟ್ಟಿ ಸಲ್ಲಿಸದ ಕುರಿತು ತೀವ್ರ ಆಕ್ಷೇಪ ವ್ಯಕ್ತಪಡಿಸಿದ ಮುಖ್ಯಮಂತ್ರಿ, ಅಂತಹ ಅಧಿಕಾರಿಗಳಿಗೆ ಕಾರಣ ಕೇಳಿ ನೋಟಿಸ್ ನೀಡುವಂತೆ ಸೂಚಿಸಿದರು.

‘ರಾಜ್ಯದಲ್ಲಿ ಪರಿಶಿಷ್ಟರ ಮೇಲಿನ ದೌರ್ಜನ್ಯ ಪ್ರಕರಣಗಳಲ್ಲಿ ಶಿಕ್ಷೆ ಪ್ರಮಾಣ ಶೇ 3.44ರಷ್ಟಿರುವುದು ನಾಚಿಕೆಯ ಸಂಗತಿ. ತಹಶೀಲ್ದಾರರು, ಉಪವಿಭಾಗಾಧಿಕಾರಿಗಳು, ಜಿಲ್ಲಾಧಿಕಾರಿಗಳು, ಪೊಲೀಸ್ ವರಿಷ್ಠಾಧಿಕಾರಿಗಳು ಇದರ ಪ್ರಗತಿ ಪರಿಶೀಲಿಸಬೇಕು. ಪೊಲೀಸ್ ವರಿಷ್ಠಾಧಿಕಾರಿಗಳು ಪ್ರಕರಣಗಳ ಪರಿಶೀಲಿಸಿ ಡಿಜಿಪಿಗೆ ವರದಿ ಸಲ್ಲಿಸಬೇಕು’ ಎಂದು ಹೇಳಿದರು.

‘ಪ್ರಕರಣಗಳನ್ನು ಕಡಿಮೆ ಮಾಡುವ ಜೊತೆಗೆ, ದಾಖಲಾದ ಪ್ರಕರಣಗಳನ್ನು ಸಮರ್ಥವಾಗಿ ನಿರ್ವಹಿಸಲು ಪೊಲೀಸ್ ಇಲಾಖೆ, ಕಾನೂನು ಇಲಾಖೆ, ಸಮಾಜ ಕಲ್ಯಾಣ ಇಲಾಖೆ ಮತ್ತು ಕಂದಾಯ ಇಲಾಖೆ ಅಧಿಕಾರಿಗಳು ಸಮನ್ವಯದಿಂದ ಕೆಲಸ ಮಾಡಬೇಕು’ ಎಂದು ಮುಖ್ಯಮಂತ್ರಿ ಸಲಹೆ ನೀಡಿದರು.

‘ತಾಲ್ಲೂಕು, ಜಿಲ್ಲಾ ಮಟ್ಟದ ಕೆಡಿಪಿ ಸಭೆಗಳಲ್ಲಿ ಈ ವಿಷಯದ ಕುರಿತು ಕಡ್ಡಾಯವಾಗಿ ಪ್ರಗತಿ ಪರಿಶೀಲನೆ ಆಗಬೇಕು. ದೋಷಾರೋಪ ಪಟ್ಟಿ ಸಲ್ಲಿಕೆ ಯಾವುದೇ ಕಾರಣಕ್ಕೂ ವಿಳಂಬ ಆಗಬಾರದು. ಸಾಕ್ಷ್ಯ ವಿಫಲ ಆಗದಂತೆ ಪೊಲೀಸರು ಗಮನ ಕೊಡಬೇಕು. ದೌರ್ಜನ್ಯ ಪ್ರಕರಣಗಳಲ್ಲಿ ರಾಜಕಾರಣಿಗಳು ಮಧ್ಯಪ್ರವೇಶಿಸಬಾರದು. ಪ್ರತಿ ಪ್ರಕರಣ ದಾಖಲಿಸುವಾಗ ಪೊಲೀಸರು ವಿವೇಚನೆ ಬಳಸಬೇಕು’ ಎಂದರು.

‘ವಿಚಾರಣೆ ಬಾಕಿ ಇರುವ ಪ್ರಕರಣಗಳ ಅವಧಿ ಮತ್ತು ಇತರ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಒದಗಿಸಬೇಕು. ಹೆಚ್ಚು ಪ್ರಕರಣಗಳು ಬಾಕಿ ಇರುವಲ್ಲಿ ತ್ವರಿತ ನ್ಯಾಯಾಲಯಗಳನ್ನು ಸ್ಥಾಪಿಸುವ ಬಗ್ಗೆ ಪರಿಶೀಲಿಸಲಾಗುವುದು. ಅನುಕಂಪ ಆಧಾರದ ಉದ್ಯೋಗ ನೀಡುವುದರಲ್ಲಿ 54 ಅರ್ಜಿಗಳು ಇತ್ಯರ್ಥಕ್ಕೆ ಬಾಕಿ ಇವೆ. ಬಹಳಷ್ಟು ಅರ್ಜಿಗಳು ತಿರಸ್ಕೃತಗೊಂಡಿವೆ. ಇದಕ್ಕೆ ಎರಡು ವರ್ಷದೊಳಗೆ ಅರ್ಜಿ ಸಲ್ಲಿಸಬೇಕೆಂಬ ಷರತ್ತಿನ ಬಗ್ಗೆ ಮುಖ್ಯ ಕಾರ್ಯದರ್ಶಿ ಜೊತೆ ಚರ್ಚಿಸಬೇಕು’ ಎಂದು ಮುಖ್ಯಮಂತ್ರಿ ಸೂಚಿಸಿದರು.



ಸಚಿವರಾದ ಆರ್‌.ಬಿ. ತಿಮ್ಮಾಪುರ, ಕೆ.ಎಚ್‌ ಮುನಿಯಪ್ಪ, ಜಿ. ಪರಮೇಶ್ವರ, ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯಮಂತ್ರಿ ಸಿದ್ದರಾಮಯ್ಯ, ಎಚ್‌.ಸಿ. ಮಹದೇವಪ್ಪ, ಕೆ.ಎನ್‌ ರಾಜಣ್ಣ ಸಭೆಯಲ್ಲಿ ಪಾಲ್ಗೊಂಡಿದ್ದರು

ಸುಳ್ಳು ಜಾತಿ ಪ್ರಮಾಣಪತ್ರ ಪ್ರಕರಣಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಸಭೆ ಕರೆಯಲಾಗುವುದು. ಕಾನೂನುಬಾಹಿರವಾಗಿ ನಡೆಯುವ ದೌರ್ಜನ್ಯಗಳನ್ನು ತಡೆಯಲು ಸರ್ಕಾರ ಬದ್ಧವಾಗಿದೆ

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಸಿಆರ್‌ಇ ಕೋಶಕ್ಕೆ ಹೆಚ್ಚಿನ ಬಲ’

ಬಜೆಟ್‌ನಲ್ಲಿ ಘೋಷಿಸಿದಂತೆ ನಾಗರಿಕ ಹಕ್ಕು ಜಾರಿ ನಿರ್ದೇಶನಾಲಯ (ಸಿಆರ್‌ಇ) ಬಲಪಡಿಸುವ ಕುರಿತು ವರದಿ ಸಿದ್ಧಪಡಿಸಲಾಗಿದೆ. ಮುಖ್ಯಮಂತ್ರಿಗೆ ಶೀಘ್ರ ಈ ಕಡತ ಸಲ್ಲಿಸಲಾಗುವುದು’ ಎಂದು ಸಮಾಜ ಕಲ್ಯಾಣ ಸಚಿವ ಎಚ್‌.ಸಿ. ಮಹದೇವಪ್ಪ ತಿಳಿಸಿದರು.

ಸುದ್ದಿ 2 ನಿಮಿಷ

ಸಂಪುಟ ದರ್ಜೆ ಸ್ಥಾನಮಾನ ಪ್ರಶ್ನಿಸಿದ ಪಿಐಎಲ್ ವಜಾ

ಬೆಂಗಳೂರು: ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಗಳಾದ ವಿಧಾನ ಪರಿಷತ್ ಸದಸ್ಯ ನಜೀರ್ ಅಹಮದ್, ಕೆ. ಗೋವಿಂದರಾಜ್, ಮುಖ್ಯಮಂತ್ರಿ ಸಲಹೆಗಾರ ಸುನೀಲ್ ಕನಗೋಲು ಹಾಗೂ ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ನೇಮಕಾತಿ ಹಾಗೂ ಇವರಿಗೆ ಸಂಪುಟ ದರ್ಜೆಯ ಸ್ಥಾನಮಾನ ನೀಡಿರುವ ಕ್ರಮವನ್ನು ಪ್ರಶ್ನಿಸಿದ್ದ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿದೆ.

ವಕೀಲ ಎಸ್.ಉಮಾಪತಿ ಸಲ್ಲಿಸಿದ್ದ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ಮತ್ತು ನ್ಯಾಯಮೂರ್ತಿ ಕೃಷ್ಣ ಎಸ್. ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

‘ಸಚಿವರನ್ನು ಹೊರತುಪಡಿಸಿ ಇತರರಿಗೆ ಕ್ಯಾಬಿನೆಟ್ ದರ್ಜೆ ಸ್ಥಾನಮಾನ ನೀಡಬಾರದು ಎಂದು ಎಲ್ಲಿಯೂ ಹೇಳಿಲ್ಲ. ಪ್ರತಿವಾದಿಗಳಿಗೆ ಸರ್ಕಾರದ ಯಾವುದೇ ಇಲಾಖೆಯ ಜವಾಬ್ದಾರಿ ವಹಿಸಿಲ್ಲ’ ಎಂದು ಅಭಿಪ್ರಾಯಪಟ್ಟ ನ್ಯಾಯಪೀಠ, ಅರ್ಜಿ ವಜಾಗೊಳಿಸಿ ಆದೇಶಿಸಿತು.



ಅಂಜನಾದ್ರಿ ಭೂ ಸ್ವಾಧೀನಕ್ಕೆ ಸಮೀಕ್ಷೆ: ರೈತರ ವಿರೋಧ

ಗಂಗಾವತಿ (ಕೊಪ್ಪಳ ಜಿಲ್ಲೆ): ತಾಲ್ಲೂಕಿನ ಚಿಕ್ಕರಾಂಪುರ ಸಮೀಪದ ಪ್ರಸಿದ್ಧ ಅಂಜನಾದ್ರಿ ಅಭಿವೃದ್ಧಿಗೆ ಭೂಸ್ವಾಧೀನ ಪ್ರಕ್ರಿಯೆಯ ಭಾಗವಾಗಿ ಗುರುವಾರ ರೈತರ ವಿರೋಧದ ನಡುವೆಯೇ ಸರ್ವೆ ಅಧಿಕಾರಿಗಳಿಂದ ಜಂಟಿ ಮಾಪನ ಸಮೀಕ್ಷೆ (ಜೆಎಂಸಿ) ನಡೆಯಿತು.

ಅಂಜನಾದ್ರಿ ಅಭಿವೃದ್ಧಿ ನೆಪದಲ್ಲಿ ರೈತರನ್ನು ಒಕ್ಕಲೆಬ್ಬಿಸಲಾಗುತ್ತಿದ್ದು, ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದು ರೈತರು ವಿರೋಧ ವ್ಯಕ್ತಪಡಿಸಿದರು. ಆದರೂ ಅಧಿಕಾರಿಗಳು ಸಮೀಕ್ಷೆ ನಿಲ್ಲಿಸಲಿಲ್ಲ. ಅಂಜನಾದ್ರಿ ಸಮೀಪದ ಹನುಮನಹಳ್ಳಿ ಗ್ರಾಮದ ಖಾಸಗಿ ಜಮೀನಿನಲ್ಲಿ ಸಮೀಕ್ಷೆ ನಡೆಸಲಾಯಿತು.

‘ಅಂಜನಾದ್ರಿ ಅಭಿವೃದ್ಧಿಗೆ ಭೂಮಿ ನೀಡಲು ವಿರೋಧಿಸಿ ಆರು ಜನ ರೈತರು ಕೋರ್ಟ್ ಮೊರೆ ಹೋಗಿದ್ದಾರೆ. ಆದರೂ ಅಧಿಕಾರಿಗಳು ಸಮೀಕ್ಷೆ ನಡೆಸುತ್ತಿದ್ದಾರೆ’ ಎಂದು ರೈತ ಆರ್. ರಮೇಶಬಾಬು ಆರೋಪಿಸಿದ್ದಾರೆ.

ಸಮೀಕ್ಷೆ ನಡೆಸುವ ಕುರಿತು ಜಿಲ್ಲಾಡಳಿತ ರೈತರಿಗೆ ನೋಟಿಸ್ ನೀಡಿದ್ದರೂ ಯಾರೂ ತೆಗೆದುಕೊಂಡಿಲ್ಲ. ಆದ್ದರಿಂದ ಅಧಿಕಾರಿಗಳು ಅಂಜನಾದ್ರಿ ಸುತ್ತಮುತ್ತಲಿನ ಊರುಗಳಾದ ರಾಂಪುರ, ಮಲ್ಲಾಪುರ ಹಾಗೂ ಚಿಕ್ಕರಾಂಪುರ ಗ್ರಾಮಗಳಲ್ಲಿ ಸಾರ್ವಜನಿಕ ಸ್ಥಳದಲ್ಲಿ ನೋಟಿಸ್ ಅಂಟಿಸಿದ್ದಾರೆ.

ಅಧಿಕಾರಿ ಕಾರು ಡಿಕ್ಕಿ: ಬೈಕ್ ಸವಾರ ಸಾವು



ಬಸವರಾಜಪ್ಪ

ಹೊಳಲ್ಕೆರೆ (ಚಿತ್ರದುರ್ಗ): ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಠಾರಿಯಾ ಅವರ ಕಾರು ಬೈಕ್‌ವೊಂದಕ್ಕೆ ಡಿಕ್ಕಿ ಹೊಡೆದಿದ್ದು, ಕುನುಗಲಿ ಗ್ರಾಮದ ಬಸವರಾಜಪ್ಪ (68) ಮೃತಪಟ್ಟಿದ್ದಾರೆ.

ಬುಧವಾರ ರಾತ್ರಿ ಶಿವಮೊಗ್ಗ ಕಡೆಯಿಂದ ಬೆಂಗಳೂರಿಗೆ ಹೋಗುತ್ತಿದ್ದ ಇನ್ನೋವಾ ಕಾರು ತಾಲ್ಲೂಕಿನ ಮಲ್ಲಾಡಿಹಳ್ಳಿ ಗೇಟ್ ಸಮೀಪ ಬೈಕ್‌ಗೆ ಡಿಕ್ಕಿ ಹೊಡೆದಿದೆ. ತೀವ್ರವಾಗಿ ಗಾಯಗೊಂಡಿದ್ದ ಬಸವರಾಜಪ್ಪ ಅವರನ್ನು ಶಿವಮೊಗ್ಗದ ಆಸ್ಪತ್ರೆಗೆ ಕರೆದೊಯ್ಯುವಾಗ ಅಸುನೀಗಿದ್ದಾರೆ.

ಕಾರು ಚಾಲಕ ಧನುಷ್ ಕುಮಾರ್ ವಿರುದ್ಧ ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅಧಿಕಾರಿಗಳು, ಶಿಲ್ಪಿಗಳ ಜತೆ ಸಭೆ ನಡೆಸಿದ ಕನ್ನಡ ಮತ್ತು ಸಂಸ್ಕೃತಿ ಸಚಿವ ತಂಗಡಗಿ

ಕನ್ನಡ ಭವನದ ಮುಂದೆ ಭುವನೇಶ್ವರಿ ಪ್ರತಿಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯಕ್ಕೆ ‘ಕರ್ನಾಟಕ’ ನಾಮಕರಣದ ಸುವರ್ಣ ಮಹೋತ್ಸವದ ಸಂಭ್ರಮದ ಹೊತ್ತಿನಲ್ಲಿ ಕನ್ನಡ ಭವನದ ಆವರಣದಲ್ಲಿ 25 ಅಡಿ ಎತ್ತರದ ಕಂಚಿನ ಭುವನೇಶ್ವರಿ ಪ್ರತಿಮೆ ನಿರ್ಮಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ತೀರ್ಮಾನಿಸಿದೆ.

ಈ ಬಗ್ಗೆ ಇಲಾಖೆ ಅಧಿಕಾರಿಗಳು ಹಾಗೂ ಶಿಲ್ಪಿಗಳ ಜತೆಗೆ ಗುರುವಾರ ಸಭೆ ನಡೆಸಿದ ಸಂಸ್ಕೃತಿ ಸಚಿವ ಶಿವರಾಜ್ ತಂಗಡಗಿ, 2024ರ ನವೆಂಬರ್ ತಿಂಗಳೊಳಗೆ ಪ್ರತಿಮೆ ನಿರ್ಮಾಣ ಕಾಮಗಾರಿ ಪೂರ್ಣಗೊಳಿಸುವಂತೆ ಸೂಚಿಸಿದರು.

ನಾಡದೇವಿ ಚಿತ್ರವನ್ನು ಆಯ್ಕೆ ಮಾಡುವ ಸಂಬಂಧ ಸರ್ಕಾರವು ಈ ಹಿಂದೆ ಲಲಿತ ಕಲಾ ಅಕಾಡೆಮಿ ಅಧ್ಯಕ್ಷರಾಗಿದ್ದ ಡಿ. ಮಹೇಂದ್ರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿತ್ತು. ಆ ಸಮಿತಿ ಕಲಾವಿದ ಕೆ. ಸೋಮಶೇಖರ್ ಅವರು ಸಿದ್ಧಪಡಿಸಿರುವ ‘ನಾಡದೇವಿ’ಯ ಚಿತ್ರವನ್ನು ಶಿಫಾರಸು ಮಾಡಿತ್ತು. ಇದನ್ನು ಅಧಿಕೃತವೆಂದು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆದೇಶ ಹೊರಡಿಸಿದೆ. ಹೀಗಾಗಿ, ಅದೇ ಮಾದರಿಯ ನಾಡದೇವಿ ಪ್ರತಿಮೆ ತಲೆ ಎತ್ತಲಿದೆ. ಹಿಂದಿನ ಬಿಜೆಪಿ ಸರ್ಕಾರದ ಅವಧಿಯಲ್ಲಿ ಸುಮಾರು ₹ 2 ಕೋಟಿ ವೆಚ್ಚದಲ್ಲಿ 30 ಅಡಿ ಎತ್ತರದ ಕಂಚಿನ ಪ್ರತಿಮೆ ನಿರ್ಮಿಸಲು ಇಲಾಖೆ ಯೋಜನೆ ರೂಪಿಸಿತ್ತು. ಇದಕ್ಕೆ ಅನುಮೋದನೆಯೂ ದೊರೆತಿತ್ತು. ಕಳೆದ ನವೆಂಬರ್ ತಿಂಗಳಲ್ಲಿಯೇ ಪ್ರತಿಮೆ ಸ್ಥಾಪಿಸಿ, ಚಾಲನೆ ನೀಡಲು ಸರ್ಕಾರ ಮುಂದಾಗಿತ್ತು. ಆದರೆ, ಪ್ರತಿಮೆಯ ಸ್ಥಳ ನಿಗದಿ ವಿಚಾರವಾಗಿ ಗೊಂದಲ ಉಂಟಾಗಿದ್ದರಿಂದ ಕಳೆದ ವರ್ಷ ಸಾಕಾರವಾಗಿರಲಿಲ್ಲ. ಬಳಿಕ ಚುನಾವಣೆ ನೀತಿ ಸಂಹಿತೆ ಜಾರಿಯಿಂದಾಗಿ ಪ್ರತಿಮೆ ನಿರ್ಮಾಣಕ್ಕೆ ಅನುದಾನ ಒದಗಿಸಿರಲಿಲ್ಲ. ಇದರಿಂದಾಗಿ ಯೋಜನೆಯನ್ನು ಕೈಬಿಡಲಾಗಿತ್ತು. ಈ ಬಗ್ಗೆ ‘ಪ್ರಜಾವಾಣಿ’ಯಲ್ಲಿ ಕಳೆದ ಜು.28ರಂದು ‘ನಾಡದೇವಿ ಭುವನೇಶ್ವರಿಗಿಲ್ಲ ಪ್ರತಿಮೆ’ ಶೀರ್ಷಿಕೆಯಡಿ ವಿಶೇಷ ವರದಿ ಪ್ರಕಟವಾಗಿತ್ತು.

‘ಹದಿನಾಲ್ಕು ತಿಂಗಳಲ್ಲಿ ಪ್ರತಿಮೆಗೆ ಅಂತಿಮ ಸ್ಪರ್ಶ ದೊರಕಲಿದೆ. ಮೊದಲಿಗೆ ಎರಡು ಅಡಿಯ ಕನ್ನಡಾಂಬೆಯ ಮಾದರಿ ಪ್ರತಿಮೆಯನ್ನು ನಿರ್ಮಿಸಲಾಗುವುದು. ನಂತರ ತ್ರಿ–ಡಿ ಮಾದರಿಯ ಕನ್ನಡಾಂಬೆಯ ಪ್ರತಿಮೆ ನಿರ್ಮಾಣ ಮಾಡಲಾಗುವುದು. ಈ ಬಗ್ಗೆ ಅಗತ್ಯ ಕ್ರಮವಹಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ’ ಎಂದು ಶಿವರಾಜ್ ತಂಗಡಗಿ ತಿಳಿಸಿದರು.

‘ಕಂಚಿನ ಬೃಹತ್ ಪ್ರತಿಮೆ ನಿರ್ಮಾಣ ಕಾಮಗಾರಿ ಯೋಜನೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಂದ ಚಾಲನೆ ನೀಡಲು ಉದ್ದೇಶಿಸಲಾಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಮುಂದಿನ ವರ್ಷ ನವೆಂಬರ್ 1ಕ್ಕೆ ಮುಖ್ಯಮಂತ್ರಿ ಅವರಿಂದಲೇ ಪ್ರತಿಮೆ ಅನಾವರಣ ಮಾಡಿಸಲಾಗುವುದು’ ಎಂದು ಹೇಳಿದರು.

ಕರ್ನಾಟಕ ಎಂದು ನಾಮಕರಣಗೊಂಡು ಐವತ್ತು ವರ್ಷಗಳು ತುಂಬುತ್ತಿರುವುದರಿಂದ ಭುವನೇಶ್ವರಿ ಪ್ರತಿಮೆ ನಿರ್ಮಿಸಲು ತೀರ್ಮಾನಿಸಲಾಗಿದೆ

ಶಿವರಾಜ ತಂಗಡಗಿ
ಕನ್ನಡ ಮತ್ತು ಸಂಸ್ಕೃತಿ ಸಚಿವ

ಪ್ರತಿಮೆ ನಿರ್ಮಿಸಲು ನಿರ್ಧಾರ ಮಾಡಲಾಗಿದೆ. ಒಂದು ತಿಂಗಳಲ್ಲಿ ಎರಡು ಅಡಿಯ ಮಾದರಿ ಭುವನೇಶ್ವರಿ ಪ್ರತಿಮೆ ಮಾಡಿ ಕೊಡುವಂತೆ ಶಿಲ್ಪಿಗಳಿಗೆ ಸೂಚಿಸಲಾಗಿದೆ

ವಿಶ್ವನಾಥ್ ಹಿರೇಮಠ
ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕ

ಸ್ಥಳದ ಗೊಂದಲ ನಿವಾರಣೆ

ನಾಡದೇವಿಯ ಪ್ರತಿಮೆಯನ್ನು ಜೆ.ಸಿ.ರಸ್ತೆಯಲ್ಲಿರುವ ಕನ್ನಡ ಭವನದ ಮುಂಭಾಗ ನಿರ್ಮಿಸಲು ಇಲಾಖೆ ಈ ಹಿಂದೆ ಮುಂದಾಗಿತ್ತು. 10 ಅಡಿ ಎತ್ತರದ ಪೀಠದ ಮೇಲೆ ಪ್ರತಿಮೆ ಸ್ಥಾಪಿಸಿ, ಪೀಠದ ಸುತ್ತ ನಾಡಿನ ಸಾಂಸ್ಕೃತಿಕ ವೈಭವ ಚಿತ್ರಿಸುವುದು ಯೋಜನೆಯಲ್ಲಿತ್ತು. ಆದರೆ, ಕನ್ನಡ ಭವನದ ಮುಂಭಾಗ ಸ್ಥಳಾವಕಾಶದ ಕೊರತೆ ಎದುರಾಗಿತ್ತು. ಹೀಗಾಗಿ, ಕಲಾಗ್ರಾಮದಲ್ಲಿ ಪ್ರತಿಮೆ ನಿರ್ಮಿಸಲು ಅಧಿಕಾರಿಗಳು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು. 30 ಎಕರೆಯಲ್ಲಿ ವ್ಯಾಪಿಸಿಕೊಂಡಿರುವ ಕಲಾಗ್ರಾಮದಲ್ಲಿ, ಸಂಸ್ಕೃತಿ ಇಲಾಖೆ 11 ಎಕರೆ ಪ್ರದೇಶವನ್ನು ನಿರ್ವಹಣೆ ಮಾಡುತ್ತಿದೆ. ಈಗ ಅಂತಿಮವಾಗಿ ಕನ್ನಡ ಭವನದ ಆವರಣದಲ್ಲಿಯೇ ನಿರ್ಮಿಸಲು ನಿರ್ಧರಿಸಲಾಗಿದೆ.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	98.06	3,385	6,210
ಹಾರಂಗಿ	2,859	2,855.41	1,779	411
ಕಬಿನಿ	2284.00	2,273.78	2,007	1,100
ಹೇಮಾವತಿ	2,922	2,903.07	649	6,030
ಲಿಂಗನಮಕ್ಕಿ	1,819	1,787.20	1,696	3,787.64
ಸೂಪಾ (ಮೀ)	564	545.46	1,756	477
ಮಾಣಿ	595	579.34	1,135	00
ತುಂಗಭದ್ರಾ	1,633	1,623.62	1,130	8,884
ಮಲಪ್ರಭಾ	2079.50	2,065.76	00	760
ಘಟಪ್ರಭಾ	2175	2,162.75	598	176
ಭದ್ರಾ	186	162.6	524	3,070
ಆಲಮಟ್ಟಿ (ಮೀ)	519.60	519.31	358	6,215
ನಾರಾಯಣಪುರ (ಮೀ)	492.25	490.42	6,745	7,570

* ನೆಲಮಟ್ಟದಿಂದ

ಮಕ್ಕಳ ಮೇಲೆ ನುಗ್ಗಿದ ಬಸ್ ವಿದ್ಯಾರ್ಥಿನಿ ಸಾವು



ತುಳಸಿ

ತರೀಕೆರೆ (ಚಿಕ್ಕಮಗಳೂರು): ತಾಲ್ಲೂಕಿನ ಸೀತಾಪುರ ಕಾವಲ್ ಗೇಟ್ ಬಳಿ ಬಸ್‌ಗಾಗಿ ಕಾಯುತ್ತಿದ್ದ ಶಾಲಾ ವಿದ್ಯಾರ್ಥಿಗಳ ಮೇಲೆ ಖಾಸಗಿ ಬಸ್ ಹರಿದು ವಿದ್ಯಾರ್ಥಿನಿ ತುಳಸಿ (15) ಮೃತಪಟ್ಟಿದ್ದಾಳೆ.

ಲಕ್ಕವಳ್ಳಿಯಿಂದ ತರೀಕೆರೆಗೆ ಬರುತ್ತಿದ್ದ ಬಸ್ ಚಾಲಕನ ನಿಯಂತ್ರಣ ತಪ್ಪಿ, ರಸ್ತೆ ಪಕ್ಕದಲ್ಲಿ ನಿಂತಿದ್ದ ವಿದ್ಯಾರ್ಥಿಗಳತ್ತ ನುಗ್ಗಿದೆ. ಗಂಭಿರವಾಗಿ ಗಾಯಗೂಂಡ ತುಳಸಿ ಶಿವಮೊಗ್ಗದ ಖಾಸಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾಳೆ. ಇನ್ನೊಬ್ಬ ವಿದ್ಯಾರ್ಥಿನಿ ನಿವೇದಿತಾ (14) ಬಸ್‌ನ ಚಕ್ರದಡಿ ಸಿಲುಕಿ ಗಂಭೀರವಾಗಿ ಗಾಯಗೊಂಡಳು. ಬಸ್ ಅನ್ನು ಹಿಂದಕ್ಕೆ ತಳ್ಳಿ ಸಾರ್ವಜನಿಕರು ಅವರನ್ನು ರಕ್ಷಿಸಿದರು. ನಿವೇದಿತಾ ಅವಳನ್ನು ಶಿವಮೊಗ್ಗದ ಆಸ್ಪತ್ರೆಗೆ ದಾಖಲಿಸಲಾಗಿದೆ.

ವಿದ್ಯಾರ್ಥಿಗಳು ಬಾವಿಕೆರೆ ಪ್ರೌಢಶಾಲೆಯಲ್ಲಿ 8ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದರು. ವಿದ್ಯಾರ್ಥಿಗಳ ಮೇಲೆ ಹರಿದ ಬಸ್ ನಂತರ ರಸ್ತೆಯ ಬದಿಯ ಮನೆಯೊಂದರ ಚಾವಣಿ ಮತ್ತು ಮರಕ್ಕೆ ಡಿಕ್ಕಿ ಹೊಡೆದಿದೆ. ಬಸ್‌ನಲ್ಲಿದ್ದ 8 ಮಂದಿ ಪ್ರಯಾಣಿಕರಿಗೆ ಗಾಯಗಳಾಗಿವೆ. ಘಟನೆಯಿಂದ ರೊಚ್ಚಿಗೆದ್ದ ಸಾರ್ವಜನಿಕರು ಬಸ್‌ನ ಗಾಜು ಪುಡಿಗೊಳಿಸಿ ಆಕ್ರೋಶ ವ್ಯಕ್ತಪಡಿಸಿದರು. ತರೀಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಭೂಮಿ, ಚಂದ್ರನ ಜತೆಗೆ ಸೆಲ್ಫಿ ತೆಗೆದ ಆದಿತ್ಯ ಎಲ್ 1


ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂರ್ಯನ ಅಧ್ಯಯನ ಕೈಗೊಂಡಿರುವ ಆದಿತ್ಯ ಎಲ್‌-1 ಸೆಲ್ಫಿ ತೆಗೆದುಕೊಂಡಿದೆ. ಜತೆಗೆ ಭೂಮಿ ಮತ್ತು ಚಂದ್ರನ ಚಿತ್ರಗಳನ್ನು ಸಹ ಕಳುಹಿಸಿದೆ.

ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೊ) ಈ ಚಿತ್ರಗಳನ್ನು ಬಿಡುಗಡೆ ಮಾಡಿದೆ. ಆದಿತ್ಯ ಎಲ್‌-1 ಬಾಹ್ಯಾಕಾಶ ನೌಕೆಯಲ್ಲಿರುವ ಕ್ಯಾಮೆರಾದಲ್ಲಿ ಚಿತ್ರಗಳನ್ನು ಸೆರೆ ಹಿಡಿಯಲಾಗಿದೆ.

ಪ್ರತಿದಿನ 1,440 ಚಿತ್ರಗಳನ್ನು ವಿಶ್ಲೇಷಣೆಗೆ ಕಳುಹಿಸುವ ಸಾಮರ್ಥ್ಯವನ್ನು ಇದು ಹೊಂದಿದೆ. ಸೆಪ್ಟೆಂಬರ್ 2ರಂದು ಶ್ರೀಹರಿಕೋಟದ ಉಡಾವಣಾ ಕೇಂದ್ರದಿಂದ 'ಆದಿತ್ಯ-ಎಲ್ 1' ಬಾಹ್ಯಾಕಾಶ ನೌಕೆ ಹೊತ್ತ ಪಿಎಸ್‌ಎಲ್‌ವಿ–ಸಿ 57 ರಾಕೆಟ್ ನಭಕ್ಕೆ ಚಿಮ್ಮಿತ್ತು.

ಆದಿತ್ಯ ಎಲ್‌-1 ಅನ್ನು ಸಂಪೂರ್ಣ ದೇಶೀಯವಾಗಿ ನಿರ್ಮಿಸಲಾಗಿದ್ದು, ಒಟ್ಟು ಏಳು ಉಪಕರಣಗಳಿವೆ. ಭೂಮಿಯಿಂದ 15 ಲಕ್ಷ ಕಿ.ಮೀ ದೂರದಲ್ಲಿರುವ ಲಗ್ರಾಂಜಿಯನ್ ಬಿಂದುವಿನಲ್ಲಿ ಆದಿತ್ಯ ಎಲ್‌–1 ಅಂತರಿಕ್ಷ ವೀಕ್ಷಣಾಲಯವನ್ನು ಇರಿಸಲಾಗಿದೆ.



ಆದಿತ್ಯ ಎಲ್‌–1 ತೆಗೆದಿರುವ ಭೂಮಿ ಮತ್ತು ಚಂದ್ರನ ಚಿತ್ರ – ಇಸ್ರೊ ಚಿತ್ರ



ಉಡುಪಿಯಲ್ಲಿ ಗುರುವಾರ ನಡೆದ ವಿಟ್ಲಪಿಂಡಿ ಉತ್ಸವದಲ್ಲಿ ಸೇರಿದ್ದ ಭಕ್ತಸಾಗರ ಪ್ರಜಾವಾಣಿ ಚಿತ್ರ / ಫಕ್ರುದ್ದೀನ್ ಎಚ್

ವೈಭವದ ವಿಟ್ಲಪಿಂಡಿ ಉತ್ಸವ

ಪ್ರಜಾವಾಣಿ ವಾರ್ತೆ

ಉಡುಪಿ: ಪ್ರಸಿದ್ಧ ಧಾರ್ಮಿಕ ಕ್ಷೇತ್ರವಾದ ಉಡುಪಿಯ ಕೃಷ್ಣಮಠದಲ್ಲಿ ಗುರುವಾರ ವಿಜೃಂಭಣೆಯಿಂದ ವಿಟ್ಲಪಿಂಡಿ ಉತ್ಸವ ನಡೆಯಿತು.

ರಥಬೀದಿಯಲ್ಲಿ ನಡೆದ ವಿಟ್ಲಪಿಂಡಿಯಲ್ಲಿ ಸಾವಿರಾರು ಭಕ್ತರು ಭಾಗವಹಿಸಿ ಬಾಲಗೋಪಾಲನ ಸ್ಮರಣೆ ಮಾಡಿದರು.

ಪರ್ಯಾಯ ಕೃಷ್ಣಾಪುರ ಮಠಾಧೀಶ ವಿದ್ಯಾಸಾಗರ ತೀರ್ಥ ಸ್ವಾಮೀಜಿ ಅವರು ಮಧ್ಯಾಹ್ನ ಮಹಾಪೂಜೆ ನೆರವೇರಿಸಿದರು. ಬಳಿಕ ಕೃಷ್ಣನ ಮೃಣ್ಮಯ (ಮಣ್ಣಿನ) ಉತ್ಸವ ಮೂರ್ತಿಯನ್ನು ಬಂಗಾರದ ಪಲ್ಲಕ್ಕಿಯಲ್ಲಿರಿಸಿ ಮಠದ ಮುಖ್ಯದ್ವಾರದವರೆಗೂ ಹೊತ್ತು ತರಲಾಯಿತು.

ಕಾಣಿಯೂರು ಮಠದ ವಿಶ್ವವಲ್ಲಭ ತೀರ್ಥ ಸ್ವಾಮೀಜಿ ಚಿನ್ನದ ರಥದ ಮೇಲೆ ಕೃಷ್ಣನ ಮೂರ್ತಿಯನ್ನು ಪ್ರತಿಷ್ಠಾಪಿಸಿ ಮಹಾ ಮಂಗಳಾರತಿ ಮಾಡಿ ರಥೋತ್ಸವಕ್ಕೆ ಚಾಲನೆ ನೀಡಿದರು. ಗೋವಿಂದನ ಸ್ಮರಣೆ ಮಾಡುತ್ತಾ ಭಕ್ತರು ರಥವನ್ನು ಎಳೆದು ಭಕ್ತಿ ಸಮರ್ಪಿಸಿದರು.

ಸಾಂಪ್ರದಾಯಿಕ ಮೊಸರು ಕುಡಿಕೆ ಒಡೆಯುವ ದೃಶ್ಯ ಆಕರ್ಷಕವಾಗಿತ್ತು. ರಥಬೀದಿಯ 14 ಕಡೆಗಳಲ್ಲಿ ಕಟ್ಟಲಾಗಿದ್ದ ಮೊಸರು, ಕುಂಕುಮ, ಮಂಡಕ್ಕಿ ಅರಳಿನ ಕುಡಿಕೆಗಳನ್ನು ಗೊಲ್ಲರು ಒಡೆದು ಸಂಭ್ರಮಿಸಿದರು. ಹುಲಿ ಕುಣಿತ ಹಾಗೂ ವೇಷಧಾರಿಗಳ ನೃತ್ಯ ಗಮನ ಸೆಳೆಯಿತು.

ರಥೋತ್ಸವ ಮುಗಿದ ಬಳಿಕ ಕೃಷ್ಣನ ಮೃಣ್ಮಯ ಮೂರ್ತಿಯನ್ನು ಮಧ್ವ ಸರೋವರದಲ್ಲಿ ವಿಸರ್ಜಿಸುವ ಮೂಲಕ ವಿಟ್ಲಪಿಂಡಿ ಉತ್ಸವ ಸಂಪನ್ನಗೊಂಡಿತು. ವಿಟ್ಲಪಿಂಡಿಗೆ ಬಂದಿದ್ದ ಭಕ್ತರಿಗೆ ವಿಶೇಷ ಭೋಜನದ ವ್ಯವಸ್ಥೆ ಮಾಡಲಾಗಿತ್ತು.

ರಾಜ್ಯದ ಹಲವೆಡೆ ಮಳೆ ಸಾಧ್ಯತೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದ ಹಲವು ಕಡೆ ಶುಕ್ರವಾರ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ ಎಂದು ಮುನ್ಸೂಚನೆ ನೀಡಿರುವ ಹವಾಮಾನ ಇಲಾಖೆ, ಮೂರು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಿದೆ.

ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡಕ್ಕೆ ‘ಯೆಲ್ಲೊ ಅಲರ್ಟ್’ ನೀಡಲಾಗಿದೆ. ಉತ್ತರ ಒಳನಾಡಿನ ಬೀದರ್, ಕಲಬುರಗಿ, ವಿಜಯಪುರ ಹಾಗೂ ದಕ್ಷಿಣ ಒಳನಾಡಿನ ಕೊಡಗು, ಚಿಕ್ಕಮಗಳೂರು ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿಯಲ್ಲಿ ಬಿರುಗಾಳಿಯ ವೇಗವು ಗಂಟೆಗೆ 40–45 ಕಿ.ಮೀ. ನಿಂದ 55 ಕಿ.ಮೀ. ವೇಗದಲ್ಲಿ ಬೀಸುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ಇಳಿಯಬಾರದು. ಬೆಂಗಳೂರು ನಗರದಲ್ಲಿ ಸಾಮಾನ್ಯವಾಗಿ ಮೋಡ ಕವಿದ ವಾತಾವರಣವಿರುತ್ತದೆ. ಸಂಜೆ ಅಥವಾ ರಾತ್ರಿಯ ವೇಳೆ ಒಂದೆರಡು ಸಲ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಕೆಲವೊಮ್ಮೆ ಬಲವಾದ ಮೇಲ್ಮೈ ಗಾಳಿ ಬೀಸುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಶನಿವಾರ ಹಾಗೂ ಭಾನುವಾರ ರಾಜ್ಯದ ಕೊಡಗು, ಚಿಕ್ಕಮಗಳೂರು ಸೇರಿ ರಾಜ್ಯದ ಐದು ಜಿಲ್ಲೆಗಳಿಗೆ ‘ಯೆಲ್ಲೊ ಅಲರ್ಟ್’ ಘೋಷಿಸಲಾಗಿದೆ. ಮುಂದಿನ ಮೂರು ದಿನಗಳ ಅವಧಿಯಲ್ಲಿ ಮಳೆ ಚುರುಕುಗೊಳ್ಳುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಹೆಚ್ಚಿನ ಬೆಲೆ: ಕೋಳಿ ಮಾಂಸಕ್ಕೆ ದರ ನಿಗದಿಪಡಿಸಿದ ಕಳಸ ಪಂಚಾಯಿತಿ

ಪ್ರಜಾವಾಣಿ ವಾರ್ತೆ

ಕಳಸ (ಚಿಕ್ಕಮಗಳೂರು): ಇಲ್ಲಿನ ಕೋಳಿ ಮಾಂಸದ ಅಂಗಡಿಗಳಲ್ಲಿ ಹೆಚ್ಚಿನ ದರಕ್ಕೆ ಮಾಂಸ ಮಾರಾಟ ಮಾಡಲಾಗುತ್ತಿದೆ ಎಂಬ ಸಾರ್ವಜನಿಕರ ದೂರಿನ ಮೇರೆಗೆ, ಗ್ರಾಮ ಪಂಚಾಯಿತಿ ವತಿಯಿಂದಲೇ ಪ್ರತಿದಿನ ಮಾಂಸದ ದರ ನಿಗದಿಪಡಿಸುವ ಪರಿಪಾಟ ಆರಂಭಗೊಂಡಿದೆ.

ಪಟ್ಟಣದ ಕೋಳಿ ಮಾಂಸದ ಅಂಗಡಿಗಳಲ್ಲಿ ಸುತ್ತಲಿನ ಊರುಗಳಿಗಿಂತ ಹೆಚ್ಚಿನ ಬೆಲೆಗೆ ಮಾಂಸ ಮಾರಾಟ ಮಾಡುತ್ತಿದ್ದಾರೆ ಎಂಬ ಆರೋಪ ಅನೇಕ ದಿನಗಳಿಂದ ಇತ್ತು. ಇದನ್ನು ಗಂಭೀರವಾಗಿ ಪರಿಗಣಿಸಿದ ಗ್ರಾಮ ಪಂಚಾಯಿತಿ, ಎಲ್ಲ ಕೋಳಿ ಅಂಗಡಿ ಮಾಲೀಕರಿಗೆ ನೋಟಿಸ್ ನೀಡಿ, ಹೆಚ್ಚಿನ ದರಕ್ಕೆ ಮಾರಾಟ ಮಾಡದಂತೆ ತಾಕೀತು ಮಾಡಿದೆ.

‘ದಿನಪತ್ರಿಕೆಯಲ್ಲಿ ಪ್ರಕಟವಾಗುವ ದರ ಅನುಸರಿಸಿ ಪ್ರತಿದಿನವೂ ಕೋಳಿ ಮಾಂಸ ಮಾರಾಟ ಮಾಡಬೇಕು. ತಪ್ಪಿದರೆ ಅಂಗಡಿ ಮಾಲೀಕರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು’ ಎಂದು ಮಾಲೀಕರಿಗೆ ಎಚ್ಚರಿಕೆ ನೀಡಿದೆ.



ಕಳಸದಲ್ಲಿ ಕೋಳಿ ಅಂಗಡಿಗಳ ಮುಂಭಾಗ ಗ್ರಾಮ ಪಂಚಾಯಿತಿಯು ದರಪಟ್ಟಿ ನಮೂದಿಸಿರುವುದು

ಪ್ರತಿ ದಿನವೂ ಪರಿಷ್ಕೃತ ದರ ಪಟ್ಟಿಯನ್ನು ಪಂಚಾಯಿತಿ ಸಿಬ್ಬಂದಿ ಪಟ್ಟಣದ ಕೋಳಿ ಮಾಂಸದ ಅಂಗಡಿಗಳ ಮುಂಭಾಗದಲ್ಲಿ ಬರೆಯುತ್ತಿದ್ದಾರೆ. ಅಂಗಡಿ ಮಾಲೀಕರು ನಿಗದಿಪಡಿಸಿದ ದರಕ್ಕಿಂತ ಹೆಚ್ಚಿನ ಮೊತ್ತ ಪಡೆದರೆ ಪಂಚಾಯಿತಿಗೆ ದೂರು ನೀಡುವಂತೆಯೂ ಸಾರ್ವಜನಿಕರಿಗೆ ಕೋರಲಾಗಿದೆ.

ಪಟ್ಟಣದಲ್ಲಿ ಕೋಳಿ ಮಾಂಸ ಮಾರಾಟದ ಎಂಟು ಅಂಗಡಿಗಳಿದ್ದು, ಎಲ್ಲರಿಗೂ ಒಂದೇ ಸ್ಥಳದಲ್ಲಿ ಮಾರಾಟಕ್ಕೆ ಅನುಕೂಲವಾಗುವಂತೆ ಪಂಚಾಯಿತಿ ವತಿಯಿಂದಲೇ ಮಳಿಗೆಗಳನ್ನು ನಿರ್ಮಿಸಿಕೊಡಲಾಗಿದೆ. ಮಳಿಗೆಗಳನ್ನು ವ್ಯಾಪಾರಿಗಳಿಗೆ ಹಂಚಿಕೆ ಮಾಡುವಾಗಲೇ ಮಾರುಕಟ್ಟೆ ದರಕ್ಕೆ ಅನುಗುಣವಾಗಿ ಮಾತ್ರ ಮಾಂಸ ಮಾರಾಟ ಮಾಡಬೇಕು, ಹೆಚ್ಚಿನ ದರ ವಿಧಿಸುವಂತಿಲ್ಲ ಎಂಬ ಷರತ್ತು ವಿಧಿಸಲಾಗಿದೆ. ಈ ನಿಯಮ ಉಲ್ಲಂಘನೆ ಆಗಿದ್ದರಿಂದ ಕ್ರಮ ಕೈಗೊಳ್ಳಲಾಗಿದೆ ಎಂಬುದು ಗ್ರಾಮ ಪಂಚಾಯಿತಿ ಮೂಲಗಳ ಮಾಹಿತಿ.

ವ್ಯಾಪಾರಿಗಳ ಅಸಮಾಧಾನ: ಗ್ರಾಮ ಪಂಚಾಯಿತಿಯ ಕ್ರಮಕ್ಕೆ ಕೋಳಿ ಅಂಗಡಿ ಮಾಲೀಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ‘ದಿನಪತ್ರಿಕೆಯಲ್ಲಿ ಪ್ರಕಟವಾಗುವ ಬೆಲೆಗೆ ಮಾಂಸ ಮಾರಾಟ ಮಾಡಿದರೆ ನಮಗೆ ನಷ್ಟವಾಗುತ್ತದೆ. ಕೋಳಿ ದರ ಹೆಚ್ಚಾಗಿದೆ. ಮಳಿಗೆಗಳ ಬಾಡಿಗೆಯೂ ದುಬಾರಿ ಇದೆ. ಹಾಗಾಗಿ ಸ್ಪರ್ಧಾತ್ಮಕ ದರದಲ್ಲಿ ಮಾರಾಟ ಮಾಡಲು ಅವಕಾಶ ನೀಡಬೇಕು’ ಎಂದು ಕೋರಿದ್ದಾರೆ.

ದುಂಡು ಮೇಜಿನ ಸಭೆಯಲ್ಲಿ ವಿವಿಧ ರಾಜ್ಯಗಳ ರೈತ ಮುಖಂಡರು ಕಳವಳ

‘ಮುಕ್ತ ವ್ಯಾಪಾರ ದೇಶದ ರೈತರಿಗೆ ಮಾರಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಐರೋಪ್ಯ ಒಕ್ಕೂಟ ಸೇರಿ ವಿವಿಧ ದೇಶಗಳ ಜತೆಗಿನ ಮುಕ್ತ ವ್ಯಾಪಾರದ ಒಪ್ಪಂದ ನಮ್ಮ ದೇಶಕ್ಕೆ ಲಾಭದಾಯಕವಲ್ಲ. ಈ ಒಪ್ಪಂದದಿಂದಾಗಿ ಇಲ್ಲಿನ ರೈತರು ಸಂಕಷ್ಟಕ್ಕೆ ಸಿಲುಕಲಿದ್ದು, ಭೂಮಿಯನ್ನು ಕಳೆದುಕೊಳ್ಳುವ ಸಾಧ್ಯತೆಯಿದೆ’ ಎಂದು ರೈತ ಮುಖಂಡರು ಕಳವಳ ವ್ಯಕ್ತಪಡಿಸಿದರು.

ಭಾರತೀಯ ರೈತ ಚಳವಳಿಗಳ ಸಮನ್ವಯ ಸಮಿತಿ (ಐಸಿಸಿಎಫ್‌ಎಂ) ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ‘ಮುಕ್ತ ವ್ಯಾಪಾರ ಮತ್ತು ಭಾರತೀಯ ಕೃಷಿ ಹಾಗೂ ರೈತರ ಮೇಲಾಗುವ ಪರಿಣಾಮಗಳು’ ದುಂಡು ಮೇಜಿನ ಸಭೆಯಲ್ಲಿ ಕೃಷಿ ಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳ ಬಗ್ಗೆ ವಿಷಯ ಮಂಡಿಸಲಾಯಿತು.

ಭಾರತೀಯ ಕಿಸಾನ್ ಒಕ್ಕೂಟದ (ಬಿಕೆಯು) ಮುಖಂಡ ರಾಕೇಶ್ ಟಿಕಾಯತ್, ನವದೆಹಲಿಯ ಸಾಮಾಜಿಕ ಹೋರಾಟಗಾರ ಯುದ್ಧವೀರ ಸಿಂಗ್, ರೈತ ಮುಖಂಡರಾದ ರಾಜಸ್ಥಾನದ ರಾಜಾರಾಂ ಮೈಲ್, ಹರಿಯಾಣದ ರತನ್ ಮಾನ್, ಉತ್ತರಾಖಂಡದ ಬಲ್ಜಿಂದರ್ ಸಿಂಗ್ ಮಾನ್, ಉತ್ತರ ಪ್ರದೇಶದ ಯುದ್ಧವೀರ ಸಿಂಗ್, ಅಶೋಕ್ ಕುಮಾರ್, ಪಂಜಾಬಿನ ಖೈರಾ ಸಾಬ್, ಕರ್ನಾಟಕದ ರೈತನಾಯಕಿ ಚುಕ್ಕಿ ನಂಜುಂಡಸ್ವಾಮಿ, ರೈತಸಂಘದ ವರಿಷ್ಠರಾದ ಕೆ.ಟಿ. ಗಂಗಾಧರ್, ಅನಸೂಯಮ್ಮ ಸೇರಿ ವಿವಿಧ ರೈತ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.

‘ರೈತರ ಅರಿವಿಗೆ ಬಾರದೆ ಮಾಡಿಕೊಳ್ಳುವ ಅಂತರರಾಷ್ಟ್ರೀಯ ಒಪ್ಪಂದಗಳು ರೈತ ಸಮುದಾಯದ ಏಳ್ಗೆಗೆ ಮಾರಕ. ಕೇಂದ್ರ ಸರ್ಕಾರ ಸಹಿ ಮಾಡುತ್ತಿರುವ 85 ವಿಶ್ವ ವಾಣಿಜ್ಯ ಒಪ್ಪಂದಗಳಲ್ಲಿ ಯಾವುದರ ಬಗ್ಗೆಯೂ ರೈತರ ಜತೆಗೆ ಚರ್ಚಿಸಿಲ್ಲ. ಹಾಗಾಗಿ, ಇವುಗಳನ್ನು ನಾವು ಸಾರಾಸಗಟಾಗಿ ಒಪ್ಪಿಕೊಳ್ಳಲು ಸಾಧ್ಯವಿಲ್ಲ. ಇದರ ಬಗ್ಗೆ ಸಂಪೂರ್ಣ ವಿಮರ್ಶೆಯಾಗಬೇಕು. ಆ ನಂತರವೇ ಸರ್ಕಾರ ನಿರ್ಧಾರ ತೆಗೆದುಕೊಳ್ಳುವುದು ಒಳಿತು’ ಎಂದು ಚುಕ್ಕಿ ನಂಜುಂಡಸ್ವಾಮಿ ಅಭಿಪ್ರಾಯ ವ್ಯಕ್ತಪಡಿಸಿದರು.

ರೈತರಿಗೆ ನಷ್ಟ: ‘ಸರ್ಕಾರದ ತಪ್ಪು ನೀತಿಗಳಿಂದ ರೈತರಿಗೆ ನಷ್ಟ ಆಗುತ್ತಿದೆ. ಬಡ ರೈತರ ಭೂಮಿಯನ್ನು ರಕ್ಷಣೆ ಮಾಡುವ ಕೆಲಸ ಆಗಬೇಕು. ಈ ನಿಟ್ಟಿನಲ್ಲಿ ಮುಂದಿನ ಹಾದಿ ರೂಪಿಸಲಾಗುವುದು’ ಎಂದು ರಾಕೇಶ್ ಟಿಕಾಯತ್ ತಿಳಿಸಿದರು.

ನವದೆಹಲಿಯ ಪ್ರಾಧ್ಯಾಪಕಿ ರಂಜಾ ಸೇನ್‌ಗುಪ್ತಾ, ‘ಕೆನಡಾ, ನ್ಯೂಜಿಲೆಂಡ್, ಇಸ್ರೇಲ್ ಸೇರಿ ಹಲವು ದೇಶಗಳ ಜತೆಗೆ ಭಾರತ ಮುಕ್ತ ವ್ಯಾಪಾರ ನಡೆಸುತ್ತಿದೆ. ಈ ಬಗ್ಗೆ ಎರಡು ಅಧ್ಯಯನಗಳೂ ನಡೆದಿದ್ದು, ದೇಶಕ್ಕೆ ಇದರಿಂದ ಲಾಭವಿಲ್ಲವೆಂದು ತಿಳಿಸಲಾಗಿದೆ. ಐರೋಪ್ಯ ಒಕ್ಕೂಟದ ದೇಶಗಳಲ್ಲಿ ಕೃಷಿ ಉತ್ಪನ್ನಗಳ ಸುಂಕ ಜಾಸ್ತಿಯಿದೆ. ಮುಕ್ತ ವ್ಯಾಪಾರದಡಿ ಇದನ್ನು ಕಡಿಮೆ ಮಾಡಬೇಕಾಗುತ್ತದೆ. ಆಗ ಅಲ್ಲಿಂದ ಹೆಚ್ಚಿನ ಕೃಷಿ ಉತ್ಪನ್ನಗಳು ಇಲ್ಲಿಗೆ ಬರುತ್ತವೆ. ಇಲ್ಲಿನ ಕೃಷಿ ಉತ್ಪನ್ನಗಳನ್ನು ಅಲ್ಲಿಗೆ ಕಳಿಸುವುದು ಕಷ್ಟಸಾಧ್ಯ. ಹೀಗಾಗಿ, ದೇಶಕ್ಕೆ ಹಾಗೂ ಇಲ್ಲಿನ ರೈತರಿಗೆ ಮುಕ್ತ ವ್ಯಾಪಾರ ಪೂರಕವಾಗಿಲ್ಲ’ ಎಂದು ಹೇಳಿದರು.

ಕರ್ನಾಟಕ, ರಾಜಸ್ಥಾನ, ಹರಿಯಾಣ, ಉತ್ತರಾಖಂಡ, ಉತ್ತರ ಪ್ರದೇಶ, ಕೇರಳ, ತಮಿಳುನಾಡು ಮತ್ತು ತೆಲಂಗಾಣದ ರೈತ ಮುಖಂಡರು ಸಭೆಯಲ್ಲಿ ಪಾಲ್ಗೊಂಡಿದ್ದರು.



ದುಂಡು ಮೇಜಿನ ಸಭೆಯಲ್ಲಿ (ಎಡದಿಂದ) ಕೆ.ಟಿ ಗಂಗಾಧರ್, ರಾಕೇಶ್ ಟಿಕಾಯತ್, ಬಲ್ಜಿಂದರ್ ಸಿಂಗ್ ಮಾನ್, ರಾಜಾರಾಂ ಮೈಲ್, ಚುಕ್ಕಿ ನಂಜುಂಡಸ್ವಾಮಿ, ಅನಸೂಯಮ್ಮ ಮತ್ತು ಯುದ್ಧವೀರ ಸಿಂಗ್ ಒಗ್ಗಟ್ಟು ಪ್ರದರ್ಶಿಸಿದರು –ಪ್ರಜಾವಾಣಿ ಚಿತ್ರ

ಪೊಲೀಸ್ ಬಿಗಿ ಭದ್ರತೆಯಲ್ಲಿ ನಡೆದ ಸಭೆ

ರಾಜ್ಯ ರೈತ ಸಂಘ ಕಳೆದ ವರ್ಷ ಗಾಂಧಿ ಭವನದಲ್ಲಿ ಹಮ್ಮಿಕೊಂಡಿದ್ದ ಆತ್ಮಾವಲೋಕನ ಮತ್ತು ಸ್ಪಷ್ಟೀಕರಣ ಸಭೆಯಲ್ಲಿ ರಾಕೇಶ್ ಟಿಕಾಯತ್ ಅವರ ಮೇಲೆ ಹಲ್ಲೆ ನಡೆಸಿ, ಮಸಿ ಎರಚಿದ ಘಟನೆ ನಡೆದಿತ್ತು. ಹಾಗಾಗಿ, ಈ ಬಾರಿ ಪೊಲೀಸ್ ಬಿಗಿ ಭದ್ರತೆಯಲ್ಲಿ ಸಭೆ ನಡೆಸಲಾಯಿತು.

ಪ್ರತಿಯೊಬ್ಬರ ವೈಯಕ್ತಿಕ ಮಾಹಿತಿ ಸಂಗ್ರಹಿಸಿ, ಗುರುತಿನ ಚೀಟಿ ವಿತರಿಸಲಾಯಿತು. ಬ್ಯಾಗ್, ನೀರಿನ ಬಾಟಲಿ ಸೇರಿ ವಿವಿಧ ವಸ್ತುಗಳನ್ನು ಕೊಂಡೊಯ್ಯಲು ಪೊಲೀಸರು ಅವಕಾಶ ನೀಡಲಿಲ್ಲ. ಇದು ಕೆಲವರ ಅಸಮಾಧಾನಕ್ಕೂ ಕಾರಣವಾಯಿತು. ಶುಕ್ರವಾರವೂ ಈ ಸಭೆ ನಡೆಯಲಿದ್ದು, ಮುಂದಿನ ನಡೆ ಬಗ್ಗೆ ರೈತ ಮುಖಂಡರು ನಿರ್ಣಯಗಳನ್ನು ಕೈಗೊಳ್ಳಲಿದ್ದಾರೆ.

ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ • ಮುಂದಿನ ವಾರ ಬರ ತಾಲ್ಲೂಕುಗಳ ಘೋಷಣೆ ಸಾಧ್ಯತೆ

ಬರ: ಕೇಂದ್ರಕ್ಕೆ ಸರ್ವಪಕ್ಷಗಳ ನಿಯೋಗ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಜ್ಯದಲ್ಲಿನ ಬರದ ತೀವ್ರತೆಯ ಬಗ್ಗೆ ಸಂಪುಟ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು. ಕೇಂದ್ರಕ್ಕೆ ಸರ್ವಪಕ್ಷಗಳ ನಿಯೋಗವನ್ನು ಒಯ್ಯುವುದರ ಬಗ್ಗೆಯೂ ಪ್ರಸ್ತಾಪವಾಯಿತು ಎಂದು ಕಾನೂನು ಮತ್ತು ಸಂಸದೀಯ ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಎಷ್ಟು ತಾಲ್ಲೂಕುಗಳು ಬರಪೀಡಿತವಾಗಿವೆ ಎಂಬುದನ್ನು ಮುಂದಿನ ಸಂಪುಟ ಸಭೆಯಲ್ಲಿ ಘೋಷಿಸಲಾಗುವುದು. ಬರಪೀಡಿತ ತಾಲ್ಲೂಕುಗಳಲ್ಲಿ ಎರಡನೇ ಬಾರಿಗೆ ಬೆಳೆ ಸಮೀಕ್ಷೆ ನಡೆಸಲಾಗುತ್ತಿದೆ. ಅದರ ವರದಿ ಬಂದ ನಂತರವೇ ಎಷ್ಟು ತಾಲ್ಲೂಕುಗಳ ಬರ ಪೀಡಿತ ಎಂದು ತೀರ್ಮಾನಿಸಲು ಸಾಧ್ಯ ಎಂದು ಅವರು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬರ ಮಾನದಂಡ ಸರಿ ಇಲ್ಲ. ಹಿಂದೆ ಶೇ 20 ರಷ್ಟು ಮಳೆ ಕೊರತೆ ಇದ್ದರೆ ಬರ ಘೋಷಿಸಲು ಅವಕಾಶ ಇತ್ತು. ಈಗ ಶೇ 60 ರಷ್ಟು ಮಳೆ ಕೊರತೆ ಇರಬೇಕು ಮತ್ತು ಮೂರುವಾರ ನಿರಂತರ ಶುಷ್ಕ ಹವೆ ಇದ್ದರೆ ಮಾತ್ರ ಬರ ವ್ಯಾಪ್ತಿಗೆ ಬರುತ್ತದೆ. ಇದರಿಂದ ಸಮಸ್ಯೆ ಆಗುತ್ತಿದೆ ಎಂದು ಕೇಂದ್ರ ಸರ್ಕಾರಕ್ಕೆ ಮನವರಿಕೆ ಮಾಡಲು ತೀರ್ಮಾನಿಸಲಾಗಿದೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಪ್ರಧಾನಿಯವರಿಗೆ ಪತ್ರ ಬರೆದಿದ್ದಾರೆ. ಈವರೆಗೂ ಪ್ರತಿಕ್ರಿಯೆ ಬಂದಿಲ್ಲ ಎಂದು ಪಾಟೀಲ ತಿಳಿಸಿದರು.

ಕಾವೇರಿ ಕುರಿತೂ ಚರ್ಚೆ: ಸಂಪುಟ ಸಭೆಯಲ್ಲಿ ಕಾವೇರಿ ನೀರಿನ ವಿಚಾರವೂ ಚರ್ಚೆಗೆ ಬಂತು. ಜಲಸಂಪನ್ಮೂಲ ಸಚಿವ ಡಿ.ಕೆ.ಶಿವಕುಮಾರ್ ಅವರು ಇತ್ತೀಚೆಗೆ ದೆಹಲಿಗೆ ಹೋಗಿ ಕಾನೂನು ತಜ್ಞರ ಜತೆ ನಡೆಸಿದ ಚರ್ಚೆಯ ಮಾಹಿತಿಯನ್ನು ಸಭೆಯಲ್ಲಿ ವಿವರಿಸಿದರು.

ರಾಜ್ಯದ ರೈತರ ಹಿತ ಕಾಪಾಡಲು ಸರ್ಕಾರ ಸಿದ್ಧವಿದೆ. ರಾಜ್ಯದ ಮುಂದಿರುವ ಕಾನೂನು ತೊಡಕುಗಳನ್ನೂ ಅವರು ಸಭೆಯಲ್ಲಿ ವಿವರಿಸಿದರು. ಮುಂಬರುವ ದಿನಗಳಲ್ಲಿ ಕಾವೇರಿ ನದಿ ಪಾತ್ರದ ಪ್ರದೇಶದಲ್ಲಿ ಮಳೆ ಬಂದರಷ್ಟೇ ಕಾವೇರಿಯಲ್ಲಿ ನೀರು ಹರಿಯಬಹುದು ಎಂದು ಹೇಳಿದರು.

ಪ್ರಮುಖ ತೀರ್ಮಾನಗಳು

- ಮಂಡ್ಯ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿರುವ ಟರ್ಷಿಯರಿ ಕ್ಯಾನ್ಸರ್ ಕೇರ್ ಸೆಂಟರ್ ಮೇಲ್ದರ್ಜೆಗೇರಿಸಲು ₹17.40 ಕೋಟಿ ಪರಿಷ್ಕೃತ ಅಂದಾಜಿಗೆ ಒಪ್ಪಿಗೆ
- ಕಲಬುರಗಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆ ಕಟ್ಟಡ ಕಾಮಗಾರಿಯ ಪರಿಷ್ಕೃತ ಅಂದಾಜು ಮೊತ್ತ ₹162.80 ಕೋಟಿ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ
- ಕೊಪ್ಪಳ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಿಸಲಾಗುತ್ತಿರುವ ಹಾಸ್ಟೆಲ್ ಕಟ್ಟಡ ನಿರ್ಮಾಣ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆ
- ಚಿಕ್ಕಮಗಳೂರು, ಉತ್ತರಕನ್ನಡ ಮತ್ತು ಕೊಡಗು ಜಿಲ್ಲೆಗಳಲ್ಲಿ ಗ್ರಾಮ ಪಂಚಾಯತ್ ಸದಸ್ಯರ ಆಯ್ಕೆಗೆ ಒದಗಿಸಿರುವ 18,000 ದಿಂದ 20,000 ನಡವಣ ಗ್ರಾಮೀಣ ಜನಸಂಖ್ಯೆಗೆ ಅಥವಾ ಆ ಭಾಗಕ್ಕೆ ಒಬ್ಬ ಸದಸ್ಯರ ಆಯ್ಕೆ ಮಾಡುವ ಅವಕಾಶವನ್ನು ಶಿವಮೊಗ್ಗ ಜಿಲ್ಲೆಯ ಹೊಸನಗರ, ತೀರ್ಥಹಳ್ಳಿ, ಸೊರಬ ಮತ್ತು ಸಾಗರ ತಾಲ್ಲೂಕುಗಳಿಗೂ ವಿಸ್ತರಿಸಲಾಗಿದೆ. ಇದಕ್ಕಾಗಿ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ (ತಿದ್ದುಪಡಿ) ಮಸೂದೆಗೆ ಅನುಮೋದನೆ ನೀಡಲಾಗಿದ್ದು, ಈ ಸಂಬಂಧ ಸುಗ್ರೀವಾಜ್ಞೆ ಹೊರಡಿಸಲಾಗುವುದು
- ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ಇಲಾಖೆಯನ್ನು ಸಹಕಾರ ಇಲಾಖೆಯಲ್ಲಿಯೇ ಮುಂದುವರಿಸಲು ತೀರ್ಮಾನ

ಅಸಂಘಟಿತ ವಲಯಕ್ಕೆ 45 ಲಕ್ಷ ಕಾರ್ಮಿಕರು: ಸಚಿವ ಲಾಡ್

ಪ್ರಜಾವಾಣಿ ವಾರ್ತೆ



ಸಂತೋಷ್ ಲಾಡ್

ಬೆಂಗಳೂರು: 'ರಾಜ್ಯ ಸರ್ಕಾರದ ವಿವಿಧ ಭದ್ರತಾ ಯೋಜನೆಗಳನ್ನು ವಿಸ್ತರಿಸುವ ಉದ್ದೇಶದಿಂದ 45 ಲಕ್ಷಕ್ಕೂ ಹೆಚ್ಚು ಕಾರ್ಮಿಕರನ್ನು ಅಸಂಘಟಿತ ವಲಯಕ್ಕೆ ಸೇರಿಸಲು ಚಿಂತನೆ ನಡೆದಿದೆ' ಎಂದು ಕಾರ್ಮಿಕ ಸಚಿವ ಸಂತೋಷ್ ಲಾಡ್ ತಿಳಿಸಿದರು.

ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯ ಪ್ರಗತಿ ಪರಿಶೀಲನಾ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ಖಾಸಗಿ ಸಾರಿಗೆ ವಲಯದಲ್ಲಿ ಚಾಲಕರು, ನಿರ್ವಾಹಕರು, ಕ್ಲೀನರ್‌ಗಳು ಮತ್ತು ಮೆಕ್ಯಾನಿಕ್‌ಗಳು ಸೇರಿದಂತೆ ಸುಮಾರು 40 ಲಕ್ಷಕ್ಕೂ ಹೆಚ್ಚು ಜನರು ಕೆಲಸ ಮಾಡುತ್ತಿದ್ದಾರೆ. ಈ ವರ್ಗಕ್ಕೆ ಉದ್ಯೋಗ ಆಧಾರಿತ ಸಾಮಾಜಿಕ ಭದ್ರತೆ ಪ್ರಯೋಜನಗಳು ಸಿಗುತ್ತಿಲ್ಲ' ಎಂದರು.

'ಖಾಸಗಿ ಸಾರಿಗೆ ಉದ್ಯಮವನ್ನೇ ನಂಬಿರುವ ಗಿಗ್ ಕಾರ್ಮಿಕರಿಗೆ ಹೊಸ ವಾಹನ ಖರೀದಿಸುವಾಗ ಶೇ 5ರಷ್ಟು ಸೆಸ್ ವಿನಾಯಿತಿ ನೀಡುವ ಚಿಂತನೆಯಿದೆ. ಮನೆಗಳಿಗೆ ಡೆಲಿವರಿ ಸೇವೆಗಳನ್ನು ಒದಗಿಸುವ ಸ್ವಿಗ್ಗಿ, ಝೊಮೆಟೊ ಮತ್ತಿತರ ವ್ಯವಸ್ಥೆಗಳಡಿ ಸುಮಾರು ನಾಲ್ಕು ಲಕ್ಷ ಜನರು ತೊಡಗಿಸಿಕೊಂಡಿದ್ದಾರೆ. ಸಿನಿಮಾ ಉದ್ಯಮದಲ್ಲಿ 20 ಸಾವಿರಕ್ಕೂ ಕೆಲಸಗಾರರಿದ್ದಾರೆ. ಈ ಕಾರ್ಮಿಕರಿಗೆ ಭವಿಷ್ಯ ನಿಧಿ ಸ್ಥಾಪಿಸಲು, ಉದ್ಯೋಗ ನೀಡುವ ಕಂಪನಿಗಳು ಸೆಸ್ ಪಾವತಿಸುವಂತೆ ಒತ್ತಾಯಿಸಲಾಗುವುದು. ಹೀಗೆ ಸಂಗ್ರಹಿಸಿದ ಮೊತ್ತಕ್ಕೆ ಸರ್ಕಾರದ ಹಣವನ್ನೂ ಹೊಂದಿಸಲಾಗುವುದು' ಎಂದು ಅವರು ತಿಳಿಸಿದರು.

'ರಾಜ್ಯದ ವಿವಿಧ ಕಡೆಗಳಲ್ಲಿ ಕಾರ್ಮಿಕರಿಗಾಗಿ 50 ಹಾಸಿಗೆಗಳ ಹೈಟೆಕ್ ಆಸ್ಪತ್ರೆ ನಿರ್ಮಿಸುವ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಕೇಂದ್ರ ಸರ್ಕಾರಕ್ಕೂ ಈ ಬಗ್ಗೆ ಮನವಿ ಸಲ್ಲಿಸಲಾಗಿದೆ' ಎಂದು ಸಚಿವರು ತಿಳಿಸಿದರು.

ರಾಜ್ಯದಲ್ಲಿ ಕಾರ್ಮಿಕ ಕಾರ್ಡ್‌ಗಳನ್ನು ಪಡೆಯುವವರ ಸಂಖ್ಯೆ ಗಣನೀಯವಾಗಿ ಹೆಚ್ಚುತ್ತಿರುವ ಬಗ್ಗೆ ಕಳವಳ ವ್ಯಕ್ತಪಡಿಸಿದ ಸಚಿವರು, 'ಈಗಾಗಲೇ 44 ಲಕ್ಷ ಜನರು ಕಾರ್ಮಿಕ ಕಾರ್ಡ್ ಪಡೆದಿದ್ದಾರೆ. ಸುಮಾರು 12 ಲಕ್ಷ ಮಂದಿ ಅರ್ಜಿ ಸಲ್ಲಿಸಿದ್ದಾರೆ' ಎಂದರು.

'ಸೂಕ್ತ ದಾಖಲೆಗಳನ್ನು ಸಲ್ಲಿಸದವರಿಗೂ ಕಾರ್ಮಿಕ ಕಾರ್ಡ್‌ಗಳನ್ನು ನೀಡಲಾಗಿದೆ. ಅಂಥವರಿಗೂ ಸೌಲಭ್ಯ ನೀಡಿದರೆ ಮಂಡಳಿಯ ನಿಧಿ ಖಾಲಿ ಆಗಬಹುದು. ಹಿಂದಿನ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ 13 ಲಕ್ಷ ಕಾರ್ಮಿಕ ಕಾರ್ಡ್‌ಗಳಿದ್ದರೆ, ಬಿಜೆಪಿ ಸರ್ಕಾರದ ಅವಧಿಯಲ್ಲಿ ಈ ಸಂಖ್ಯೆ 44 ಲಕ್ಷಕ್ಕೆ ಏರಿಕೆಯಾಗಿದೆ' ಎಂದು ಅವರು ಹೇಳಿದರು.

ಯಾವ ಸಂಸ್ಥೆ ಎಷ್ಟು ಬಸ್ಸುಗಳು		
ಸಂಸ್ಥೆ	ಬಸ್ ಸಂಖ್ಯೆ	ಮೊತ್ತ (₹ಕೋಟಿಗಳಲ್ಲಿ)
ಕೆಎಸ್‌ಆರ್‌ಟಿಸಿ	250	100
ಎನ್‌ಡಬ್ಲ್ಯುಕೆಆರ್‌ಟಿಸಿ	375	150
ಕೆಕೆಆರ್‌ಟಿಸಿ	250	100
ಬಿಎಂಟಿಸಿ	370	150

'ಶಕ್ತಿ'ಗೆ ಶಕ್ತಿ ತುಂಬಲು 1245 ಹೊಸ ಬಸ್ ಖರೀದಿ

ಬೆಂಗಳೂರು: 'ಶಕ್ತಿ' ಯೋಜನೆ ಜಾರಿಯಿಂದ ಶೇ 30 ರಷ್ಟು ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದ್ದು, ಇದಕ್ಕಾಗಿ ₹500 ಕೋಟಿ ವೆಚ್ಚದಲ್ಲಿ 1,245 ಹೊಸ ಬಸ್ಸುಗಳ ಖರೀದಿಗೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ.

ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಅವರು ಈ ವಿಷಯ ತಿಳಿಸಿದರು.

ವೈಯಕ್ತಿಕ ಮತ್ತು ಖಾಸಗಿ ವಾಹನಗಳನ್ನು ಬಳಸುತ್ತಿದ್ದ ಪ್ರಯಾಣಿಕರು ಸಾರ್ವಜನಿಕ ಸಾರಿಗೆ ಬಳಸುತ್ತಿದ್ದಾರೆ' ಎಂದು ಹೇಳಿದರು.

ಬಿಎಂಟಿಸಿಗೆ ಹವಾನಿಯಂತ್ರಿತ ಎಲೆಕ್ಟ್ರಿಕ್ ಬಸ್ಸುಗಳನ್ನು ನಿವ್ವಳ ವೆಚ್ಚ ಗುತ್ತಿಗೆ ಆಧಾರದಲ್ಲಿ ಕಾರ್ಯಾಚರಣೆ ನಡೆಸಲಾಗುವುದು ಎಂದರು.

ಕಳಪೆ ಸಮವಸ್ತ್ರ ತನಿಖೆಗೆ ನಿರ್ಧಾರ

ಒಂದನೇ ಪುಟದಿಂದ...

2022–23ನೇ ಸಾಲಿನಲ್ಲಿ (2ನೇ ಜೊತೆ) ₹96.92 ಕೋಟಿ ವೆಚ್ಚದಲ್ಲಿ 134.05 ಲಕ್ಷ ಮೀಟರ್ ಬಟ್ಟೆಯನ್ನು ಎನ್‌ಸಿಸಿಎಫ್ ಮತ್ತು ಕೇಂದ್ರೀಯ ಭಂಡಾರದಿಂದ ಮೂಲಕ ಖರೀದಿಸಲಾಗಿತ್ತು. ಇದಕ್ಕೆ ₹86.89 ಕೋಟಿ ಪಾವತಿಸಲಾಗಿತ್ತು. ಇದರಲ್ಲಿ ವಿಳಂಬ ಸರಬರಾಜು ದಂಡದ ಮೊತ್ತ ₹3.81 ಕೋಟಿ ಸೇರಿತ್ತು. ಇದರಲ್ಲಿ ₹48.72 ಕೋಟಿ ಮೌಲ್ಯದ 69.78 ಲಕ್ಷ ಮೀಟರ್ ಬಟ್ಟೆ ಕಳಪೆಯಾಗಿತ್ತು. ₹10 ಕೋಟಿ ತಡೆ ಹಿಡಿಯಲಾಗಿದೆ ಎಂದರು.

ಅಲ್ಲದೇ, ಇದೇ ವರ್ಷ 1ನೇ ಜೊತೆ ಬಟ್ಟೆ ಖರೀದಿಗೆ ನೋಂದಾಯಿತ ನೇಕಾರರಿಂದ ₹22.40 ಕೋಟಿ ಮೌಲ್ಯದ ಬಟ್ಟೆ ಖರೀದಿಸಲಾಗಿತ್ತು. ಇದರಲ್ಲಿ ₹20.04 ಕೋಟಿ ಪಾವತಿ ಮಾಡಲಾಗಿತ್ತು. ₹2.35 ಕೋಟಿ ತಡೆ ಹಿಡಿಯಲಾಗಿತ್ತು ಎಂದರು.

2023–24 ರ ಸಾಲಿನಲ್ಲಿ 1ನೇ ಜೊತೆ ಬಟ್ಟೆಯನ್ನು ₹16.92 ಕೋಟಿ ವೆಚ್ಚದಲ್ಲಿ ನೇಕಾರರಿಂದ ಖರೀದಿಸಲಾಗಿತ್ತು. ಇದಕ್ಕೆ ₹4.80 ಕೋಟಿ ಪಾವತಿ ಮಾಡಲಾಗಿತ್ತು. ₹12.12 ಕೋಟಿ ತಡೆ ಹಿಡಿಯಲಾಗಿದೆ. ಇದೇ ಅವಧಿಯಲ್ಲಿ ಕೆಎಸ್‌ಟಿಐಡಿಸಿ ಮೂಲಕ ₹8 ಕೋಟಿ ವೆಚ್ಚದಲ್ಲಿ 10.47 ಲಕ್ಷ ಮೀಟರ್ ಬಟ್ಟೆ ಖರೀದಿಸಲಾಗಿತ್ತು. ₹5.63 ಕೋಟಿ ಪಾವತಿ ಮಾಡಲಾಗಿದೆ. ₹6.08 ಕೋಟಿ ಮೌಲ್ಯದ ಸುಮಾರು 8.66 ಲಕ್ಷ ಮೀಟರ್ ಬಟ್ಟೆ ಕಳಪೆಯಾಗಿತ್ತು. ₹2.43 ಕೋಟಿ ತಡೆ ಹಿಡಿಯಲಾಗಿದೆ ಎಂದು ಪಾಟೀಲ ತಿಳಿಸಿದರು.

ಶಕ್ತಿ ಸ್ಮಾರ್ಟ್ ಕಾರ್ಡ್‌ಗೆ ಸೇವಾ ಶುಲ್ಕ



ಶಕ್ತಿ ಯೋಜನೆಯ ಸ್ಮಾರ್ಟ್ ಕಾರ್ಡ್ ವಿತರಿಸಲು ಇದ್ದ 3 ತಿಂಗಳ ಕಾಲಮಿತಿಯನ್ನು ಇನ್ನೂ 6 ತಿಂಗಳವರೆಗೆ ವಿಸ್ತರಿಸಲಾಗಿದೆ. ಅಲ್ಲದೇ, ಕಾರ್ಡ್ ಒದಗಿಸಲು ₹14.16 ಸೇವಾ ಶುಲ್ಕ ನಿಗದಿಪಡಿಸಲು ತೀರ್ಮಾನಿಸಲಾಗಿದೆ ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಸ್ಮಾರ್ಟ್ ಕಾರ್ಡ್‌ಗಳನ್ನು ಗ್ರಾಮ ಒನ್, ಬೆಂಗಳೂರು ಒನ್, ಕರ್ನಾಟಕ ಒನ್ ಸೇವಾ ಕೇಂದ್ರಗಳ ಮೂಲಕ ಫಲಾನುಭವಿಗಳಿಗೆ ಅರ್ಜಿ ಸಲ್ಲಿಸಲು ಪ್ರತಿ ಅರ್ಜಿ ₹10, ಪ್ರತಿ ಮಂಜೂರಾತಿ ಮುದ್ರಿಸಲು ₹2 ರಂತೆ ಒಟ್ಟು ₹12 ಆಗಲಿದ್ದು, ಇದಕ್ಕೆ ಜಿಎಸ್‌ಟಿ ಸೇರಿ ಒಟ್ಟು ₹14.16 ಸೇವಾ ಶುಲ್ಕ ವಿಧಿಸಲಾಗುವುದು. ಈ ಮೊತ್ತವನ್ನು ಫಲಾನುಭವಿಗಳೇ ಭರಿಸಬೇಕು ಎಂದು ಅವರು ಹೇಳಿದರು.

5ನೇ ಹಣಕಾಸು ಆಯೋಗ ರಚನೆ

ಐದನೇ ಹಣಕಾಸು ಆಯೋಗ ರಚಿಸಲು ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ.

ಇದಕ್ಕೆ ಅಧ್ಯಕ್ಷ ಮತ್ತು ಇಬ್ಬರು ಸದಸ್ಯರನ್ನು ನೇಮಿಸಲು ಮುಖ್ಯಮಂತ್ರಿಯವರಿಗೆ ಅಧಿಕಾರವನ್ನು ನೀಡಲಾಯಿತು ಎಂದು ಸಚಿವ ಎಚ್‌.ಕೆ.ಪಾಟೀಲ ತಿಳಿಸಿದರು.

ಅಲ್ಲದೇ, ಕರ್ನಾಟಕ ಲೋಕಸೇವಾ ಆಯೋಗಕ್ಕೆ ಇಬ್ಬರು ಅಧಿಕಾರಿ ವರ್ಗದ ಸದಸ್ಯರ ನೇಮಕಾತಿ ಮಾಡುವ ಅಧಿಕಾರವನ್ನು ಮುಖ್ಯಮಂತ್ರಿಯವರಿಗೆ ನೀಡಲಾಗಿದೆ. ಈ ನೇಮಕವನ್ನು ಹೈಕೋರ್ಟ್ ಮತ್ತು ಸುಪ್ರೀಂಕೋರ್ಟ್ ನಿರ್ದೇಶನದ ಅನ್ವಯ ತೀರ್ಮಾನಿಸಲಾಗಿದೆ.

ಉನ್ನತಾಧಿಕಾರಕ್ಕೆ 'ಕೇಂದ್ರ' ಕತ್ತರಿ

ಒಂದನೇ ಪುಟದಿಂದ...

'ಈ ಅಧಿಸೂಚನೆಯು ಸಮಿತಿಯಲ್ಲಿ ಗಮನಾರ್ಹ ಬದಲಾವಣೆ ತರಲಿದೆ. ಇದು ಸಮಿತಿಯಲ್ಲಿ ಸರ್ಕಾರೇತರ ಸದಸ್ಯರ ಉಪಸ್ಥಿತಿಯನ್ನು ಸಂಪೂರ್ಣವಾಗಿ ತೆಗೆದು ಹಾಕುತ್ತದೆ. ಸಿಇಸಿ ವರದಿಗಳ ಬಗ್ಗೆ ಅರ್ಜಿದಾರರಿಗೆ ಆಕ್ಷೇಪಣೆಗಳು ಇದ್ದರೆ ಯಾರಿಗೆ ಮೇಲ್ಮನವಿ ಸಲ್ಲಿಸಬೇಕು ಎಂಬ ಬಗ್ಗೆ ಅಧಿಸೂಚನೆಯಲ್ಲಿ ಸ್ಪಷ್ಟತೆ ಇಲ್ಲ. ಈಗಿನ ಉನ್ನತಾಧಿಕಾರ ಸಮಿತಿಯ ವರದಿ ಬಗ್ಗೆ ಆಕ್ಷೇಪಗಳು ಇದ್ದರೆ ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಲು ಅವಕಾಶ ಇತ್ತು' ಎಂದು ಹೇಳಿದರು.

'ರಾಜ್ಯ ಅಥವಾ ಕೇಂದ್ರ ಸರ್ಕಾರವು ಸಮಿತಿಯ ಶಿಫಾರಸುಗಳನ್ನು ಒಪ್ಪದ ಪ್ರಕರಣಗಳಲ್ಲಿ ಕುಂದುಕೊರತೆ ಪರಿಹಾರ ಕಾರ್ಯವಿಧಾನ ಸ್ಥಾಪನೆ ಮಾಡಲಾಗುತ್ತಿತ್ತು. ಅಧಿಸೂಚನೆಯ ಷರತ್ತು 3ರ ಪ್ರಕಾರ, ಇಂತಹ ಪ್ರಕರಣಗಳಲ್ಲಿ ಕೇಂದ್ರವೇ ಅಂತಿಮ ನಿರ್ಧಾರ ತೆಗೆದುಕೊಳ್ಳುವ ಅಧಿಕಾರ ಉಳಿಸಿಕೊಂಡಿದೆ. ಇದು ಭಾರಿ ಕಳವಳಕ್ಕೆ ಕಾರಣವಾದ ಬೆಳವಣಿಗೆ' ಎಂದು ಸುಪ್ರೀಂ ಕೋರ್ಟ್ ವಕೀಲ ಚಂದ್ರಶೇಖರ್ ಹೇಳಿದರು.

'ವಿವಿಪ್ಯಾಟ್ ಪೂರ್ಣ ಪರಿಶೀಲನೆ ಇಲ್ಲ'

ಒಂದನೇ ಪುಟದಿಂದ...

ಇವಿಎಂನಲ್ಲಿ ದಾಖಲಾದ ಮತಗಳ ಎಣಿಕೆ ಮತ್ತು ವಿವಿಪ್ಯಾಟ್ ಚೀಟಿಗಳ ಎಣಿಕೆ ನಡುವೆ ವ್ಯತ್ಯಾಸವಾಗಿದೆ ಎಂದು ತಾತ್ವಿಕವಾಗಿ ಹೇಳಬಹುದು. ಆದರೆ, ಮಾನವನ ದೋಷದ ಹೊರತಾಗಿ ಅಂತಹ ಯಾವುದೇ ವ್ಯತ್ಯಾಸ ಕಂಡು ಬರುವುದಿಲ್ಲ ಎಂದು ಹೇಳಿದೆ.

ಸದ್ಯ ಒಂದು ವಿಧಾನಸಭಾ ಕ್ಷೇತ್ರದ ಐದು ಮತಗಟ್ಟೆಗಳಲ್ಲಿ ಮಾತ್ರವೇ ಇವಿಎಂನಲ್ಲಿ ದಾಖಲಾದ ಮತಗಳು ಮತ್ತು ವಿವಿಪ್ಯಾಟ್ ಚೀಟಿಗಳನ್ನು ತಾಳೆ ಮಾಡಿ ನೋಡಲು ಅನುಮತಿ ಇದೆ. ಎಲ್ಲಾ ಮತಗಟ್ಟೆಗಳಲ್ಲೂ ಈ ಪರಿಶೀಲನೆ ನಡೆಸಬೇಕು ಎಂದು ಕೋರಿ ಅಸೋಸಿಯೇಷನ್ ಆಫ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ಸಲ್ಲಿಸಿರುವ ಅರ್ಜಿಗೆ ಸಂಬಂಧಿಸಿದಂತೆ ಚುನಾವಣಾ ಆಯೋಗವು ಈ ಪ್ರಮಾಣ ಪತ್ರ ಸಲ್ಲಿಸಿದೆ. ಅಸೋಸಿಯೇಷನ್ ಪರವಾಗಿ ವಕೀಲ ಪ್ರಶಾಂತ್ ಭೂಷಣ್ ವಾದ ಮಂಡಿಸಿದ್ದಾರೆ.

ಅತಿ ಹಿಂದುಳಿದವರ ನ್ಯಾಯಕ್ಕಾಗಿ ಹೋರಾಟ: ಶ್ರೀನಾಥ್


ಬೆಂಗಳೂರು: ಕಾಂಗ್ರೆಸ್ ಅಧಿಕಾರಕ್ಕೆ ಬರಲು ಹಿಂದುಳಿದ, ಅತಿ ಹಿಂದುಳಿದ ವರ್ಗಗಳ ಬೆಂಬಲವೇ ಕಾರಣ. ಈ ಸಮುದಾಯಗಳಿಗೆ ನ್ಯಾಯ ಕೊಡದೇ ಇದ್ದರೆ ಲೋಕಸಭೆ ಚುನಾವಣೆಯಲ್ಲಿ ತಕ್ಕ ಉತ್ತರ ನೀಡಲಾಗುವುದು ಎಂದು ಈಡಿಗ ಮತ್ತು ಅತಿ ಹಿಂದುಳಿದ ವರ್ಗಗಳ ಸಮಾನ ಮನಸ್ಕರ ಪೂರ್ವಭಾವಿ ಸಭೆಯ ಸ್ವಾಗತ ಸಮಿತಿ ಅಧ್ಯಕ್ಷ ಎಚ್‌.ಆರ್‌. ಶ್ರೀನಾಥ್ ಹೇಳಿದರು.

ಸೆಪ್ಟೆಂಬರ್ 9ರಂದು ನಗರದ ಅರಮನೆ ಮೈದಾನದಲ್ಲಿ ನಡೆಯುವ ಸಭೆಯ ಸಿದ್ಧತೆಯನ್ನು ಪರಿಶೀಲಿಸಿ ಮಾತನಾಡಿದ ಅವರು, 'ಅಹಿಂದ ಹೆಸರಿನಲ್ಲಿ ನಮ್ಮನ್ನು ಬಳಕೆ ಮಾಡಿಕೊಳ್ಳಲಾಗಿದೆ. ಅದಕ್ಕೆ ಸೂಕ್ತ ನ್ಯಾಯವನ್ನು ನಮಗೆ ಕೊಟ್ಟಿಲ್ಲ' ಎಂದರು.

ಕಾಮಗಾರಿ ಪರಿಶೀಲಿಸಿದ ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿ

ನೆಲದಡಿ ಎಲ್‌ಪಿಜಿ ದಾಸ್ತಾನು

ಪ್ರಜಾವಾಣಿ ವಾರ್ತೆ



ನೆಲದಡಿ ಎಲ್‌ಪಿಜಿ ಸಂಗ್ರಹಿಸುವ ಯೋಜನೆಯ ಕುರಿತು ಎಚ್‌ಪಿಸಿಎಲ್ ಪ್ರಧಾನ ವ್ಯವಸ್ಥಾಪಕ (ಯೋಜನೆ) ರಮಣಮೂರ್ತಿ ಅವರು ವಿವರಿಸಿದರು

ಅಂಕಿ-ಅಂಶಗಳು

₹854 ಕೋಟಿ – ನೆಲದಡಿಯಲ್ಲಿ ಎಲ್‌ಜಿ ಸಂಗ್ರಹಿಸುವ ಎಚ್‌ಪಿಸಿಎಲ್ ಯೋಜನೆಯ ಅಂದಾಜು ವೆಚ್ಚ

₹384.42 ಕೋಟಿ, ಯೋಜನೆಗೆ ಇದುವರೆಗೆ ಆಗಿರುವ ವೆಚ್ಚ

80 ಸಾವಿರ ಟನ್ – ಸಂಗ್ರಹಾಗಾರದಲ್ಲಿ ಎಲ್‌ಪಿಜಿ ದಾಸ್ತಾನು ಸಾಮರ್ಥ್ಯ

ಮಂಗಳೂರು: ನೆಲದಡಿಯ ಅನಿಲ ಸಂಗ್ರಹಾಗಾರದಿಂದ ಅನಿಲ ಸೋರಿಕೆ ಆಗದಂತೆ ಹೇಗೆ ತಡೆಯುವಿರಿ? ಕ್ಷಿಪಣಿ ದಾಳಿ ನಡೆದರೂ ಅನಿಲ ಸೋರಿಕೆ ಆಗದಂತೆ ತಡೆಯುವ ವ್ಯವಸ್ಥೆ ಇದೆಯೇ? ಸುನಾಮಿ ಅಪ್ಪಳಿಸಿದರೂ ಇದು ಸುರಕ್ಷಿತವಾಗಿರುವುದೇ? ಯೋಜನೆಯಿಂದ ಪರಿಸರದ ಮೇಲಾಗುವ ಪರಿಣಾಮಗಳೇನು?

ನೆಲದಡಿಯಲ್ಲಿ ಗುಹೆ ನಿರ್ಮಿಸಿ, ಅದರಲ್ಲಿ ದ್ರವೀಕೃತ ಪೆಟ್ರೋಲಿಯಂ ಅನಿಲ (ಎಲ್‌ಪಿಜಿ) ದಾಸ್ತಾನು ಮಾಡುವ ಯೋಜನೆಯನ್ನು ಅನುಷ್ಠಾನಗೊಳಿಸುತ್ತಿರುವ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ (ಎಚ್‌ಪಿಸಿಎಲ್) ಅಧಿಕಾರಿಗಳು ವಿಧಾನ ಪರಿಷತ್ತಿನ ಸರ್ಕಾರಿ ಭರವಸೆಗಳ ಸಮಿತಿಯಿಂದ ಪ್ರಶ್ನೆಗಳ ಸುರಿಮಳೆಯನ್ನೇ ಎದುರಿಸಿದರು. ಬಾಳ ಗ್ರಾಮದಲ್ಲಿ ಅನುಷ್ಠಾನವಾಗುತ್ತಿರುವ ಈ ಯೋಜನಾ ಸ್ಥಳಕ್ಕೆ ಬಿ.ಎಂ.ಫಾರೂಕ್ ನೇತೃತ್ವದ ಸಮಿತಿಯು ಗುರುವಾರ ಭೇಟಿ ನೀಡಿ ಪರಿಶೀಲಿಸಿತು.

ಈ ಯೋಜನೆಯಲ್ಲಿ ಕೈಗೊಂಡ ಸುರಕ್ಷತಾ ಕ್ರಮಗಳನ್ನು ವಿವರಿಸಿದ ಎಚ್‌ಪಿಸಿಎಲ್‌ನ ಪ್ರಧಾನ ವ್ಯವಸ್ಥಾಪಕ ಕೆ.ವಿ.ರಮಣಮೂರ್ತಿ, 'ನೆಲದಡಿಯ ಶಿಲೆಯನ್ನು ಕೊರೆದು ಗುಹೆ ನಿರ್ಮಿಸಿ ಅನಿಲ ದಾಸ್ತಾನು ಮಾಡುವ ವಿಧಾನವು ನೆಲದ ಮೇಲಿನ ಸಂಗ್ರಹಾಗಾರಕ್ಕಿಂತಲೂ ಸುರಕ್ಷಿತ' ಎಂದರು.

'ಗುಹೆ ಕೊರೆಯುವ ಕಲ್ಲಿನ ಗುಣಮಟ್ಟ ಹಾಗೂ ಜಾಗದಲ್ಲಿ ನೀರಿನ ಲಭ್ಯತೆ ಬಲುಮುಖ್ಯ. ಆಳಕ್ಕೆ ಹೋದಷ್ಟೂ ನೀರಿನ ಒತ್ತಡ ಜಾಸ್ತಿಯಾಗುತ್ತದೆ. ಸೋರಿಕೆಯನ್ನು ತಡೆಯಲು ಅದು ನೆರವಾಗಬಲ್ಲುದು. ನಮ್ಮ ಸಂಗ್ರಹಾಗಾರ ನೆಲಮಟ್ಟದಿಂದ 150 ಮೀ ಆಳದಲ್ಲಿರುತ್ತದೆ. ಅದರ ಮೇಲೆ 15 ಮೀ.ನಷ್ಟು ಮಣ್ಣಿನ ಪದರ, 15 ಮೀ ಕಠಿಣ ಶಿಲೆ ಇರುವುದರಿಂದ ಅಪಾಯದ ಸಾಧ್ಯತೆ ಕಡಿಮೆ' ಎಂದರು.

'ಅನಿಲ ಸೋರಿಕೆಯಾದರೆ ನಿಯಂತ್ರಿಸಲು ಸ್ವಯಂಚಾಲಿತವಾಗಿ ವಾಲ್ವ್ ವ್ಯವಸ್ಥೆಗಳಿವೆ. ಸೋರಿಕೆಯಾದ ತಕ್ಷಣವೇ ಕೊಳವೆಗಳಿಗೆ ನೀರು ಹಾಯಿಸಿ, 2ನೇ ಹಂತದ ವ್ಯವಸ್ಥೆಗಳಿವೆ. ಕನಿಷ್ಠ 50 ವರ್ಷ ಬಾಳಿಕೆ ಬರುವಂತೆ ಇದನ್ನು ವಿನ್ಯಾಸಗೊಳಿಸಲಾಗಿದೆ. ಲೋಹವನ್ನು ಬಳಸದ ಕಾರಣ ಇದರ ನಿರ್ವಹಣೆಯೂ ಸುಲಭ' ಎಂದರು.

ಎಚ್‌ಪಿಸಿಎಲ್ ಪ್ರಧಾನ ವ್ಯವಸ್ಥಾಪಕ ವೇಣು ಮಾಧವ್, 'ಕ್ಷಿಪಣಿಗಳಿಗಿಂತಲೂ ಭೂಕಂಪದಿಂದ ಅಪಾಯ ಎದುರಾಗುವ ಸಾಧ್ಯತೆ ಹೆಚ್ಚು. ಹಾಗಾಗಿ ಭೂಕಂಪನ ಸಾಧ್ಯತೆಗಳನ್ನು ಅವಲೋಕಿಸಿಯೇ ಅತ್ಯಂತ ಪ್ರಶಸ್ತವಾದ ಸ್ಥಳವನ್ನು ಈ ಯೋಜನೆಗೆ ಆರಿಸಿಕೊಂಡಿದ್ದೇವೆ. ಈ ಯೋಜನೆಯಡಿ 1.1 ಕಿ.ಮೀ ಉದ್ದದ ಸುರಂಗ ನಿರ್ಮಿಸಬೇಕಿದ್ದು, 900 ಮೀ.ನಷ್ಟು ಸುರಂಗ ಪೂರ್ಣಗೊಂಡಿದೆ' ಎಂದರು.

'ಇತ್ತೀಚಿನ ವರ್ಷಗಳಲ್ಲಿ ಎಲ್‌ಪಿಜಿಗೆ ಬೇಡಿಕೆ ಅನೇಕ ಪಟ್ಟು ಹೆಚ್ಚಾಗಿದೆ. ಪ್ರಸ್ತುತ ಎಚ್‌ಪಿಸಿಎಲ್‌ನ ಮಂಗಳೂರು ಎಲ್‌ಪಿಜಿ ಆಮದು ಸೌಕರ್ಯದಡಿ (ಎಂಎಲ್‌ಐಎಫ್) 31.8 ಲಕ್ಷ ಟನ್ ಎಲ್‌ಪಿಜಿ ನಿರ್ವಹಿಸಲಾಗುತ್ತಿದೆ. ಇದನ್ನು 2040ರ ವೇಳೆಗೆ 54.2 ಲಕ್ಷ ಟನ್‌ಗೆ ಹೆಚ್ಚಿಸಲು ಈ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದ್ದು, ಇದು 2024ರ ಜೂನ್‌ನಲ್ಲಿ ಪೂರ್ಣಗೊಳ್ಳಲಿದೆ. ಇಲ್ಲಿಂದ ಬೆಂಗಳೂರು, ಹೈದರಾಬಾದ್‌ಗೂ ಎಲ್‌ಪಿಜಿಯನ್ನು ಕೊಳವೆಗಳ ಮೂಲಕ ರವಾನಿಸಲು ಕ್ರಮಕೈಗೊಳ್ಳಲಾಗುತ್ತಿದೆ' ಎಂದರು.

ನಕಲಿ ಡಿ.ಡಿ ಸೃಷ್ಟಿ: ಬ್ಯಾಂಕ್‌ಗೆ ₹2 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ



ಕಾರಟಗಿ: ನಕಲಿ ಡಿಮ್ಯಾಂಡ್ ಡ್ರಾಫ್ಟ್ (ಡಿ.ಡಿ) ಸೃಷ್ಟಿಸಿ ಪಟ್ಟಣದ ಐಸಿಐಸಿಐ ಬ್ಯಾಂಕ್ ಶಾಖೆಗೆ ₹2 ಕೋಟಿ ವಂಚಿಸಿರುವ ಬಗ್ಗೆ ಸ್ಥಳೀಯ ಪೊಲೀಸ್ ಠಾಣೆಯಲ್ಲಿ ಗುರುವಾರ ದೂರು ದಾಖಲಾಗಿದೆ.

ರಾಯಚೂರು ಜಿಲ್ಲೆಯ ಸಿಂಧನೂರಿನ ಉರಕುಂದಿ ಈರಣ್ಣಸ್ವಾಮಿ ಟ್ರೇಡರ್ಸ್ ಮಾಲೀಕ ವೀರೇಶ ಮತ್ತು ಇತರರು ಸೇರಿ ಬ್ಯಾಂಕ್‌ಗೆ ವಂಚಿಸಿದ್ದಾರೆ ಎಂದು ಐಸಿಐಸಿಐ ಬ್ಯಾಂಕ್‌ನ ವ್ಯವಸ್ಥಾಪಕ ವಿಜಯಕೃಷ್ಣ ಕಾರಟಗಿ ಅವರು ದೂರು ನೀಡಿದ್ದಾರೆ.

ವೀರೇಶ ಅವರು, ಪಟ್ಟಣದ ಐಸಿಐಸಿಐ ಬ್ಯಾಂಕ್‌ಗೆ ಸೆ. 4ರಂದು ಬಂದು, ತಲಾ ₹1 ಕೋಟಿಯ ಎರಡು ಡಿ.ಡಿ.ಗಳನ್ನು (ಡಿಡಿ ನಂ.500200, 500201) ಕೊಟ್ಟು ತಮ್ಮ ಖಾತೆಗೆ ಜಮಾ ಮಾಡುವಂತೆ ಕೊಟ್ಟಿದ್ದರು. ಮಹಾರಾಷ್ಟ್ರದ ಚಾರ್ಕೋಪ್ ಶಾಖೆಯಿಂದ ಮೆ. ಮೀಡಿಯಾ ಎಂಟರ್‌ಟೈನ್‌ಮೆಂಟ್‌ನಿಂದ ಪಡೆದ ಡಿ.ಡಿಗಳನ್ನು ನೀಡಿದ್ದಾರೆ.

ಸೆ.5ರಂದು ಡಿ.ಡಿಗಳನ್ನು ಬ್ಯಾಂಕ್‌ನ ನಿಯಮಾನುಸಾರ ಪರಿಶೀಲಿಸಿ, ಅವರ ಖಾತೆಗೆ ಹಣವನ್ನು ಜಮಾ ಮಾಡಲಾಯಿತು.

ಅದೇ ದಿನ ಮೆ. ಮೀಡಿಯಾ ಎಂಟರ್‌ಟೈನ್‌ಮೆಂಟ್‌ನ ಪ್ರತಿನಿಧಿ ಚಾರ್ಕೋಪ್ ಶಾಖೆಗೆ ಭೇಟಿ ನೀಡಿ, ಡಿ.ಡಿ.ಗಳನ್ನು ರದ್ದುಗೊಳಿಸಬೇಕು. ಮೂಲ ಡಿ.ಡಿಗಳು ತಮ್ಮ ಶಾಖೆಯಲ್ಲಿಯೇ ಇವೆ. ಹೀಗಾಗಿ ಬ್ಯಾಂಕ್ ಖಾತೆಯ ಮೊತ್ತ ಹಿಂದಿರುಗಿಸಬೇಕು ಎಂದು ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಇದನ್ನು ಗಮನಿಸಿದಾಗ, ವೀರೇಶ ಮತ್ತು ಇತರರು ಸೇರಿ ಬ್ಯಾಂಕ್‌ಗೆ ವಂಚಿಸಲೆಂದೇ ನಕಲಿ ಡಿ.ಡಿಗಳನ್ನು ನೈಜ ಡಿ.ಡಿಗಳಂತೆ ಸೃಷ್ಟಿಸಿ ಹಣ ಜಮಾ ಮಾಡಿಸಿಕೊಂಡಿದ್ದಾರೆ. ಹೀಗಾಗಿ ಅವರ ವಿರುದ್ಧ ಕಾನೂನುಕ್ರಮ ಕೈಗೊಳ್ಳಬೇಕು ಎಂದು ಬ್ಯಾಂಕಿನ ಅಧಿಕಾರಿಗಳು ದೂರಿನಲ್ಲಿ ತಿಳಿಸಿದ್ದಾರೆ. ಈ ಕುರಿತು ತನಿಖೆ ಆರಂಭಿಸಲಾಗಿದೆ' ಎಂದು ಕಾರಟಗಿ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಸಿದ್ರಾಮಯ್ಯ ಬಿ.ಎಂ. ಪ್ರತಿಕ್ರಿಯಿಸಿದ್ದಾರೆ.


'ಸಂವಿಧಾನದಿಂದ ಏನೂ ಇಲ್ಲವೆಂದು ಹೇಳಲಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಮಾಡಿದ್ದ ಟ್ವೀಟ್‌ನಲ್ಲಿ ಯಾವುದೇ ತಪ್ಪಿಲ್ಲ. ಸಂವಿಧಾನವೇ ನನ್ನ ಧರ್ಮ ಎಂದು ಹೇಳಿದ್ದೇನೆ. ಸಂವಿಧಾನದಿಂದ ಏನೂ ಇಲ್ಲವೆಂದು ಬಿಜೆಪಿಯವರು ಹೇಳಲಿ. ಅವರು ಮೊಸರಿನಲ್ಲೂ ಕಲ್ಲು ಹುಡುಕುವುದು ಬೇಡ' ಎಂದು ಬಿಜೆಪಿ ನಾಯಕರಿಗೆ ಸಚಿವ ಪ್ರಿಯಾಂಕ್ ಖರ್ಗೆ ತಿರುಗೇಟು ನೀಡಿದರು.

ಸನಾತನ ಧರ್ಮದ ಬಗ್ಗೆ ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಅವರು ನೀಡಿರುವ ಹೇಳಿಕೆ ಬೆಂಬಲಿಸಿ ಪ್ರಿಯಾಂಕ್ ಖರ್ಗೆ ಅವರು ಸಮಾನ ಹಕ್ಕುಗಳನ್ನು ನೀಡದ ಯಾವುದೇ ಧರ್ಮವು ರೋಗದಂತೆ ಎಂದಿದ್ದರು. ಈ ಹಿನ್ನೆಲೆಯಲ್ಲಿ ಉದಯನಿಧಿ ಸ್ಟಾಲಿನ್ ಮತ್ತು ಪ್ರಿಯಾಂಕ್ ಖರ್ಗೆ ವಿರುದ್ಧ ಉತ್ತರ ಪ್ರದೇಶದಲ್ಲಿ ಎಫ್‌ಐಆರ್ ದಾಖಲಾಗಿದೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



❦ ಸುಭಾಷಿತ ❦
ನೀವು ಕೋಪದಿಂದ ಇರುವ ಪ್ರತಿ ನಿಮಿಷವೂ 60 ಸೆಕೆಂಡುಗಳಷ್ಟು ಕಾಲದ ಮನಃಶಾಂತಿಯನ್ನು ಕಳೆದುಕೊಂಡಿರುತ್ತೀರಿ.
-ರಾಲ್ಫ್ ವಾಲ್ಡೊ ಎಮರ್ಸನ್

ಸನಾತನ ಧರ್ಮ: ಸೃಷ್ಟಿಯಾಗಿರುವ ವಿವಾದವು ಈ ಕಾಲಕ್ಕೆ ಹಿಡಿದ ಕನ್ನಡಿ

ಡಿಎಂಕೆ ಮುಖಂಡ ಮತ್ತು ತಮಿಳುನಾಡಿನ ಸಚಿವ ಉದಯನಿಧಿ ಸ್ಟಾಲಿನ್ ಅವರು ಸನಾತನ ಧರ್ಮದ ಕುರಿತು ನೀಡಿರುವ ಹೇಳಿಕೆಯು ರಾಜಕೀಯವಾಗಿ ಸಂಚಲನ ಸೃಷ್ಟಿಸಿದೆ. ಬಿಜೆಪಿ ವಿರೋಧಿ ಪಕ್ಷಗಳು ಇತ್ತೀಚೆಗೆ ರೂಪಿಸಿಕೊಂಡಿರುವ (ಡಿಎಂಕೆ ಇದರ ಭಾಗವಾಗಿದೆ) ಐ.ಎನ್‌.ಡಿ.ಐ.ಎ. ('ಇಂಡಿಯಾ') ಮೈತ್ರಿಕೂಟದ ಮೇಲೆ ವಾಗ್ದಾಳಿ ನಡೆಸುವುದಕ್ಕಾಗಿ ಬಿಜೆಪಿ ಈ ವಿಚಾರವನ್ನು ಬಳಸಿ-ಕೊಳ್ಳುತ್ತಿದೆ. ಸನಾತನ ಧರ್ಮವನ್ನು ಕೊರೊನಾ ವೈರಾಣು, ಮಲೇರಿಯಾ ಮತ್ತ ಡೆಂಗಿಗೆ ಉದಯನಿಧಿ ಹೋಲಿಸಿದ್ದಾರೆ. ಇಂತಹವುಗಳನ್ನು ವಿರೋಧಿಸಿದರಷ್ಟೇ ಸಾಲದು, ನಿರ್ಮೂಲನೆ ಮಾಡಬೇಕು ಎಂದು ಹೇಳಿದ್ದಾರೆ. ಉದಯನಿಧಿ ಅವರು ಸಾಮಾನ್ಯ ಮುಖಂಡ ಅಲ್ಲ, ಅವರು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಅವರ ಮಗ. ಹೀಗಾಗಿಯೇ ಅವರ ಹೇಳಿಕೆಯು ಹೆಚ್ಚು ಗಮನ ಸೆಳೆದಿದೆ ಮಾತ್ರವಲ್ಲ ಅದಕ್ಕೊಂದು ಅಧಿಕೃತತೆಯೂ ಬಂದಿದೆ. ಐ.ಎನ್‌.ಡಿ.ಐ.ಎ. ಮೈತ್ರಿಕೂಟದ ಮುಖಂಡರನ್ನು ಈ ಹೇಳಿಕೆಯು ಇಕ್ಕಟ್ಟಿಗೆ ಸಿಲುಕಿಸಿದೆ ಮತ್ತು ಅವರು ರಕ್ಷಣಾತ್ಮಕವಾಗುವಂತೆ ಮಾಡಿದೆ. ಈ ಅವಕಾಶವನ್ನು ಸಮರ್ಥವಾಗಿ ಬಳಸಿಕೊಂಡಿರುವ ಬಿಜೆಪಿ, ಇದು ಹಿಂದೂ ಧರ್ಮದ ಮೇಲೆ ಮತ್ತು ದೇಶದ ವಿಶಿಷ್ಟ ಅಸ್ಮಿತೆ, ಪರಂಪರೆ ಹಾಗೂ ಮೌಲ್ಯಗಳ ಮೇಲೆ ನಡೆಸಿದ ದಾಳಿ ಎಂದು ಬಿಂಬಿಸಿದೆ. ಚುನಾವಣೆಗಳು ಸನಿಹವಿರುವ ಈ ಸಂದರ್ಭದಲ್ಲಿ ಇದು ಅನಾಯಾಸವಾಗಿ ಸಿಕ್ಕ ಅವಕಾಶ ಎಂದು ಬಿಜೆಪಿ ಭಾವಿಸಿದೆ.



ಉದಯನಿಧಿ ಅವರ ಹೇಳಿಕೆಯು ಐ.ಎನ್‌.ಡಿ.ಐ.ಎ. ಮೈತ್ರಿಕೂಟದ ಮುಖಂಡರನ್ನು ಇಕ್ಕಟ್ಟಿಗೆ ಸಿಲುಕಿಸಿದೆ

ತನ್ನ ರಾಜಕೀಯ ಮತ್ತು ಚುನಾವಣಾ ಸಂಕಥನದ ಭಾಗವಾಗಿ ಈಗ ಸೃಷ್ಟಿಯಾಗಿರುವ ವಿವಾದವನ್ನು ಬಿಜೆಪಿ ಬಳಸಿಕೊಂಡರೆ ಅದರಿಂದ ಬಿಜೆಪಿ ವಿರೋಧಿ ಪಕ್ಷಗಳ ಮೈತ್ರಿಕೂಟಕ್ಕೆ ಹಿನ್ನಡೆ ಆಗಬಹುದು. ಹಾಗಾಗಿಯೇ ಮೈತ್ರಿಕೂಟದ ಮುಖಂಡರಲ್ಲಿ ಗೊಂದಲ ಉಂಟಾಗಿದೆ. ಮೈತ್ರಿಕೂಟದಲ್ಲಿರುವ ಹೆಚ್ಚಿನ ಪಕ್ಷಗಳು ಈ ಹೇಳಿಕೆಯಿಂದ ಅಂತರ ಕಾಯ್ದುಕೊಂಡಿವೆ. ಕಾಂಗ್ರೆಸ್‌ನಿಂದ ಹಲವು ರೀತಿಯ ಪ್ರತಿಕ್ರಿಯೆಗಳು ಬಂದಿವೆ. ನಾಜೂಕಿನಿಂದ ಅಲ್ಲಗಳೆಯುವ ಯತ್ನ, ಬೆಂಬಲ, ವಿರೋಧ... ಹೀಗೆ ಎಲ್ಲ ರೀತಿಯ ಅಭಿಪ್ರಾಯಗಳೂ ಅದರಲ್ಲಿ ಸೇರಿವೆ. ಆದರೆ, ಹೆಚ್ಚಿನ ಪಕ್ಷಗಳು ಬಹಳ ಎಚ್ಚರ ವಹಿಸಿವೆ ಮತ್ತು ಹೇಳಿಕೆಗೆ ಹೆಚ್ಚಿನ ಬೆಂಬಲ ವ್ಯಕ್ತ-ವಾಗಿಲ್ಲ. ಹೇಳಿಕೆಯು ಎಷ್ಟು ಸಮಸ್ಯಾತ್ಮಕವಾಗಿದೆ ಎಂಬುದನ್ನು ಇದು ಸೂಚಿಸುತ್ತದೆ. ಉದಯನಿಧಿ ಅವರು ಸರಿಯಾದ ರೀತಿಯಲ್ಲಿ ಈ ಹೇಳಿಕೆಯನ್ನು ನೀಡಿಲ್ಲ. ಯಾವುದೇ ಹಾನಿ ಇಲ್ಲದ ಹಾಗೆ ಸಮರ್ಥಿಸಿಕೊಳ್ಳುವುದಕ್ಕೂ ಸಾಧ್ಯವಿಲ್ಲದ ರೀತಿಯಲ್ಲಿ ಈ ಹೇಳಿಕೆ ಇದೆ. ಈ ಹೇಳಿಕೆಯನ್ನು ಬಿಜೆಪಿ ತನಗೆ ಬೇಕಾದಂತೆ ವ್ಯಾಖ್ಯಾನಿಸುತ್ತಿದೆ. ಉದಯನಿಧಿ ಅವರು ನರಮೇಧಕ್ಕೆ ಕರೆ ಕೊಟ್ಟಿದ್ದಾರೆ ಎಂದೂ ಬಿಜೆಪಿ ಹೇಳಿದೆ. ಇದು ದ್ವೇಷ ಭಾಷಣಕ್ಕೆ ಸಮಾನ ಎಂಬ ಕಾರಣಕ್ಕೆ ಉದಯನಿಧಿ ಮೇಲೆ ಕ್ರಮ ಕೈಗೊಳ್ಳಬೇಕು ಎಂದು ನ್ಯಾಯಾಲಯಗಳಲ್ಲಿ ಅರ್ಜಿ ಸಲ್ಲಿಸಲಾಗಿದೆ. ಇದಕ್ಕೆ ಪ್ರತಿದೂರುಗಳು ಕೂಡ ದಾಖಲಾಗಿವೆ.

ತಮ್ಮ ಪಕ್ಷದ ದ್ರಾವಿಡ ಸಿದ್ಧಾಂತವನ್ನು ಉದಯನಿಧಿ ಅವರು ಪುನರುಚ್ಚರಿಸಿದ್ದಾರೆ. ದ್ರಾವಿಡ ಸಿದ್ಧಾಂತದ ಪ್ರಕಾರ, ಸನಾತನ ಧರ್ಮ ಎಂಬುದು ವೈದಿಕ ಧರ್ಮ ಮತ್ತು ಜಾತಿ ಆಧಾರಿತ ಸಾಮಾಜಿಕ ವ್ಯವಸ್ಥೆ. ಉದಯನಿಧಿ ಅವರು ತಮ್ಮ ಮಾತುಗಳನ್ನು ಹೆಚ್ಚು ಸ್ವೀಕಾರಾರ್ಹ ರೀತಿಯಲ್ಲಿ ಆಡಬಹುದಿತ್ತು. ಸನಾತನ ಧರ್ಮ ಎಂಬುದಕ್ಕೆ ಸ್ಪಷ್ಟವಾದ ವ್ಯಾಖ್ಯೆ ಎಂದೂ ಇರಲಿಲ್ಲ. ಇದನ್ನು ಬೇರೆ ಬೇರೆ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ. ಈ ಕಾರಣದಿಂದಾಗಿ ಸನಾತನ ಧರ್ಮವು ಬೇರೆ ಬೇರೆ ವ್ಯಕ್ತಿಗಳ ಪಾಲಿಗೆ ಬೇರೆ ಬೇರೆ ರೀತಿಯಲ್ಲಿ ಕಾಣಬಹುದು. ಇದೇ ಇದರ ಶಕ್ತಿ ಎಂಬಂತೆ ಭಾಸವಾಗುತ್ತದೆ. ಉದಯನಿಧಿ ಹೇಳಿಕೆಯು ರಾಷ್ಟ್ರ ಮಟ್ಟದಲ್ಲಿ ಸೃಷ್ಟಿಸಿದ ಸಂಚಲನ ಮತ್ತು ವಿವಾದವು ನಮ್ಮ ಕಾಲವು ಹೇಗಿದೆ ಎಂಬುದರ ಸೂಚಕವೂ ಹೌದು. ಕೆಲವು ವರ್ಷಗಳ ಹಿಂದೆ ಆಗಿದ್ದರೆ ಈ ಹೇಳಿಕೆಯು ಪೌರನೊಬ್ಬನ ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಎಂದು ಹೇಳಿ ನಿರ್ಲಕ್ಷ್ಯ ಅಥವಾ ಅಲ್ಲಗಳೆಯುವಿಕೆಗೆ ಒಳಗಾಗುತ್ತಿತ್ತೇನೋ. ಹೇಳಿಕೆ ಮತ್ತು ಅದರ ಪರಿಣಾಮಗಳ ಬಗೆಗಿನ ಚರ್ಚೆ ಹೆಚ್ಚು ಗದ್ದಲವಿಲ್ಲದೆ ನಡೆಯಬಹುದಿತ್ತು. ಆದರೆ, ಸನಾತನ ಧರ್ಮ ಮತ್ತು ಅದರ ವ್ಯಾಖ್ಯೆಯ ಮೇಲೆ ಏಕಸ್ವಾಮ್ಯ ಸಾಧಿಸುತ್ತಿರುವ ಈ ಹೊತ್ತಿನಲ್ಲಿ ಈಗ ಸೃಷ್ಟಿಯಾಗಿರುವ ವಿವಾದವು ಸಹಜವೇ ಆಗಿದೆ.

ದಿನದ ಟ್ವೀಟ್

ಗಂಭೀರವಾಗಿ ಪರಿಗಣಿಸಿ

ಬೀದಿ ನಾಯಿಗಳ ಸಮಸ್ಯೆಗೆ ಇರುವ ಪ್ರಮುಖ ಕಾರಣಗಳಲ್ಲಿ ಒಂದಾದ ಬೀದಿ ತ್ಯಾಜ್ಯದ ಬಗ್ಗೆ ಯಾರೊಬ್ಬರೂ ಮಾತನಾಡದೇ ಇರುವುದು ಆಶ್ಚರ್ಯಕರ. ಬೀದಿ ನಾಯಿಗಳ ಸಂತತಿ ಕ್ಷಿಪ್ರಗತಿಯಲ್ಲಿ ಏರುವುದಕ್ಕೆ ಕಾರಣವಾಗುವ ರೀತಿಯಲ್ಲಿ ನಾವು ಭಾರತೀಯರು ಪ್ರತಿದಿನ ಆಹಾರವನ್ನು ಬೀದಿಗೆ ಬಿಸಾಡುತ್ತಿದ್ದೇವೆ.

ಭೂಷಣ್ ಶುಕ್ಲಾ, ಮನೋವೈದ್ಯ

ಕಿಡಿನುಡಿ



ಒಳಚರಂಡಿ ಸ್ವಚ್ಛಗೊಳಿಸಲು ಹೋದವರು ಸಾವಿಗೀಡಾಗುತ್ತಿರುವ ಪ್ರಕರಣಗಳನ್ನು ಪ್ರಭುತ್ವ ನಿರ್ಲಕ್ಷಿಸುತ್ತಿರುವುದು ನಾಚಿಕೆಗೇಡು. ಇದು ಕ್ರಿಮಿನಲ್ ಅಪರಾಧಕ್ಕೆ ಸಮನಾದ ನಿರ್ಲಕ್ಷ್ಯ. ಕಾರ್ಮಿಕರು ಒಳಚರಂಡಿಗೆ ಇಳಿದು ಸ್ವಚ್ಛಗೊಳಿಸುವ ಈ ಭಯಾನಕ ವ್ಯವಸ್ಥೆಯಿಂದ ತಮಿಳುನಾಡಿನಲ್ಲಿ ದಾಸ್ಯಕ್ಕೆ ಈಡಾಗುತ್ತಿರುವವರ ಸಂಗತಿಯು ದ್ರಾವಿಡ ಸಿದ್ಧಾಂತ ಮತ್ತು ಸನಾತನ ಕುರಿತ ಚರ್ಚೆಯ ನಡುವೆ ಎಲ್ಲಿ ಮರೆಯಾಯಿತು? ಸರ್ಕಾರ ಸ್ಪಂದಿಸುವುದೇ?
(ಚೆನ್ನೈನಲ್ಲಿ ಒಳಚರಂಡಿ ಸ್ವಚ್ಛಗೊಳಿಸುವ ಕಾರ್ಯಕ್ಕೆ ಮುಂದಾದ ಕಾರ್ಮಿಕರಿಬ್ಬರು ಉಸಿರುಗಟ್ಟಿ ಮೃತಪಟ್ಟಿರುವ ಪ್ರಕರಣಕ್ಕೆ ಪ್ರತಿಕ್ರಿಯೆ)

ವಿದ್ಯಾಭೂಷಣ್ ರಾವತ್, ಬರಹಗಾರ

25 ವರ್ಷಗಳ ಹಿಂದೆ

ಮಂಗಳವಾರ, 8-9-1998

• ಎಪಿಎಂಸಿ ಮುಷ್ಕರ, ವಹಿವಾಟು ಬಂದ್

ಬೆಂಗಳೂರು, ಸೆ. 7– ಕೃಷಿ ಉತ್ಪನ್ನ ಮಾರುಕಟ್ಟೆ ಕಾಯ್ದೆಗೆ ತಿದ್ದುಪಡಿ ಮಾಡಿ ಹೊಸ ಖರೀದಿ ವ್ಯವಸ್ಥೆ ಜಾರಿಗೆ ತರುವ ರಾಜ್ಯ ಸರ್ಕಾರದ ನಿರ್ಧಾರವನ್ನು ವಿರೋಧಿಸಿ ವರ್ತಕರು ಕರೆ ನೀಡಿದ್ದ ರಾಜ್ಯವ್ಯಾಪಿ ಬಂದ್ ಇಂದು ಯಶಸ್ವಿಯಾಗಿದೆ.

ಬಂದ್ ಆಚರಣೆ ಅಂಗವಾಗಿ 139 ಕೃಷಿ ಉತ್ಪನ್ನ ಮಾರುಕಟ್ಟೆ ಸಹಕಾರಿ ಸಂಘಗಳಲ್ಲಿ (ಎಪಿಎಂಸಿ) ವ್ಯಾಪಾರ ಸ್ಥಗಿತಗೊಂಡಿತು. ಕೃಷಿ ಮಾರುಕಟ್ಟೆ ಇಲಾಖೆಯ ಹೆಚ್ಚುವರಿ ನಿರ್ದೇಶಕ ಬಿ.ಎಸ್.ಪಾಟೀಲ ಅವರು 'ರಾಜ್ಯದ ಪ್ರಮುಖ ಮಾರುಕಟ್ಟೆಗಳಲ್ಲಿನ ವಹಿವಾಟು ಸಂಪೂರ್ಣ ಸ್ಥಗಿತಗೊಂಡಿತ್ತು' ಎಂದು 'ಪ್ರಜಾವಾಣಿ'ಗೆ ತಿಳಿಸಿದರು.

ಎಪಿಎಂಸಿ ಕಾಯ್ದೆ ತಿದ್ದುಪಡಿ ಜಾರಿ ಖಚಿತ: ವರ್ತಕರ ಮುಷ್ಕರಕ್ಕೆ ಮಣಿದು ಎಪಿಎಂಸಿ ಕಾಯ್ದೆ ತಿದ್ದುಪಡಿಯನ್ನು ಕೈಬಿಡುವ ಪ್ರಶ್ನೆಯೇ ಇಲ್ಲ ಎಂದು ನಿಯಂತ್ರಿತ ಮಾರುಕಟ್ಟೆ ಖಾತೆ ಸಹಾಯಕ ಸಚಿವ ಎಚ್.ನಾಗಪ್ಪ ಸ್ಪಷ್ಟಪಡಿಸಿದರು.

• ಹವಾಲಾ: ಆರಿಫ್, ಜೈನ್ ಸೋದರರು ಆರೋಪಮುಕ್ತ

ನವದೆಹಲಿ, ಸೆ. 7 (ಪಿಟಿಐ)– ಕೇಂದ್ರದ ಮಾಜಿ ಸಚಿವ ಹಾಗೂ ಬಹುಜನ ಸಮಾಜ ಪಕ್ಷದ ಸಂಸತ್ ಸದಸ್ಯ ಆರಿಫ್ ಮಹಮ್ಮದ್ ಖಾನ್ ಅವರು ₹ 65 ಕೋಟಿ ಜೈನ್ ಹವಾಲಾ ಹಗರಣದ ಆರೋಪದಿಂದ ಮುಕ್ತರಾಗಿದ್ದಾರೆ. ದೆಹಲಿ ಹೈಕೋರ್ಟ್ ಇಂದು ಈ ಬಗ್ಗೆ ತೀರ್ಪು ನೀಡಿತು.

ಖಾನ್ ಜೊತೆಯಲ್ಲಿ ಸಹ ಆರೋಪಿಗಳಾಗಿದ್ದ ಎಸ್.ಕೆ.ಜೈನ್, ಎಸ್.ಕೆ.ಜೈನ್, ಬಿ.ಆರ್.ಜೈನ್ (ಜೈನ್ ಸಹೋದರರು) ಮತ್ತು ಅವರ ಕಾರ್ಯದರ್ಶಿ ಜೆ.ಕೆ.ಜೈನ್ ಅವರೆಲ್ಲರನ್ನು ಕೂಡ ಆರೋಪದಿಂದ ಹೈಕೋರ್ಟ್ ಮುಕ್ತಗೊಳಿಸಿದೆ.

50 ವರ್ಷಗಳ ಹಿಂದೆ

ಶನಿವಾರ, 8-9-1973

• ಅಧಿಕಾರಿಗಳ ವರದಿ 'ಸತ್ಯಕ್ಕೆ ದೂರ' ತನಿಖೆಗೆ ಆಗ್ರಹ

ಬೆಂಗಳೂರು, ಸೆ. 7 – ಹಾಸನ ಲಾಠಿ ಪ್ರಯೋಗ ಪ್ರಕರಣದಲ್ಲಿ ಅಧಿಕಾರಿಗಳಿಂದ ಸರ್ಕಾರಕ್ಕೆ ಬಂದ ವರದಿಗಳು ಸತ್ಯಕ್ಕೆ ದೂರ ಎಂದು ವಿಧಾನಸಭೆಯಲ್ಲಿ ಇಂದು ಆಪಾದಿಸಿದ ವಿರೋಧ ಪಕ್ಷದ ಸದಸ್ಯರು, ಅಲ್ಲಿನ ಜಿಲ್ಲಾ ಪೊಲೀಸ್ ಅಧಿಕಾರಿಯನ್ನು ತಕ್ಷಣ ಸಸ್ಪೆಂಡ್ ಮಾಡಿ ಇಡೀ ಪ್ರಕರಣದ ಬಗ್ಗೆ ನ್ಯಾಯಾಂಗ ವಿಚಾರಣೆಯನ್ನು ನಡೆಸಬೇಕು ಎಂದು ಆಗ್ರಹಪಡಿಸಿದರು.

ನಿನ್ನೆ ಪರಿಸ್ಥಿತಿಯ ಪ್ರತ್ಯಕ್ಷ ಪರಿಶೀಲನೆ ನಡೆಸಿ ಮರಳಿದ ಐದು ಮಂದಿ ಸದಸ್ಯರು ಒಂದು ಗಂಟೆ ಕಾಲ, ತಾವು ಕಂಡು ಕೇಳಿದಂತೆ, ಅಲ್ಲಿನ ಪರಿಸ್ಥಿತಿಯನ್ನು ಸಭೆಯ ಗಮನಕ್ಕೆ ತಂದರು. ಅದನ್ನು ಅನುಸರಿಸಿ, 'ಇನ್ನೂ ಹೆಚ್ಚು ಮಾಹಿತಿ ಸಂಗ್ರಹಿಸಿ ಮುಂದಿನ ಕ್ರಮ ಕೈಗೊಳ್ಳುವುದಾಗಿ' ಕಂದಾಯ ಮಂತ್ರಿ ಹುಚ್ಚಮಾಸ್ತಿಗೌಡರು ಆಶ್ವಾಸನೆ ನೀಡಿದರು.


• ಎಂದೂ ಗುಂಪುಗಾರಿಕೆಯಲ್ಲಿ ತೊಡಗಿಲ್ಲ; ಬೇರೆಯವರು ಮಾಡಿದರೆ ಕಷ್ಟ– ಅರಸು

ಬೆಂಗಳೂರು, ಸೆ. 7– ತಾವು ಎಂದೂ ಗುಂಪುಗಾರಿಕೆಯಲ್ಲಿ ತೊಡಗಿಲ್ಲವೆಂದು ಇಂದು ಇಲ್ಲಿ ತಿಳಿಸಿದ ಮುಖ್ಯಮಂತ್ರಿ ದೇವರಾಜ ಅರಸು ಅವರು, 'ಬೇರೆಯವರು ಗುಂಪುಗಾರಿಕೆ ಮಾಡಿದರೆ, ಆಗ ಕಷ್ಟವಾಗುತ್ತದೆ' ಎಂದರು.

ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷರು ಮತ್ತಿತರ ಹೈಕಮಾಂಡ್ ಸದಸ್ಯರನ್ನು ಭೇಟಿ ಮಾಡಿ ರಾಜ್ಯದ ರಾಜಕೀಯ ಪರಿಸ್ಥಿತಿ ಕುರಿತು ಚರ್ಚಿಸಿ ಮುಖ್ಯಮಂತ್ರಿಗಳು ಬೆಳಿಗ್ಗೆ ನಗರಕ್ಕೆ ಹಿಂದಿರುಗಿದರು.

ಜಗತ್ತಿನೆದುರು ಭಾರತೀಯರ ಪರಿಣತಿಯ ಅನಾವರಣಕ್ಕೆ ದೊರೆತ ಅವಕಾಶ...

ಜಿ–20: ಅಧ್ಯಕ್ಷ ಗಾದಿಯಲ್ಲಿ ಗೆದ್ದ ಭಾರತ



ಸೀಮೋಲ್ಲಂಘನ

ಸುಧೀಂದ್ರ ಬುಧ್ಯ

'ವಸುಧೈವ ಕುಟುಂಬಕಂ' ಎಂಬ ವಿಶಾಲ ಧ್ಯೇಯದ ಅಡಿಯಲ್ಲಿ 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ' ಎಂಬ ಘೋಷವಾಕ್ಯದೊಂದಿಗೆ ಜಿ-20 ರಾಷ್ಟ್ರಗಳ ಅಧ್ಯಕ್ಷ ಸ್ಥಾನವನ್ನು ಭಾರತ ಅಲಂಕರಿಸಿದಾಗ, ಜಗತ್ತು ಕೊರೊನಾದ ಹೊಡೆತದಿಂದ ಆಗಷ್ಟೇ ಚೇತರಿಸಿಕೊಳ್ಳುತ್ತಿತ್ತು. ಗಾಯದ ಮೇಲೆ ಬರೆ ಎಳೆದಂತೆ ಉಕ್ರೇನ್ ಯುದ್ಧ ಜಾಗತಿಕ ಅರ್ಥವ್ಯವಸ್ಥೆಯನ್ನು ಬಾಧಿಸಿತ್ತು. ಭಾರತ ತುಂಬು ಆತ್ಮವಿಶ್ವಾಸದಿಂದಲೇ ಹೆಜ್ಜೆಗಳನ್ನು ಇರಿಸಿತು.

ಹಾಗಾದರೆ ಜಿ-20 ರಾಷ್ಟ್ರಗಳ ಅಧ್ಯಕ್ಷ ಸ್ಥಾನದಲ್ಲಿ ಕೂತು ಭಾರತ ಸಾಧಿಸಿದ್ದೇನು? ಜಿ-20 ಪ್ರಧಾನ ಕಚೇರಿಯನ್ನು ಅಥವಾ ಶಾಶ್ವತ ಸಿಬ್ಬಂದಿಯನ್ನು ಹೊಂದಿರುವ ಸಂಸ್ಥೆಯಲ್ಲ. ಪ್ರತಿವರ್ಷ ಸದಸ್ಯ ರಾಷ್ಟ್ರಗಳ ಪೈಕಿ ಒಂದು ರಾಷ್ಟ್ರವು ನಾಯಕತ್ವ ವಹಿಸಿಕೊಳ್ಳುತ್ತದೆ ಮತ್ತು ವರ್ಷದಾದ್ಯಂತ ಚರ್ಚೆಗಳಿಗೆ ವೇದಿಕೆ ಒದಗಿಸುತ್ತದೆ. ವಿವಿಧ ಹಂತಗಳಲ್ಲಿ ಸಭೆಗಳು ನಡೆದು ಕೊನೆಗೆ ವಾರ್ಷಿಕ ಶೃಂಗಸಭೆಯಲ್ಲಿ ನಿರ್ಣಯಗಳನ್ನು ಒಮ್ಮತದಿಂದ ಅಂಗೀಕರಿಸಲಾಗುತ್ತದೆ.


ಜಗತ್ತಿನ ಒಟ್ಟಾರೆ ಜಿಡಿಪಿಯ ಶೇಕಡ 85ರಷ್ಟನ್ನು ತಮ್ಮದಾಗಿಸಿಕೊಂಡಿರುವ, ಜಾಗತಿಕ ವಾಣಿಜ್ಯ ವಹಿವಾಟಿನ ಶೇಕಡ 75ರಷ್ಟನ್ನು ನಿರ್ವಹಿಸುವ ಜಿ-20 ರಾಷ್ಟ್ರಗಳು, ಆ ಕಾರಣದಿಂದಲೇ ಮಹತ್ವ ಪಡೆದುಕೊಂಡಿವೆ. ಹಾಗಾಗಿ, ಜಗತ್ತಿನ ಯಾವುದೇ ಮೂಲೆಯಲ್ಲಿ ಏಳುವ ಆರ್ಥಿಕ ತಲ್ಲಣದ ಅಲೆಯನ್ನು ಸಂಬಾಳಿಸುವ ಜವಾಬ್ದಾರಿ ಕೂಡ ಈ ರಾಷ್ಟ್ರಗಳದ್ದೇ. 1999ರಲ್ಲಿ ಏಷ್ಯಾದ ಕೆಲವು ರಾಷ್ಟ್ರಗಳು ಆರ್ಥಿಕ ಹಿಂಜರಿಕೆಯನ್ನು ಅನುಭವಿಸಿದಾಗ, ವಿಶ್ವದ ಹತ್ತೊಂಬತ್ತು ರಾಷ್ಟ್ರಗಳ ಜೊತೆಗೆ ಐರೋಪ್ಯ ಒಕ್ಕೂಟ ಜೊತೆಯಾಗಿ ಜಿ-20 ಅಸ್ತಿತ್ವಕ್ಕೆ ಬಂತು.

ಈ ಒಕ್ಕೂಟದ ಮುಖ್ಯ ಉದ್ದೇಶ, ಮುಂದಿನ ದಿನಗಳಲ್ಲಿ ಎದುರಾಗಬಹುದಾದ ಆರ್ಥಿಕ ತಲ್ಲಣಗಳ ಮುನ್ನೋಟ ಅರಿಯಲು, ಬದಲಿ ಮಾರ್ಗೋಪಾಯಗಳ ಬಗ್ಗೆ ಚರ್ಚಿಸಲು, ಆರ್ಥಿಕ ಸಮತೋಲನ ಸಾಧಿಸಲು ಸದಸ್ಯ ರಾಷ್ಟ್ರಗಳ ಹಣಕಾಸು ಸಚಿವರು, ಕೇಂದ್ರ ಹಣಕಾಸು ಸಂಸ್ಥೆಗಳ ಮುಖ್ಯಸ್ಥರು ಒಂದೆಡೆ ಸೇರಿ ಚರ್ಚಿಸಲು ಅನುವಾಗುವ ವೇದಿಕೆ ಸೃಷ್ಟಿಸುವುದಾಗಿತ್ತು. ನಂತರ 2008- 09ರಲ್ಲಿ ಜಾಗತಿಕ ಆರ್ಥಿಕ ಹಿಂಜರಿತ ಉಂಟಾದಾಗ ಜಿ-20 ರಾಷ್ಟ್ರಗಳ ಮುಖ್ಯಸ್ಥರು ವಾರ್ಷಿಕ ಸಭೆಯಲ್ಲಿ ಪಾಲ್ಗೊಳ್ಳುವ ಪರಿಪಾಟ ಬೆಳೆಯಿತು. ಮುಖ್ಯವಾಗಿ ಆರ್ಥಿಕತೆ ಹಾಗೂ ಹಣಕಾಸು ವಿಷಯಗಳ ಕುರಿತು ಚರ್ಚಿಸುವುದು ಜಿ-20 ರಾಷ್ಟ್ರಗಳ ಮೂಲ ಆಶಯವಾದರೂ, ಜಾಗತಿಕ ರಾಜಕೀಯ ಅಥವಾ ಭದ್ರತಾ ವಿಷಯಗಳಿಗೆ ಸಂಬಂಧಿಸಿದ ಚರ್ಚೆಗಳಿಗೂ ಈ ಹಿಂದೆ ಜಿ-20 ವೇದಿಕೆಯಾಗಿತ್ತು. ಹಾಗಾಗಿ, ಉಕ್ರೇನ್ ಯುದ್ಧದ ಕುರಿತು ತಟಸ್ಥ ನಿಲುವನ್ನು ತಳೆದ, ರಷ್ಯಾದೊಂದಿಗೆ ವಾಣಿಜ್ಯಿಕ ಸಂಬಂಧವನ್ನು ಕಾಯ್ದುಕೊಂಡ ಭಾರತ, ಜಿ-20ರ ಅಧ್ಯಕ್ಷ ಸ್ಥಾನದಲ್ಲಿ ಕೂತು ಅಮೆರಿಕ, ಐರೋಪ್ಯ ಒಕ್ಕೂಟ, ಚೀನಾ ಮತ್ತು ರಷ್ಯಾವನ್ನು ಹೇಗೆ ಸರಿದೂಗಿಸಬಹುದು ಎಂಬ ಪ್ರಶ್ನೆಯೂ ಇತ್ತು.

ಆದರೆ ಭಾರತ ಜಿ-20 ಅಧ್ಯಕ್ಷ ಸ್ಥಾನದ ಬಾಧ್ಯತೆ ಮತ್ತು ತನ್ನ ಹಿತಾಸಕ್ತಿಗಳನ್ನು ಗಮನದಲ್ಲಿ ಇರಿಸಿಕೊಂಡು ವಿವಿಧ ಹಂತಗಳ ಚರ್ಚೆಯನ್ನು ಪ್ರಭಾವಿಸಿತು. 'ಒಂದು ಭೂಮಿ' ಧ್ಯೇಯದ ಅಡಿಯಲ್ಲಿ ಹವಾಮಾನ ಬದಲಾವಣೆ, ಹಸಿರು ಉಪಕ್ರಮಗಳನ್ನು ಚರ್ಚೆಗೆ ಎತ್ತಿಕೊಂಡಿತು. 'ಒಂದು ಕುಟುಂಬ' ಧ್ಯೇಯದಡಿಯಲ್ಲಿ ಒಳಗೊಳ್ಳುವಿಕೆ ಮತ್ತು ಸಮಗ್ರ ಅಭಿವೃದ್ಧಿ ಕುರಿತು ಚರ್ಚಿಸಲಾಯಿತು. 'ಒಂದು ಭವಿಷ್ಯ'ದ ಕಲ್ಪನೆಯಡಿ ದಕ್ಷಿಣ ಜಗತ್ತಿನ ಕಳವಳ ಮತ್ತು ಸವಾಲುಗಳಿಗೆ ಧ್ವನಿಯಾಗುವ ಪ್ರಯತ್ನವನ್ನು ಭಾರತ ಮಾಡಿತು.

ಮುಖ್ಯವಾಗಿ ಪರಿಸರ ನಾಶ ಮತ್ತು ಹವಾಮಾನ ಬದಲಾವಣೆಯನ್ನು ಅಂಕೆಯಲ್ಲಿಡುವ ಸೂತ್ರವಾಗಿ ಭಾರತದ ಪಾರಂಪರಿಕ ಜೀವನಪದ್ಧತಿಯ ಆಧಾರದಲ್ಲಿ ಪರಿಸರಸ್ನೇಹಿ ಅಭ್ಯಾಸಗಳನ್ನು ಪ್ರೋತ್ಸಾಹಿಸುವ LiFE (Lifestyle for Environment) ಆಂದೋಲನದ ಅಗತ್ಯವನ್ನು ಭಾರತ ಜಗತ್ತಿಗೆ ವಿವರಿಸಿತು. ಡಿಜಿಟಲ್ ಸಾರ್ವಜನಿಕ ಮೂಲಸೌಕರ್ಯ ಅಭಿವೃದ್ಧಿಯ ಅನಿವಾರ್ಯವನ್ನು ವಿವರಿಸುವಾಗ, ಆಧಾರ್, ಯುಪಿಐ, ಕೋವಿನ್, ಡಿಜಿಲಾಕರ್ ಯಶಸ್ಸಿನ ಉದಾಹರಣೆಗಳನ್ನು ಹಂಚಿಕೊಂಡಿತು. ಸೋರಿಕೆ ತಡೆಯಲು ಸಬ್ಸಿಡಿಯನ್ನು ಜನರ ಖಾತೆಗೆ ನೇರವಾಗಿ ಜಮಾ ಮಾಡುವ ವ್ಯವಸ್ಥೆಯನ್ನು ಭಾರತ ಹೇಗೆ ನಿರ್ವಹಿಸುತ್ತಿದೆ ಎನ್ನುವುದನ್ನು ವಿವರಿಸಿತು.

ಜಗತ್ತಿನಲ್ಲಿ ನಡೆಯುವ ಡಿಜಿಟಲ್ ಪಾವತಿಗಳಲ್ಲಿ ಶೇಕಡ 46ರಷ್ಟು ಭಾರತ ಒಂದರಲ್ಲೇ ನಡೆಯುತ್ತವೆ. ಬೀದಿಬದಿಯ ವ್ಯಾಪಾರಿಯಿಂದ ಹಿಡಿದು ಐಷಾರಾಮಿ ಮಾಲ್‌ವರೆಗೆ ಎಲ್ಲೆಡೆಯೂ ಮತ್ತು ಎಲ್ಲ ವರ್ಗದ ವ್ಯಾಪಾರಸ್ಥರೂ ಡಿಜಿಟಲ್ ಪಾವತಿ ವ್ಯವಸ್ಥೆಗೆ ಹೇಗೆ ತೆರೆದುಕೊಂಡಿದ್ದಾರೆ ಎನ್ನುವುದನ್ನು ಆತ್ಮವಿಶ್ವಾಸದಿಂದ ಪ್ರಚುರಪಡಿಸಿತು. ಸೈಬರ್ ಸುರಕ್ಷತೆ ಮತ್ತು ಮಾಹಿತಿ ಗೋಪ್ಯತೆಯ ಭಯದಿಂದಾಗಿ ಹಲವು ರಾಷ್ಟ್ರಗಳು ಇನ್ನೂ ಪೂರ್ಣಮಟ್ಟದಲ್ಲಿ ಡಿಜಿಟಲ್ ಜಗತ್ತಿಗೆ ತೆರೆದುಕೊಂಡಿಲ್ಲ. ಒಂದೊಮ್ಮೆ ಈ ರಾಷ್ಟ್ರಗಳು ಭಾರತದ ಪರಿಣತಿಯನ್ನು ಬಳಸಿಕೊಳ್ಳಲು ಮುಂದಾದರೆ, ಈ ಕ್ಷೇತ್ರ ಇನ್ನಷ್ಟು ಬೆಳವಣಿಗೆ ಕಾಣಬಹುದು, ಉದ್ಯೋಗ ಸೃಷ್ಟಿಯಾಗಬಹುದು.



ಮುಖ್ಯವಾಗಿ, ತನಗೆ ದೊರೆತ ಜಿ-20ರ ಅಧ್ಯಕ್ಷ ಸ್ಥಾನವನ್ನು, ವೈವಿಧ್ಯ ಮತ್ತು ವಿವಿಧ ಕ್ಷೇತ್ರಗಳಲ್ಲಿ ಭಾರತೀಯರು ಗಳಿಸಿರುವ ಪರಿಣತಿ ಹಾಗೂ ಸಾಮರ್ಥ್ಯವನ್ನು ಜಗತ್ತಿನೆದುರು ಅನಾವರಣಗೊಳಿಸಲು ದೊರೆತ ಅವಕಾಶ ಎಂದು ಭಾರತ ನೋಡಿತು. ಜಿ-20 ಸಭೆ ಆಯೋಜನೆಯಾದಲ್ಲೆಲ್ಲಾ, ಸ್ಥಳೀಯ ಕರಕುಶಲ ವಸ್ತುಗಳು, ಕೈಮಗ್ಗ ಉತ್ಪನ್ನಗಳ ಪ್ರದರ್ಶನ ಹಾಗೂ ಮಾರಾಟ ಮತ್ತು ಸಿರಿಧಾನ್ಯಗಳಿಂದ ತಯಾರಿಸಲಾದ ರುಚಿಕರವಾದ ದೇಶಿ ಮತ್ತು ವಿದೇಶಿ ಖಾದ್ಯಗಳ ವ್ಯವಸ್ಥೆ ಮಾಡಲಾಗಿತ್ತು.

ಜಾಗತಿಕ ಪ್ರವಾಸೋದ್ಯಮದಲ್ಲಿ ಭಾರತದ ಪಾಲು ನಗಣ್ಯ ಎನ್ನುವಷ್ಟಿದೆ. ಹಾಗಾಗಿ ಬಂಡವಾಳ ಆಕರ್ಷಣೆ ಮತ್ತು ಪ್ರವಾಸೋದ್ಯಮವನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದಲೂ ಭಾರತ ತನಗೆ ದೊರೆತ ಅವಕಾಶವನ್ನು ಬಳಸಿಕೊಂಡಿತು. ರಾಜತಾಂತ್ರಿಕ ಜಾಣ್ಮೆಮೆರೆದು ಕಾಶ್ಮೀರ ಮತ್ತು ಅರುಣಾಚಲ ಪ್ರದೇಶದಲ್ಲಿ ಜಿ-20 ಸಭೆಗಳನ್ನು ಯಶಸ್ವಿಯಾಗಿ ನಡೆಸಿ, ಅವು ವಿವಾದಿತ ಪ್ರದೇಶಗಳು ಎಂಬ ಚೀನಾ ಮತ್ತು ಪಾಕಿಸ್ತಾನದ ಆಕ್ಷೇಪಗಳಿಗೆ ಮಾನ್ಯತೆ ಸಿಗದಂತೆ ಮಾಡಿತು.

ಹತ್ತು ವರ್ಷಗಳ ಹಿಂದೆ ಭಾರತವು ಜಗತ್ತಿನ ಹತ್ತನೇ ದೊಡ್ಡ ಆರ್ಥಿಕತೆಯಾಗಿತ್ತು. ಇದೀಗ ಐದನೇ ಸ್ಥಾನದಲ್ಲಿದೆ ಮತ್ತು ಮೂರನೇ ಸ್ಥಾನಕ್ಕೆ ದಾಪುಗಾಲಿಡಲು ಉತ್ಸುಕವಾಗಿದೆ. ಕಡಿಮೆ ವೆಚ್ಚದಲ್ಲಿ ವೈಜ್ಞಾನಿಕ ಆವಿಷ್ಕಾರಗಳನ್ನು ಸಾಧ್ಯವಾಗಿಸಬಲ್ಲ, ವಿವಿಧ ಕ್ಷೇತ್ರಗಳಲ್ಲಿ ಮುಂದುವರಿದ ರಾಷ್ಟ್ರಗಳಿಗೆ ಪೈಪೋಟಿ ಒಡ್ಡಬಲ್ಲ ದೇಶವಾಗಿ ಭಾರತ ಇಂದು ಜಗತ್ತಿಗೆ ಪರಿಚಯವಾಗಿದೆ. ಕೊರೊನಾ ಲಸಿಕೆ ಮತ್ತು ಚಂದ್ರಯಾನ-3ರ ಯಶಸ್ಸು ಆ ದಿಸೆಯಲ್ಲಿ ಪ್ರಮುಖ ಉದಾಹರಣೆಗಳು.

ಹಾಗಂತ ಭಾರತ ತೆಗೆದುಕೊಂಡ ನಿಲುವುಗಳಿಗೆ ವಿರೋಧ ಇರಲಿಲ್ಲ ಎಂದಲ್ಲ. 'ವಸುಧೈವ ಕುಟುಂಬಕಂ' ಎಂಬ ಸಂಸ್ಕೃತದ ಘೋಷವಾಕ್ಯಕ್ಕೆ ಚೀನಾದ ವಿರೋಧವಿತ್ತು. ಸಿರಿಧಾನ್ಯಗಳನ್ನು ಪ್ರಚುರಪಡಿಸಲು ಭಾರತ ಹೊರಟಾಗ ಚೀನಾ ಅಡ್ಡಮಾತನಾಡಿತು. ಸಾಲದ ಸುಳಿಯಲ್ಲಿ ಸಿಲುಕಿಸಿ ಹಿತಾಸಕ್ತಿ ಸಾಧಿಸುವ ಶಕ್ತಿಗಳ ವಿರುದ್ಧ ಇತರ ದೇಶಗಳನ್ನು ಭಾರತ ಎಚ್ಚರಿಸಿದಾಗ, ಪೂರೈಕೆ ಜಾಲ ವಿಕೇಂದ್ರೀಕರಣಗೊಳ್ಳಬೇಕು ಎಂದು ಪ್ರತಿಪಾದಿಸಿದಾಗ ಚೀನಾ ತುಟಿಕಚ್ಚಿತು. ಚೀನಾದ ಮುಖ್ಯಸ್ಥ ಷಿ ಜಿನ್‌ಪಿಂಗ್, ಜಿ-20 ಸಭೆಗೆ ಬಾರದೇ ಇರುವುದಕ್ಕೆ ಕಾರಣವನ್ನು ಬಿಡಿಸಿ ಹೇಳಬೇಕಿಲ್ಲ.

ಅದೆಲ್ಲಾ ಬಿಡಿ, ಪ್ರಜಾಪ್ರಭುತ್ವದ ಉಗಮವನ್ನು ಪಶ್ಚಿಮ ಜಗತ್ತು ಗ್ರೀಸ್‌ನಲ್ಲಿ ಗುರುತಿಸುತ್ತದೆ. ಗ್ರೀಸ್ ದೇಶವನ್ನು 'ಪ್ರಜಾಪ್ರಭುತ್ವದ ತೊಟ್ಟಿಲು' ಎಂದೇ ನಾವು ಪಠ್ಯ ಓದಿ ಪರೀಕ್ಷೆಗಳನ್ನು ಬರೆದಿದ್ದೇವೆ. ಆದರೆ ಪ್ರಜಾಪ್ರಭುತ್ವದ ಬೇರುಗಳು ಭಾರತದಲ್ಲಿ ಬಹಳ ಹಿಂದೆಯೇ ಇದ್ದವು. ಬಸವಣ್ಣನ ಅನುಭವ ಮಂಟಪ ಅಂತಹದ್ದೊಂದು ವ್ಯವಸ್ಥೆಯ ದ್ಯೋತಕವಾಗಿತ್ತು ಎಂಬುದನ್ನು ಪ್ರಧಾನಿ ನರೇಂದ್ರ ಮೋದಿ ಅವರು ಈಗಾಗಲೇ ಹಲವು ಜಾಗತಿಕ ವೇದಿಕೆಗಳಲ್ಲಿ ಪ್ರಸ್ತಾಪಿಸಿ-ದ್ದಾರೆ. ಜಿ-20 ಶೃಂಗಸಭೆಯಲ್ಲಿ 'ಭಾರತ– ಪ್ರಜಾಪ್ರಭುತ್ವದ ಮಾತೆ' ಎಂಬ ವಿಶೇಷ ಪ್ರದರ್ಶಿಕೆಯೊಂದು ಇರಲಿದೆ. ಜಿ-20ರ ಅಧ್ಯಕ್ಷತೆಯ ಈ ಅವಧಿ, ಭಾರತದ ಅಂತಃಸತ್ವ-ವನ್ನು ಜಗತ್ತಿನೆದುರು ಅನಾವರಣಗೊಳಿಸುತ್ತಿದೆ.



ತೆಪರೇಸಿ ಧರ್ಮ!

• ಬಿ.ಎನ್.ಮಲ್ಲೇಶ್

ತೆಪರೇಸಿ, ಗುಡ್ಡೆ ಬಾರಲ್ಲಿ ಗುಂಡಾಕ್ತ ಕೂತಿದ್ದರು. ಎರಡು ಪೆಗ್ ಏರಿದ ಮೇಲೆ ಗುಡ್ಡೆ ಕೇಳಿದ 'ಗುರೂ... ಈ ಸನಾತನಕ್ಕೂ ಪುರಾತನಕ್ಕೂ ಏನು ವ್ಯತ್ಯಾಸ?'

'ಎರಡೂ ಒಂದೇ ತರ ಕಾಣ್ತವೆ ಕಣಲೆ, ಆದ್ರೆ ಒಂದೇ ಅಲ್ಲ'.

'ಮತ್ತೆ ಇಂಡಿಯಾ, ಭಾರತ? ಒಂದೇ ತಾನೆ?'

'ಅಲ್ಲ, ಈಗ 'ಇಂಡಿಯಾ'ನೇ ಬೇರೆ, 'ಭಾರತ'ನೇ ಬೇರೆ'.

'ಹೌದಾ? ಮತ್ತೆ ಕರ್ನಾಟಕ ಇಂಡಿಯಾದಾಗೈತೋ ಭಾರತದಾಗೈತೋ?'

'ಅದು ಮುಂದಿನ ಪಾರ್ಲಿಮೆಂಟ್ ಎಲೆಕ್ಷನ್ ರಿಸಲ್ಟ್ ಬಂದ ಮೇಲೆ ಗೊತ್ತಾಕ್ಕತಿ' ತೆಪರೇಸಿ ನಕ್ಕ.

'ಹೋಗ್ಲಿಬಿಡು, ಈಗ ಏಷ್ಯಾ ಕಪ್ಪಲ್ಲಿ ಇಂಡಿಯಾ ಆಡ್ತಾ ಐತೋ ಭಾರತವೋ?'

'ಸದ್ಯಕ್ಕೆ ಇಂಡಿಯಾ ಆಡ್ತಾ ಐತಿ'.

'ಅವತ್ತು 'ಇಂಡಿಯಾ'ದೋರು 'ಭಾರತ್' ಜೋಡೊ ಮಾಡಿದ್ರು. ಇವತ್ತು 'ಭಾರತ್'ನೋರು 'ಇಂಡಿಯಾ' ಜೋಡೊ ಮಾಡ್ತಾರಾ?'

'ಗೊತ್ತಿಲ್ಲ...'

'ಹೋಗ್ಲಿಬಿಡು, ಈಗ ಧರ್ಮ ಅಂದ್ರೇನು?'

'ಯಾವ ಧರ್ಮ? ಇಂಡಿಯಾದ್ದೋ ಭಾರತದ್ದೋ?'

'ಥೋ ತೆಲಿ ಕೆಟ್ಟೋತಪ... ಅದು ಬ್ಯಾರೆ ಐತಾ?' ಗುಡ್ಡೆ ತಲೆ ಕೆರೆದುಕೊಂಡ.

'ಅದು ಹಂಗೇ... ಈಗ ಧರ್ಮ, ದೇವರು, ಜಾತಿಮತ ಎಲ್ಲ ಇಂಡಿಯಾದ್ದೇ ಬೇರೆ, ಭಾರತದ್ದೇ ಬೇರೆ'.

'ಅಲೆ ಇವ್ನ, ಹಂಗಾ? ಹೆಸರು ಬದ್ಲಾದ್ರೆ ಎಲ್ಲ ಬದ್ಲಾಗ್ತಾವಾ? ಈ ರಾಜಕಾರಣಿಗಳು ಎಲ್ಲ ಬದ್ಲಾಗ್ತಾರಾ? ಹೋಗ್ಲಿ, ಈಗ ನಿನ್ ಧರ್ಮ ಯಾವುದು?' ಗುಡ್ಡೆ ಕಪ್ ಎತ್ತಿ ಕೇಳಗಿಟ್ಟ.

'ನನ್ ಧರ್ಮನಾ? ಈಗ ಬಿಲ್ ಬಂದ ಮೇಲೆ ನೀನು ದುಡ್ಡಿಲ್ಲ ಅಂದ್ರೆ ನಾನೇ ಬಿಲ್ ಕೊಟ್ಟು ನಿನ್ನ ನಿಮ್ಮನಿ ಬಾಗಿಲಿಗೆ ಮಲಗ್ಸಿ ಬರೋದು'.

'ಗ್ರೇಟ್ ಕಣಲೆ ತೆಪರ, ಅಲ್ಲ ನನ್ ಜೇಬಲ್ಲಿ ದುಡ್ಡಿಲ್ಲ ಅಂತ ನಿಂಗೆಂಗ್ ಗೊತ್ತಾತಲೆ?'

'ಅದು ನಿನ್ ಮುಖ ನೋಡಿದ್ರೆ ಗೊತ್ತಾಗಲ್ವ?' ತೆಪರೇಸಿ ನಕ್ಕ. ಗುಡ್ಡೆಗೂ ನಗು ತಡೆಯಲಾಗಲಿಲ್ಲ.

ಸಂಗತ

ಮೊಬೈಲ್: ಮೂಲಮೂರ್ತಿ ಮಂಕಾಗಿದೆ!

ಈ ಸಾಧನದ ಒಳಿತಿನ ಮೂಲಮೂರ್ತಿ ಮಂಕಾಗಿ, ಕೆಡುಕೆಂಬ ಉತ್ಸವಮೂರ್ತಿಯೇ ವಿಜೃಂಭಿಸುತ್ತಿರುವುದು ಸದ್ಯದ ವಾಸ್ತವ

• ಡಾ. ಮುರಳೀಧರ ಕಿರಣಕೆರೆ

ಮಾದಕದ್ರವ್ಯ, ಮೊಬೈಲ್ ವ್ಯಸನ ಕುರಿತಾಗಿ ಪ್ರೌಢಶಾಲೆಯೊಂದರಲ್ಲಿ ನಡೆದ ಸ್ವಾಸ್ಥ್ಯ ಸಂಕಲ್ಪ ಕಾರ್ಯಕ್ರಮದಲ್ಲಿ ಪ್ರಶ್ನೆಯ ಮೇಲೆ ಪ್ರಶ್ನೆ ಕೇಳುತ್ತಾ ತನ್ನ ಅರಿವನ್ನು ವಿಸ್ತರಿಸಿಕೊಳ್ಳುತ್ತಿದ್ದ ಆ ಬಾಲಕಿಯ ಚುರುಕುತನ ಗಮನ ಸೆಳೆಯುವಂತಿತ್ತು. ಕಾರ್ಯಕ್ರಮದ ನಂತರ ಹೆಡ್‌ಮಾಸ್ತರ್ ಬಳಿ ಅವಳ ಬಗ್ಗೆ ವಿಚಾರಿಸಿದಾಗ ತಿಳಿದ ವಿಷಯ ಆಶ್ಚರ್ಯ ತಂದಿತ್ತು!

ದೂರದ ಊರಿಂದ ಈ ಶಾಲೆಗೆ ಪೋಷಕರು ಸೇರಿಸಿದ್ದರು. ಅಲ್ಲಿಯೇ ಖ್ಯಾತನಾಮ ವಿದ್ಯಾಸಂಸ್ಥೆ-ಗಳಿರುವಾಗ ಇಷ್ಟು ದೂರದ ಈ ಶಾಲೆಯನ್ನು ಏಕೆ ಆಯ್ದುಕೊಂಡರೆಂಬ ಪ್ರಶ್ನೆಗೆ ಶಿಕ್ಷಕರು ಕೊಟ್ಟ ಕಾರಣ ಆಕೆಯ ಮೊಬೈಲ್ ಹುಚ್ಚು. ಎಷ್ಟೊತ್ತಿಗೂ ಮೊಬೈಲ್‌ಗೆ ಅಂಟಿಕೊಂಡು ಆಟ, ಪಾಠ, ದಿನಚರಿಯ ಬಗ್ಗೆ ನಿರ್ಲಕ್ಷ್ಯ ತೋರುತ್ತಿದ್ದ, ಬುದ್ಧಿಮಾತಿಗೆ ಸಿಡಿದೇಳುತ್ತಿದ್ದ ಅವಳ ಹಟಮಾರಿ ಧೋರಣೆಯನ್ನು ಬದಲಾಯಿಸಲಾಗದೆ ಹೆತ್ತವರು ಹಾಸ್ಟೆಲ್ ಸೌಕರ್ಯವಿದ್ದ ಈ ಶಾಲೆಗೆ ಸೇರಿಸಿದ್ದರು.

'ನಮ್ಮಲ್ಲಿ ಮೊಬೈಲ್‌ಗೆ ನಿಷೇಧವಿದೆ. ವಾರಕ್ಕೊಮ್ಮೆ ಆಫೀಸ್ ಫೋನಲ್ಲಿ ಮನೆಯವರೊಂದಿಗೆ ಚುಟುಕು ಮಾತಿಗೆ ಮಾತ್ರ ಅವಕಾಶ. ಪಠ್ಯದ ಜೊತೆಗೆ ಶಿಸ್ತಿನ ವಿಚಾರದಲ್ಲೂ ತುಂಬಾ ಕಟ್ಟುನಿಟ್ಟಾಗಿ ಇರುವುದರಿಂದ ನಮ್ಮಲ್ಲಿ ದೂರದೂರುಗಳ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚು' ಎನ್ನುವಾಗ ಹೆಡ್‌ಮಾಸ್ತರ್ ಮೊಗದಲ್ಲಿ ಹೆಮ್ಮೆಯ ಜೊತೆಗೆ ಗರ್ವವೂ ಇಣುಕುತ್ತಿತ್ತು! 'ಮೊದಮೊದಲು ಇಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲಾಗದೆ ಬಹಳ ಒದ್ದಾಡಿದಳು. ಎಲ್ಲದರಲ್ಲೂ ಆಸಕ್ತಿ ಕಳೆದುಕೊಂಡು ಖಿನ್ನತೆಗೂ ಜಾರಿದ್ದಳು. ಆಪ್ತಸಮಾಲೋಚನೆಯ ಮೂಲಕ ಸಾಂತ್ವನ ಹೇಳಿದ ನಂತರವಷ್ಟೇ ಅವಳು ಚೇತರಿಸಿಕೊಂಡಿದ್ದು. ಈಗ ತುಂಬಾ ಚುರುಕಾಗಿದ್ದಾಳೆ. ಓದುವುದರ ಜೊತೆಗೆ ಸಾಂಸ್ಕೃತಿಕ ಚಟುವಟಿಕೆಗಳಲ್ಲೂ ಸದಾ ಮುಂದು' ಎಂದಾಗ ಅವಳ ಈ ಸಕಾರಾತ್ಮಕ ಪರಿವರ್ತನೆಗೆ ಹೃದಯ ಭೇಷ್ ಎಂದಿತ್ತು!

ವಯಸ್ಸಿನ ಭೇದವಿಲ್ಲದೆ ಎಲ್ಲ ವಯೋಮಾನದವರಲ್ಲೂ ಮೊಬೈಲ್ ಗೀಳು ಆತಂಕಕಾರಿಯಾಗಿ ಏರುತ್ತಿದೆ. ಅದರಲ್ಲೂ ಹೆಚ್ಚಿನ ಕೆಡುಕು ಕಾಣಿಸುತ್ತಿರುವುದು ಮಕ್ಕಳಲ್ಲಿ. ಒಂಟಿತನ, ಕೋಪ, ಖಿನ್ನತೆ, ಆತಂಕ, ಉದ್ವೇಗ, ಹಟ, ಆಟ-ಪಾಠಗಳಿಂದ ವಿಮುಖತೆ, ಕುಂಠಿತ ಪ್ರಗತಿಯಿಂದಾಗಿ ಹೆತ್ತವರು ಹೈರಾಣಾಗಿದ್ದಾರೆ. ಹಟಮಾರಿತನ, ಸೂಕ್ಷ್ಮಮನಸ್ಸಿನ ಕಾರಣದಿಂದಾಗಿ ಗದರಿ, ಬುದ್ಧಿ ಹೇಳಿ ಸರಿದಾರಿಗೆ ತರಲಾಗದ ಅಸಹಾಯಕತೆ. ಹಾಗಾಗಿ ಮೊಬೈಲ್ ವ್ಯಸನದಿಂದ ಮಕ್ಕಳನ್ನು ಹೊರತಂದು ಉತ್ತಮ ಶೈಕ್ಷಣಿಕ ಸಾಧನೆಗಾಗಿ ಅನಿವಾರ್ಯವಾಗಿ ಕಠಿಣ ಕಟ್ಟಲೆಗಳಿರುವ ವಸತಿ ಶಾಲೆಗಳಿಗೆ ದಾಖಲಿಸಿ ನಿಟ್ಟುಸಿರು ಬಿಡುತ್ತಿದ್ದಾರೆ!

ಪೋಷಕರ ಈ ಪರಿಯ ಆತಂಕದ ಮನಃಸ್ಥಿತಿಯನ್ನು ನಗದೀಕರಿಸಿಕೊಳ್ಳುತ್ತಿರುವ ಹಲವು ಶಾಲೆಗಳು ಶಿಸ್ತು, ಗುಣಮಟ್ಟದ ಶೈಕ್ಷಣಿಕ ಪ್ರಗತಿ, ಸನ್ನಡತೆಯ ಭರವಸೆಯೊಂದಿಗೆ ಅಧಿಕ ಶುಲ್ಕ ಸೆಳೆಯುತ್ತಾ ತಮ್ಮ ಸಂಸ್ಥೆಗಳಲ್ಲಿ ಪ್ರವೇಶ ನೀಡುತ್ತಿವೆ.

ಮಕ್ಕಳನ್ನು ಮೊಬೈಲ್ ಫೋನುಗಳಿಂದ ಸಂಪೂರ್ಣವಾಗಿ ದೂರವಿರಿಸುವ, ಅವರ ಓಡಾಟವನ್ನು ಪೂರ್ಣವಾಗಿ ಪ್ರತಿಬಂಧಿಸಿ ಪಠ್ಯಕ್ಕೆ ಸೀಮಿತಗೊಳಿಸುವ, ಉಜ್ವಲ ಭವಿಷ್ಯದ ಹೆಸರಲ್ಲಿ ಬೇರೆ ಬೇರೆ ಕೋರ್ಸುಗಳಿಗೆ ಎರಡು, ಮೂರು ವರ್ಷಗಳ ಮೊದಲೇ ಕೋಚಿಂಗ್ ವ್ಯವಸ್ಥೆ ಮಾಡುವ, ಶಿಸ್ತಿನ ಹೆಸರಲ್ಲಿ ವರ್ಷಕ್ಕೊಮ್ಮೆ ಮಾತ್ರ ಅತ್ಯಲ್ಪ ರಜೆಯ ಮೇರೆಗೆ ಮನೆಗೆ ಕಳುಹಿಸುವ ಶಾಲಾ, ಕಾಲೇಜುಗಳಿಗೀಗ ಭಾರಿ ಬೇಡಿಕೆ. ಅಲ್ಲಿನ ಬಿಡುವೇ ಇಲ್ಲದ ಕಟ್ಟುನಿಟ್ಟಿನ ದಿನಚರಿ, ಒಮ್ಮೆಲೇ ಹೆತ್ತವರಿಂದ, ಸ್ನೇಹಿತರಿಂದ, ಇಷ್ಟದ ವಸ್ತುಗಳಿಂದ ದೂರವಾಗುವ ಕಾರಣದಿಂದ ಹುಟ್ಟಿಕೊಳ್ಳುವ ಒತ್ತಡ, ಆತಂಕ, ಹತಾಶೆ, ಖಿನ್ನತೆ ಎಳೆಯ ಮನಗಳಿಗೆ ತೀವ್ರ ಗಾಸಿ ಮಾಡುತ್ತಿದೆ. ಸಕಾಲಕ್ಕೆ ಸರಿಯಾದ ಸಾಂತ್ವನ ಸಿಗದೇ ಇದ್ದಾಗ ಮಾನಸಿಕವಾಗಿ ಮತ್ತಷ್ಟು ಮುದುಡುವ ಮಕ್ಕಳು ಬದುಕಿಗೆ ಹಾನಿ ಮಾಡಿಕೊಳ್ಳುತ್ತಿರುವ ಪ್ರಕರಣಗಳು ಏರಿಕೆಯಾಗುತ್ತಿರುವುದು ಎಚ್ಚರಿಕೆಯ ಗಂಟೆ ಮೊಳಗಿಸುತ್ತಿದೆ!



ಹೌದು, ಎಳೆಯರನ್ನು ಮಾನಸಿಕ, ಶಾರೀರಿಕ, ಸಾಮಾಜಿಕ ಸ್ವಾಸ್ಥ್ಯ ಕದಡುವ ದುರಭ್ಯಾಸಗಳಿಂದ ದೂರವಿರಿಸಲು ಕಠಿಣ ನಿಯಮಗಳಿಗಿಂತ ಮನಃಪರಿವರ್ತನೆಯೇ ಮದ್ದು. ಮಕ್ಕಳಿಗೆ ಮೊದಮೊದಲಿಗೆ ಪೋಷಕರೇ ಪ್ರೇರಣೆ, ಅವರದ್ದೇ ಅನುಸರಣೆ. ಹಾಗಾಗಿ ಮಗುವಿನಲ್ಲಿ ಬದಲಾವಣೆ ತರಬೇಕಿದ್ದಲ್ಲಿ ಹೆತ್ತವರು ಮೊದಲು ತಮ್ಮ ವರ್ತನೆಯನ್ನು ಬದಲಾಯಿಸಿಕೊಳ್ಳಬೇಕು. ಯಾವುದನ್ನೂ ಬಲಾತ್ಕಾರವಾಗಿ ಹೇರದೆ ಕೆಡುಕುಗಳ ಬಗ್ಗೆ ಆಗಾಗ್ಗೆ ತಾಳ್ಮೆಯಿಂದ ತಿಳಿಹೇಳಬೇಕು. ಆರೋಗ್ಯಕರ ಹವ್ಯಾಸ, ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳುವುದರ ಜೊತೆಗೆ ಚಿಕ್ಕವರನ್ನೂ ಭಾಗವಹಿಸುವಂತೆ ಹುರಿದುಂಬಿಸಿದಾಗ ಮಾತ್ರ ಸಕಾರಾತ್ಮಕ ಬದಲಾವಣೆ ಸಾಧ್ಯ. ಅವರ ವಯೋಸಹಜ ಸ್ವಾತಂತ್ರ್ಯಕ್ಕೆ ಭಂಗ ತಾರದ ರೀತಿಯಲ್ಲಿ ಮಕ್ಕಳ ನಡತೆಯ ಮೇಲೆ ಒಂದು ಕಣ್ಣಿಟ್ಟಿರುವುದೂ ಅಗತ್ಯ. ಹೆತ್ತವರ ಅಸಡ್ಡೆಗೆ ಗುರಿಯಾದ, ಪ್ರೀತಿ ವಂಚಿತ, ಸೂಕ್ತ ನಿಗಾ ಇಲ್ಲದ, ಪೋಷಕರ ಒಡನಾಟವಿಲ್ಲದ ಮಕ್ಕಳೇ ದಾರಿ ತಪ್ಪುವ, ದುರಭ್ಯಾಸಗಳಿಗೆ ದಾಸರಾಗುವ ಸಂಭವ ಹೆಚ್ಚು ಎಂಬುದು ಸದಾ ನೆನಪಿನಲ್ಲಿ ಇಡಬೇಕಾದ ಅಂಶ.

ಮೊಬೈಲ್ ಫೋನ್ ಎಲ್ಲರ ಬದುಕಿನ ಅವಿಭಾಜ್ಯ ಅಂಗವಾಗಿದೆ. ಅದಿಲ್ಲದೆ ಯಾವ ಕೆಲಸಗಳೂ ಸುಸೂತ್ರವಾಗಿ ಸಾಗದಿರುವ ಹಂತದಲ್ಲಿ ನಾವಿದ್ದೇವೆ. ಎಲ್ಲ ಪ್ರಮುಖ ವ್ಯವಹಾರಗಳಿಗೂ ಅನಿವಾರ್ಯ-ವಾಗಿರುವ ಈ ಸಾಧನದ ಒಳಿತಿನ ಮೂಲಮೂರ್ತಿ ಮಂಕಾಗಿ, ಕೆಡುಕೆಂಬ ಉತ್ಸವಮೂರ್ತಿಯೇ ವಿಜೃಂ-ಭಿಸುತ್ತಿರುವುದು ಸದ್ಯದ ವಾಸ್ತವ!

ವಾಚಕರ ವಾಣಿ

ನೆಮ್ಮದಿಯ ನೆಲೆ ಅರಸುವ ಪ್ರಯತ್ನ...

ದೇಶದ ಖ್ಯಾತ ವಕೀಲ, ಮಾಜಿ ಸಾಲಿಸಿಟರ್ ಜನರಲ್ ಹರೀಶ್ ಸಾಳ್ವೆ ಅವರು ತಮ್ಮ 68ನೇ ವಯಸ್ಸಿನಲ್ಲಿ ಇತ್ತೀಚೆಗೆ ಮೂರನೇ ಮದುವೆಯಾಗಿರುವುದು ಮಾಧ್ಯಮಗಳಲ್ಲಿ ವ್ಯಾಪಕ ಪ್ರಚಾರ ಪಡೆದಿದೆ. ಈ ಇಳಿವಯಸ್ಸಿನಲ್ಲಿ ಮದುವೆಯಾಗುವುದು, ಅದು ಕೂಡ ಮೂರನೇ ಮದುವೆ ಎಂದು ಅನೇಕರು ಮೂಗು ಮುರಿಯಬಹುದು. ಆದರೆ ವಯಸ್ಸು ಮೀರಿದವರು ವಿವಿಧ ಕಾರಣಗಳಿಗಾಗಿ ಮದುವೆಯಾಗುತ್ತಿರುವುದನ್ನು ನಾವು ಕಾಣಬಹುದು. ಬದುಕಿನಲ್ಲಿ ನೆಮ್ಮದಿಯ ನೆಲೆಯನ್ನು ಅರಸಿ ಅನೇಕರು ಇಂತಹ ಪ್ರಯತ್ನ ಮಾಡುತ್ತಾರೆ.

ಮದುವೆ ಎಂಬುದು ದೇಹಕ್ಕೆ ಮಾತ್ರವಲ್ಲ ಮನಸ್ಸಿಗೂ ಅಗತ್ಯವಿರುತ್ತದೆ. ಅದೆಷ್ಟೋ ಸಂಸಾರಗಳಲ್ಲಿ ಗಂಡ-ಹೆಂಡತಿಯ ನಡುವೆ ಸರಿಪಡಿಸಲಾಗದ ವೈಮನಸ್ಸು ಅಥವಾ ಬಿರುಕುಗಳು ಉದ್ಭವಿಸಿ, ದಾಂಪತ್ಯವು ವಿಚ್ಛೇದನದಲ್ಲಿ ಪರ್ಯವಸಾನಗೊಳ್ಳುತ್ತದೆ. ಒಮ್ಮೆ ಎಡವಿ ಬಿದ್ದವರು ಸರಿಯಾದ ಮಾರ್ಗ ಕಂಡುಕೊಳ್ಳಲು ಎರಡನೇ ಬಾರಿ ಅಥವಾ ಮೂರನೇ ಬಾರಿ ಪ್ರಯತ್ನಿಸುವುದುಂಟು. ಅದೇನೂ ತಪ್ಪಲ್ಲ. ಮದುವೆ ಒಂದು ಸುಮಧುರ ಬಾಂಧವ್ಯವನ್ನು ಸೃಷ್ಟಿಸಬಲ್ಲದು.

ಕೆ.ವಿ.ವಾಸು, ಮೈಸೂರು

ನಿಂದನೆ ಎಂದೂ ಸಾಧನೆಗೆ ಪೂರಕವಲ್ಲ

'ಹೀಗಿತ್ತು ಬದುಕಿನ ಪಯಣದ ಪಾಠ' ಎಂಬ ಎಚ್.ಬಿ.ಚಂದ್ರಶೇಖರ್ ಅವರ ಲೇಖನ (ಸಂಗತ, ಸೆ. 6) ತುಂಬಾ ಪ್ರಸ್ತುತ ಮತ್ತು ಮನನೀಯ. ಬಾಲ್ಯ ಹಾಗೂ ಪ್ರೌಢಾವಸ್ಥೆಯಲ್ಲಿ ಮಕ್ಕಳ ಅಲ್ಪಸ್ವಲ್ಪ ಸಾಧನೆ ಮತ್ತು ಒಳ್ಳೆಯತನವನ್ನು ಶಿಕ್ಷಕರು, ತಂದೆ ತಾಯಿ ಮೆಚ್ಚಿ ಮಾತನಾಡಬೇಕು. ಇದರಿಂದ ಮಕ್ಕಳಲ್ಲಿ ಆತ್ಮವಿಶ್ವಾಸ ಬೆಳೆದು, ಉತ್ಸಾಹ, ಸಂತೋಷ ಹೆಚ್ಚಾಗುತ್ತದೆ. ಆಗ ಅವರು ಸಾವಕಾಶವಾಗಿ ಸಾಧನೆಯ ಪಥದತ್ತ ಸಾಗುತ್ತಾರೆ. ಎಲ್ಲವೂ ವಿಫಲವಾದಾಗ ತಾಳ್ಮೆ, ಸಹನೆ, ಪ್ರೀತಿ, ಮೆಚ್ಚುಗೆ ಖಂಡಿತ ಸಾಫಲ್ಯ ತರುತ್ತವೆ. ಅದರ ಬದಲು ನಿಂದನೆ, ಹೋಲಿಕೆ ಮಾಡಿದರೆ ಕೀಳರಿಮೆ ಬೆಳೆಸಿಕೊಂಡು ಕೆಳಮಟ್ಟಕ್ಕೆ ಹೋಗುತ್ತಾರೆ.

ನಿಂದನೆ ನಿರ್ನಾಮಕಾರಿಯೇ ವಿನಾ ಎಂದೂ ನಿರ್ಮಾಣಕಾರಿಯಲ್ಲ. ಮಕ್ಕಳ ಮನೋಭಾವವನ್ನು ಅರಿತು ಪ್ರೀತಿ, ವಾತ್ಸಲ್ಯ ತೋರಿ ಅವರೊಂದಿಗೆ ಸಹನೆಯಿಂದ ವರ್ತಿಸುವುದು ಮುಂದೆ ಅವರ ಸಾಧನೆಗೆ ಪೂರಕ.

ಶಿವನಕೆರೆ ಬಸವಲಿಂಗಪ್ಪ, ದಾವಣಗೆರೆ

ಕಸಾಪ ಚಟುವಟಿಕೆಗೆ ಏನಾಯಿತು?

ಸ್ಥಾಪಿತ ದತ್ತಿನಿಧಿಗಳ ಬಹುಮಾನ ವಿತರಣೆ ಕಾರ್ಯಕ್ರಮಗಳ ವರದಿ ಆಗಾಗ ಪತ್ರಿಕೆಯಲ್ಲಿ ಬಂದಾಗ ಮಾತ್ರ ನೆನಪಾಗುವ ಮಟ್ಟಕ್ಕೆ ಕನ್ನಡ ಸಾಹಿತ್ಯ ಪರಿಷತ್ತು ಜನಸಾಮಾನ್ಯರಿಂದ ದೂರ ಆಗಿಬಿಟ್ಟಿದೆಯೇ? ದತ್ತಿನಿಧಿಗಳ ಬಹುಮಾನ ಕೊಡುವುದನ್ನು ಬಿಟ್ಟರೆ ಪರಿಷತ್ತು ಈಗ ಏನು ಕೆಲಸ ಮಾಡುತ್ತಿದೆ? ಚುನಾವಣೆ ಮುಗಿದು ಎರಡು ವರ್ಷಗಳಾದವು. ಹಾವೇರಿ ಸಮ್ಮೇಳನ ಬಿಟ್ಟರೆ ಇನ್ನೆಲ್ಲೂ ಪರಿಷತ್ತಿನ ಧ್ವನಿಯಿಲ್ಲ. ಕೃಷ್ಣರಾಜ ಪರಿಷನ್ಮಂದಿರದ ನವೀಕರಣಕ್ಕೂ ಮೊದಲು, ಅಲ್ಲಿ ಅನೇಕ ಕಾರ್ಯಕ್ರಮಗಳು ನಡೆಯುತ್ತಿದ್ದವು. ಹೊರ ಜಗಲಿಯ ಮೇಲೆ ಪುಸ್ತಕಗಳ ಮಾರಾಟ ಆಗುತ್ತಿತ್ತು. ಬೆಂಗಳೂರಿನ ಸಾಹಿತ್ಯಾಸಕ್ತರು ಆ ಕಡೆಗೆ ಬಂದು, ಪುಸ್ತಕಗಳ ಮೇಲೆ ಕಣ್ಣಾಡಿಸಿ, ಒಳಗೆ ಕುಳಿತು ಆಲಿಸುತ್ತಿದ್ದರು. ಆ ಸಂದರ್ಭದಲ್ಲಿ ಕೊಡಮಾಡುತ್ತಿದ್ದ ಉಪಾಹಾರ ಸವಿದು ಟೀ, ಕಾಫಿ ಕುಡಿದು ಹೋಗುತ್ತಿದ್ದರು. ಅದರ ಬಾಡಿಗೆ ಹೆಚ್ಚಳ ಆದಮೇಲೆ ಅಲ್ಲಿ ಈಗ ಯಾವ ಕಾರ್ಯಕ್ರಮವೂ ನಡೆಯುತ್ತಿಲ್ಲ. ಕಾಂಪೌಂಡ್ ಎತ್ತರ ಏರಿದ ಮೇಲೆ ಆ ಕಡೆಗೆ ಯಾರೂ ಇಣುಕಲೂ ಆಗುತ್ತಿಲ್ಲ.

ಕನ್ನಡ ಸಾಹಿತ್ಯ ಪರಿಷತ್ತು ಉಸಿರಾಟದ ಸಹಜ ಕ್ರಿಯೆ ಎಂಬಂತೆ ನಿರಂತರವಾಗಿ ನಡೆಸಬೇಕಾಗಿದ್ದ ಸಾಹಿತ್ಯ ಚಟುವಟಿ-ಕೆಗಳನ್ನು ನಿಲ್ಲಿಸಿ ಇಷ್ಟೊಂದು ಮೌನ ವಹಿಸುವುದು ಸರಿಯೇ? ಎಲ್ಲಾ ತಾಲ್ಲೂಕುಗಳನ್ನು ಒಳಗೊಂಡಂತೆ ಕಥೆ, ಕಾವ್ಯ, ವಿಚಾರಕಮ್ಮಟಗಳನ್ನು ಜಿಲ್ಲಾ ಕೇಂದ್ರಗಳಲ್ಲಿ ನಡೆಸಿ ಆಸಕ್ತರನ್ನು ಪ್ರೋತ್ಸಾಹಿಸುವ, ಜಿಲ್ಲಾವಾರು ಕಥೆ, ಕಾವ್ಯ ಮತ್ತು ವಿಚಾರ ಸಾಹಿತ್ಯದ ಆಯ್ದ ಸಂಕಲನಗಳನ್ನು ಹೊರತರುವ ಕೆಲಸ ಮಾಡಲಿ. ಇದರಿಂದ ಸಮಾಜದ ಬಗೆಗಿನ ಯುವಕರ ಭಾವನೆಗಳನ್ನು ಅಧ್ಯಯನ ಮಾಡಲು ಸಾಧ್ಯವಾಗುತ್ತದೆ. ಅಲ್ಲದೆ, ಮುಂದೆ ನಡೆಯಲಿರುವ ಮಂಡ್ಯ ಸಾಹಿತ್ಯ ಸಮ್ಮೇಳನದಲ್ಲಿ, ಪ್ರಚಲಿತ ವಿದ್ಯಮಾನಗಳ ಬಗ್ಗೆ ಬೆಳಕು ಚೆಲ್ಲಲು ಅರ್ಥಪೂರ್ಣ ಸಿದ್ಧತೆ ಮಾಡಿಕೊಂಡಂತೆ ಆಗುತ್ತದೆ.

ತಾ.ಸಿ.ತಿಮ್ಮಯ್ಯ, ಬೆಂಗಳೂರು

ಹೆಸರಿನ ಮೇಲಾಟ!

ನಮ್ಮ ದೇಶದ ವೈವಿಧ್ಯ
ಅದರ ಹೆಸರಿನಲ್ಲೂ ಇದೆ,
ಅಂತರರಾಷ್ಟ್ರೀಯವಾಗಿ 'ಇಂಡಿಯಾ'
ಸ್ವದೇಶಿ ಹಿನ್ನೆಲೆಯಲ್ಲಿ 'ಭಾರತ'
ಧಾರ್ಮಿಕ ಸೌಹಾರ್ದಕ್ಕಾಗಿ
'ಹಿಂದೂಸ್ಥಾನ'
ಹೀಗೆ ಒತ್ತಾಯವಿಲ್ಲದೇ ಸಹಜವಾಗಿ
ಸಾಗುತಿರುವ ಪರಂಪರೆಯೊಂದನು
ಹೆಸರಿನ ಮೇಲಾಟದಲಿ
ಒಡೆಯುವುದೇಕೆ?

ಆನಂದ ರಾಮತೀರ್ಥ, ಜಮಖಂಡಿ

ಕತ್ತಲು ಕಳೆಯಲಿ 'ಓದುವ ಬೆಳಕು'

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಆರಂಭಿಸಿರುವ 'ಓದುವ ಬೆಳಕು' ಕಾರ್ಯಕ್ರಮವು ಪ್ರಾಥಮಿಕ ಶಾಲಾ ಮಕ್ಕಳ ಕಲಿಕೆಯನ್ನು ಹಲವು ಆಯಾಮಗಳಿಂದ ಉದ್ದೀಪನಗೊಳಿಸಿ ಅದರಲ್ಲಿ ಅವರು ಹೆಚ್ಚು ತೊಡಗಿಸಿಕೊಳ್ಳುವಂತೆ ಮಾಡುತ್ತದೆ. ಗ್ರಾಮೀಣ ಭಾಗದ ಮಕ್ಕಳನ್ನು ವ್ಯವಸ್ಥಿತವಾಗಿ ಕಲಿಕಾ ಕ್ಷೇತ್ರಕ್ಕೆ ತರುವ ಈ ವಿಶಿಷ್ಟ ಯೋಜನೆಯಡಿ ಸೆಪ್ಟೆಂಬರ್ ಮಾಸದಲ್ಲಿ 'ನಾನು ಓದುವ ಪುಸ್ತಕ' ಅಭಿಯಾನ ಆರಂಭಿಸಿರುವುದು ಔಚಿತ್ಯಪೂರ್ಣ ಹಾಗೂ ಒಳ್ಳೆಯ ಬೆಳವಣಿಗೆ.

ವಿದ್ಯಾರ್ಜನೆ ಮಾಡಬೇಕಾದ ಮಕ್ಕಳನ್ನು ಮೊಬೈಲ್ ಭೂತದಿಂದ ಹೊರತಂದು, ಅವರನ್ನು ಪುಸ್ತಕ ಪ್ರೇಮಿಗಳನ್ನಾಗಿ ಮಾಡಿ ಸಾಹಿತ್ಯಾಸಕ್ತಿ ಮೂಡಿಸಲು ಈ ಯೋಜನೆ ಪೂರಕವಾಗಿದೆ. ಆದರೆ ಈ ಯೋಜನೆಯು ಕಾಟಾಚಾರಕ್ಕೆ ಎಂಬಂತಾಗದೆ ಮುಖ್ಯ ಪ್ರೇರಕರು, ಶಿಕ್ಷಕರು ಸಂಪೂರ್ಣವಾಗಿ ಕೈಜೋಡಿಸಿದರೆ ಮಾತ್ರ ಯೋಜನೆ ಯಶಸ್ವಿಯಾದೀತು.

ಜಯವೀರ ಎ.ಕೆ., ಖೇಮಲಾಪುರ, ರಾಯಬಾಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಿ–20 ಶೃಂಗಸಭೆ ಒಂದು ಭೂಮಿಗೆ ಒಂದು ಭವಿಷ್ಯ



ಭಾರತದ ಜಿ–20 ಅಧ್ಯಕ್ಷತೆಯನ್ನು ಪ್ರಧಾನಿಯವರು 'ಜನರ ಅಧ್ಯಕ್ಷತೆ' ಎಂದು ಬಣ್ಣಿಸಿದ್ದಾರೆ. ಈ ಸಮ್ಮೇಳನದ ಲೋಗೊ ಮತ್ತು ಹೋರ್ಡಿಂಗ್‌ಗಳಲ್ಲಿ ಬಳಸಲಾದ ಬಣ್ಣ, ಸಂದೇಶಗಳು ಎಲ್ಲವೂ ರಾಜಕೀಯ ಸಂದೇಶಗಳನ್ನು ಒಳಗೊಂಡಿರುವುದನ್ನು ಕಾಣಬಹುದು

• ಮಂಜುನಾಥ್ ಹೆಬ್ಬಾರ್

ಜಗತ್ತಿನ 19 ದೇಶಗಳು ಹಾಗೂ ಐರೋಪ್ಯ ಒಕ್ಕೂಟದ ನಾಯಕರು ಪಾಲ್ಗೊಳ್ಳುವ ಅತಿ ದೊಡ್ಡ ವಾರ್ಷಿಕ ಶೃಂಗಸಭೆ 'ಜಿ–20' ನವದೆಹಲಿಯಲ್ಲಿ ನಾಳೆಯಿಂದ ಎರಡು ದಿನಗಳ ಕಾಲ (ಸೆ.9 ಹಾಗೂ 10) ನಡೆಯಲಿದೆ.

ಲೋಕಸಭಾ ಚುನಾವಣೆಗೆ ಎಂಟು ತಿಂಗಳುಗಳು ಉಳಿದಿರುವ ಸಮಯದಲ್ಲಿ ಸಂಘಟಿಸಿರುವ 'ಶೃಂಗ'ದ ಮಹಾ ಯಶಸ್ಸಿಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಹೆಚ್ಚಿನ ಆಸ್ಥೆಯಿಂದ ಕೆಲಸ ಮಾಡುತ್ತಿದೆ. 'ವಿಶ್ವ ಗುರು'ವಾಗಲು ಹಾಗೂ ಸತತ ಮೂರನೇ ಬಾರಿಗೆ 'ಭಾರತ' ಗೆಲ್ಲಲು ಇದೊಂದು ಏಣಿ ಎಂದು ಪರಿಭಾವಿಸಿರುವ ಮೋದಿ ಸರ್ಕಾರವು ಜಾಗತಿಕ ನಾಯಕರ ಸಭೆಯ ಭರ್ಜರಿ ಯಶಸ್ಸಿಗೆ ಅಹೋರಾತ್ರಿ ಶ್ರಮಿಸುತ್ತಿದೆ.

ಇಂಡೊನೇಷ್ಯಾದ ಬಾಲಿಯಲ್ಲಿ ನಡೆದ 17ನೇ ಶೃಂಗ ಸಭೆಯಲ್ಲಿ ಭಾಗವಹಿಸಿದ್ದ ನರೇಂದ್ರ ಮೋದಿ ಅವರು, 'ಮುಂದಿನ ವರ್ಷ ಭಗವಾನ್ ಬುದ್ಧ ಮತ್ತು ಮಹಾತ್ಮ ಗಾಂಧಿಯವರ ಪವಿತ್ರ ಭೂಮಿಯಲ್ಲಿ ಜಿ- 20 ನಾಯಕರು ಭೇಟಿಯಾದಾಗ, ಜಗತ್ತಿಗೆ ಶಾಂತಿಯ ಬಲವಾದ ಸಂದೇಶ ಸಾರಲು ನಾವೆಲ್ಲರೂ ಕಟಿಬದ್ಧರಾಗಿರುತ್ತೇವೆ ಎಂಬ ವಿಶ್ವಾಸ ಇದೆ' ಎಂದು ಸ್ಪಷ್ಟ ಮಾತುಗಳಲ್ಲಿ ಹೇಳಿದ್ದರು. ಇಂಡೊನೇಷ್ಯಾದ ಅಧ್ಯಕ್ಷರಿಂದ ಅಧ್ಯಕ್ಷೀಯ ಅಧಿಕಾರ ವಹಿಸಿಕೊಂಡ 10 ತಿಂಗಳ ಬಳಿಕ ಮೋದಿ ಅವರು ಜಾಗತಿಕ ನಾಯಕರಿಗೆ ಆತಿಥ್ಯ ವಹಿಸಲು ಸಿದ್ಧರಾಗಿದ್ದಾರೆ. ಉಕ್ರೇನ್ ನೆಲದಲ್ಲಿ ಈಗಲೂ ಶಾಂತಿ ನೆಲೆಸಿಲ್ಲ. ನೆರೆಯ ಚೀನಾವು ಭಾರತದ ಭೂಭಾಗ ಕಬಳಿಸಲು ದೊಡ್ಡ ಸಂಚು ನಡೆಸುತ್ತಿದೆ. ಇಂತಹ ಸಮಯದಲ್ಲಿ ಮೋದಿ ಅವರ 'ಶಾಂತಿ ಮಂತ್ರ'ದ ಜಾದೂ ಶೃಂಗಸಭೆಯಲ್ಲಿ ಕೆಲಸ ಮಾಡಲಿದೆಯೇ ಎಂಬುದು ಕುತೂಹಲಕರ ಸಂಗತಿ.

ಈ ಶೃಂಗಸಭೆಗಾಗಿ ದೆಹಲಿ ನಗರದಾದ್ಯಂತ ಭಾರಿ ಸಿದ್ಧತೆ ನಡೆದಿದೆ. ರಾಷ್ಟ್ರ ರಾಜಧಾನಿ ಮದುವಣಗಿತ್ತಿಯಂತೆ ಕಂಗೊಳಿಸಲಾರಂಭಿಸಿದೆ. ಇನ್ನೊಂದೆಡೆ, ಜಗತ್ತಿನ ಮಹಾನಾಯಕರು ಒಂದೆಡೆ ಸೇರುತ್ತಿರುವ ಪರಿಣಾಮದ ಬಿಸಿ ನಗರದ ನಾಗರಿಕರಿಗೆ ತಟ್ಟಲಾರಂಭಿಸಿದೆ. ನಗರದಲ್ಲಿ ಅಘೋಷಿತ ಲಾಕ್‌ಡೌನ್‌ನ ಸ್ಥಿತಿ ನಿರ್ಮಾಣವಾಗಿದೆ. ಎಲ್ಲೆಡೆ ಪೊಲೀಸ್ ಸರ್ಪಗಾವಲು ಏರ್ಪಡಿಸಲಾಗಿದೆ. ಸರ್ಕಾರಿ ಕಚೇರಿಗಳು ಹಾಗೂ ಶಾಲಾ ಕಾಲೇಜುಗಳಿಗೆ ರಜೆ ನೀಡಲಾಗಿದೆ. ಖಾಸಗಿ ಕಂಪನಿಗಳು ಮನೆಯಿಂದಲೇ ಕೆಲಸಕ್ಕೆ ಅನುವು ಮಾಡಿಕೊಟ್ಟಿವೆ. ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ನಾಯಕರು 43 ಹೋಟೆಲ್‌ಗಳಲ್ಲಿ ತಂಗಲಿದ್ದಾರೆ. ಇದರಿಂದಾಗಿ, ಹೋಟೆಲ್‌ಗಳ ಬಾಡಿಗೆ ದರವು ಹಲವು ಪಟ್ಟು ಏರಿಕೆ ಆಗಿದೆ.

ನಗರ ಮುಖ್ಯ ಭಾಗದ ಹೋಟೆಲ್‌ಗಳು ಹಾಗೂ ಸರ್ಕಾರಿ ಕಟ್ಟಡಗಳು ಮತ್ತು ಹಲವು ಫ್ಲೆಕ್ಸ್‌ಗಳಲ್ಲಿ ಜಿ–20 ಶೃಂಗಸಭೆಯದ್ದೇ ಸುದ್ದಿ. ಈ ಎಲ್ಲ ಜಾಹೀರಾತುಗಳಲ್ಲಿ 'ಬಿಜೆಪಿಯ ಚಿಹ್ನೆ' ಹೊಂದಿರುವ ಜಿ–20 ಲೋಗೋ ಮತ್ತು ಪ್ರಧಾನಿ ಅವರ ಭಾವಚಿತ್ರಗಳು ಪ್ರಮುಖವಾಗಿವೆ.

ಭಾರತದ ಜಿ–20 ಅಧ್ಯಕ್ಷತೆಯನ್ನು ಪ್ರಧಾನಿಯವರು 'ಜನರ ಅಧ್ಯಕ್ಷತೆ' ಎಂದು ಬಣ್ಣಿಸಿದ್ದಾರೆ. ಈ ಸಮ್ಮೇಳನದ ಲೋಗೊ ಮತ್ತು ಹೋರ್ಡಿಂಗ್‌ಗಳಲ್ಲಿ ಬಳಸಲಾದ ಬಣ್ಣ, ಸಂದೇಶಗಳು ಎಲ್ಲವೂ ರಾಜಕೀಯ ಸಂದೇಶಗಳನ್ನು ಒಳಗೊಂಡಿರುವುದನ್ನು ಕಾಣಬಹುದು.

ಜಿ–20 ಸಮ್ಮೇಳನಕ್ಕಾಗಿ ಜಗತ್ತಿನ ಮೂಲೆ ಮೂಲೆಯಿಂದ ಬರುವ ನಾಯಕರನ್ನು ಸ್ವಾಗತಿಸಲು ನಗರ ಸಜ್ಜಾಗಿದೆ. ವಿವಿಐಪಿಗಳನ್ನು ಹೊತ್ತ ವಿಮಾನಗಳು ನಗರಕ್ಕೆ ಬಂದಿಳಿಯಲು ಆರಂಭಿಸಿವೆ. ನೈಜೀರಿಯಾದ ಗಣ್ಯರ ತಂಡವು ರಾಜಧಾನಿಗೆ ಈಗಾಗಲೇ ತಲುಪಿದೆ. ಶುಕ್ರವಾರ ಹಾಗೂ ಶನಿವಾರ 55 ವಿವಿಐಪಿ ವಿಮಾನಗಳು ದೆಹಲಿಗೆ ಬರಲಿವೆ. ಕಾನೂನು ಹಾಗೂ ಸುವ್ಯವಸ್ಥೆ ಕಾಪಾಡಲು ಇಲ್ಲಿನ ಪೊಲೀಸರು ಸಕಲ ಕ್ರಮಗಳನ್ನು ಕೈಗೊಂಡಿದ್ದಾರೆ. ಬಹುತೇಕ ಕಡೆ ಹೈ ಅಲರ್ಟ್ ಘೋಷಿಸಲಾಗಿದೆ. ಪೊಲೀಸ್ ಸಿಬ್ಬಂದಿಯ ಜತೆಗೆ ಅರೆಸೇನಾ ಪಡೆಯ ಸಿಬ್ಬಂದಿಗಳನ್ನೂ ನಿಯೋಜಿಸಲಾಗಿದೆ.

ಶೃಂಗಸಭೆಯ ಭಾಗವಾಗಿ ದೆಹಲಿ ಮಹಾನಗರ ಪಾಲಿಕೆಯು ನಗರದ ಸೌಂದರ್ಯೀಕರಣ ಅಭಿಯಾನಗಳನ್ನು ನಡೆಸಿದೆ. ನಗರದ ಕೆಂಪುಕೋಟೆ, ಲೋಟಸ್ ಟೆಂಪಲ್ ಸೇರಿದಂತೆ ಐತಿಹಾಸಿಕ ಪ್ರವಾಸಿ ತಾಣಗಳ ಚಿತ್ರಗಳನ್ನು ಒಳಗೊಂಡ 450 ದೊಡ್ಡ ಬ್ಯಾನರ್‌ಗಳನ್ನು ಅಳವಡಿಸಲಾಗಿದೆ. ಹಲವೆಡೆ ಗೋಡೆಗಳ ಮೇಲೆ ಭಾರತದ ಸಾಂಸ್ಕೃತಿಕ ಚಿತ್ರಗಳನ್ನು ಮೂಡಿಸಲಾಗಿದೆ. ಜತೆಗೆ ಚಂದ್ರಯಾನ-3 ಚಂದ್ರನ ಮೇಲೆ ಇಳಿದಿರುವ ಚಿತ್ರಗಳನ್ನೂ ಕೂಡ ಚಿತ್ರಿಸಲಾಗಿದೆ. ನಗರದಲ್ಲಿ ವ್ಯಾಪಕವಾಗಿರುವ ಮಂಗಗಳ ಕಾಟ ನಿಯಂತ್ರಣಕ್ಕೆ ಉಪಕ್ರಮಗಳನ್ನು ಪಾಲಿಕೆ ಕೈಗೊಂಡಿದೆ.


ಸಭೆ ನಡೆಯಲಿರುವ ಭಾರತ ಮಂಟಪ

2022ರಲ್ಲಿ ಇಂಡೊನೇಷ್ಯಾದ ಬಾಲಿಯಲ್ಲಿ ನಡೆದ 17ನೇ ಶೃಂಗಸಭೆಯಲ್ಲಿ ರಷ್ಯಾ-ಉಕ್ರೇನ್ ಯುದ್ಧವೇ ಪ್ರಮುಖ ಚರ್ಚಾ ವಿಷಯವಾಗಿತ್ತು. ಈ ಬಾರಿಯ ಶೃಂಗದಲ್ಲೂ ಜಗತ್ತಿನ ಹಲವು ರಾಷ್ಟ್ರಗಳ ಯುದ್ಧೋನ್ಮಾದ ಮನಃಸ್ಥಿತಿಯೇ ಪ್ರಮುಖ ಚರ್ಚಾ ವಿಷಯವಾಗುವ ಸಾಧ್ಯತೆ ಇದೆ. ಇದರ ಜತೆಗೆ, ಹಣದುಬ್ಬರ, ಜಾಗತಿಕ ಪೂರೈಕೆ ಸರಪಳಿಯಲ್ಲಿನ ಅಡಚಣೆ, ಆಹಾರ ಮತ್ತು ಇಂಧನ ಭದ್ರತೆ ಪ್ರಮುಖವಾಗಿ ಚರ್ಚೆಯಾಗಲಿವೆ. ಜತೆಗೆ, ಕ್ರಿಪ್ಟೊಕರೆನ್ಸಿಗೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಳ್ಳಲು ನಾಯಕರು ಸಮ್ಮತಿಸುವ ಸಾಧ್ಯತೆ ಇದೆ. ರಷ್ಯಾ ಅಧ್ಯಕ್ಷ ಪುಟಿನ್ ಹಾಗೂ ಚೀನಾ ಅಧ್ಯಕ್ಷ ಷಿ ಜಿನ್ ಪಿಂಗ್ ಅವರ ಅನುಪಸ್ಥಿತಿಯಲ್ಲಿ ಶೃಂಗಸಭೆಯಲ್ಲಿ ಯಾವುದೇ ಮಹತ್ವದ ತೀರ್ಮಾನ ಹೊರಬೀಳುವ ಸಾಧ್ಯತೆ ಕಡಿಮೆ. ಆದರೂ, ಈ ಸಭೆಯು ಭಾರತದ ರಾಜಕೀಯದ ಮೇಲೆ ಹಾಗೂ ಪ್ರಧಾನಿ ಮೋದಿ ಅವರ ನಾಯಕತ್ವದ ಮೇಲೆ ಹೇಗೆ ಪ್ರಭಾವ ಬೀರಲಿದೆ ಎಂಬುದು ಆಸಕ್ತಿಕರ ವಿಷಯವಾಗಿದೆ.

ಈ ಶೃಂಗಸಭೆಯ ಒಳ-ಹೊರಗು

ಈ ಸಲ ಶೃಂಗದ ಘೋಷವಾಕ್ಯ: 'ವಸುದೈವ ಕುಟುಂಬಕಂ' ಎಂಬ ಧ್ಯೇಯದ ಅಡಿಯಲ್ಲಿ 'ಒಂದು ಭೂಮಿ, ಒಂದು ಕುಟುಂಬ, ಒಂದು ಭವಿಷ್ಯ'.


ಸೆ. 8: ಜಿ–20 ದೇಶಗಳ ಮುಖ್ಯಸ್ಥರು ಹಾಗೂ ಆಹ್ವಾನಿತರು ನವದೆಹಲಿಗೆ ಆಗಮನ

ಸೆ. 9: ಶೃಂಗಕ್ಕೆ ವಿಧ್ಯುಕ್ತ ಚಾಲನೆ: ಭಾರತ ಮಂಟಪಂನಲ್ಲಿ ಎಲ್ಲ ಅತಿಥಿಗಳಿಗೆ ಸಾಂಪ್ರದಾಯಿಕ ಸ್ವಾಗತ. ಶೃಂಗ ಸಭೆಯ ಘೋಷವಾಕ್ಯಕ್ಕೆ ಸಂಬಂಧಿಸಿದ ಗೋಷ್ಠಿಗಳು ನಡೆಯಲಿವೆ. ಸಂವಾದ, ಔಪಚಾರಿಕ ಹಾಗೂ ಅನೌಪಚಾರಿಕ ದ್ವಿಪಕ್ಷೀಯ ಮಾತುಕತೆಗಳು ಜರುಗಲಿವೆ. ರಾಷ್ಟ್ರಪತಿ ದ್ರೌಪದಿ ಮುರ್ಮು ಆತಿಥ್ಯದಲ್ಲಿ ಅತಿಥಿಗಳಿಗೆ ಭೋಜನಕೂಟವನ್ನು ರಾತ್ರಿ ಆಯೋಜಿಸಲಾಗಿದೆ.

ಸೆ.10: ಜಿ–20 ರಾಷ್ಟ್ರಗಳ ಪ್ರಮುಖರು ರಾಜ್‌ಘಾಟ್‌ಗೆ ಭೇಟಿ ನೀಡಿ ಗೌರವ ನಮನ ಸಲ್ಲಿಸುವರು. ಬಳಿಕ ಶೃಂಗಸಭೆಯ ವೇದಿಕೆಯಲ್ಲಿ ಗೋಷ್ಠಿ ನಡೆಯಲಿದೆ. ನಂತರ ಅಧ್ಯಕ್ಷತೆ ಹಸ್ತಾಂತರ ಆಗಲಿದೆ.

ಯಾರೆಲ್ಲ ಗೈರು

- ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್.
- ಚೀನಾ ಅಧ್ಯಕ್ಷ ಷಿ ಜಿನ್ ಪಿಂಗ್



ಆಹ್ವಾನಿತ ಸಂಘಟನೆಗಳು

- ವಿಶ್ವಸಂಸ್ಥೆ
- ವಿಶ್ವ ಬ್ಯಾಂಕ್
- ಐಎಂಎಫ್
- ವಿಶ್ವ ಆರೋಗ್ಯ ಸಂಸ್ಥೆ
- ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ
- ಎಫ್‌ಎಸ್‌ಬಿ
- ಏಷ್ಯಾ ಅಭಿವೃದ್ಧಿ ಬ್ಯಾಂಕ್
- ಆರ್ಥಿಕ ಸಹಕಾರ ಮತ್ತು ಅಭಿವೃದ್ಧಿ ಸಂಸ್ಥೆ
- ಆಸಿಯಾನ್
- ಐರೋಪ್ಯ ಕೌನ್ಸಿಲ್
- ಆಫ್ರಿಕಾ ಒಕ್ಕೂಟ
- ಆಫ್ರಿಕನ್ ಯೂನಿಯನ್ ಆಫ್ ಡೆವಲಪ್‌ಮೆಂಟ್ ಏಜೆನ್ಸಿ
- ಸಿಡಿಆರ್‌ಐ

ಜಿ–20 ಸದಸ್ಯರು ಜಾಗತಿಕ ಜಿಡಿಪಿಯ ಸುಮಾರು ಶೇ 85ರಷ್ಟು, ಜಾಗತಿಕ ವ್ಯಾಪಾರದ ಶೇ 75ಕ್ಕಿಂತ ಹೆಚ್ಚು ಹಾಗೂ ವಿಶ್ವದ ಜನಸಂಖ್ಯೆಯ ಮೂರನೇ ಎರಡರಷ್ಟು ಪ್ರತಿನಿಧಿಸುತ್ತಾರೆ.

ಭಾರತದ ಆಶಾವಾದ: ಜಾಗತಿಕ ಶಾಂತಿ, ಹವಾಮಾನ ಬದಲಾವಣೆ, ಇಂಧನ ಕ್ಷೇತ್ರ ಸೇರಿದಂತೆ ಜಗತ್ತನ್ನು ಕಾಡುವ ವಿಷಯಗಳ ಕುರಿತು ಸದಸ್ಯ ರಾಷ್ಟ್ರಗಳ ನಡುವೆ ಒಮ್ಮತ ಮೂಡಿಸುವ ಆಶಾವಾದ

ನಾವು ನೋಡಿದ ಸಿನಿಮಾ

ಮನರಂಜನೆಯ ಮೆರವಣಿಗೆ



ಜವಾನ್ (ಹಿಂದಿ)

- **ನಿರ್ಮಾಣ:** ಗೌರಿ ಖಾನ್
- **ನಿರ್ದೇಶನ:** ಅಟ್ಲಿ
- **ತಾರಾಗಣ:** ಶಾರುಖ್ ಖಾನ್, ವಿಜಯ್ ಸೇತುಪತಿ, ನಯನತಾರಾ, ದೀಪಿಕಾ ಪಡುಕೋಣೆ, ಪ್ರಿಯಾಮಣಿ, ಸಾನ್ಯಾ ಮಲ್ಹೋತ್ರ, ಸುನಿಲ್ ಗ್ರೋವರ್ ಮತ್ತಿತರರು

ಇನ್ನೇನು ಸಿನಿಮಾ ಮುಗಿಯುವ ಕೆಲವು ನಿಮಿಷಗಳ ಮೊದಲು ಶಾರುಖ್ ಖಾನ್ ಎದುರು ಆಜಾನುಬಾಹು ವ್ಯಕ್ತಿ ಹೊಡೆಯಲು ನಿಲ್ಲುತ್ತಾನೆ. ಅವನ ಉದರ ಭಾಗದವರೆಗಿನ ಎತ್ತರದ ಶಾರುಖ್ ತಕ್ಷಣವೇ 'ಓಹೋ... ಬಾಹುಬಲಿ?' ಎಂಬ ಅಚ್ಚರಿಯ ಉದ್ಗಾರ ಹೊರಡಿಸುತ್ತಾರೆ. ಆತ ಮೇಲಕ್ಕೆತ್ತಿ ಬಿಸಾಡುತ್ತಾನೆ. ಪುಟಿದೇಳುವ ಶಾರುಖ್, ಅವನನ್ನೂ ಒಂದು ಡಬ್ಬದೊಳಕ್ಕೆ ಒದ್ದು ಹಾಕುತ್ತಾರೆ. ಇಡೀ ಬಾಲಿವುಡ್‌ನ ಗತಿಗೆ ಅಡ್ಡಗಾಲು ಹಾಕಿದ್ದೇ ತೆಲುಗಿನ 'ಬಾಹುಬಲಿ' ಸಿನಿಮಾ. ಅದಾದ ಮೇಲೆ ಹಿಂದಿ ಚಿತ್ರರಂಗ ತೆವಳತೊಡಗಿದ್ದು ಗೊತ್ತೇ ಇದೆ. ಈಗ 'ಬಾಹುಬಲಿ'ಗಳ ಎದುರು ಸೆಟೆದೆದ್ದು ನಿಲ್ಲುತ್ತೇನೆಂಬ ಆಶಾವಾದವನ್ನು ಶಾರುಖ್ ಈ ದೃಶ್ಯದಲ್ಲಿ ಅಭಿವ್ಯಕ್ತಿಸಿದ್ದು ವ್ಯಂಗ್ಯ ಬೆರೆತ ಧಾಟಿಯಲ್ಲಿ.

'ಜವಾನ್' ನಿರ್ದೇಶಕ ತಮಿಳಿನ ಅಟ್ಲಿ. ನಾಯಕಿಯರಲ್ಲಿ ಒಬ್ಬರು ನಯನತಾರಾ. ಖಳನಾಯಕನ ಪಾತ್ರಧಾರಿ ವಿಜಯ್ ಸೇತುಪತಿ. ಸ್ವರ ಸಂಯೋಜನೆ ಮಾಡಿರುವುದು ಅನಿರುದ್ಧ್ ರವಿಚಂದರ್. 'ಮರ್ಸೆಲ್', 'ಬಿಗಿಲ್' ತಮಿಳು ಸಿನಿಮಾಗಳ ಛಾಯಾಚಿತ್ರಗ್ರಹಣ ಮಾಡಿದ್ದ ಜಿ.ಕೆ. ವಿಷ್ಣು ಇದರಲ್ಲೂ ಕೆಲಸ ಮಾಡಿದ್ದಾರೆ. ಇವರೆಲ್ಲರ ಜತೆಗೆ ಶಾರುಖ್ ಖಾನ್ ಹಾಗೂ ಅರ್ಧ ಡಜನ್ ಹೆಣ್ಣುಮಕ್ಕಳು. ಅವರಲ್ಲಿ ಪ್ರಿಯಾಮಣಿ ಬೆಂಗಳೂರಿನವರು. ಹೀಗಾಗಿ ಇದು ಉತ್ತರ–ದಕ್ಷಿಣ ಧ್ರುವೀಕರಣದ ದೊಡ್ಡ ಸಿನಿಮಾ.

ಅಟ್ಲಿ ಒಂದೂವರೆ ದಶಕದ ಹಿಂದೆ ನಿರ್ದೇಶಕ ಶಂಕರ್ ಗರಡಿಯಲ್ಲಿ ಕೆಲಸ ಮಾಡಿದವರು. ಕೇಂದ್ರಪಾತ್ರಕ್ಕೆ ಹಲವು ಮುಖಗಳನ್ನು ದಕ್ಕಿಸಿಕೊಟ್ಟು, ಚಿತ್ರಕಥೆ ಬರೆದರೆ ಅದು ಪ್ರೇಕ್ಷಕರನ್ನು ಕುತೂಹಲದ ಕಡಲಲ್ಲಿ ಮುಳುಗಿಸಬಲ್ಲದು ಎನ್ನುವುದು ಶಂಕರ್ ಅನುಸರಿಸುತ್ತಿದ್ದ ತಂತ್ರ. ಇದನ್ನೇ ಅಟ್ಲಿ ಕಣ್ಣಿಗೊತ್ತಿಕೊಂಡಿದ್ದಾರೆ. 'ಜವಾನ್'ನಲ್ಲಿ ಶಾರುಖ್ ದ್ವಿಪಾತ್ರದಲ್ಲಿದ್ದಾರೆ. ಆ ಪಾತ್ರಗಳಿಗೂ ಭಿನ್ನ ಗೆಟಪ್‌ಗಳು. ಒಂದೊಂದಕ್ಕೂ ಸಕಾರಣ; ಭಿನ್ನ ಕತೆ. ಎಲ್ಲಕ್ಕೂ ಮಜಬೂತಾದ 'ಕಮರ್ಷಿಯಲ್ ಸೂತ್ರ'.

ಆಜಾದ್ ಒಬ್ಬ ಜೈಲರ್. ಅಲ್ಲಿನ ನಿರ್ದಿಷ್ಟ ಸೆಲ್‌ನಲ್ಲಿ ಇರುವ ಮಹಿಳೆಯರ ಪಡೆಯೊಂದನ್ನು ಅವನು ತಯಾರು ಮಾಡಿದ್ದಾನೆ. ಸಾಲ ತೀರಿಸಲಾಗದ ರೈತರ ಕಣ್ಣೀರು ಒರೆಸಲು, ಸರ್ಕಾರಿ ಆಸ್ಪತ್ರೆಯ ಅವ್ಯವಸ್ಥೆ ಸರಿಪಡಿಸಲು, ಸೇನೆಯಲ್ಲಿನ ಶಸ್ತ್ರಾಸ್ತ್ರ ಹಗರಣಕ್ಕೆ ಇತಿಶ್ರೀ ಹಾಡಲು ಅವನು ದುಬಾರಿ ತಂತ್ರಗಳನ್ನು ಹೆಣೆಯುತ್ತಾನೆ. ಅವನ್ನೆಲ್ಲ ಅನುಷ್ಠಾನಕ್ಕೆ ತರಲು ಹಣ ಹೇಗೆ ಹೊಂದಿಸುತ್ತಾನೆ ಎನ್ನುವ ತರ್ಕದ ಗೊಡವೆಗೆ ಹೋಗುವುದಿಲ್ಲ. ಆ ತಂತ್ರಗಳು ಕೊಡುವ ಮನರಂಜನೆಯನ್ನಷ್ಟೆ ಮೇಲೆತ್ತಿ ಹಿಡಿಯುತ್ತಾರೆ.

ನಾಯಕನಿಗೆ ಅಟ್ಲಿ 'ಬಿಲ್ಡಪ್' ಕೊಡುವುದು ಉಪಕತೆಗಳಿಂದ ಹಾಗೂ ಅಂತಹ ಕತೆಗಳಲ್ಲಿ ಮಿಕವಾದ ಹೆಣ್ಣುಪಾತ್ರಗಳಿಂದ. ನಾಯಕನಿಗೆ ಇದಿರಾಗಿ ನಿಲ್ಲುವುದೂ ಒಬ್ಬ ಹೆಣ್ಣು ಪೊಲೀಸ್. ಕೃಷಿ, ಆರೋಗ್ಯ ವ್ಯವಸ್ಥೆ, ಸೇನಾಪಡೆಗಳಲ್ಲಿನ ಹಳವಂಡಗಳು, ಭ್ರಷ್ಟ ರಾಜಕಾರಣಿಗಳು... ಎಲ್ಲವನ್ನೂ ಒಬ್ಬ ನಾಯಕನ ರಾಬಿನ್‌ಹುಡ್ ಮಾಡಲು ಪರಿಕರಗಳಾಗಿ ಅವರು ಪರಿವರ್ತಿಸಿದ್ದಾರೆ. ಆದರೆ, ಇಂತಹ ಒಂದು 'ಸಿನಿಮೀಯ ಟ್ರೀಟ್‌ಮೆಂಟ್' ಪುನರಾವರ್ತಿತವೆನ್ನುವುದೂ ಸತ್ಯ. ಹಳೆಯ ಬಾಟಲಿಗೆ ಬೇರೆ ಮದ್ಯ ಸುರಿದ ಹಾಗೆ. ಈ ಸಲ ಮದ್ಯ ಕೂಡ ಹಳೆಯದೇ. ಯಾಕೆಂದರೆ, ಶಾರುಖ್ ಅವರಿಗೀಗ ಐವತ್ತೇಳು ವರ್ಷ. ಈ ಓಲ್ಡ್ ವೈನ್ ದೇಹಭಾಷೆಯಲ್ಲೀಗಲೂ ಲಾಲಿತ್ಯವಿದೆ.

ಅಭಿನಯದಲ್ಲಿ ವಿಜಯ್ ಸೇತುಪತಿ ಎಲ್ಲರಿಗಿಂತ ಮೇಲೆ. ಅವರ ಹಿಂದಿ ಕೂಡ ಮನರಂಜನೆಯ ಹೊಸ ಬಗೆ. ನಯನತಾರಾ ಈಗಲೂ ನಯನ ಮನೋಹರ. ದೀಪಿಕಾ ಎಂಬ ಭಾವದೀವಿಗೆ ಕಾಣುವುದು ತುಸು ಹೊತ್ತಷ್ಟೆ. ಪ್ರಿಯಾಮಣಿ ಅವರಿಗೆ ದೀರ್ಘಾವಧಿಯ ನಂತರ ಮುಖ್ಯ ಪಾತ್ರ ದೊರೆತಿದೆ. ಅನಿರುದ್ಧ್ ರವಿಚಂದರ್ ಸಂಗೀತದ 'ಬಿಲ್ಡಪ್ ಚಾಳಿ' ಇಲ್ಲೂ ಇದೆ.

ಪೇರಿಸಿಟ್ಟ ಉಪಕತೆಗಳ ಮೇಲೆ ನಿಲ್ಲುವ ಶಾರುಖ್ ಖಾನ್ ಡೈಲಾಗ್‌ಬಾಜಿ ಒಂದು ಕಡೆ. ದಕ್ಷಿಣ ಭಾರತದ ಕಮರ್ಷಿಯಲ್ ಸಿನಿಮಾದ ಆತ್ಮ ಇನ್ನೊಂದು ಕಡೆ. ಹಿಂದಿ ಚಿತ್ರರಂಗದ ಹೃದಯಕ್ಕೆ ದಕ್ಷಿಣ ಭಾರತದ ನಿರ್ದೇಶಕರೀಗ ಬೇರೆ ಬಡಿತವನ್ನು ಕೊಟ್ಟಿದ್ದಾರೆ. **ವಿಶಾಖ ಎನ್.**

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

✗ 'ಇಂಡಿಯಾ ಎಂಬುದರ ಅರ್ಥ, ತೀರಾ ಹಿಂದುಳಿದ, ಹಳೆ ತಲೆಮಾರಿನ, ಮುಟ್ಠಾಳ ಮತ್ತು ಕ್ರಿಮಿನಲ್ ಜನರು' ಎಂದು ಆಕ್ಸ್‌ಫರ್ಡ್ ಡಿಕ್ಷನರಿಯ 1900ನೇ ಆವೃತ್ತಿಯಲ್ಲಿ ವಿವರಿಸಲಾಗಿದೆ. ಇದು ಬ್ರಿಟಿಷರು ಭಾರತೀಯರಿಗೆ ಕೊಟ್ಟ ಹೆಸರು. ಭಾರತೀಯರನ್ನು ಅವರು ಹೇಗೆ ಕಾಣುತ್ತಿದ್ದರು ಎಂಬುದಕ್ಕೆ ಇಂಡಿಯಾ ಎಂದು ಅವರು ಇಟ್ಟಿರುವ ಹೆಸರೇ ಸಾಕ್ಷಿ. ಅವರು ನಮ್ಮನ್ನು ಗುಲಾಮರಂತೆ ನೋಡುತ್ತಿದ್ದರು. ಅದಕ್ಕೇ ಅಂತಹ ಹೆಸರು ಇಟ್ಟರು' ಎಂಬ ವಿವರ ಇರುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. ಜಿ–20 ಶೃಂಗಸಭೆಯ ಭೋಜನಕೂಟಕ್ಕೆ ರಾಷ್ಟ್ರಪತಿ ಭವನವು ನೀಡಿರುವ ಆಹ್ವಾನ ಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್' ಎಂದು ಮುದ್ರಿಸಿದ್ದು ಚರ್ಚೆಗೆ ಬಂದ ಬೆನ್ನಲ್ಲೇ ಈ ಸ್ವರೂಪದ ಪೋಸ್ಟ್‌ಗಳು ಹರಿದಾಡುತ್ತಿವೆ. ಆದರೆ, ಇದು ಸುಳ್ಳು.

✓ 'ಆನ್‌ಲೈನ್'ನಲ್ಲಿ ಲಭ್ಯವಿರುವ ಅಧಿಕೃತ ಆಕ್ಸ್‌ಫರ್ಡ್ ಡಿಕ್ಷನರಿಯ ಅತ್ಯಂತ ಹಳೆಯ ಆವೃತ್ತಿ 1913ರದ್ದು. ಆದರೆ ಸುಳ್ಳು ಸುದ್ದಿಯಲ್ಲಿ 1900ರ ಆವೃತ್ತಿಯಲ್ಲಿ ಇದೆ ಎಂದು ಹೇಳಿದ್ದಾರೆ. ಲಭ್ಯವಿರುವ ಆವೃತ್ತಿಯಲ್ಲಿ ಇಂಡಿಯಾ ಮತ್ತು ಇಂಡಿಯನ್ ಎಂಬುದರ ವ್ಯಾಖ್ಯಾನವಿಲ್ಲ. 1934ರ ಆವೃತ್ತಿಯಲ್ಲಿ ಇಂಡಿಯಾ ಎಂಬುದಕ್ಕೆ ಪೂರ್ವ ಏಷ್ಯಾದ, ಸಿಂಧೂನದಿಯಿಂದ ಪೂರ್ವಕ್ಕೆ ಮತ್ತು ಹಿಮಾಲಯದಿಂದ ದಕ್ಷಿಣಕ್ಕೆ ಇರುವ ದೇಶ ಎಂದು ವಿವರಣೆ ನೀಡಲಾಗಿದೆ. ಹೀಗಾಗಿ ಆಕ್ಸ್‌ಫರ್ಡ್ ಡಿಕ್ಷನರಿಯಲ್ಲಿ 'ಇಂಡಿಯಾ ಎಂಬುದರ ಅರ್ಥ, ತೀರಾ ಹಿಂದುಳಿದ, ಹಳೆ ತಲೆಮಾರಿನ, ಮುಟ್ಠಾಳ ಮತ್ತು ಕ್ರಿಮಿನಲ್ ಜನರು' ಎಂದು ವಿವರಣೆ ನೀಡಿದ್ದಾರೆ ಎಂಬುದು ಸುಳ್ಳು ಸುದ್ದಿ' ಎಂದು ಬೂಮ್‌ಲೈವ್ ಫ್ಯಾಕ್ಟ್‌ಚೆಕ್ ಪ್ರಕಟಿಸಿದೆ.


ಗುಂಡಣ್ಣ



ದೃಷ್ಟಿಕೋನಗಳು ಹಲವು

ನುಡಿ ಬೆಳಗು




ಪ್ರೊ.ಎಂ. ಕೃಷ್ಣೇಗೌಡ

ಈ ಚಂದ್ರನನ್ನು ಚಂದಮಾಮ ಎಂದು ಮೊದಲು ಕರೆದವರು ಯಾರೋ ಕಾಣೆ. ತೊಡೆಯ ಮೇಲೆ ಕೂತು ಚಂಡಿ ಹಿಡಿದ ಕಂದಮ್ಮನಿಗೆ ಅಮ್ಮ ಆಕಾಶದಲ್ಲಿ ತಣ್ಣಗೆ ಹೊಳೆಯುವ ತಟ್ಟೆಯನ್ನು ತೋರಿಸಿ 'ಅಗೋ ಚಂದಮಾಮ...' ಅಂತ ತೋರಿಸಿರಬೇಕು. ಅಥವಾ ಆ ಮಗುವೇ ಚಂದ್ರನ ಮೃದುಹೊಳಪಿಗೆ ಮನಸೋತು 'ಅಲ್ಲೀ ಚಂದಮಾಮ...' ಅಂತ ತನ್ನ ಹಸುಳೆ ಬೆರಳೆತ್ತಿ ಅಮ್ಮನಿಗೆ ತೋರಿಸಿರಬೇಕು. ಅಂತೂ ಆ ಚಂದ್ರ ಈ ಭುವಿಯ ಸಕಲ ಮಕ್ಕಳಿಗೂ ಪ್ರೀತಿಯ ಮಾಮ. ಚಂದಮಾಮ.

ನಾವೆಲ್ಲಾ ಚಿಕ್ಕವರಾಗಿರುವಾಗ ಆಕಾಶದ ಚಂದ್ರ ನಾವು ಹೋದಲ್ಲಿಗೆಲ್ಲಾ ಬರುವುದೇ ಒಂದು ಸೋಜಿಗ. ನಾವು ಎಷ್ಟೇ ಓಡಿ ಏದುಸಿರು ಬಿಡುತ್ತಿದ್ದರೂ ನಮ್ಮ ಚಂದಮಾಮ ಒಂದಿಷ್ಟೂ ಆಯಾಸವಿಲ್ಲದೆ ನಮ್ಮೊಂದಿಗೇ ಓಡಿ ಆಡಿ ನಗುತ್ತಿರುತ್ತಿದ್ದ. ಎಂಥ ಚಂದ ಅಲ್ವಾ ಚಂದಮಾಮ...

ನಮ್ಮ ಕವಿಗಳೂ ಒಂದು ಕಾಲದಲ್ಲಿ ಮಕ್ಕಳೇ ಆಗಿದ್ದವರಲ್ಲವಾ? ಅದಕ್ಕೇ ಇಂಥ ಪದ್ಯಗಳನ್ನು ಬರೆದಿದ್ದಾರಲ್ಲವಾ?

ಚಂದಿರನೇತಕೆ ಓಡುವನಮ್ಮ
ಮೋಡಕೆ ಹೆದರಿಹನೆ?
ಬೆಳ್ಳಿಯ ಮೋಡದ ಅಲೆಗಳ ಕಂಡು ಚಂದಿರ
ಬೆದರಿಹನೆ?
ಚಂದಿರನೆನ್ನಯ ಗೆಳೆಯನು ಅಮ್ಮ
ನನ್ನೊಡನಾಡುವನು
ನಾನೂ ಓಡಲು ತಾನೂ ಓಡುವ
ಚನ್ನಿಗ ಚಂದಿರನು

ಇನ್ನು ಚಂದ್ರನ ಕುರಿತು ಬಂದಿರುವ ಪದ್ಯಗಳು, ಕತೆಗಳು ಎಲ್ಲವನ್ನೂ ಮೆಲುಕು ಹಾಕಿದರೆ ಮಾತು ಮುಗಿಯುವುದಿಲ್ಲ. ಚಂದ್ರ ಮಕ್ಕಳಿಗೆ ಹೇಗೋ ಹಾಗೆಯೇ ಕವಿಗಳಿಗೆ, ಪ್ರೇಮಿಗಳಿಗೆ, ಪುರಾಣಿಕರಿಗೆ ಅತ್ಯಾಪ್ತ ಗೆಳೆಯ, ಸಖ, ಬಂಧು, ದೇವರು.

ಇದೆಲ್ಲಾ ಈಗ ಯಾಕೆ ನೆನಪಾಯಿತೆಂದರೆ ಮೊನ್ನೆ ನಮ್ಮ ಇಸ್ರೊ ವಿಜ್ಞಾನಿಗಳು ಚಂದ್ರನ ಮೇಲೆ ಪ್ರಜ್ಞಾನ್ ಲ್ಯಾಂಡರ್ ಅನ್ನು ಇಳಿಸಿಬಿಟ್ಟರಲ್ಲಾ, ಆ ಕೃತಕ ಬುದ್ಧಿವಂತ ಅಲ್ಲೆಲ್ಲಾ ನೋಡಿ, ಓಡಾಡಿ ಫೋಟೋ ಶೂಟ್ ಮಾಡಿ ಕಳುಹಿಸುತ್ತಿದೆಯಲ್ಲಾ, ಅದನ್ನೆಲ್ಲ ನೋಡಿದ ಮಕ್ಕಳಿಗೆ ಇನ್ನು ಚಂದ್ರನನ್ನು 'ಮಾಮ' ಅನ್ನಲು ಸಾಧ್ಯವಾಗದೆ ಅದು ಹೇಗೆ ನಮಗೆ ಮಾಮ? ಅಷ್ಟಕ್ಕೂ ಅದು ಭೂಮಿಯಿಂದ ಎರಡು ಲಕ್ಷ ನಲವತ್ತಾರು ಸಾವಿರ ಮೈಲಿ ದೂರದಲ್ಲಿ ಭೂಮಿಯ ಸುತ್ತ ಗಂಟೆಗೆ 2,288 ಮೈಲಿ ವೇಗದಲ್ಲಿ ಸುತ್ತುತ್ತಿರುವ ಒಂದು ಆಕಾಶ ಕಾಯ ಅಷ್ಟೆ. ಮಾಮ ಅನ್ನುವುದಕ್ಕೆ ಅದೇನೂ ಒಂದು ವ್ಯಕ್ತಿಯಲ್ಲ, ಒಂದು ಉಪಗ್ರಹ ಮಾತ್ರ....ಹೀಗೆಲ್ಲಾ ಮಾತಾಡತೊಡಗಿದರೆ ನಮ್ಮ ಭಾವಕೋಶ ಏನಾಗಬೇಕು?

ಇದೆಲ್ಲಾ ಮಾತು ಯಾಕೆ ಬಂತೆಂದರೆ ನಮ್ಮ ಸುತ್ತಲೂ ಇರುವ ವಿಷಯ, ವಸ್ತು, ವಿದ್ಯಮಾನಗಳಿಗೆಲ್ಲಾ ಬೇರೆ ಬೇರೆಯ ದೃಷ್ಟಿಕೋನಗಳಿವೆ. ಈ ಜಗತ್ತಿನಲ್ಲಿ ಕವಿಗಳೂ ಇದ್ದಾರೆ, ರಸಿಕರೂ ಇದ್ದಾರೆ, ಕಲಾವಿದರೂ ಇದ್ದಾರೆ, ವಿಜ್ಞಾನಿಗಳೂ ಇದ್ದಾರೆ. ಅವರೆಲ್ಲರೂ ಸತ್ಯಾನ್ವೇಷಣೆಗೆ ಬೇರೆ ಬೇರೆ ದಾರಿ ಹಿಡಿದಿದ್ದಾರೆ. ಅವರೆಲ್ಲರೂ ಇಲ್ಲಿರಲಿ. ಒಂದು ನೋಟ ಮತ್ತೊಂದನ್ನು ಅಲ್ಲಗಳೆಯುವುದು, ಹೀಯಾಳಿಸುವುದು ಸಲ್ಲ, ಸರಿಯಲ್ಲ, ಹೌದಲ್ಲವೇ?

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಸೆಪ್ಟೆಂಬರ್ 8, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಕೃಷ್ಣನವಮಿ ಗಂ. 17-31 ನಕ್ಷತ್ರ: ಮೃಗಶಿರಾ ಗಂ. 12-10 ಯೋಗ: ಸಿದ್ಧಿ (ಆಸ್ರಿಕ್) ಗಂ. 22-07 ಕರಣ: ಗರ ಗಂ. 17-31, ಸಿಂಹ ಮಾಸದ 22 ನೇ ದಿನ, ಮಳೆನಕ್ಷತ್ರ: ಪೂರ್ವ ಫಲ್ಗುಣಿ 3. ರಾಹುಕಾಲ : ಬೆಳಗ್ಗೆ 12-00–01-30 ಸೂರ್ಯೋದಯ : 06-23 ಸೂರ್ಯಾಸ್ತ : 06-34 ಮುಸ್ಲಿಂ ದಿನಾಂಕ : 22 ಸಫರ್
ಅದೃಷ್ಟ ಸಂಖ್ಯೆ : 6, 2

ಮೇಷ: ಸೋಮಾರಿತನ ಅಥವಾ ಬೇಜವಾಬ್ದಾರಿತನದಿಂದ ಮಾಡಿದ ತಪ್ಪುಗಳಿಗೆ ಶಿಕ್ಷೆ ಅನುಭವಿಸಬೇಕಾಗುತ್ತದೆ. ಶತ್ರುಗಳಿಗೂ ಶುಭವನ್ನು ಹಾರೈಸುವ ರೀತಿಯಲ್ಲಿ ವ್ಯಕ್ತಿತ್ವ ರೂಪಿಸಿಕೊಂಡಲ್ಲಿ ಶ್ರೇಯಸ್ಸು ಉಂಟಾಗುವುದು.

ವೃಷಭ: ಯೋಗ, ಧ್ಯಾನಕ್ಕಾಗಿ ಅಲ್ಪ ಸಮಯ ಮೀಸಲಿಡಿ. ಇದರ ಆಚರಣೆಯಿಂದಾಗಿ ಮನಸ್ಸಿಗೆ ಅಪಾರ ಸಂತಸ ದೊರಕಲಿದೆ. ಪ್ರೀತಿಯ ವಿಷಯದಲ್ಲಿ ಮುಂದೇನು ಮಾಡಬೇಕೆಂಬ ಸೂಚನೆ ಈ ದಿನ ಲಭಿಸುವುದು.

ಮಿಥುನ: ಯಶೋದಾಯಕವಾದ ಭವಿಷ್ಯಕ್ಕಾಗಿ ಯೋಜನೆ ರೂಪಿಸುವಲ್ಲಿ ಪತ್ನಿಯ ಸಲಹೆಯನ್ನು ಸ್ವೀಕರಿಸಿ. ಇನ್ನೊಬ್ಬರಿಗೆ ಕೊಡಬೇಕಾದ ವಸ್ತುಗಳನ್ನು ಅವರಿಗೆ ತಲುಪಿಸುವಲ್ಲಿನ ಕರ್ತವ್ಯವನ್ನು ಮರೆಯದಿರಿ.

ಕರ್ಕಾಟಕ: ಮಳೆಯಲ್ಲಿ ನೆನೆಯುವುದು ಅಥವಾ ನಿಮ್ಮ ದೇಹಕ್ಕೆ ಅಹಿತಕರ ಕೆಲಸದ ಕಾರಣದಿಂದ ಜ್ವರಾದಿ ಬಾಧೆಗಳು ಕಾಣಿಸಿಕೊಳ್ಳಬಹುದು. ಜಾಣತನದಿಂದ ಕೆಲಸ ಪೂರ್ಣಗೊಳಿಸುವಲ್ಲಿ ಯಶಸ್ವಿಯಾಗುವಿರಿ.

ಸಿಂಹ: ನಂಬಿರುವ ವ್ಯಕ್ತಿಗಳ ಬಗ್ಗೆ ನಿಮ್ಮ ನಿಲುವುಗಳನ್ನು ಬದಲಾಯಿಸಿಕೊಳ್ಳಬೇಕೆನಿಸಿದ್ದರೂ ಹಾಗೆ ಮಾಡದಿರಿ, ಅದು ಈ ದಿನಕ್ಕೆ ಫಲ ಪ್ರದವಲ್ಲ. ಸಮಸ್ಯೆಗಳು ಹೆಚ್ಚುವುದಕ್ಕೆ ಮುಂಚಿತವಾಗಿ ಜಾಣ್ಮೆಯಿಂದ ಪರಿಹರಿಸಿಕೊಳ್ಳಿ.

ಕನ್ಯಾ: ಧಾರ್ಮಿಕ ನಾಯಕರಿಗೆ ಈ ದಿನ ಮರೆಯಲಾಗದ ಘಟನೆಯೊಂದು ಸುತ್ತಮುತ್ತಲಿನಲ್ಲಿ ನಡೆಯುವುದು. ವ್ಯವಹಾರಕ್ಕೆ ಸಂಬಂಧಪಟ್ಟಂತೆ ಮಧ್ಯವರ್ತಿಗಳ ಮಾತನ್ನು ನಿರ್ಲಕ್ಷಿಸುವುದು ಸಮಂಜಸವೆಂಬುವುದು ಅನಿಸಿಕೆ.

ತುಲಾ: ಆಲೋಚಿಸಿದಂತೆ ಕೆಲಸ ಕಾರ್ಯಗಳು ನಡೆಯದೇ ಸೋಲು, ಹಿನ್ನಡೆ ಎಂಬಂತೆ ನಿಮ್ಮ ಮನಸ್ಸಿಗೆ ಕಾಣಬಹುದು, ಆದರೆ ದೇವರ ಆಶೀರ್ವಾದ ನಿಮ್ಮ ಮೇಲಿರುವುದರಿಂದ ಕಾಲಕ್ಕೆ ಸರಿಯಾಗಿ ಕೆಲಸಗಳು ಪೂರ್ಣಗೊಳ್ಳುತ್ತದೆ.

ವೃಶ್ಚಿಕ: ಸಂಘ ಸಂಸ್ಥೆಗಳ ಸಭೆಗಳಲ್ಲಿ ನಿಮ್ಮ ಮಾತಿಗೆ ಬೆಲೆ ಇಲ್ಲದಂತೆ ಅಥವಾ ನಿಮ್ಮ ಮಾತನ್ನು ಅಪಾರ್ಥವಾಗಿ ಕಲ್ಪಿಸಿಕೊಂಡು ದೂಷಿಸುವಂತಹ ಘಟನೆಗಳು ಸಂಭವಿಸಬಹುದು. ಔಷಧಿ ವ್ಯಾಪಾರಿಗಳಿಗೆ ಲಾಭ ಹೆಚ್ಚುವುದು.

ಧನು: ಈ ದಿನದ ಕೆಲಸಕ್ಕೆ ಇನ್ನೊಂದು ಕೆಲಸ ಜೊತೆ ಜೊತೆಗೂಡಿ ಮುಕ್ತಾಯದ ಹಂತ ತಲುಪಲು ಸಾಧ್ಯವಾಗುವುದಿಲ್ಲ. ಈವರೆಗೂ ಕೂಡಿಟ್ಟ ಶ್ರಮದ ಠೇವಣಿ ಹಣ ಮಕ್ಕಳ ವಿದ್ಯಾಭ್ಯಾಸಕ್ಕಾಗಿ ವಿನಿಯೋಗಿಸ ಬೇಕಾಗುವುದು.

ಮಕರ: ಸಹಾಯ ಹಸ್ತಗಳ ಮುಖಾಂತರವಾಗಿ ಅಪೂರ್ಣ ಕೆಲಸ ಕಾರ್ಯಗಳು ಪೂರ್ಣಗೊಳ್ಳುವುದು. ಜೀವಶಾಸ್ತ್ರದ ಶೈಕ್ಷಣಿಕ ರಂಗದಲ್ಲಿರುವ ವಿದ್ಯಾರ್ಥಿಗಳಿಗೆ ಹಾಗೂ ಅಧ್ಯಾಪಕರಿಗೆ ಇಂದಿನ ದಿನವು ಯಶೋದಾಯಕವಾಗಿರುತ್ತದೆ.

ಕುಂಭ: ನಿಮ್ಮ ಸಕಾರಾತ್ಮಕ ಮನೋಭಾವವು ಕಳೆದು ಹೋದಂತಿದ್ದ ಕಲೆಯಲ್ಲಿನ ಆಸಕ್ತಿಯನ್ನು ಮತ್ತೆ ಮರುಕಳಿಸುವಂತೆ ಮಾಡುವುದು. ನೀವಾಡುವ ಮಾತುಗಳಿಂದ ಗೌರವವು ದೊರಕುವುದು.


ಮೀನ: ಅನೇಕ ದಿನಗಳಿಂದ ನೀವು ಸೇವಿಸುತ್ತಿರುವ ಅಪಥ್ಯದ ಆಹಾರದ ಪರಿಣಾಮವಾಗಿ ಆರೋಗ್ಯದಲ್ಲಿ ವ್ಯತ್ಯಾಸಗಳಾಗುವ ಸಾಧ್ಯತೆಗಳಿವೆ. ನಿಮ್ಮ ಮನಸ್ಸಿನಲ್ಲಿ ಕೊರೆಯುತ್ತಿರುವ ಹಲವು ಚಿಂತೆಗಳಿಗೆ ಉತ್ತರ ಸಿಗುವುದು.

ಪದಬಂಧ 5435

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸ್ವರ್ಗ ಇಲ್ಲಿಯೇ ಇದೆ (4)
3.ಕೃತಿಮವಾದ ಮಂದಹಾಸ (4)
5.ಒನಪು ತೋರಿದಾಗ ಬಂದಿರುವ ಸ್ಮರಣೆ (3)
6.ಆಕ್ಷೇಪಣೆ ಮಾಡುತ್ತಲೇ ತೋರಿಸಿದ ಗುಪ್ತ ನಿಧಿ! (3)
8.ಮಾರನ ಹತ್ತಿರವಿರುವ ಮಗ (3)
9.ಹಿತವಲ್ಲದ್ದು ಇದು (3)
10.ರಥದಲ್ಲಿ ಕುಳಿತು ಯುದ್ಧ ಮಾಡುವವನು(3)
12.ವನದಲ್ಲಿಯೇ ತ್ಯಜಿಸುವಿಕೆ (3)
14.ಒಂದಿಷ್ಟೂ ಕರುಣೆಯಿರದ ಕ್ರೂರ (4)
15.ಕೆಟ್ಟ ನಡುವಳಿಕೆಯಿದು (4)

ಮೇಲಿಂದ ಕೆಳಕ್ಕೆ
1.ಹಾಲು ಕರೆಯುವ ಹಸು (4)
2.ಮನೆಯಲ್ಲೇ ಇರುವ ಮದಿಸಿದ ಗಜ! (3)
3.ಉತ್ಸಾಹ ಈ ರೀತಿ ಬಂದಿದೆ (3)
4.ರಹಸ್ಯ ಮಾರ್ಗವಿದು (4)
7.ಬೆಟ್ಟ ಇಲ್ಲಿಂದಲೇ ಕಾಣುತ್ತಿದೆ (3)
8.ಅಷ್ಟದಿಕ್ಪಾಲಕರಲ್ಲಿ ಈತನೇ ಶ್ರೀಮಂತ (3)
9.ಸ್ಮರಣ ಶಕ್ತಿ ಚನ್ನಾಗಿರುವವನು (4)
11.ಕರದಲ್ಲಿರುವ ದೇಹ! (4)
12.ನೀರಿನ ಅಧಿದೇವತೆ (3)
13.ಆಭರಣದೊಡನಿರುವ ಕೈಯಲ್ಲಿನ ಹಣ!(3)



5434ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಲ್ಲವಿ 3.ವಸನ 5.ವನಸಂಚಾರ 6.ಶರ 8.ನಾಕ 9.ಅಂಕೆ 10.ಕದ 14.ಗಾಳಿಗೋಪುರ 15.ಕಮರಿ 16.ಒನಕೆ

ಮೇಲಿಂದ ಕೆಳಕ್ಕೆ:
1.ಪರವಶ 2.ವಿವರ್ಣ 3.ವರಹ 4.ನಕ್ಷತ್ರಕ 7.ರಸಿಕೆ 8.ನಾಸಿಕ 9.ಅಂಗಾರಕ 11.ದಬ್ಬಾಳಿಕೆ 12.ನಗಾರಿ 13.ತೆರಿಚ

ಸುಡೊಕು 5821

			4		2		7	
3		6				2		5
	2			5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		


ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5820 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

'ಮನಸ್ಸುಗಳನ್ನು ಒಗ್ಗೂಡಿಸಿದ ಭಾರತ ಜೋಡೊ ಯಾತ್ರೆ'

ನವದೆಹಲಿ (ಪಿಟಿಐ): 'ಭಾರತ್ ಜೋಡೊ ಯಾತ್ರೆ'ಯನ್ನು ಜನಾಂದೋಲನವೆಂದು ಬಣ್ಣಿಸಿರುವ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಅದೊಂದು ಭೌತಿಕ ಸಾಹಸ ಮಾತ್ರವಲ್ಲದೇ, ಒಡೆದ ಆತ್ಮಸಾಕ್ಷಿಗಳನ್ನು ಒಟ್ಟುಗೂಡಿಸುವ ಪ್ರಾಮಾಣಿಕ ಪ್ರಯತ್ನವಾಗಿತ್ತು ಎಂದಿದ್ದಾರೆ.


ಮಲ್ಲಿಕಾರ್ಜುನ ಖರ್ಗೆ

ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ಸಾಗಿದ ಭಾರತ ಜೋಡೊ ಯಾತ್ರೆಯ ಮೊದಲ ವಾರ್ಷಿಕೋತ್ಸವದ ಹಿನ್ನೆಲೆಯಲ್ಲಿ ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಪ್ರಕಟಿಸಿರುವ ಅವರು, 'ಸಮಾಜದಲ್ಲಿನ ದ್ವೇಷ ಮತ್ತು ಹಗೆತನದ ವಿರುದ್ಧ ಸಂವಾದದ ಮೂಲಕ ಹೋರಾಡುವುದನ್ನು ಮುಂದುವರಿಸಲಿದ್ದೇವೆ' ಎಂದು ಹೇಳಿದ್ದಾರೆ.

'ನ್ಯಾಯ, ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಮೌಲ್ಯಗಳು ನಮಗೆ ಪ್ರಧಾನವಾದದ್ದು, ಸಂವಿಧಾನ ಮತ್ತು ಪ್ರಜಾಪ್ರಭುತ್ವ ರಕ್ಷಣೆಯ ಪ್ರಯತ್ನದಲ್ಲಿ ಕಾಂಗ್ರೆಸ್ ಪಕ್ಷವು ಜನರೊಂದಿಗೆ ನಿರಂತರವಾಗಿ ಸಂಪರ್ಕದಲ್ಲಿರುತ್ತದೆ' ಎಂದು ಹೇಳಿದ್ದಾರೆ.

'ದ್ವೇಷ ಮತ್ತು ವಿಭಜನೆಯ ಕಾರ್ಯಸೂಚಿಯನ್ನು ಮರೆಮಾಚುವ ಸಲುವಾಗಿ ಜನರ ಗಮನವನ್ನು ಬೇರೆಡೆಗೆ ಸೆಳೆಯುವ ಪ್ರವೃತ್ತಿಯು ನಮ್ಮ ಸಾಕ್ಷಿಪ್ರಜ್ಞೆ ಮೇಲಿನ ವ್ಯವಸ್ಥಿತ ದಾಳಿಯಾಗಿದೆ'ಎಂದು ಖರ್ಗೆ ಹೇಳಿದ್ದಾರೆ.

'ದೇಶದಲ್ಲಿನ ಆರ್ಥಿಕ ಅಸಮಾನತೆ, ಬೆಲೆ ಏರಿಕೆ, ನಿರುದ್ಯೋಗ, ಸಾಮಾಜಿಕ ಅನ್ಯಾಯ, ಸಂವಿಧಾನದ ಮೇಲಿನ ದಾಳಿ, ಅಧಿಕಾರದ ಕೇಂದ್ರೀಕರಣದಂಥ ನಿಜವಾದ ಸಮಸ್ಯೆಗಳನ್ನು ಜನರ ಮುಂದಿಡುವ ಪ್ರಯತ್ನವೇ ಭಾರತ ಜೋಡೊ ಆಗಿತ್ತು' ಎಂದು ಖರ್ಗೆ ತಿಳಿಸಿದ್ದಾರೆ.

2022ರ ಸೆಪ್ಟೆಂಬರ್ 07ರಂದು ಭಾರತ ಜೋಡೊ ಯಾತ್ರೆ ಆರಂಭವಾಗಿತ್ತು.

'ಜನರ ಮಾತು ಆಲಿಸಲು ರಾಹುಲ್‌ಗೆ ಸಿಕ್ಕ ಅವಕಾಶ'

ನವದೆಹಲಿ(ಪಿಟಿಐ): ಭಾರತ್ ಜೋಡೋ ಯಾತ್ರೆಯು ರಾಹುಲ್ ಗಾಂಧಿ ಅವರಿಗೆ 'ಮನ್ ಕಿ ಬಾತ್'ನಂಥ ಉಪನ್ಯಾಸದ ಕಸರತ್ತಾಗಿರದೇ, ಜನರ ಮಾತು ಆಲಿಸುವ ಅವಕಾಶವಾಗಿತ್ತು. ಇದು ವಿವಿಧ ರೂಪಗಳಲ್ಲಿ ಮುಂದುವರಿಯಲಿದೆ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.


ಜೈರಾಮ್ ರಮೇಶ್

'ಭಾರತದ ರಾಜಕೀಯ ಪರಿವರ್ತನೆಯ ಮಹತ್ವದ ಘಟನೆಯಾದ ಯಾತ್ರೆಯು ದೇಶದ ಆರ್ಥಿಕ ಅಸಮಾನತೆ, ಸಾಮಾಜಿಕ ಧ್ರುವೀಕರಣ ಮತ್ತು ರಾಜಕೀಯ ನಿರಂಕುಶಾಧಿಕಾರದಂಥ ವಿಚಾರಗಳ ಮೇಲೆ' ಬೆಳಕು ಚೆಲ್ಲಿದೆ ಎಂದು ಹೇಳಿದರು.

'ಇದು (ಯಾತ್ರೆ) ರಾಹುಲ್ ಗಾಂಧಿಗೆ ಮನ್ ಕಿ ಬಾತ್ ಉಪನ್ಯಾಸದ ಕಸರತ್ತು ಆಗಿರಲಿಲ್ಲ. ಆದರೆ 'ಜನತಾ ಕಿ ಚಿಂತಾ (ಜನರ ಆತಂಕ ಅರಿಯುವ)' ಕೇಳುವ ಅವಕಾಶವಾಗಿತ್ತು' ಎಂದು ರಮೇಶ್ ಹೇಳಿದರು.

ರಾಹುಲ್ ಗಾಂಧಿ ಅವರು 2022ರ ಸೆಪ್ಟೆಂಬರ್ 07ರಂದು ತಮಿಳುನಾಡಿನ ಕನ್ಯಾಕುಮಾರಿಯಲ್ಲಿ ಭಾರತ ಜೋಡೊ ಯಾತ್ರೆಯನ್ನು ಆರಂಭಿಸಿದ್ದರು. ಯಾತ್ರೆಯು ಹಲವು ರಾಜ್ಯಗಳ ಮೂಲಕ ಸಾಗಿ ಜನವರಿ 30ರಂದು ಕಾಶ್ಮೀರದಲ್ಲಿ ಅಂತ್ಯವಾಗಿತ್ತು.

ಜಿ–20: ಹವಾಮಾನ ಬದಲಾವಣೆ – 'ಪ್ಯಾರಿಸ್ ಒಪ್ಪಂದ'ದ ವಾಗ್ದಾನ ನೆನಪಿಸಿದ ಮೋದಿ

'ಶ್ರೀಮಂತ ರಾಷ್ಟ್ರಗಳು ಹಣ ನೀಡಲಿ'

ಪ್ರಜಾವಾಣಿ ವಾರ್ತೆ

ನವದೆಹಲಿ: ಹವಾಮಾನ ಬದಲಾವಣೆಯಿಂದಾಗುವ ಪರಿಣಾಮಗಳನ್ನು ನಿವಾರಿಸುವ ಸಲುವಾಗಿ ಶ್ರೀಮಂತ ರಾಷ್ಟ್ರಗಳು ತಮ್ಮ ವಾಗ್ದಾನದಂತೆ, ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳಿಗೆ ಹಣ ಒದಗಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಗುರುವಾರ ಪ್ರತಿಪಾದಿಸಿದ್ದಾರೆ.

ಜಿ-20 ಶೃಂಗಸಭೆ ಅಂಗವಾಗಿ ಮೋದಿ ಅವರು ಬರೆದಿರುವ ಲೇಖನದಲ್ಲಿ ಹವಾಮಾನ ಬದಲಾವಣೆ ಒಡ್ಡಿರುವ ಸವಾಲುಗಳು ಸೇರಿದಂತೆ ಹಲವು ವಿಷಯಗಳನ್ನು ಪ್ರಸ್ತಾಪಿಸಿದ್ದಾರೆ. ಕೇಂದ್ರ ಸರ್ಕಾರ ಈ ಲೇಖನವನ್ನು ಹಂಚಿಕೊಂಡಿದೆ.

ಹವಾಮಾನ ಬದಲಾವಣೆಗೆ ಸಂಬಂಧಿಸಿ 2015ರ 'ಪ್ಯಾರಿಸ್ ಒಪ್ಪಂದ'ದಂತೆ ವರ್ಷಕ್ಕೆ ₹ 8 ಲಕ್ಷ ಕೋಟಿ ನೀಡುವಲ್ಲಿ ಶ್ರೀಮಂತ ರಾಷ್ಟ್ರಗಳು ವಿಫಲವಾಗಿವೆ ಎಂದೂ ಮೋದಿ ಹೇಳಿದ್ದಾರೆ.

ಇನ್ನೆರಡು ತಿಂಗಳಲ್ಲಿ, ಯುಎಇಯಲ್ಲಿ ವಿಶ್ವಸಂಸ್ಥೆಯ ಹವಾಮಾನ ಶೃಂಗಸಭೆ ನಡೆಯಲಿದೆ. ಹೀಗಾಗಿ, ಮೋದಿ ಅವರ ಈ ಹೇಳಿಕೆಗೆ ಮಹತ್ವ ಬಂದಿದೆ.

ಹವಾಮಾನ ಬದಲಾವಣೆಯಿಂದಾಗುವ ಅಪಾಯಕಾರಿ ಪರಿಣಾಮಗಳನ್ನು ತಡೆಯಲೇಬೇಕಾದಲ್ಲಿ, ವಿಶ್ವದ 20 ಅಗ್ರ ರಾಷ್ಟ್ರಗಳು ಹಣಕಾಸು ಮತ್ತು ತಂತ್ರಜ್ಞಾನ ವರ್ಗಾವಣೆಗೆ ಮುಂದಾಗಬೇಕು ಎಂದೂ ಪ್ರತಿಪಾದಿಸಿದ್ದಾರೆ.

'ಜನವರಿಯಲ್ಲಿ ವರ್ಚುವಲ್ ಆಗಿ ಆಯೋಜಿಸಲಾಗಿದ್ದ 'ವಾಯ್ಸ್ ಆಫ್ ಗ್ಲೋಬಲ್ ಸೌತ್ ಸಮಿಟ್'ನಲ್ಲಿ 125 ದೇಶಗಳ ಪ್ರತಿನಿಧಿಗಳು ಪಾಲ್ಗೊಂಡಿದ್ದರು. ಅಭಿವೃದ್ಧಿ ಹೊಂದುತ್ತಿರುವ ಹಾಗೂ ಬಡ ರಾಷ್ಟ್ರಗಳಿಗೆ ಈ ಸಮಾವೇಶ ಧ್ವನಿಯಾಗಿತ್ತು' ಎಂದು ಹೇಳಿದ್ದಾರೆ.


ಜಿ–20 ಶೃಂಗಸಭೆಯ ಧ್ಯೇಯವನ್ನು ಸಾರುವ ಕಲಾಕೃತಿಯೊಂದನ್ನು ದೆಹಲಿ ಗೇಟ್ ಬಳಿ ಸ್ಥಾಪಿಸಲಾಗಿದೆ –ಪಿಟಿಐ ಚಿತ್ರ

ಸಿರಿಧಾನ್ಯ ಖಾದ್ಯ

ವಿದೇಶಿ ಅತಿಥಿಗಳಿಗೆ ಹೋಟೆಲ್‌ಗಳಲ್ಲಿ ಸಿರಿಧಾನ್ಯ ಆಧಾರಿತ ಮೆನು ಇರಲಿದೆ. ಪ್ರತಿನಿಧಿಗಳು ಶೃಂಗಸಭೆಯ ಸ್ಥಳ ಭಾರತ್ ಮಂಟಪದಲ್ಲಿ ಭೋಜನ ಮಾಡುವ ಸಾಧ್ಯತೆ ಇದೆ. ಹೋಟೆಲ್‌ಗಳಲ್ಲಿ ಸಿರಿಧಾನ್ಯಗಳ ಆಹಾರದ ಜತೆಗೆ, ರಾಗಿ ಇಡ್ಲಿ, ದೋಸೆ, ಸಿರಿಧಾನ್ಯಗಳ ಖೀರ್ ಮತ್ತು ಸೂಪು, ಜತೆಗೆ ಸ್ಥಳೀಯವಾಗಿ ಜನಪ್ರಿಯ ಭಕ್ಷ್ಯಗಳೆನಿಸಿದ ತಂದೂರಿ ಮೀನು, ಆಡಿನಮರಿ ಚಾಪ್ಸ್, ಬಟರ್ ಚಿಕನ್, ಹೈದರಾಬಾದ್ ಗೋಷ್ಟ್ ಬಿರಿಯಾನಿ, ಅವಧಿ ಮುರ್ಘ್ ಕೂರ್ಮಾ, ತೆಂಗಿನಕಾಯಿ ಪಾಯಸ ಸೇರಿ ಹಲವು ಖಾದ್ಯ ಇರಲಿದೆ ಎಂದು ಅಧಿಕಾರಿಗಳು ಹೇಳಿದರು.

ಆತಿಥ್ಯಕ್ಕೆ ಚಿನ್ನ, ಬೆಳ್ಳಿ ಲೇಪಿತ ಕಟ್ಲರಿ

ನವದೆಹಲಿ: ಇಲ್ಲಿ ನಡೆಯಲಿರುವ ಜಿ20 ಶೃಂಗಸಭೆಯಲ್ಲಿ ಪಾಲ್ಗೊಳ್ಳುವ ದೇಶ ಮತ್ತು ವಿದೇಶಗಳ ನಾಯಕರಿಗೆ ಆತಿಥ್ಯದ ವೇಳೆ ಚಿನ್ನ, ಬೆಳ್ಳಿ ಲೇಪಿತ ಪಾತ್ರೆ, ಚಮಚಗಳಲ್ಲಿ (ಟೇಬಲ್‌ವೇರ್) ಊಟ, ಉಪಾಹಾರ ಬಡಿಸಲಾಗುತ್ತಿದೆ. ವಿಶ್ವ ನಾಯಕರಿಗೆ ಆಹಾರ–ಖಾದ್ಯಗಳನ್ನು ಉಣಬಡಿಸಲು ಭಾರತದ ಸಾಂಸ್ಕೃತಿಕ ಪರಂಪರೆಯ ಕುಸುರಿ ಕೆತ್ತನೆಯ ವಿನ್ಯಾಸಗಳ, ಚಿನ್ನ ಮತ್ತು ಬೆಳ್ಳಿ ಲೇಪಿತ ಪಾತ್ರೆಗಳು (ಕಟ್ಲರಿ) ಕಾಯುತ್ತಿವೆ.

ಹೆಚ್ಚಿನ ಕಟ್ಲರಿಗಳು ಸ್ಟೀಲ್ ಅಥವಾ ಹಿತ್ತಾಳೆಯ ಅಥವಾ ಎರಡರ ಮಿಶ್ರಣದ ತಳ ಹೊಂದಿದ್ದರೂ, ಪ್ರತಿನಿಧಿಗಳಿಗೆ ಆಹಾರ ಬಡಿಸಲು ಬಳಸುವ ಕಟ್ಲರಿಗಳು ಬೆಳ್ಳಿಯ ಸೊಗಸಾದ ಲೇಪನ ಹೊಂದಿರಲಿವೆ. ಚಿನ್ನದ ಲೇಪನ ಹೊಂದಿರುವ ಗ್ಲಾಸ್‌ಗಳನ್ನು ಸ್ವಾಗತ ಪಾನೀಯ ಕೊಡಲು ಬಳಸಲಾಗುತ್ತಿದೆ ಎಂದು ಜಿ20 ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ರಾಷ್ಟ್ರ ರಾಜಧಾನಿಯ ವಿವಿಧ ಐಷಾರಾಮಿ ಹೋಟೆಲ್‌ಗಳು ಈಗಾಗಲೇ ಚಿನ್ನ ಮತ್ತು ಬೆಳ್ಳಿ ಲೇಪಿತ ಕಟ್ಲರಿಗಳನ್ನು ಖರೀದಿಸಿವೆ. ಇವುಗಳನ್ನು ಜಿ20 ಶೃಂಗಸಭೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳ ಆತಿಥ್ಯಕ್ಕೆ ಬಳಸಲಾಗುತ್ತದೆ ಎಂದು ಅವರು ಹೇಳಿದರು.

ಸೂಕ್ಷ್ಮ ಕೆತ್ತನೆಯ ಅಲಂಕೃತವಾದ 15,000 ಬೆಳ್ಳಿ ಲೇಪಿತ ಪಾತ್ರೆ ಸಾಮಾನುಗಳನ್ನು 200ಕ್ಕೂ ಹೆಚ್ಚು ಕುಶಲಕರ್ಮಿಗಳು ಸುಮಾರು 50 ಸಾವಿರ ಮಾನವ ಗಂಟೆಗಳಲ್ಲಿ ತಯಾರಿಸಿದ್ದಾರೆ ಎಂದು ಜೈಪುರ ಮೂಲದ, ಹೋಟೆಲ್‌ಗಳಿಗೆ ಲೋಹ-ಸಾಮಾನುಗಳನ್ನು ಪೂರೈಸುವ ಸಂಸ್ಥೆ ಐರಿಸ್ ಜೈಪುರ ಹೇಳಿದೆ.

'ನಮ್ಮ ಶ್ರೀಮಂತ ಪಾಕಶಾಲೆಯ ಪರಂಪರೆಯೊಂದಿಗೆ ವಿಶ್ವ ನಾಯಕರನ್ನು ಆಕರ್ಷಿಸಲು, ಪ್ರತಿ ಟೇಬಲ್‌ವೇರ್ ಮತ್ತು ಅಲಂಕಾರಗಳು ಭಾರತದ ಸಂಸ್ಕೃತಿ, ಕಲೆ ಮತ್ತು ಆತಿಥ್ಯವನ್ನು ಪ್ರತಿಬಿಂಬಿಸುತ್ತವೆ' ಎಂದು ಐರಿಸ್ ಇಂಡಿಯಾ ಸಿಇಒ ರಾಜೀವ್ ಪಬುವಾಲ್ ಹೇಳಿದ್ದಾರೆ.

ಇದೇ 9ರಿಂದ 10ರವರೆಗೆ ನಡೆಯಲಿರುವ ಶೃಂಗಸಭೆಯ ಅದ್ದೂರಿ ಕಾರ್ಯಕ್ರಮಕ್ಕೆ ವೇದಿಕೆ ಒದಗಿಸಲು ನವದೆಹಲಿಯ ಪ್ರಗತಿ ಮೈದಾನದ ಭಾರತ್ ಮಂಟಪವು ಸಂಪೂರ್ಣ ಸಜ್ಜುಗೊಂಡಿದೆ. ಮುಖ್ಯ ಕಾರ್ಯಕ್ರಮದ ಸ್ಥಳದಲ್ಲಿ ಪ್ರಾದೇಶಿಕ ತಿನಿಸು ಬೀದಿ ಬದಿಯ ಆಹಾರ ಇರಲಿದೆ ಎನ್ನುತ್ತಾರೆ ಅಧಿಕಾರಿಗಳು.

'ಭಾರತ ಹೆಸರು ಬದಲಾವಣೆ ಮನವಿ ಬಂದರೆ ಪರಿಗಣನೆ'

ವಿಶ್ವಸಂಸ್ಥೆ (ಪಿಟಿಐ): 'ರಾಷ್ಟ್ರಗಳ ಹೆಸರು ಬದಲಾವಣೆ ಕುರಿತಂತೆ ಸದಸ್ಯ ರಾಷ್ಟ್ರಗಳು ಸಲ್ಲಿಸುವ ಮನವಿಗಳನ್ನು ವಿಶ್ವಸಂಸ್ಥೆ ಪರಿಗಣಿಸಲಿದೆ' ಎಂದು ಅಧಿಕಾರಿಯೊಬ್ಬರು ಗುರುವಾರ ಪ್ರತಿಕ್ರಿಯಿಸಿದರು.

ಜಿ20 ಶೃಂಗಸಭೆಯ ಔತಣಕೂಟದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರ ಆಹ್ವಾನಪತ್ರಿಕೆಯಲ್ಲಿ 'ಪ್ರೆಸಿಡೆಂಟ್ ಆಫ್ ಭಾರತ್' ಎಂಬ ಬಳಕೆಯು ಚರ್ಚಾಸ್ಪದವಾಗಿರುವಂತೆಯೆ ಈ ಪ್ರತಿಕ್ರಿಯೆ ವ್ಯಕ್ತವಾಗಿದೆ.

ಕಳೆದ ವರ್ಷ ಟರ್ಕಿ ಹೆಸರನ್ನು ಟರ್ಕಿಯೆ ಎಂದು ಬದಲಿಸಿದ್ದನ್ನು ಉಲ್ಲೇಖಿಸಿದ ಅಧಿಕಾರಿ, ಆಗ ಔಪಚಾರಿಕ ಮನವಿ ಸಲ್ಲಿಸುವಂತೆ ಸರ್ಕಾರಕ್ಕೆ ಕೋರಿದ್ದೆವು ಎಂದು ಹೇಳಿದರು.

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಆಂಟೊನಿಯೊ ಗುಟೆರಸ್ ಅವರ ಉಪ ವಕ್ತಾರ ಫರ್ಹಾನ್ ಹಕ್ ಅವರು, ಅಂತೆಯೇ ಹೆಸರು ಬದಲಾವಣೆ ಕುರಿತಂತೆ ಆಯಾ ರಾಷ್ಟ್ರಗಳಿಂದ ಬರುವ ಮನವಿ ಪುರಸ್ಕರಿಸುತ್ತೇವೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಬಲೂನ್‌ಗಳಿಗೆ ಕಟ್ಟಿದ್ದ ಪಾಕ್ ಧ್ವಜ

ಉಧಂಪುರ/ಜಮ್ಮು (ಪಿಟಿಐ): ಬಲೂನ್‌ಗಳಿಗೆ ಕಟ್ಟಿದ್ದ ಪಾಕಿಸ್ತಾನದ ಧ್ವಜ ಜಮ್ಮು ಮತ್ತು ಕಾಶ್ಮೀರದ ಉಧಂಪುರ ಜಿಲ್ಲೆಯ ಸುನೇತರ್ ಗ್ರಾಮದಲ್ಲಿ ಗುರುವಾರ ಪತ್ತೆಯಾಗಿದೆ.

ಮರದಲ್ಲಿ ಸಿಲುಕಿಕೊಂಡಿದ್ದ ಬಲೂನ್‌ಗಳ ಜೊತೆ ಪಾಕಿಸ್ತಾನದ ಧ್ವಜ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಕೆಂಪು ಮತ್ತು ಹಸಿರು ಬಣ್ಣದ ಬಲೂನ್‌ಗಳಿಗೆ ಈ ಧ್ವಜವನ್ನು ಕಟ್ಟಲಾಗಿತ್ತು. ಬಲೂನ್‌ಗಳು ಬೇರೆ ಕಡೆಯಿಂದ ಇಲ್ಲಿಗೆ ಹಾರಿ ಬಂದಿರಬಹುದು ಎಂದು ವಿವರಿಸಿದ್ದಾರೆ.

ಕೊಚ್ಚಿ: 8 ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ

ತಿರುವನಂತಪುರ: ಎಂಟು ವರ್ಷದ ಬಾಲಕಿಯನ್ನು ಅಪಹರಿಸಿ, ಆಕೆಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಪ್ರಕರಣ ಕೇರಳದ ಕೊಚ್ಚಿ ಸಮೀಪದ ಆಲುವಾದಲ್ಲಿ ಗುರುವಾರ ನಡೆದಿದೆ.

ಬಾಲಕಿಗೆ ಗಂಭೀರ ಗಾಯಗಳಾಗಿದ್ದು, ಆಸ್ಪತ್ರೆಗೆ ದಾಖಲಿಸಲಾಗಿದೆ. ಆಕೆಯ ತಂದೆ, ತಾಯಿ ವಲಸೆ ಕಾರ್ಮಿಕರಾಗಿದ್ದಾರೆ. ಸ್ಥಳೀಯ ವ್ಯಕ್ತಿಯೊಬ್ಬ ಈ ಕೃತ್ಯ ಎಸಗಿರುವ ಶಂಕೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಆರೋಪಿಯು ಬಾಲಕಿಯನ್ನು ಆಕೆಯ ಮನೆಯಿಂದ ನಿರ್ಜನ ಪ್ರದೇಶಕ್ಕೆ ಕರೆದೊಯ್ದು ಲೈಂಗಿಕ ದೌರ್ಜನ್ಯ ಎಸಗಿದ್ದಾನೆ. ಇದಕ್ಕೆ ಪ್ರತಿರೋಧ ವ್ಯಕ್ತಪಡಿಸಿದ ಆಕೆಯ ಮೇಲೆ ಹಲ್ಲೆ ನಡೆಸಿದ್ದಾನೆ. ಬಾಲಕಿಯ ಬೊಬ್ಬೆ ಕೇಳಿ ಅಕ್ಕ ಪಕ್ಕದ ಮನೆಯವರು ಸ್ಥಳಕ್ಕೆ ಧಾವಿಸಿದಾಗ ಆತ ಪರಾರಿಯಾಗಿದ್ದಾನೆ' ಎಂದು ಸ್ಥಳೀಯರು ಹೇಳಿದ್ದಾರೆ.

ಸಿ.ಸಿ.ಟಿ.ವಿ. ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲಿಸಿದ್ದು, ಬಾಲಕಿಯು ಆರೋಪಿಯನ್ನು ಗುರುತಿಸಿದ್ದಾಳೆ ಎಂದು ಪೊಲೀಸರು ವಿವರಿಸಿದ್ದಾರೆ.

ಜುಲೈ ತಿಂಗಳಲ್ಲಿ ಇದೇ ಪ್ರದೇಶದಲ್ಲಿ ವಲಸೆ ಕಾರ್ಮಿಕರೊಬ್ಬರ ಐದು ವರ್ಷದ ಪುತ್ರಿಯ ಮೇಲೆ ಲೈಂಗಿಕ ದೌರ್ಜನ್ಯ ಎಸಗಿ, ಕೊಲೆ ಮಾಡಲಾಗಿತ್ತು.

'ಸಂಸದೀಯ ನಡಾವಳಿ: ವಾಸ್ತವಾಂಶ ತಿರುಚುವ ಯತ್ನ'

ನವದೆಹಲಿ (ಪಿಟಿಐ): ಸಂಸತ್ ಅಧಿವೇಶನ ನಡೆಸುವುದಕ್ಕೆ ಸಂಬಂಧಪಟ್ಟಂತೆ ಸಂವಿಧಾನದಲ್ಲಿನ ಅವಕಾಶಗಳು ಹಾಗೂ ಸಂಸದೀಯ ವಿಧಾನಗಳನ್ನು ಕಾಂಗ್ರೆಸ್‌ನ ಹಿರಿಯ ನಾಯಕ ಜೈರಾಮ್ ರಮೇಶ್ ತಿರುಚುತ್ತಿದ್ದಾರೆ ಎಂದು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಗುರುವಾರ ಆರೋಪಿಸಿದ್ದಾರೆ.

ಸಂಸತ್‌ನ ವಿಶೇಷ ಅಧಿವೇಶನ ಕುರಿತು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಅವರು ಪ್ರಧಾನಿಗೆ ಬರೆದಿದ್ದ ಪತ್ರಕ್ಕೆ ನೀಡಲಾಗಿರುವ ಉತ್ತರ ದಾರಿ ತಪ್ಪಿಸುವಂತಿದೆ ಎಂಬ ಜೈರಾಮ್ ರಮೇಶ್ ಅವರ ಟೀಕೆಗೆ ಜೋಶಿ ಪ್ರತಿಕ್ರಿಯಿಸಿದ್ದಾರೆ.

'ಸಂಸತ್ ಹಾಗೂ ಸಂಸದೀಯ ನಡಾವಳಿಗಳನ್ನು ಅವಹೇಳನ ಮಾಡುವಂತಹ ತಪ್ಪು ಮಾಹಿತಿ ಹಬ್ಬಿಸುವುದನ್ನು ತಡೆಯುವುದು ಅಗತ್ಯ' ಎಂದು ಜೋಶಿ ಹೇಳಿದ್ದಾರೆ.

ಈ ಹಿಂದೆ, ಸಂಸತ್‌ನ ವಿಶೇಷ ಅಧಿವೇಶನದ ಕಾರ್ಯಸೂಚಿ ಕುರಿತು ಬಹಳ ಮುಂಚಿತವಾಗಿ ತಿಳಿಸಲಾಗುತ್ತಿತ್ತು. ಮೋದಿ ನೇತೃತ್ವದ ಸರ್ಕಾರ ಬಂದ ನಂತರ ಸಂಸದೀಯ ನಡಾವಳಿಗಳನ್ನು ಬದಲಾಯಿಸಲಾಗುತ್ತಿದೆ ಎಂದು ರಮೇಶ್ ಹೇಳಿದ್ದರು.


ಪ್ರಲ್ಹಾದ ಜೋಶಿ

ಈ ಆರೋಪಕ್ಕೆ ಪ್ರತಿಕ್ರಿಯಿಸಿರುವ ಜೋಶಿ, 'ಜಿಎಸ್‌ಟಿ ಜಾರಿಗೆ ಸಂಬಂಧಿಸಿ 2017ರ ಜೂನ್ 30ರಂದು ಸಂಸತ್‌ನ ಸೆಂಟ್ರಲ್ ಹಾಲ್‌ನಲ್ಲಿ ಐತಿಹಾಸಿಕ ಕಲಾಪ ನಡೆಸಲಾಗಿತ್ತು. ಅದು ಸಂವಿಧಾನದ 85ನೇ ವಿಧಿಯಡಿ ನಡೆಸಿದ್ದ ಅಧಿವೇಶನವಾಗಿರಲಿಲ್ಲವೇ?' ಎಂದಿದ್ದಾರೆ.

ಸಂವಿಧಾನದ 70ನೇ ವಾರ್ಷಿಕೋತ್ಸವದ ಅಂಗವಾಗಿ 2019ನೇ ನವೆಂಬರ್ 26ರಂದು ಸೆಂಟ್ರಲ್‌ಹಾಲ್‌ನಲ್ಲಿ ವಿಶೇಷ ಕಲಾಪ ನಡೆಸಲಾಗಿತ್ತು. ಅದೂ ಕೂಡ, ಸಂವಿಧಾನದ 85ನೇ ವಿಧಿಯಡಿ ನಡೆದಿದ್ದ ಅಧಿವೇಶನವಲ್ಲವೇ' ಎಂದು ಜೋಶಿ ಹೇಳಿದ್ದಾರೆ.

₹191 ಕೋಟಿ ಮೌಲ್ಯದ ನಾಣ್ಯ ಬಿಡುಗಡೆ

ಲಂಡನ್ (ಪಿಟಿಐ): ರಾಣಿ ಎರಡನೇ ಎಲಿಜಬೆತ್ ಅವರ ಮೊದಲ ವರ್ಷದ ಜಯಂತಿಯ ಅಂಗವಾಗಿ ಲಕ್ಸುರಿ ಉತ್ಪನ್ನಗಳ ತಯಾರಿಕಾ ಸಂಸ್ಥೆಯಾದ ಈಸ್ಟ್ ಇಂಡಿಯಾ ಕಂಪನಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಭಾರತ ಮೂಲದ ಸಂಜೀವ್ ಮೆಹ್ತಾ ಅವರು ₹191 ಕೋಟಿ ಮೌಲ್ಯದ ಚಿನ್ನ ಮತ್ತು ವಜ್ರ ಖಚಿತ ನಾಣ್ಯವನ್ನು ಬಿಡುಗಡೆ ಮಾಡಿದರು. ಇದರಲ್ಲಿ ಆಯ್ದ ಮತ್ತು ಬೆಲೆ ಬಾಳುವ 6,426 ವಜ್ರಗಳಿವೆ ಹಾಗೂ 24 ಕ್ಯಾರಟ್ ಚಿನ್ನದ 11 ನಾಣ್ಯಗಳಿವೆ. ಭಾರತ, ಸಿಂಗಪುರ, ಜರ್ಮನಿ, ಬ್ರಿಟನ್ ಮತ್ತು ಶ್ರೀಲಂಕಾದ ಕುಶಲಕರ್ಮಿಗಳು ಈ ನಾಣ್ಯವನ್ನು ರೂಪಿಸಿದ್ದಾರೆ.

ಎಫ್‌ಟಿಎಗಾಗಿ ವೀಸಾ ನೀತಿ ಬದಲಾವಣೆ ಇಲ್ಲ: ಬ್ರಿಟನ್

ಲಂಡನ್(ರಾಯಿಟರ್ಸ್): ಭಾರತ ಮತ್ತು ಬ್ರಿಟನ್ ನಡುವಿನ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ಖಾತರಿಪಡಿಸುವ ಸಲುವಾಗಿ ವಲಸೆ ನೀತಿ ಬದಲಾಯಿಸುವ ಯೋಜನೆ ಇಲ್ಲ ಎಂದು ಪ್ರಧಾನಿ ರಿಷಿ ಸುನಕ್ ಅವರ ವಕ್ತಾರ ಗುರುವಾರ ಹೇಳಿದ್ದಾರೆ.

'ಪ್ರಸ್ತುತ, ಬ್ರಿಟನ್‌ಗೆ ವಲಸೆ ಬರುತ್ತಿರುವವರ ಸಂಖ್ಯೆ ದೊಡ್ಡದಿದೆ ಎಂಬುದು ಪ್ರಧಾನಿ ಅವರ ನಂಬಿಕೆ. ಹೀಗಾಗಿ, ಎಫ್‌ಟಿಎ ಸಲುವಾಗಿ ವಿದ್ಯಾರ್ಥಿ ವೀಸಾ ವಿತರಣೆ ಸೇರಿದಂತೆ ವಲಸೆ ನೀತಿಯಲ್ಲಿ ಬದಲಾವಣೆ ಮಾಡುವ ಯಾವ ಚಿಂತನೆಯೂ ಇಲ್ಲ' ಎಂದು ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಬ್ರಿಟನ್‌ನಲ್ಲಿ ಭಾರತದ ಹೈಕಮಿಷನರ್ ದೊರೈಸ್ವಾಮಿ, 'ವೀಸಾ ವಿಷಯವು ಉಭಯ ದೇಶಗಳ ನಡುವಿನ ಮುಕ್ತ ವ್ಯಾಪಾರ ಒಪ್ಪಂದದ ಭಾಗವಾಗಿದೆ ಎಂದು ಭಾರತ ಹೇಳಿಯೇ ಇಲ್ಲ' ಎಂದು ಪ್ರತಿಕ್ರಿಯಿಸಿದ್ದಾರೆ.

'ಭಾರತೀಯರು ಎರಡೂ ದೇಶಗಳ ನಡುವೆ ಸುಲಭವಾಗಿ ಸಂಚರಿಸಲು ಅನುಕೂಲ ಮಾಡಿಕೊಡುವ ಸರಳ ವ್ಯವಸ್ಥೆ ರೂಪಿಸಬೇಕು ಎಂಬುದಷ್ಟೆ ನಮ್ಮ ಬೇಡಿಕೆಯಾಗಿತ್ತು' ಎಂದರು.

ನೀರವ್ ಇರುವ ಜೈಲಿನಿಂದ ಶಂಕಿತ ಉಗ್ರ ಪರಾರಿ

ಲಂಡನ್ (ಪಿಟಿಐ): ವಜ್ರ ವ್ಯಾಪಾರಿ ನೀರವ್ ಮೋದಿ ಸೆರೆವಾಸ ಅನುಭವಿಸುತ್ತಿರುವ ಲಂಡನ್‌ನ ವಾಂಡ್ಸ್‌ವರ್ತ್ ಜೈಲಿನಿಂದ ಶಂಕಿತ ಉಗ್ರ ಪರಾರಿಯಾಗಿದ್ದು, ಆತನ ಪತ್ತೆಗಾಗಿ ದೇಶದಾದ್ಯಂತ ವಿಮಾನ ನಿಲ್ದಾಣ ಹಾಗೂ ಬಂದರುಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಬ್ರಿಟನ್‌ನ ಅಧಿಕೃತ ರಹಸ್ಯ ಕಾಯಿದೆ ಉಲ್ಲಂಘಿಸಿರುವ ಆರೋಪ ಎದುರಿಸುತ್ತಿರುವ ಬ್ರಿಟನ್ ಸೇನೆಯ ಮಾಜಿ ಯೋಧ ಡೇನಿಯಲ್ ಅಬೇದ್ ಖಲೀಫ್ (21) ಜೈಲಿನಿಂದ ಪರಾರಿಯಾಗಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಜೈಲಿನೊಳಗೆ ಸಾಮಗ್ರಿ ತರುವ ವ್ಯಾನ್‌ನ ಕೆಳಭಾಗದಲ್ಲಿ ಅವಿತು ಈತ ಪರಾರಿಯಾಗಿರುವುದಾಗಿ ಹೇಳಿದ್ದಾರೆ.


'ಡೇನಿಯಲ್‌ನ ಪತ್ತೆಗಾಗಿ ತಂಡ ರಚಿಸಿದ್ದು, ಶೋಧ ಕಾರ್ಯಾಚರಣೆ ಮುಂದುವರಿದಿದೆ' ಎಂದು ಭಯೋತ್ಪಾದಕ ನಿಗ್ರಹ ದಳದ ಮುಖ್ಯಸ್ಥ ಕಮಾಂಡರ್ ಡೊಮಿನಿಕ್ ಮರ್ಫಿ ತಿಳಿಸಿದ್ದಾರೆ.

'ತಾರತಮ್ಯ ಇರುವವರೆಗೂ ಮೀಸಲಾತಿ ಇರಲಿ'

ನಾಗ್ಪುರ (ಪಿಟಿಐ): ಸಮಾಜದಲ್ಲಿ ತಾರತಮ್ಯ ಇರುವವರೆಗೂ ಮೀಸಲಾತಿಯನ್ನು ಮುಂದುವರಿಸಬೇಕು ಎಂದು ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು ಬುಧವಾರ ಪ್ರತಿಪಾದಿಸಿದ್ದಾರೆ.

ಇಲ್ಲಿ ನಡೆದ ಸಮಾರಂಭವೊಂದರಲ್ಲಿ ಮಾತನಾಡಿದ ಅವರು, 'ನಮ್ಮ ಜೊತೆಯಲ್ಲೇ ಬದುಕುತ್ತಿರುವವರನ್ನು ಸಾಮಾಜಿಕ ವ್ಯವಸ್ಥೆಯ ಕೊನೆಯಲ್ಲಿ ಇರಿಸಿದ್ದೇವೆ. ಅವರ ಕುರಿತು ನಾವು ಕಾಳಜಿ ತೋರಿಲ್ಲ. ಇದು ಎರಡು ಸಾವಿರ ವರ್ಷದಿಂದ ನಡೆದು ಬಂದಿದೆ. ಅವರಿಗೆ ನಾವು ಸಮಾನತೆ ನೀಡುವವರೆಗೆ ವಿಶೇಷವಾದ ಪರಿಹಾರಗಳನ್ನು ನೀಡಬೇಕು. ಮೀಸಲಾತಿಯು ಅಂಥ ಪರಿಹಾರಗಳಲ್ಲಿ ಒಂದಾಗಿದೆ. ಸಂವಿಧಾನ ನೀಡಿರುವ ಮೀಸಲಾತಿಗೆ ಆರ್‌ಎಸ್‌ಎಸ್ ಬೆಂಬಲ ನೀಡಲಿದೆ' ಎಂದು ಹೇಳಿದರು.

'ಮೀಸಲಾತಿಯೆಂದರೆ ಕೇವಲ ಆರ್ಥಿಕವಾಗಿ ಮತ್ತು ರಾಜಕೀಯವಾಗಿ ಸಮಾನತೆ ನೀಡುವುದಲ್ಲ. ಬದಲಾಗಿ, ಅದು ಒಬ್ಬ ವ್ಯಕ್ತಿಗೆ ಗೌರವ ನೀಡುವುದಕ್ಕೆ ಸಂಬಂಧಿಸಿದ್ದು. ಸಮಾಜದ ಕೆಲ ವರ್ಗಗಳು 2,000 ವರ್ಷಗಳಿಂದ ತಾರತಮ್ಯ ಅನುಭವಿಸುತ್ತಿವೆ ಎಂದಾದರೆ, ನಾವು (ತಾರತಮ್ಯ ಅನುಭವಿಸದೇ ಇರುವವರು) ಏಕೆ 200 ವರ್ಷಗಳ ಕಾಲ ಕೆಲ ತೊಂದರೆಗಳನ್ನು ಅನುಭವಿಸಬಾರದು' ಎಂದು ಪ್ರಶ್ನಿಸಿದರು.


ಮೋಹನ್ ಭಾಗವತ್

ಮಹಾರಾಷ್ಟ್ರದಲ್ಲಿ ಮರಾಠ ಸಮುದಾಯವು ಮೀಸಲಾತಿ ಆಗ್ರಹಿಸಿ ತನ್ನ ಹೋರಾಟವನ್ನು ತೀವ್ರಗೊಳಿಸಿದ ಬೆನ್ನಲ್ಲೇ ಭಾಗವತ್ ಅವರು ಹೀಗೆ ಹೇಳಿದ್ದಾರೆ.

ಜಾತಿ ಗಣತಿಗೆ ಭಾಗವತ್ ಸೂಚಿಸಲಿ: ಮನೋಜ್ ಝಾ

ನವದೆಹಲಿ(ಪಿಟಿಐ): 'ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್ ಅವರು, ಜಾತಿ ಗಣತಿ ನಡೆಸುವಂತೆ ಸರ್ಕಾರಕ್ಕೆ ಸೂಚಿಸಲಿ' ಎಂದು ರಾಷ್ಟ್ರೀಯ ಜನತಾ ದಳ (ಆರ್‌ಜೆಡಿ) ಸಂಸದ ಮನೋಜ್ ಝಾ ಗುರುವಾರ ಹೇಳಿದ್ದಾರೆ.


ಮೀಸಲಾತಿಗೆ ಬೆಂಬಲ ಸೂಚಿಸಿ ಭಾಗವತ್ ಅವರು ನೀಡಿದ್ದ ಹೇಳಿಕೆಗೆ ಅವರು ಈ ಪ್ರತಿಕ್ರಿಯೆ ನೀಡಿದ್ದಾರೆ.



'ಗೋಳವಲಕರ್ ಅವರ ಅನುಯಾಯಿಯಾಗಿರುವ ಭಾಗವತ್ ಅವರು ಸಂವಿಧಾನದ ಬಗ್ಗೆ ಆಲೋಚಿಸಲು ಆರಂಭಿಸಿರುವುದು ಸಂತಸ ತಂದಿದೆ' ಎಂದು ಝಾ ತಿಳಿಸಿದ್ದಾರೆ.

'ಅವರು ತಮ್ಮ ಸಂಘಟನೆಯನ್ನು ಸಾಮಾಜಿಕ ಸಂಘಟನೆ ಎನ್ನುತ್ತಾರೆ. ಆದರೆ ಅದು ರಾಜಕೀಯ ಸಂಘಟನೆ. ಅದು ಸರ್ಕಾರವನ್ನು ನಡೆಸುತ್ತದೆ. ಜಾತಿ ಗಣತಿ ಬಗ್ಗೆ ಅವರೇಕೆ ಮೌನವಾಗಿದ್ದಾರೆ. 'ಸಮಾಜದಲ್ಲಿ ಎಲ್ಲಿಯವರೆಗೆ ಅಸಮಾನತೆ ಇರುತ್ತದೊ ಅಲ್ಲಿಯವರೆಗೆ ಮೀಸಲಾತಿ ಮುಂದುವರಿಸಬೇಕು. ಸಂವಿಧಾನದಲ್ಲಿ ಒದಗಿಸಲಾದ ಮೀಸಲಾತಿಗೆ ಆರ್‌ಎಸ್‌ಎಸ್ ಬೆಂಬಲ ನೀಡುತ್ತದೆ' ಎಂದು ಭಾಗವತ್ ಹೇಳಿದ್ದರು.

ಷೇರುಪೇಟೆ ವಹಿವಾಟು ▲ 385



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,611
ಇಂದಿನ ಅಂತ್ಯ	19,727
▲	116
ದಿನದ ಗರಿಷ್ಠ	19,737

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹480
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹480

ಖಾದ್ಯ ತೈಲ ಮುಂಬೈ



(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1720(1720)
ಸೋಯಾ (ರಿಫೈನ್ಡ್)	₹910(915)
ಸೂರ್ಯಕಾಂತಿ (ರಿಫೈನ್ಡ್)	₹910(920)
ಪಾಮೋಲಿನ್	₹838(842)

ವಿನಿಮಯ ದರ

$ ಡಾಲರ್	83.23
£ ಪೌಂಡ್	103.78
€ ಯುರೊ	89.17
¥ ಯೆನ್ (100ಕ್ಕೆ)	56

ಕೊಬ್ಬರಿ ಧಾರಣೆ



(ಕ್ವಿಂಟಲ್‌ಗೆ)

ಬೆಂಗಳೂರು	₹9800-11000
ಹುಳಿಯಾರು	₹7900-8300
ತುರುವೇಕೆರೆ	₹8500-8700

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್‌-4	₹144.50
ಆರ್‌ಎಸ್‌ಎಸ್‌-5	₹138
ಗುಡ್ ಲಾಟ್	₹126

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹202-523
ದ್ವಿತಳಿ (ಬಿ.ವಿ)	₹333-677

‘ಹಣದುಬ್ಬರ ತುಸು ತಗ್ಗಲಿದೆ’

ಬೆಂಗಳೂರು (ರಾಯಿಟರ್ಸ್): ಚಿಲ್ಲರೆ ಹಣದುಬ್ಬರ ಪ್ರಮಾಣವು ಜುಲೈನಲ್ಲಿ ತಲುಪಿದ್ದ 15 ತಿಂಗಳ ಗರಿಷ್ಠ ಮಟ್ಟಕ್ಕೆ ಹೋಲಿಸಿದರೆ ಆಗಸ್ಟ್‌ನಲ್ಲಿ ಇಳಿಕೆ ಕಾಣುವ ಸಾಧ್ಯತೆ ಇದೆ ಎನ್ನುವ ಅಭಿಪ್ರಾಯವು ರಾಯಿಟರ್ಸ್ ಸಮೀಕ್ಷೆಯಲ್ಲಿ ವ್ಯಕ್ತವಾಗಿದೆ.

ತರಕಾರಿಗಳ ಬೆಲೆ ಇಳಿಕೆ ಕಂಡಿರುವುದರಿಂದ ಹಣದುಬ್ಬರವು ಆಗಸ್ಟ್‌ನಲ್ಲಿ ಕಡಿಮೆ ಆಗಲಿದೆ. ಹೀಗಿದ್ದರೂ ಆರ್‌ಬಿಐನ ಗರಿಷ್ಠ ಮಿತಿಗಿಂತಲೂ (ಶೇ 6) ಹೆಚ್ಚಿನ ಮಟ್ಟದಲ್ಲಿಯೇ ಇರಲಿದೆ ಎಂದು ತಿಳಿಸಿದೆ.

ಸೆಪ್ಟೆಂಬರ್ 4ರಿಂದ 7ರವರೆಗೆ ನಡೆಸಿರುವ ಸಮೀಕ್ಷೆಯಲ್ಲಿ ಆಗಸ್ಟ್‌ನಲ್ಲಿ ಹಣದುಬ್ಬರವು ಶೇ 7ಕ್ಕೆ ತಲುಪಿದೆ ಎಂದು ಶೇ 45ರಷ್ಟು ಆರ್ಥಿಕ ತಜ್ಞರು ಅಂದಾಜು ಮಾಡಿದ್ದಾರೆ. ಜುಲೈನಲ್ಲಿ ಶೇ 7.44ರಷ್ಟು ಆಗಿದೆ. ಹಣದುಬ್ಬರದ ಅಂಕಿ–ಅಂಶವು ಮಂಗಳವಾರ ಬಿಡುಗಡೆ ಆಗಲಿದೆ.

ಮುಂಗಾರು ಕೊರತೆಯು ಕೆಲವು ಬೆಳೆಗಳ ನಾಶಕ್ಕೆ ಕಾರಣವಾಗಿದೆ. ಸರ್ಕಾರವು ಸಬ್ಸಿಡಿ ದರದಲ್ಲಿ ಕೆಲ ತರಕಾರಿಗಳನ್ನು ಮಾರಾಟ ಮಾಡುತ್ತಿರುವುದು ಮತ್ತು ಕೆಲವು ಧಾನ್ಯಗಳ ರಫ್ತು ನಿಷೇಧ ಮಾಡಿರುವುದರಿಂದ ಕುಟುಂಬಗಳಿಗೆ ತಾತ್ಕಾಲಿಕ ನೆಮ್ಮದಿ ದೊರೆತಿದೆ. ಹೀಗಾಗಿ ಆಹಾರ ಹಣದುಬ್ಬರವು ಇಳಿಕೆ ಕಾಣಲಿದೆ. ಆದರೆ, ಏರಿಕೆ ಕಾಣುತ್ತಿರುವ ಇಂಧನ ದರವು ಹಣದುಬ್ಬರ ಇಳಿಕೆ ಪ್ರಮಾಣವನ್ನು ಸೀಮಿತಗೊಳಿಸಲಿದೆ ಎಂದು ಹೇಳಿದೆ.

ಮುಂಬೈ ಧಾರಣೆ

ಶೇಂಗಾ	7–9–2023
ಜಾವಾ 70/80(ಹೊಸ)	12700-12800
ಜಾವಾ 80/90(ಹೊಸ)	12100-12200
ದಪ್ಪ ಮಧ್ಯಪ್ರದೇಶ(ಹೊಸ)	11200-11300
ದಪ್ಪ ಗುಜರಾತ್(ಹೊಸ)	12300-12400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1730(1730)
ಒಂದು ವಾರದ ಡೆಲಿವರಿ	1725(1725)
ಸೋಯಾ ಕಚ್ಚಾ	855(865)
ಪಾಮ್ ವಾರದ ಡೆಲಿವರಿ	836(840)
ಸೂರ್ಯಕಾಂತಿ ಎಣ್ಣೆ ಕಚ್ಚಾ	835(840)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10ಗ್ರಾಂ	59,000(59,150)
ಬೆಳ್ಳಿ ಕೆ.ಜಿ	71,250(72,100)

ಆವರಣದಲ್ಲಿ ಹಿಂದಿನ ದಿನದ ಧಾರಣೆ


ಅಮೆರಿಕದ ಕೆಲವು ಉತ್ಪನ್ನಗಳ ಮೇಲಿನ ಸುಂಕ ಕೈಬಿಟ್ಟ ಕೇಂದ್ರ

ನವದೆಹಲಿ (ಪಿಟಿಐ): ಅಮೆರಿಕದಿಂದ ಆಮದಾಗುವ ಕಡಲೆ, ಚೆನ್ನಂಗಿ ಬೇಳೆ (ಮಸೂರ್ ದಾಲ್), ಬಾದಾಮಿ, ಅಕ್ರೋಟ್ (ವಾಲ್‌ನಟ್) ಮತ್ತು ಸೇಬು ಮೇಲೆ ವಿಧಿಸಿದ್ದ ಹೆಚ್ಚುವರಿ ಸುಂಕವನ್ನು ಕೇಂದ್ರ ಸರ್ಕಾರ ಕೈಬಿಟ್ಟಿದೆ.

ಕಡಲೆ ಮೇಲಿನ ಶೇಕಡ 10ರಷ್ಟು ಸುಂಕ, ಚೆನ್ನಂಗಿ ಬೇಳೆ (ಶೇ 20ರಷ್ಟು), ಬಾದಾಮಿ (ಕೆ.ಜಿಗೆ ₹7) ಮತ್ತು ಚಿಪ್ಪು ಸಹಿತ ಬಾದಾಮಿ (ಕೆ.ಜಿಗೆ ₹20), ಅಕ್ರೋಟ್ (ಶೇ 20) ಹಾಗೂ ಸೇಬಿಗೆ (ಶೇ 20ರಷ್ಟು) ಸುಂಕವನ್ನು ಕೈಬಿಡಲಾಗಿದೆ.

ಕೇಂದ್ರ ಹಣಕಾಸು ಸಚಿವಾಲಯವು ಸೆಪ್ಟೆಂಬರ್ 5ರಂದು ಹೊರಡಿಸಿರುವ ಪ್ರಕಟಣೆಯಲ್ಲಿ ಈ ಉತ್ಪನ್ನಗಳ ಮೇಲಿನ ಸುಂಕವನ್ನು ಕೈಬಿಡುವ ಸೂಚನೆ ನೀಡಿದೆ.

ಭಾರತ–ಅಮೆರಿಕ ದ್ವಿಪಕ್ಷೀಯ ವಹಿವಾಟು



ಅಮೆರಿಕ ಅಧ್ಯಕ್ಷ ಜೋ ಬೈಡನ್ ಅವರು ಜಿ20 ಸಮಿತ್‌ನಲ್ಲಿ ಭಾಗವಹಿಸಲು ಭಾರತಕ್ಕೆ ಭೇಟಿ ನೀಡಲಿರುವ ಹಿನ್ನೆಲೆಯಲ್ಲಿ ಈ ಬೆಳವಣಿಗೆ ನಡೆದಿದೆ.

2018ರಲ್ಲಿ ಅಮೆರಿಕವು ರಾಷ್ಟ್ರೀಯ ಭದ್ರತೆಯ ದೃಷ್ಟಿಯಿಂದ ಕೆಲವು ಉಕ್ಕು ಮತ್ತು ಅಲ್ಯುಮಿನಿಯಂ ಉತ್ಪನ್ನಗಳ ಮೇಲೆ ಕ್ರಮವಾಗಿ ಶೇ 25ರಷ್ಟು ಮತ್ತು ಶೇ 10ರಷ್ಟು ಆಮದು ಸುಂಕ ವಿಧಿಸಿತು. ಇದಕ್ಕೆ ಪ್ರತಿಯಾಗಿ ಭಾರತವು 2019ರ ಜೂನ್‌ನಲ್ಲಿ ಅಮೆರಿಕದ 28 ಉತ್ಪನ್ನಗಳ ಮೇಲೆ ಆಮದು ಸುಂಕ ವಿಧಿಸಿತು.


ವಿದೇಶಿ ಹೂಡಿಕೆಯ ಹೊರಹರಿವು, ಕಚ್ಚಾ ತೈಲ ಬೆಲೆ ಏರಿಕೆ

ರೂಪಾಯಿ ಸಾರ್ವಕಾಲಿಕ ಕನಿಷ್ಠ

ನವದೆಹಲಿ (ಪಿಟಿಐ): ಅಮೆರಿಕದ ಡಾಲರ್ ಎದುರು ಸತತ ನಾಲ್ಕನೆಯ ದಿನವೂ ಕುಸಿತ ದಾಖಲಿಸಿರುವ ರೂಪಾಯಿ ಮೌಲ್ಯವು, ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಗುರುವಾರದ ವಹಿವಾಟಿನ ಅಂತ್ಯಕ್ಕೆ ₹83.23ಕ್ಕೆ ತಲುಪಿದೆ. ಇದು ಅಮೆರಿಕದ ಡಾಲರ್ ಎದುರು ರೂಪಾಯಿಯ ಸಾರ್ವಕಾಲಿಕ ಕನಿಷ್ಠ ಮೌಲ್ಯ.

ಮುಖ್ಯಾಂಶಗಳು

- ವಿದೇಶಿ ಬಂಡವಾಳದ ಹೊರಹರಿವು
- ಡಾಲರ್‌ಗೆ ಹೆಚ್ಚಿದ ಬೇಡಿಕೆ
- ಸೋಮವಾರದ ನಂತರ ರೂಪಾಯಿ ಮೌಲ್ಯ 60 ಪೈಸೆ ಇಳಿಕೆ



ಅಮೆರಿಕದ ಡಾಲರ್ ಮೌಲ್ಯವರ್ಧನೆ ಹಾಗೂ ಭಾರತದ ಬಂಡವಾಳ ಮಾರುಕಟ್ಟೆಗಳಿಂದ ವಿದೇಶಿ ಬಂಡವಾಳದ ಹೊರಹರಿವು ರೂಪಾಯಿ ಮೌಲ್ಯ ಕುಸಿತಕ್ಕೆ ಕಾರಣವಾದವು. ಇವಲ್ಲದೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಹೆಚ್ಚಾಗುತ್ತಿರುವುದು ಕೂಡ ರೂಪಾಯಿಯ ಕುಸಿತಕ್ಕೆ ಕಾರಣವಾಯಿತು ಎಂದು ವರ್ತಕರು ತಿಳಿಸಿದ್ದಾರೆ.

‘ರೂಪಾಯಿ ಮೌಲ್ಯವು ಅಮೆರಿಕದ ಡಾಲರ್ ಎದುರು ₹83.05ರಿಂದ ₹83.40ರ ನಡುವೆ ಇರುವ ಅಂದಾಜು ಮಾಡಲಾಗಿದೆ’ ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ವಿದೇಶಿ ವಿನಿಮಯ ವಿಶ್ಲೇಷಕ ಗೌರಂಗ್ ಸೋಮಯ್ಯ ಹೇಳಿದ್ದಾರೆ.

ಕಚ್ಚಾ ತೈಲ ಉತ್ಪಾದನೆ ಮಾಡುವ ದೇಶಗಳು ಉತ್ಪಾದನೆ ಕಡಿತವನ್ನು ಡಿಸೆಂಬರ್‌ವರೆಗೆ ಮುಂದುವರಿಸುವ ತೀರ್ಮಾನ ಕೈಗೊಂಡ ನಂತರದಲ್ಲಿ ಕಚ್ಚಾ ತೈಲ ಬೆಲೆಯು ಬ್ಯಾರೆಲ್‌ಗೆ 90 ಡಾಲರ್ ಗಡಿ ದಾಟಿದೆ. ಇತ್ತ ಡಾಲರ್‌ಗೆ ಬೇಡಿಕೆ ಹೆಚ್ಚಾಗಿದೆ.

ಸೋಮವಾರದಿಂದ ಇದುವರೆಗೆ ರೂಪಾಯಿ ಮೌಲ್ಯವು 60 ಪೈಸೆಯಷ್ಟು ಕುಸಿದಿದೆ. ಮಂಗಳವಾರ ಒಂದೇ ದಿನದಲ್ಲಿ ರೂಪಾಯಿ ಮೌಲ್ಯವು 33 ಪೈಸೆಯಷ್ಟು ಕುಸಿದಿತ್ತು.

ವಿದೇಶಿ ಸಾಂಸ್ಥಿಕ ಹೂಡಿಕೆದಾರರು (ಎಫ್‌ಐಐ) ಗುರುವಾರದ ವಹಿವಾಟಿನದಲ್ಲಿ ದೇಶದ ಬಂಡವಾಳ ಮಾರುಕಟ್ಟೆಗಳಲ್ಲಿ ಒಟ್ಟು ನಿವ್ವಳ ₹758.55 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ.

ಬಿಎಸ್‌ಇ ಮಾರುಕಟ್ಟೆ ಮೌಲ್ಯ ₹319 ಲಕ್ಷ ಕೋಟಿಗೆ ಏರಿಕೆ


ನವದೆಹಲಿ (ಪಿಟಿಐ): ಮುಂಬೈ ಷೇರುಪೇಟೆಯ ಮಾರುಕಟ್ಟೆ ಬಂಡವಾಳ ಮೌಲ್ಯವು ಗುರುವಾರದ ವಹಿವಾಟಿನಲ್ಲಿ ₹319.10 ಲಕ್ಷ ಕೋಟಿಗೆ ತಲುಪಿದೆ. ಇದು ಸಾರ್ವಕಾಲಿಕ ಗರಿಷ್ಠ ಮಟ್ಟ.

ಬಿಎಸ್‌ಇ ಸೆನ್ಸೆಕ್ಸ್ ಗುರುವಾರದ ವಹಿವಾಟಿನ ಆರಂಭದಲ್ಲಿ ಇಳಿಕೆ ಕಂಡಿತ್ತು. ಬಳಿಕ ಚೇತರಿಕೆ ಹಾದಿಗೆ ಮರಳಿ 385 ಅಂಶ ಏರಿಕೆ ಕಂಡು 66,266 ಅಂಶಗಳಲ್ಲಿ ವಹಿವಾಟು ಅಂತ್ಯಗೊಳಿಸಿತು.

ಬಿಎಸ್‌ಇ ಸೆನ್ಸೆಕ್ಸ್ ಐದು ದಿನಗಳ ವಹಿವಾಟಿನಲ್ಲಿ 1,434 ಅಂಶ ಏರಿಕೆ ಕಂಡಿದೆ. ಇದರಿಂದಾಗಿ ಮಾರುಕಟ್ಟೆ ಮೌಲ್ಯವು ₹9.50 ಲಕ್ಷ ಕೋಟಿಯಷ್ಟು ಏರಿಕೆ ಕಂಡಿದೆ.

ಭಾರತದ ದೀರ್ಘಾವಧಿಯ ಬೆಳವಣಿಗೆಯ ಬಗ್ಗೆ ಹೂಡಿಕೆದಾರರು ಆಶಾವಾದ ಹೊಂದಿದ್ದಾರೆ. ಹೀಗಾಗಿ, ಏಷ್ಯಾ ಮತ್ತು ಅಮೆರಿಕದ ಷೇರುಪೇಟೆಗಳಲ್ಲಿ ವಹಿವಾಟು ಇಳಿಕೆ ಕಂಡರೂ ಭಾರತದ ಷೇರುಪೇಟೆಗಳು ಏರಿಕೆ ಕಂಡವು ಎಂದು ಕೋಟಕ್ ಸೆಕ್ಯುರಿಟೀಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ಶ್ರೀಕಾಂತ್ ಚೌಹಾಣ್ ಹೇಳಿದ್ದಾರೆ.

ಸೆನ್ಸೆಕ್ಸ್‌ನಲ್ಲಿ ಎಚ್‌ಡಿಎಫ್‌ಸಿ ಬ್ಯಾಂಕ್, ಲಾರ್ಸನ್ ಆ್ಯಂಡ್ ಟೂಬ್ರೊ ಮತ್ತು ಎಸ್‌ಬಿಐ ಷೇರುಗಳನ್ನು ಹೂಡಿಕೆದಾರರು ಹೆಚ್ಚಾಗಿ ಖರೀದಿಸಿದರು.



ವಲಯವಾರು ಬಂಡವಾಳ ಸರಕು, ಕೈಗಾರಿಕೆಗಳು, ರಿಯಾಲ್ಟಿ, ಬ್ಯಾಂಕಿಂಗ್ ವಲಯಗಳು ಗಳಿಕೆ ಕಂಡುಕೊಂಡವು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲ ದರ ತುಸು ಇಳಿಕೆ ಕಂಡಿದ್ದು ಸಹ ದೇಶಿ ಷೇರುಪೇಟೆಗಳ ವಹಿವಾಟಿನ ಮೇಲೆ ಸಕಾರಾತ್ಮಕ ಪರಿಣಾಮ ಬೀರಿತು ಎಂದು ವರ್ತಕರು ಹೇಳಿದ್ದಾರೆ.

ಬ್ರೆಂಟ್ ಕಚ್ಚಾ ತೈಲ ದರ ಬ್ಯಾರಲ್‌ಗೆ ಶೇ 0.72ರಷ್ಟು ಇಳಿಕೆ ಕಂಡು 89.95 ಡಾಲರ್‌ಗೆ ತಲುಪಿತು.

ಪಿಎಸ್‌ಯು ಮತ್ತು ಮೂಲಸೌಕರ್ಯ ವಲಯದ ಷೇರುಗಳ ಗಳಿಕೆಯಿಂದಾಗಿ ಸೂಚ್ಯಂಕಗಳು ಮಧ್ಯಾಹ್ನದ ನಂತರ ಏರಿಕೆ ಕಾಣಲಾರಂಭಿಸಿದವು. ಇಟಿಎಫ್ ಒಳಹರಿವು ಸಹ ಲಾರ್ಜ್–ಕ್ಯಾಪ್ ಚೇತರಿಕೆ ನೆರವಾಯಿತು ಎಂದು ಎಲ್‌ಕೆಪಿ ಸೆಕ್ಯುರಿಟೀಸ್‌ನ ಸಂಶೋಧನಾ ಮುಖ್ಯಸ್ಥ ಎಸ್. ರಂಗನಾಥನ್ ಹೇಳಿದ್ದಾರೆ.

ಮುಖ್ಯಾಂಶಗಳು

- ಬಿಎಸ್‌ಇನಲ್ಲಿ ಲಾರ್ಸನ್ ಆ್ಯಂಡ್ ಟೂಬ್ರೊ ಷೇರು ಮೌಲ್ಯ ಶೇ 4.26ರಷ್ಟು ಏರಿಕೆ
- ಸತತ ಐದನೇ ವಹಿವಾಟು ಅವಧಿಯಲ್ಲಿಯೂ ಸೆನ್ಸೆಕ್ಸ್, ನಿಫ್ಟಿ ಗಳಿಕೆ
- ಬಿಎಸ್‌ಇ ಮಿಡ್‌ಕ್ಯಾಪ್ ಶೇ 0.79ರಷ್ಟು ಹೆಚ್ಚಳ

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 116 ಅಂಶ ಏರಿಕೆ ಕಂಡು 19,727 ಅಂಶಗಳಿಗೆ ತಲುಪಿತು.

ಏಷ್ಯಾದ ಷೇರುಪೇಟೆಗಳಲ್ಲಿ ಸೋಲ್, ಟೋಕಿಯೊ, ಶಾಂಘೈ ಮತ್ತು ಹಾಂಕಾಂಗ್ ಷೇರುಪೇಟೆಗಳ ವಹಿವಾಟು ಇಳಿಕೆ ಕಂಡಿತು. ಯುರೋಪ್ ಮಾರುಕಟ್ಟೆಗಳಲ್ಲಿಯೂ ನಕಾರಾತ್ಮಕ ವಹಿವಾಟು ನಡೆಯಿತು.

‘ಕೇಂದ್ರಕ್ಕೆ ಹಣ ವರ್ಗಾವಣೆಗೆ ವಿರೋಧಿಸಿದ್ದ ಆರ್‌ಬಿಐ’

ನವದೆಹಲಿ (ಪಿಟಿಐ): 2019ರ ಲೋಕಸಭಾ ಚುನಾವಣೆಗೂ ಮೊದಲು ಭಾರತೀಯ ರಿಸರ್ವ್ ಬ್ಯಾಂಕ್‌ನಿಂದ (ಆರ್‌ಬಿಐ) ₹2–3 ಲಕ್ಷ ಕೋಟಿಯಷ್ಟು ಹಣವನ್ನು ಪಡೆದುಕೊಳ್ಳಬೇಕು ಎಂದು ಕೇಂದ್ರ ಸರ್ಕಾರದಲ್ಲಿನ ಕೆಲವರು ರೂಪಿಸಿದ್ದ ಯೋಜನೆಗೆ ಆರ್‌ಬಿಐ ಮೊದಲು ಪ್ರತಿರೋಧ ಒಡ್ಡಿತ್ತು.

ಆ ಸಂದರ್ಭದಲ್ಲಿ ಆರ್‌ಬಿಐ ಡೆಪ್ಯುಟಿ ಗವರ್ನರ್ ಆಗಿದ್ದ ವಿರಲ್ ಆಚಾರ್ಯ ಅವರು ಈ ವಿಚಾರವನ್ನು ತಮ್ಮ ‘ಕ್ವೆಸ್ಟ್ ಫಾರ್ ರಿಸ್ಟೋರಿಂಗ್ ಫೈನಾನ್ಶಿಯಲ್ ಸ್ಟೆಬಿಲಿಟಿ ಇನ್ ಇಂಡಿಯಾ’ ಎಂಬ ಪುಸ್ತಕಕ್ಕೆ ಬರೆದಿರುವ ಪರಿಷ್ಕೃತ ಪೀಠಿಕೆಯಲ್ಲಿ ಉಲ್ಲೇಖಿಸಿದ್ದಾರೆ.

ಈ ಪ್ರತಿರೋಧದ ಕಾರಣದಿಂದಾಗಿ ಆರ್‌ಬಿಐ ಹಾಗೂ ಕೇಂದ್ರ ಸರ್ಕಾರದ ನಡುವೆ ಭಿನ್ನಾಭಿಪ್ರಾಯ ಮೂಡಿತ್ತು ಎನ್ನಲಾಗಿದೆ. ಆರ್‌ಬಿಐ ಹಾಗೂ ಸರ್ಕಾರದ ನಡುವಿನ ಭಿನ್ನಾಭಿಪ್ರಾಯದ ಬಗ್ಗೆ ಆಚಾರ್ಯ ಅವರು 2018ರ ತಮ್ಮ ಒಂದು ಉಪನ್ಯಾಸದಲ್ಲಿಯೂ ಉಲ್ಲೇಖಿಸಿದ್ದರು.



ವಿರಲ್ ಆಚಾರ್ಯ

ಹಿಂದಿನ ಸರ್ಕಾರಗಳ ಅವಧಿಯಲ್ಲಿ ಆರ್‌ಬಿಐ ಕ್ರೋಢೀಕರಿಸಿದ್ದ ಗಣನೀಯ ಪ್ರಮಾಣದ ಮೊತ್ತವನ್ನು ಈಗಿನ ಸರ್ಕಾರದ ಖಾತೆಗೆ ವರ್ಗಾವಣೆ ಮಾಡಲು ‘ಅಧಿಕಾರಶಾಹಿ ಹಾಗೂ ಸರ್ಕಾರದಲ್ಲಿನ ಕೆಲವು ಸೃಜನಶೀಲ ಮನಸ್ಸುಗಳು’ ಯೋಜನೆಯೊಂದನ್ನು ರೂಪಿಸಿದ್ದವು ಎಂದು ಆಚಾರ್ಯ ಅವರು ಬರೆದಿದ್ದಾರೆ.

ಆರ್‌ಬಿಐ ಪ್ರತಿವರ್ಷ ತನ್ನ ಲಾಭದಲ್ಲಿ ಒಂದು ಪಾಲನ್ನು ಕೇಂದ್ರಕ್ಕೆ ವರ್ಗಾಯಿಸುತ್ತದೆ. ನೋಟು ರದ್ದತಿ ಜಾರಿಗೆ ಬಂದ ವರ್ಷದಲ್ಲಿ, ಹೊಸ ನೋಟುಗಳ ಮುದ್ರಣದ ವೆಚ್ಚದ ಕಾರಣದಿಂದಾಗಿ ಕೇಂದ್ರಕ್ಕೆ ವರ್ಗಾವಣೆ ಮಾಡುವ ಹಣದ ಮೊತ್ತವು ಕಡಿಮೆಯಾಯಿತು. ಇದು ಸರ್ಕಾರದಿಂದ ಬರುವ ಬೇಡಿಕೆ ‘ತೀವ್ರಗೊಳ್ಳಲು’ ಕಾರಣವಾಯಿತು ಎಂದು ಅವರು ಹೇಳಿದ್ದಾರೆ.

‘ಚೀನಾಕ್ಕಿಂತ ಭಾರತ ಮುಂದು’

ಮುಂಬೈ (ಪಿಟಿಐ): ಚೀನಾದ ಬ್ಯಾಂಕ್‌ಗಳು ಡಿಜಿಟಲ್ ಪಯಣವನ್ನು ಬಹಳ ಬೇಗ ಶುರುಮಾಡಿದ್ದರೂ, ಅವು ಈಗ ಭಾರತದ ಬ್ಯಾಂಕ್‌ಗಳಿಗಿಂತ ಹಿಂದುಳಿದಿವೆ ಎಂದು ಜಿಯೊ ಫೈನಾನ್ಶಿಯಲ್ ಸರ್ವಿಸಸ್ ಲಿಮಿಟೆಡ್‌ನ ಅಧ್ಯಕ್ಷ ಕೆ.ವಿ. ಕಾಮತ್ ಹೇಳಿದ್ದಾರೆ.

‘ಭಾರತದಲ್ಲಿ ಆಗಿರುವುದು ಹಾಗೂ ಚೀನಾದಲ್ಲಿ ಆಗಿರುವುದರ ನಡುವೆ ಬಹಳ ವ್ಯತ್ಯಾಸಗಳಿವೆ ಎಂಬುದು ನನ್ನ ಭಾವನೆ’ ಎಂದು ಜಾಗತಿಕ ಫಿನ್‌ಟೆಕ್ ಸಮಾವೇಶದಲ್ಲಿ ಹೇಳಿದ್ದಾರೆ.

‘ಚೀನಾದವರು ಆಲಿಪೇ ಮತ್ತು ವಿಚ್ಯಾಟ್ ಪೇ ಮೂಲಕ ಬಹಳ ಬೇಗ ಡಿಜಿಟಲ್ ಪಾವತಿ ಸೇವೆಗಳನ್ನು ಆರಂಭಿಸಿದರು. ಆದರೆ ಅಲ್ಲಿನ ಬ್ಯಾಂಕ್‌ಗಳು ಈಗ ಭಾರತದ ಬ್ಯಾಂಕ್‌ಗಳಿಗಿಂತ ಕಡಿಮೆ ಪ್ರಮಾಣದಲ್ಲಿ ಡಿಜಿಟಲ್ ಸೇವೆಗಳನ್ನು ಅಳವಡಿಸಿಕೊಂಡಿವೆ’ ಎಂದು ಅವರು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು (ಸಾಧಾರಣ)	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು -	620
ಅಡಿಕೆ	
ಕುಮಟಾ	
ಚಿಪ್ಪು	38599-45369
ಕೋಕ	18209-33889
ಹಳೆಚಾಲಿ	41099-41599
ಹೊಸಚಾಲಿ	36399-40899
ಸಾಗರ	
ಬಿಳಿಗೋಟು	28989-33599
ಕೋಕ	21219-35001
ಚಾಲಿ	34199-39099
ಕೆಂಪುಗೋಟು	29899-36709
ರಾಶಿ	33199-49949
ಸಿಪ್ಪೆಗೋಟು	10690-22890
ಶಿವಮೊಗ್ಗ	
ಬೆಟ್ಟೆ	40369-52209
ಗೊರಬಲು	28669-37809
ರಾಶಿ	34309-49899
ಸಿದ್ದಾಪುರ	
ಬಿಳಿಗೋಟು	31869-35989
ಕೋಕ	29099-34899
ಚಾಲಿ	38009-41199
ಕೆಂಪುಗೋಟು	33019-33019
ರಾಶಿ	44349-48699
ತಟ್ಟಿಬೆಟ್ಟೆ	37000-42409
ಶಿರಸಿ	
ಬೆಟ್ಟೆ	36099-47119
ಬಿಳಿಗೋಟು	24699-36289
ಚಾಲಿ	37099-42699
ಯಲ್ಲಾಪುರ	
ಬಿಳಿಗೋಟು	26899-36122
ಕೋಕ	21012-31999
ಚಾಲಿ	37399-42199
ಕೆಂಪುಗೋಟು	31899-36790

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	12900	13000	13200	153.80 ಸೆಂಟ್ಸ್
ಎಸಿ	6860	6500	6700	
ಆರ್‌ಪಿ	10100	10000	10150	ಲಂಡನ್
ಆರ್‌ಸಿ	5960	238 on OT	5900	2456 ಡಾಲರ್ಸ್

ಇರಾಕ್‌ಗೆ ಮಣಿದ ಭಾರತ ತಂಡ

ಕಿಂಗ್ಸ್ ಕಪ್ ಫುಟ್‌ಬಾಲ್ ಟೂರ್ನಿ: ಪೆನಾಲ್ಟಿ ಶೂಟೌಟ್‌ನಲ್ಲಿ 4–5ರಿಂದ ನಿರಾಸೆ

ಚಿಯಾಂಗ್ ಮೈ, ಥಾಯ್ಲೆಂಡ್ (ಪಿಟಿಐ): ಭಾರತ ತಂಡದವರು ಕಿಂಗ್ಸ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ತಮಗಿಂತ ಮೇಲಿನ ರ‍್ಯಾಂಕ್‌ನಲ್ಲಿರುವ ಇರಾಕ್‌ಗೆ ಪ್ರಬಲ ಪೈಪೋಟಿ ನೀಡಿದರೂ, ಪೆನಾಲ್ಟಿ ಶೂಟೌಟ್‌ನಲ್ಲಿ (4–5) ಸೋಲು ಅನುಭವಿಸಿದರು.

ಸುನಿಲ್ ಚೆಟ್ರಿ ಅನುಪಸ್ಥಿತಿಯಲ್ಲಿ ಕಣಕ್ಕಿಳಿದ ಭಾರತ ತಂಡ ಗುರುವಾರ ನಡೆದ ಪಂದ್ಯದಲ್ಲಿ 79ನೇ ನಿಮಿಷದವರೆಗೂ 2–1 ರಿಂದ ಮುನ್ನಡೆ ಸಾಧಿಸಿತ್ತು.

ಈ ವೇಳೆ ಇರಾಕ್‌ಗೆ ಪೆನಾಲ್ಟಿ ಅವಕಾಶ ಲಭಿಸಿತು. ಭಾರತದ ಇಬ್ಬರು ಡಿಫೆಂಡರ್‌ಗಳು, ಎದುರಾಳಿ ಸ್ಟ್ರೈಕರ್ ಐಮನ್ ಗದ್ಬಾನ್ ಅವರನ್ನು ಬೀಳಿಸಿದ್ದಕ್ಕೆ ರೆಫರಿ ಪೆನಾಲ್ಟಿ ನೀಡಿದರು. ಈ ಅವಕಾಶದಲ್ಲಿ ಚೆಂಡನ್ನು ಗುರಿ ಸೇರಿಸಿದ ಐಮನ್ ಪಂದ್ಯವನ್ನು ಸಮಸ್ಥಿತಿಗೆ ತಂದರು.

ಈ ಟೂರ್ನಿಯ ನಿಯಮದಂತೆ 90 ನಿಮಿಷಗಳ ಆಟ ಸಮಬಲದಲ್ಲಿ ಕೊನೆಗೊಂಡರೆ, ಹೆಚ್ಚುವರಿ 30 ನಿಮಿಷಗಳ ಆಟ ಆಡಿಸುವ ಬದಲು ನೇರವಾಗಿ ಪೆನಾಲ್ಟಿ ಶೂಟೌಟ್‌ನ ಮೊರೆಹೋಗಲಾಯಿತು. ರೋಚಕ ಸೆಣಸಾಟ ನಡೆದ ಶೂಟೌಟ್‌ನಲ್ಲಿ ಗೆದ್ದ ಇರಾಕ್ ಫೈನಲ್ ಪ್ರವೇಶಿಸಿತು. ಭಾರತ ತಂಡವು ಮೂರನೇ ಸ್ಥಾನವನ್ನು ನಿರ್ಧರಿಸಲು ಆ.10 ರಂದು ನಡೆಯುವ ಪಂದ್ಯದಲ್ಲಿ ಲೆಬನಾನ್ ತಂಡವನ್ನು ಎದುರಿಸಲಿದೆ.

ಫಿಫಾ ರ‍್ಯಾಂಕಿಂಗ್‌ನಲ್ಲಿ 99ನೇ ಸ್ಥಾನದಲ್ಲಿರುವ ಭಾರತ ತಂಡ, ಚೆಟ್ರಿ ಅವರ ಅನುಪಸ್ಥಿತಿಯಲ್ಲೂ 70ನೇ ರ‍್ಯಾಂಕ್‌ನ ತಂಡಕ್ಕೆ ತಕ್ಕ ಪೈಪೋಟಿ ನೀಡಿತು.

ಮಹೇಶ್ ನೊರೇಮ್ ಅವರು 16ನೇ ನಿಮಿಷದಲ್ಲಿ ತಂಡಕ್ಕೆ ಮುನ್ನಡೆ ತಂದಿತ್ತರು. ಮರುಹೋರಾಟ ನಡೆಸಿದ ಇರಾಕ್ ತಂಡಕ್ಕೆ ಕರೀಂ ಅಲಿ 28ನೇ ನಿಮಿಷದಲ್ಲಿ ಸಮಬಲದ ಗೋಲು ಗಳಿಸಿದರು.

ಎರಡನೇ ಅವಧಿಯ ಆರಂಭದಲ್ಲೇ (51ನೇ ನಿ.) ಭಾರತ ಮತ್ತೆ ಮುನ್ನಡೆ ಸಾಧಿಸಿತು. ಇರಾಕ್ ತಂಡದ ನಾಯಕ ಮತ್ತು ಗೋಲ್‌ಕೀಪರ್ ಜಲಾಲ್ ಹಸನ್ ಅವರು ‘ಉಡುಗೊರೆ ಗೋಲು’ ನೀಡಿದರು. ಆದರೆ 79ನೇ ನಿಮಿಷದಲ್ಲಿ ಇರಾಕ್‌ಗೆ ಲಭಿಸಿದ ಪೆನಾಲ್ಟಿ ಭಾರತಕ್ಕೆ ಮುಳುವಾಗಿ ಪರಿಣಮಿಸಿತು.



ಇರಾಕ್ ವಿರುದ್ಧದ ಪಂದ್ಯದ ವೇಳೆ ಭಾರತ ತಂಡದ ಆಟಗಾರರು –ಪಿಟಿಐ ಚಿತ್ರ

‘ಪರ್ಫಾರ್‌ಮ್ಯಾಕ್ಸ್’ ಅಧಿಕೃತ ಕಿಟ್ ಪ್ರಾಯೋಜಕತ್ವ

ಮುಂಬೈ: ರಿಲಯನ್ಸ್ ರಿಟೇಲ್‌ನ ಕ್ರೀಡಾ ಉಡುಪುಗಳ ಬ್ರ್ಯಾಂಡ್ ಆಗಿರುವ ‘ಪರ್ಫಾರ್ ಮ್ಯಾಕ್ಸ್’ ಭಾರತ ಫುಟ್‌ಬಾಲ್ ತಂಡದ ಅಧಿಕೃತ ಕಿಟ್ ಪ್ರಾಯೋಜಕತ್ವ ತನ್ನದಾಗಿಸಿಕೊಂಡಿದೆ. ಈ ಸಂಬಂಧ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಜತೆ ಒಪ್ಪಂದ ಮಾಡಿಕೊಂಡಿದೆ.

ಭಾರತ ಸೀನಿಯರ್ ಪುರುಷರ ಮತ್ತು ಮಹಿಳಾ ತಂಡಗಳಿಗೆ ಪೋಷಾಕು ಸೇರಿದಂತೆ ಕಿಟ್‌ಅನ್ನು ‘ಪರ್ಫಾರ್‌ಮ್ಯಾಕ್ಸ್’ ಒದಗಿಸಲಿದೆ. ಕಿಂಗ್ಸ್ ಕಪ್ ಟೂರ್ನಿಯ ಪಂದ್ಯದಲ್ಲಿ ಭಾರತ ತಂಡ ಹೊಸ ಪೋಷಾಕು ಧರಿಸಿ ಕಣಕ್ಕಿಳಿದಿದೆ.

ಇಂಜುರಿ ಅವಧಿಯಲ್ಲಿ ಇರಾಕ್ ತಂಡದ ಜಿದಾನ್ ಇಕ್ಬಾಲ್ ಅವರು ರೆಡ್ ಕಾರ್ಡ್ ಪಡೆದು ಹೊರನಡೆದರೂ, ಅದರ ಲಾಭ ತನ್ನದಾಗಿಸಿಕೊಳ್ಳಲು ಭಾರತಕ್ಕೆ ಆಗಲಿಲ್ಲ.

ಈ ಸೋಲಿನೊಂದಿಗೆ 2023ರ ಋತುವಿನಲ್ಲಿ ಭಾರತ ತಂಡದ 11 ಪಂದ್ಯಗಳ ಅಜೇಯ ಓಟಕ್ಕೆ ತೆರೆಬಿತ್ತು. ಈ ಪಂದ್ಯಕ್ಕೂ ಮುನ್ನ ಉಭಯ ತಂಡಗಳು ಏಳು ಸಲ ಪರಸ್ಪರ ಪೈಪೋಟಿ ನಡೆಸಿದ್ದವು. ಆರರಲ್ಲಿ ಇರಾಕ್ ಗೆದ್ದಿದ್ದರೆ, ಒಂದು ಪಂದ್ಯ ಡ್ರಾ ಆಗಿತ್ತು. 2010ರ ನವೆಂಬರ್‌ನಲ್ಲಿ ಕೊನೆಯದಾಗಿ ಆಡಿದ್ದಾಗ ಇರಾಕ್ 2–0 ಯಿಂದ ಗೆದ್ದಿತ್ತು.

ಏಷ್ಯನ್ ಟಿಟಿ: ಸುತೀರ್ಥಾ ಮುಖರ್ಜಿಗೆ ಗೆಲುವು

ಪ್ಯೊಂಗ್‌ಚಾಂಗ್, ದಕ್ಷಿಣ ಕೊರಿಯಾ (ಪಿಟಿಐ): ಭಾರತದ ಸುತೀರ್ಥಾ ಮುಖರ್ಜಿ ಅವರು ಇಲ್ಲಿ ನಡೆಯುತ್ತಿರುವ ಏಷ್ಯನ್ ಟೇಬಲ್ ಟೆನಿಸ್ ಚಾಂಪಿಯನ್‌ಷಿಪ್‌ನ ಮಹಿಳೆಯರ ಸಿಂಗಲ್ಸ್ ವಿಭಾಗದಲ್ಲಿ ತನಗಿಂತ ಮೇಲಿನ ರ‍್ಯಾಂಕ್‌ನ ಆಟಗಾರ್ತಿಯರನ್ನು ಮಣಿಸಿ 32ರ ಸುತ್ತು ಪ್ರವೇಶಿಸಿದರು.

ಗುರುವಾರ ನಡೆದ ಪಂದ್ಯದಲ್ಲಿ ಮೊದಲ ಗೇಮ್‌ನಲ್ಲಿ ಸೋತರೂ ತಿರುಗೇಟು ನೀಡಿ 10-12, 11-8, 11-7, 11-7 ರಿಂದ ಚೀನಾ ತೈಪೆಯ ಸು ಯು ಚೆನ್ ಅವರಿಗೆ ಆಘಾತ ನೀಡಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 104ನೇ ಸ್ಥಾನದಲ್ಲಿರುವ ಸುತೀರ್ಥಾ, 40ನೇ ರ‍್ಯಾಂಕ್‌ನ ಆಟಗಾರ್ತಿ ವಿರುದ್ಧ ಶಿಸ್ತಿನ ಆಟವಾಡಿದರು.

ಐಹಿಕಾ ಮುಖರ್ಜಿ 11-2, 11-0, 11-1 ರಿಂದ ನೇಪಾಳದ ಸುವಲ್ ಸಿಕ್ಕಾ ವಿರುದ್ಧ ಸುಲಭ ಗೆಲುವು ಪಡೆದು ಮುನ್ನಡೆದರು.



ಸುತೀರ್ಥಾ ಮುಖರ್ಜಿ

ಆದರೆ ಸಿಂಗಲ್ಸ್ ವಿಭಾಗದಲ್ಲಿ ಕಣದಲ್ಲಿದ್ದ ಭಾರತದ ಇತರರಿಗೆ ನಿರಾಸೆ ಎದುರಾಯಿತು. ಶ್ರೀಜಾ ಅಕುಲಾ 5-11, 6-11, 9-11 ರಿಂದ ಜಪಾನ್‌ನ ಮಿಮಾ ಇಟೊ ಎದುರು ಸೋತರೆ, ದಿಯಾ ಚಿತಳೆ 3–11, 6–11, 8–11 ರಿಂದ ಚೀನಾದ ಚೆನ್ ಮೆಂಗ್ ಕೈಯಲ್ಲಿ ಪರಾಭವಗೊಂಡರು.

ಥಾಯ್ಲೆಂಡ್‌ನ ಜಿನಿಪಾ ಸವೆಟಾಬುಟ್ ವಿರುದ್ಧ ಆಡಬೇಕಿದ್ದ ಭಾರತದ ಅಗ್ರ ರ‍್ಯಾಂಕ್‌ನ ಆಟಗಾರ್ತಿ ಮಣಿಕಾ ಬಾತ್ರಾ ಅವರು ಎದುರಾಳಿಗೆ ‘ವಾಕ್ ಓವರ್’ ನೀಡಿದರು.

ಕ್ವಾರ್ಟರ್‌ಗೆ ಮಾನವ್- ಮಾನುಷ್: ಭಾರತದ ಮಾನವ್ ಠಕ್ಕರ್ ಮತ್ತು ಮಾನುಷ್ ಶಾ ಅವರು ಪುರುಷರ ಡಬಲ್ಸ್ ವಿಭಾಗದಲ್ಲಿ ಉಜ್ಬೆಕಿಸ್ತಾನದ ಅಬ್ದುಲ್‌ಅಜೀಜ್ ಅನೊರ್ಬೊಯೆ–ಕುತ್ಬುದಿಲೊ ತೆಶಬೊವ್ ಅವರನ್ನು ಮಣಿಸಿ ಪುರುಷರ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಮಹಿಳೆಯರ ಡಬಲ್ಸ್‌ನಲ್ಲಿ ಐಹಿಕಾ ಮತ್ತು ಸುತೀರ್ಥಾ ಮುಖರ್ಜಿ ಜೋಡಿ 11-1, 13-11, 10-12, 11-7 ರಿಂದ ಕಜಕಸ್ತಾನದ ಏಂಜೆಲಿನಾ ರೊಮನೊವ್‌ಸ್ಕ– ಸರ್ವಿನೊಜ್ ಮಿರ್ಕದಿರೊವಾ ವಿರುದ್ಧ ಗೆದ್ದು ಎಂಟರಘಟ್ಟದಲ್ಲಿ ಸ್ಥಾನ ಪಡೆಯಿತು.

ಬಿಎಫ್‌ಸಿಗೆ ಜಯ

ಬೆಂಗಳೂರು: ಕ್ಲಾರೆನ್ಸ್ ಸವಿಯೊ ಫರ್ನಾಂಡಿಸ್ ಮತ್ತು ಸತೇಂದ್ರ ಸಿಂಗ್ ಯಾದವ್ ಅವರ ಆಟದ ನೆರವಿನಿಂದ ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 2–1ರಿಂದ ಎಚ್‌ಎಎಲ್ ತಂಡವನ್ನು ಮಣಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಕ್ಲಾರೆನ್ಸ್ (15ನೇ) ಮತ್ತು ಸತೇಂದ್ರ (58ನೇ) ಬಿಎಫ್‌ಸಿ ಪರ ತಲಾ ಒಂದು ಗೋಲು ದಾಖಲಿಸಿದರು. ಎಚ್‌ಎಎಲ್ ಪರ ಆಸ್ಟಿನ್ ಜಿಜೊ (51) ಏಕೈಕ ಗೋಲು ಗಳಿಸಿದರು.

ಮತ್ತೊಂದು ಪಂದ್ಯದಲ್ಲಿ ಕಿಕ್ ಸ್ಟಾರ್ಟ್ ಎಫ್‌ಸಿ ತಂಡವು 3–0 ಯಿಂದ ಎಫ್‌ಸಿ ಡೆಕ್ಕನ್ ತಂಡವನ್ನು ಪರಾಭವಗೊಳಿಸಿತು. ಮನ್ ಭಕುಪರ್ (75, 84ನೇ) ಎರಡು ಗೋಲು ಗಳಿಸಿದರೆ, ಅಭಿಷೇಕ್ ಶಂಕರ್ (86ನೇ) ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು.

ಅಮೆರಿಕ ಓಪನ್ ಟೆನಿಸ್ ಟೂರ್ನಿ: ಪ್ರಶಸ್ತಿಯತ್ತ ಅಲ್ಕರಾಜ್ ಹೆಜ್ಜೆ

ಫೈನಲ್‌ಗೆ ಬೋಪಣ್ಣ–ಎಬ್ಡೆನ್

ನ್ಯೂಯಾರ್ಕ್ (ರಾಯಿಟರ್ಸ್/ ಪಿಟಿಐ): ಗೆಲುವಿನ ಓಟ ಮುಂದುವರಿಸಿದ ಭಾರತದ ರೋಹನ್ ಬೋಪಣ್ಣ ಮತ್ತು ಆಸ್ಟ್ರೇಲಿಯಾದ ಮ್ಯಾಥ್ಯೂ ಎಬ್ಡೆನ್ ಜೋಡಿ ಅಮೆರಿಕ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್ ವಿಭಾಗದ ಫೈನಲ್ ಪ್ರವೇಶಿಸಿತು.

ಗುರುವಾರ ನಡೆದ ಸೆಮಿಫೈನಲ್ ಪಂದ್ಯದಲ್ಲಿ ಬೋಪಣ್ಣ– ಎಬ್ಡೆನ್ 7–6, 6–2 ರಿಂದ ಫ್ರಾನ್ಸ್‌ನ ಪಿಯರ್ ಹ್ಯೂಸ್ ಹರ್ಬರ್ಟ್ ಮತ್ತು ನಿಕೊಲಸ್ ಮಾಹುಟ್ ಅವರನ್ನು ಮಣಿಸಿದರು.

ಕರ್ನಾಟಕದ ಆಟಗಾರ ಈ ಮೂಲಕ ಗ್ರ್ಯಾನ್‌ಸ್ಲಾಮ್ ಟೂರ್ನಿಯ ಫೈನಲ್ ಪ್ರವೇಶಿಸಿದ ಅತಿಹಿರಿಯ (43 ವರ್ಷ 6 ತಿಂಗಳು) ಆಟಗಾರ ಎನಿಸಿಕೊಂಡರು. ಕೆನಡಾದ ಡೇನಿಯರ್ ನೆಸ್ಟರ್ (43 ವರ್ಷ 4 ತಿಂಗಳು) ಅವರ ದಾಖಲೆಯನ್ನು ಮುರಿದರು.

ಬೋಪಣ್ಣ 2ನೇ ಬಾರಿ ಗ್ರ್ಯಾನ್‌ಸ್ಲಾಮ್ ಫೈನಲ್ ಪ್ರವೇಶಿಸಿದ ಸಾಧನೆ ಮಾಡಿದ್ದಾರೆ. 2010 ರಲ್ಲಿ ಇದೇ ಟೂರ್ನಿಯಲ್ಲಿ ಪಾಕಿಸ್ತಾನದ ಐಸಾಮ್ ಉಲ್ ಹಕ್ ಖುರೇಷಿ ಜತೆ ಫೈನಲ್ ಪ್ರವೇಶಿಸಿ ‘ರನ್ನರ್ ಅಪ್’ ಆಗಿದ್ದರು.

ಸೆಮಿಗೆ ಅಲ್ಕರಾಜ್: ಅಗ್ರ ಶ್ರೇಯಾಂಕದ ಕಾರ್ಲೋಸ್ ಅಲ್ಕರಾಜ್ ಅವರು ಸುಸ್ತಾಗಿದ್ದ ಅಲೆಕ್ಸಾಂಡರ್ ಜ್ವರೇವ್ ಅವರನ್ನು ಬುಧವಾರ 6–3, 6–2, 6–4ರಲ್ಲಿ ನೇರ ಸೆಟ್‌ಗಳಿಂದ ಸೋಲಿಸಿ ಪುರುಷರ ಸಿಂಗಲ್ಸ್ ವಿಭಾಗದ ಸೆಮಿಫೈನಲ್ ತಲುಪಿದರು. ಆ ಮೂಲಕ ಪ್ರಶಸ್ತಿ ಉಳಿಸಿಕೊಳ್ಳುವ ನಿಟ್ಟಿನಲ್ಲಿ ದಿಟ್ಟವಾದ ಹೆಜ್ಜೆಯಿಟ್ಟರು.


ಗೆಲುವಿನ ಸಂಭ್ರಮದಲ್ಲಿ ಎಬ್ಡೆನ್ (ಎಡ) ಹಾಗೂ ಬೋಪಣ್ಣ –ಎಎಫ್‌ಪಿ ಚಿತ್ರ

ಹಾಲಿ ಚಾಂಪಿಯನ್ ಆಗಿರುವ ಅಲ್ಕರಾಜ್ ಸೆಮಿಫೈನಲ್‌ನಲ್ಲಿ 2021ರ ಚಾಂಪಿಯನ್ ಡೇನಿಯಲ್ ಮೆಡ್ವೆಡೇವ್ ಅವರನ್ನು ಎದುರಿಸಲಿದ್ದಾರೆ. 2004 ರಿಂದ 08ರವರೆಗೆ ಸ್ವಿಸ್ ದಂತಕಥೆ ರೋಜರ್ ಫೆಡರರ್ ಸತತವಾಗಿ ಇಲ್ಲಿ ಚಾಂಪಿಯನ್ ಆಗಿದ್ದರು. ನಂತರ ಬೆನ್ನುಬೆನ್ನಿಗೆ ಎರಡು ವರ್ಷ ಯಾರೂ ಚಾಂಪಿಯನ್ ಆಗಿಲ್ಲ. ಈಗ ಈ ಅವಕಾಶವನ್ನು ಅಲ್ಕರಾಜ್ ಹೊಂದಿದ್ದಾರೆ.

ಸೋಮವಾರ ಟೂರ್ನಿಯ ಅತಿ ದೀರ್ಘ ಪಂದ್ಯವಾಡಿ ಬಳಲಿದ್ದ 12ನೇ ಶ್ರೇಯಾಂಕದ ಜ್ವರೇವ್ ಅವರು ಅಲ್ಕರಾಜ್ ಅವರನ್ನು ಎದುರಿಸಲು ಎಷ್ಟರ ಮಟ್ಟಿಗೆ ಸಜ್ಜಾಗಿದ್ದಾರೆ ಎಂಬ ಪ್ರಶ್ನೆ ಉದ್ಭವಿಸಿತ್ತು. ಜರ್ಮನಿಯ ಜ್ವರೇವ್, ಅಸಹನೀಯ ಸೆಕೆಯ ವಾತಾವರಣದಲ್ಲಿ 5 ಗಂಟೆಗಳ ಮ್ಯಾರಥಾನ್ ಪಂದ್ಯವಾಡಿ ಯಾನಿಕ್ ಸಿನ್ನರ್ ಅವರನ್ನು ಸೋಲಿಸಿ ಎಂಟರ ಘಟ್ಟ ತಲುಪಿದ್ದರು.

ಆದರೆ ಆರ್ಥರ್ ಆ್ಯಷ್ ಕ್ರೀಡಾಂಗಣದಲ್ಲಿ ಅಲ್ಕರಾಜ್ ಅವರಿಗೆ ಹೆಚ್ಚು ಹೋರಾಟ ಎದುರಾಗಲಿಲ್ಲ. ಮೊದಲ ಸೆಟ್ 3–3 ಆಗಿದ್ದಾಗ ಜ್ವರೇವ್ ಉತ್ತಮ ಬ್ರೇಕ್ ಅವಕಾಶ ಪಡೆದಿದ್ದರು. ಆದರೆ ಅದನ್ನು ಉಳಿಸಿಕೊಂಡ ಅಲ್ಕರಾಜ್, ಎದುರಾಳಿಯ ಮುಂದಿನ ಸರ್ವ್‌ನಲ್ಲೇ ಬ್ರೇಕ್ ಪಡೆದು ಸುಲಭವಾಗಿ ಸೆಟ್ ಪಡೆದರು. ಎರಡನೇ ಸೆಟ್‌ನಲ್ಲಿ ಜ್ವರೇವ್ ಅವರ ಪ್ರತಿರೋಧದ ಪ್ರಮಾಣವೂ ಕಡಿಮೆಯಾಗಿ ಸ್ಪೇನ್‌ನ ಆಟಗಾರ ಹೆಚ್ಚಿನ ಪ್ರಯಾಸವಿಲ್ಲದೇ ತಮ್ಮದಾಗಿಸಿಕೊಂಡರು. ಆದರೆ ತೊಡೆಗೆ ಪಟ್ಟಿ ಕಟ್ಟಿಕೊಂಡು ಮೂರನೆ ಸೆಟ್ ಆಡಲು ಇಳಿದ ಜ್ವರೇವ್ ಹೋರಾಟ ತೋರಿದರು. ಆದರೆ ಸೆಟ್‌ನ ಕೊನೆಯಲ್ಲಿ ಪಡೆದ ಬ್ರೇಕ್‌ನಿಂದ ಅಲ್ಕರಾಜ್ ಪಂದ್ಯವನ್ನೂ ಗೆದ್ದರು.

ಮೆಡ್ವೆಡೇವ್‌ಗೆ ಜಯ: ಇನ್ನೊಂದು ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಡೇನಿಯಲ್ ಮೆಡ್ವೆಡೇವ್ 6–4, 6–3, 6–4 ರಿಂದ ಆ್ಯಂಡ್ರಿ ರುಬ್ಲೇವ್ ಅವರನ್ನು ಮಣಿಸಿದರು.

ಸೆಮಿಗೆ ಕೀಸ್

ಅಮೆರಿಕದ ಮ್ಯಾಡಿಸನ್ ಕೀಸ್ ಮಹಿಳೆಯರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು. ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ 17ನೇ ಶ್ರೇಯಾಂಕದ ಕೀಸ್ 6–1, 6–4 ರಿಂದ 9ನೇ ಶ್ರೇಯಾಣಕದ ಮರ್ಕೆತಾ ವೊಂಡ್ರುಸೋವಾ ಅವರನ್ನು ಸೋಲಿಸಿದರು.

ಏಷ್ಯನ್ ಗೇಮ್ಸ್: ಚೀನಾಕ್ಕೆ ತೆರಳಿದ ರೋಯಿಂಗ್ ತಂಡ

ಮುಂಬೈ (ಪಿಟಿಐ): ಇದೇ ತಿಂಗಳ 23ರಂದು ಆರಂಭವಾಗುವ ಏಷ್ಯನ್ ಗೇಮ್ಸ್‌ನಲ್ಲಿ ಪಾಲ್ಗೊಳ್ಳಲು 43 ಸದಸ್ಯರ ಭಾರತ ರೋಯಿಂಗ್ ತಂಡ ಕ್ರೀಡಾಕೂಟ ನಡೆಯುವ ಸ್ಥಳವಾದ ಚೀನಾದ ಹಾಂಗ್‌ಜೌಗೆ ತೆರಳಿತು. ಈ ತಂಡದಲ್ಲಿ 10 ಮಂದಿ ನೆರವು ಸಿಬ್ಬಂದಿ ಇದ್ದಾರೆ.

ತಂಡದಲ್ಲಿ 20 ಮಂದಿ ಪುರುಷ ಮತ್ತು 13 ಮಂದಿ ಮಹಿಳಾ ಸ್ಪರ್ಧಿಗಳಿದ್ದು, ಅಲ್ಲಿನ ವಾತಾವರಣಕ್ಕೆ ಹೊಂದಿಕೊಳ್ಳಲು ವಾರದ ಕಾಲ ನಡೆಯುವ ತರಬೇತಿ ಶಿಬಿರದಲ್ಲಿ ಭಾಗಿಯಾಗಲಿದ್ದಾರೆ. ಸರ್ಕಾರ ಈ ಶಿಬಿರಕ್ಕೆ ಒಂದು ಕೋಟಿ ರೂಪಾಯಿ ಮಂಜೂರು ಮಾಡಿದೆ. ಶಿಬಿರದ ನಂತರ 16ರಂದು ಈ ತಂಡ ಕ್ರೀಡಾಗ್ರಾಮಕ್ಕೆ ತೆರಳಲಿದೆ.

ಈ ಕೂಟದಲ್ಲಿ ಮೊದಲ ಬಾರಿ ಮಹಿಳೆಯರ ಎಂಟು ಮಂದಿಯ ತಂಡದ ಸ್ಪರ್ಧೆ ಇರುವ ಕಾರಣ ಭಾರತ ಏಷ್ಯಾಡ್‌ಗೆ ಇದುವರೆಗಿನ ದೊಡ್ಡ ಮಹಿಳಾ ತಂಡ ಕಳುಹಿಸುತ್ತಿದೆ.

ರೋಯಿಂಗ್ ತಂಡಕ್ಕೆ ಭಾರತ ಕ್ರೀಡಾ ಪ್ರಾಧಿಕಾರದ ಅಧಿಕಾರಿಗಳು ಬುಧವಾರ ಬೀಳ್ಕೊಡುಗೆ ನೀಡಿದರು. ಈ ವಾರದ ಆರಂಭದಲ್ಲಿ ಭಾರತದ ಸೇಲರ್‌ಗಳು ಮತ್ತು ಬಾಕ್ಸರ್‌ಗಳ ಮೊದಲ ತಂಡ ಚೀನಾಕ್ಕೆ ತೆರಳಿದ್ದು ಅಲ್ಲಿ ತರಬೇತಿ ಪಡೆಯಲಿದೆ. ಬಾಕ್ಸರ್‌ಗಳು ವುಯಿಶಾನ್ ನಗರದಲ್ಲಿ ಮತ್ತು ಸೇಲರ್‌ಗಳು ನಿಂಗ್ಬೊ ಕ್ಸಿಯಾಂಗ್‌ಶಾನ್ ಸೇಲಿಂಗ್ ಸೆಂಟರ್‌ನಲ್ಲಿ ತರಬೇತಿ ನಡೆಯಲಿದ್ದಾರೆ. ಏಷ್ಯನ್ ಗೇಮ್ಸ್ ಸ್ಪರ್ಧೆಗಳೂ ಇದೇ ಸ್ಥಳದಲ್ಲಿ ನಿಗದಿಯಾಗಿವೆ.

ನೆಟ್ಸ್‌ನಲ್ಲಿ ರಾಹುಲ್ ತಾಲೀಮು

ಏಷ್ಯಾ ಕಪ್ ಕ್ರಿಕೆಟ್: ಭಾರತ ತಂಡದ ಆಟಗಾರರ ಅಭ್ಯಾಸ

ಪ್ರಜಾವಾಣಿ ವಾರ್ತೆ

ಕೊಲಂಬೊ: ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಸೂಪರ್ ಫೋರ್ ಹಂತದಲ್ಲಿ ಭಾನುವಾರ ಪಾಕಿಸ್ತಾನ ತಂಡವನ್ನು ಎದುರಿಸಲಿರುವ ಭಾರತ ತಂಡದ ಕೆಲವು ಆಟಗಾರರು ಗುರುವಾರ ಇಲ್ಲಿ ಅಭ್ಯಾಸ ನಡೆಸಿದರು.

ಮಳೆಯ ಕಾರಣ ಮೈದಾನದಲ್ಲಿ ಪೂರ್ಣ ಪ್ರಮಾಣದ ಅಭ್ಯಾಸ ನಡೆಸಲು ಆಗಲಿಲ್ಲ. ಆದ್ದರಿಂದ ಕೊಲಂಬೊದ ನಾನ್‌ಡಿಸ್‌ಕ್ರಿಪ್ಟ್ಸ್ ಕ್ರಿಕೆಟ್ ಕ್ಲಬ್‌ನ ಒಳಾಂಗಣದ ನೆಟ್ಸ್‌ನಲ್ಲಿ ತಾಲೀಮು ನಡೆಯಿತು.

ಗಾಯದಿಂದ ಚೇತರಿಸಿಕೊಂಡು ತಂಡಕ್ಕೆ ಮರಳಿರುವ ಕರ್ನಾಟಕದ ವಿಕೆಟ್‌ಕೀಪರ್ ಬ್ಯಾಟರ್ ಕೆ.ಎಲ್. ರಾಹುಲ್ ಅವರ ಮೇಲೆ ಎಲ್ಲರ ಚಿತ್ತ ನೆಟ್ಟಿತ್ತು. ಮೇ ತಿಂಗಳಲ್ಲಿ ಶಸ್ತ್ರಚಿಕಿತ್ಸೆಗೆ ಒಳಗಾಗಿದ್ದ ಅವರು ನಾಲ್ಕು ತಿಂಗಳು ಅಂಗಳದಿಂದ ದೂರವುಳಿದಿದ್ದರು. ಏಷ್ಯಾ ಕಪ್ ಟೂರ್ನಿಯ ಮೊದಲ ಎರಡು ಪಂದ್ಯಗಳಲ್ಲಿ ಕಣಕ್ಕಿಳಿದಿರಲಿಲ್ಲ. ಅವರು ಮಂಗಳವಾರ ಕೊಲಂಬೊದಲ್ಲಿ ತಂಡವನ್ನು ಸೇರಿಕೊಂಡಿದ್ದರು.

ಆರಂಭದಲ್ಲಿ ಕೆಲಹೊತ್ತು ‘ಥ್ರೋ-ಡೌನ್’ಗಳನ್ನು ಎದುರಿಸಿದ ರಾಹುಲ್, ಬಳಿಕ ವೇಗದ ಬೌಲರ್‌ಗಳನ್ನು ಎದುರಿಸಿದರು. ಬ್ಯಾಟಿಂಗ್ ಅಭ್ಯಾಸದ ಬಳಿಕ ಒಂದಷ್ಟು ಹೊತ್ತು ದೈಹಿಕ ಕಸರತ್ತು ನಡೆಸಿದ ಅವರು ಕೋಚ್ ರಾಹುಲ್ ದ್ರಾವಿಡ್ ಅವರೊಂದಿಗೆ ಸಮಾಲೋಚನೆ ನಡೆಸಿದ್ದು ಕಂಡುಬಂತು.


ಕೆ.ಎಲ್‌.ರಾಹುಲ್ ಗುರುವಾರ ದೈಹಿಕ ಕಸರತ್ತು ನಡೆಸಿದರು –ಎಎಫ್‌ಪಿ ಚಿತ್ರ

ರಾಹುಲ್ ಅಲ್ಲದೆ ಹಾರ್ದಿಕ್ ಪಾಂಡ್ಯ, ಶ್ರೇಯಸ್ ಅಯ್ಯರ್, ಸೂರ್ಯಕುಮಾರ್ ಯಾದವ್, ಶುಭಮನ್ ಗಿಲ್ ಮತ್ತು ಶಾರ್ದೂಲ್ ಠಾಕೂರ್ ಅವರು ನೆಟ್ಸ್‌ನಲ್ಲಿ ಬ್ಯಾಟಿಂಗ್ ತಾಲೀಮು ಕೈಗೊಂಡರು.

ಪಾಕಿಸ್ತಾನದ ಎಡಗೈ ವೇಗಿ ಶಾಹೀನ್ ಶಾ ಆಫ್ರಿದಿ ಅವರನ್ನು ಸಮರ್ಥವಾಗಿ ಎದುರಿಸಲು ಸಜ್ಜಾಗುವ ನಿಟ್ಟಿನಲ್ಲಿ ಭಾರತದ ಬ್ಯಾಟರ್‌ಗಳು ನೆಟ್ಸ್‌ನಲ್ಲಿ ಸ್ಥಳೀಯ ಎಡಗೈ ಬೌಲರ್‌ಗಳನ್ನು ಎದುರಿಸಿದ್ದು ಗಮನ ಸೆಳೆಯಿತು.

ಶುಭಮನ್ ಗಿಲ್ ಅವರು ಥ್ರೋ-ಡೌನ್‌ಗಳನ್ನು ಮಾತ್ರ ಎದುರಿಸಿದರು. ಥ್ರೋಡೌನ್ ಪರಿಣತ ನುವಾನ್ ಸೆನೆವಿರತ್ನೆ ಅವರಿಗೆ ನೆರವಾದರು.

ಡೈಮಂಡ್ ಲೀಗ್ ಫೈನಲ್: ಹಿಂದೆ ಸರಿದ ಶ್ರೀಶಂಕರ್



ನವದೆಹಲಿ (ಪಿಟಿಐ): ಭಾರತದ ಲಾಂಗ್ ಜಂಪರ್ ಮುರಳಿ ಶ್ರೀಶಂಕರ್ ಅವರು ಅಮೆರಿಕದಲ್ಲಿ ನಡೆಯಲಿರುವ ಪ್ರತಿಷ್ಠಿತ ಡೈಮಂಡ್ ಲೀಗ್ ಫೈನಲ್‌ನಿಂದ ಹಿಂದೆ ಸರಿದಿದ್ದಾರೆ. ಹಾಂಗ್‌ಝೌ ಏಷ್ಯನ್ ಕ್ರೀಡಾಕೂಟದತ್ತ ಗಮನಹರಿಸಲು ಅವರು ಈ ನಿರ್ಧಾರ ತೆಗೆದುಕೊಂಡಿದ್ದಾರೆ.

ಡೈಮಂಡ್ ಲೀಗ್ ಫೈನಲ್ ಅಮೆರಿಕದ ಯೂಜಿನ್‌ನಲ್ಲಿ ಸೆ.17 ರಂದು ನಡೆಯಲಿದೆ. ಏಷ್ಯನ್ ಕ್ರೀಡಾಕೂಟ ಸೆ.23 ರಂದು ಆರಂಭವಾಗಲಿದೆ.

‘ಡೈಮಂಡ್ ಲೀಗ್‌ನಲ್ಲಿ ಪಾಲ್ಗೊಂಡು ಚೀನಾದ ಹಾಂಗ್‌ಝೌಗೆ ಬರಬೇಕಾದರೆ ದೀರ್ಘ ಪ್ರಯಾಣ ಅಗತ್ಯ. ಅದು ದೈಹಿಕ ಸಾಮರ್ಥ್ಯ ಮತ್ತು ತರಬೇತಿಯ ಮೇಲೆ ಕೆಟ್ಟ ಪರಿಣಾಮ ಬೀರುವ ಸಾಧ್ಯತೆಯಿದೆ. ಆದ್ದರಿಂದ ಅಮೆರಿಕಕ್ಕೆ ತೆರಳದಿರಲು ನಿರ್ಧರಿಸಿದ್ದಾರೆ’ ಎಂದು ಶ್ರೀಶಂಕರ್ ಅವರ ತಂದೆ ಮುರಳಿ ತಿಳಿಸಿದರು.

ಆ.31 ರಂದು ನಡೆದಿದ್ದ ಜ್ಯೂರಿಚ್ ಲೆಗ್‌ನ ಡೈಮಂಡ್ ಲೀಗ್‌ನಲ್ಲಿ 7.99 ಮೀ. ಸಾಧನೆಯೊಂದಿಗೆ ಐದನೇ ಸ್ಥಾನ ಪಡೆದಿದ್ದರೂ, ಶ್ರೀಶಂಕರ್ ಅವರು ಡೈಮಂಡ್ ಲೀಗ್ ಫೈನಲ್‌ಗೆ ಅರ್ಹತೆ ಪಡೆದುಕೊಂಡಿದ್ದರು.

ಬೆಂಗಳೂರು: ಐಟಿಎಫ್ ಜೆ30 ಟೆನಿಸ್ ಟೂರ್ನಿ

ಸೆಮಿಗೆ ಸೌಮ್ಯಿತ್ರಾ, ಅಮೋದಿನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೌಮಿತ್ರಾ ವರ್ಮಾ ಅವರು ಇಲ್ಲಿ ನಡೆಯುತ್ತಿರುವ ಐಟಿಎಫ್ ಜೆ30 ಟೆನಿಸ್ ಟೂರ್ನಿಯ ಬಾಲಕಿಯರ ವಿಭಾಗದಲ್ಲಿ ಅಗ್ರ ಶ್ರೇಯಾಂಕದ ಸಾಯಿ ಜಾನ್ವಿ ಅವರನ್ನು 0-6, 6-2, 7-5 ಸೆಟ್‌ಗಳಿಂದ ಸೋಲಿಸಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದರು.

ಮೊದಲ ಗೇಮ್‌ನಲ್ಲಿ ಹಿನ್ನಡೆ ಅನುಭವಿಸಿದ್ದ ಸೌಮಿತ್ರಾ ನಂತರ ಪುಟಿದೆದ್ದು, ನಂತರದ ಎರಡು ಗೇಮ್‌ಗಳಲ್ಲಿ ಮೇಲುಗೈ ಸಾಧಿಸಿದರು. ಅವರು ನಾಲ್ಕರ ಘಟ್ಟದಲ್ಲಿ ಕರ್ನಾಟಕದ 16 ವರ್ಷದ ಅಮೋದಿನಿ ನಾಯಕ್ ಅವರನ್ನು ಎದುರಿಸಲಿದ್ದಾರೆ.

ಅಮೋದಿನಿ ಅವರು 6-4, 6-2ರಿಂದ ಅವನಿ ಚಿತಾಲೆ ಅವರನ್ನು ಮಣಿಸಿದ್ದಾರೆ. ಮತ್ತೊಂದು ಪಂದ್ಯದಲ್ಲಿ ಲಕ್ಷ್ಮಿಶ್ರೀ ದಂಡು ಅವರು 6-4, 2-6, 5-7ರಿಂದ ಹರ್ಷಿಣಿ ನಾಗರಾಜ್ ಅವರನ್ನು ಪರಾಭವಗೊಳಿಸಿದರು. ಮತ್ತೊಂದು ಪಂದ್ಯದಲ್ಲಿ ಆರ್. ಸೌಮ್ಯಾ ಅವರು 6-0, 6-4ರಿಂದ ಕಶ್ವಿ ಸುನಿಲ್ ಅವರನ್ನು ಸೋಲಿಸಿದರು.

ಸೆಮಿಗೆ ಸೆಹಜ್: ಬಾಲಕರ ವಿಭಾಗದ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಕರ್ನಾಟಕದ ಎರಡನೇ ಶ್ರೇಯಾಂಕದ ಗಂಧರ್ವ ಕೊತ್ತಪಲ್ಲಿ ಅವರು 3-6, 2-6ರಿಂದ ಆರಾಧ್ಯ ಕ್ಷಿತಿಜ್ ಅವರಿಗೆ ಶರಣಾದರು. ಅಗ್ರ ಶ್ರೇಯಾಂಕದ ಸೆಹಜ್ ಸಿಂಗ್ ಪವಾರ್ 6-2, 6-2ರಿಂದ ಕೇಶವ್ ಗೋಯೆಲ್ ಅವರನ್ನು ಸೋಲಿಸಿದರು. ಇತರ ಪಂದ್ಯದಲ್ಲಿ ಚಂದನ್ ಶಿವರಾಜ್ 7-5, 5-7, 7-6 (7-5) ರಿಂದ ಸಮರ್ಥ್ ಸಹಿತಾ ಅವರನ್ನು, ಕೆವಿನ್ ಟೀಟಸ್ ಸುರೇಶ್ 7-6 (7-3), 6-1ರಿಂದ ಧೀರಜ್ ರೆಡ್ಡಿ ಅವರನ್ನು ಮಣಿಸಿದರು.


ಸೌಮಿತ್ರಾ ವರ್ಮಾ ಆಟದ ವೈಖರಿ –ಪ್ರಜಾವಾಣಿ ಚಿತ್ರ/ಎಸ್‌.ಕೆ.ದಿನೇಶ್

ಸೆಮಿಫೈನಲ್ ಪಂದ್ಯಗಳು: ಬಾಲಕರ ವಿಭಾಗದಲ್ಲಿ ಸೆಹಜ್ ಸಿಂಗ್ ಪವಾರ್–ಚಂದನ್ ಶಿವರಾಜ್; ಆರಾಧ್ಯ ಕ್ಷಿತಿಜ್–ಕೆವಿನ್ ಟೈಟಸ್ ಸುರೇಶ್ ಪೈಪೋಟಿ ನಡೆಸುವರು. ಬಾಲಕಿಯ ವಿಭಾಗದಲ್ಲಿ ಸೌಮಿತ್ರಾ ವರ್ಮಾ– ಅಮೋದಿನಿ ನಾಯಕ್; ಲಕ್ಷ್ಮಿಶ್ರೀ–ಸೌಮ್ಯಾ ಸೆಣಸಾಡುವರು.

ಟಾಟಾ ಸ್ಟೀಲ್ ಇಂಡಿಯಾ ಚೆಸ್ ಟೂರ್ನಿ

ಫ್ರಾನ್ಸ್‌ನ ಮ್ಯಾಕ್ಸಿಮ್ ಲಗ್ರಾವ್‌ಗೆ ಪ್ರಶಸ್ತಿ

ಕೋಲ್ಕತ್ತ (ಪಿಟಿಐ): ಕೊನೆಯ ದಿನವೂ ಪ್ರಾಬಲ್ಯ ಮುಂದುವರಿಸಿದ ಫ್ರಾನ್ಸ್‌ನ ಗ್ರ್ಯಾಂಡ್‌ಮಾಸ್ಟರ್ ಮ್ಯಾಕ್ಸಿಮ್ ವಾಷಿಯರ್ ಲಗ್ರಾವ್, ‘ಟಾಟಾ ಸ್ಟೀಲ್ ಚೆಸ್ ಇಂಡಿಯಾ 2023’ ರ್‍ಯಾಪಿಡ್ ಟೂರ್ನಿಯಲ್ಲಿ ಗುರುವಾರ ಪ್ರಶಸ್ತಿ ಗೆದ್ದುಕೊಂಡರು.

ವಿಶ್ವ ಬ್ಲಿಟ್ಸ್ ಮಾಜಿ ಚಾಂಪಿಯನ್ ಆಗಿರುವ ಲಗ್ರಾವ್ ಮೂರು ದಿನಗಳ ಟೂರ್ನಿಯಲ್ಲಿ ಏಳು ಪಾಯಿಂಟ್ಸ್ ಸಂಗ್ರಹಿಸಿದರು. ಅವರಿಗಿಂತ ಸಾಕಷ್ಟು ಹಿಂದೆ ಉಳಿದ ಅಜರ್‌ಬೈಜಾನ್‌ನ ಗ್ರ್ಯಾಂಡ್‌ಮಾಸ್ಟರ್ ತೈಮೋರ್ ರಾಜಾಬೋವ್ ಅವರು 5.5 ಪಾಯಿಂಟ್ಸ್ ಗಳಿಸಿ ಎರಡನೇ ಸ್ಥಾನ ಪಡೆದರು.

ಭಾರತದ ಚೆಸ್ ತಾರೆ ಆರ್. ಪ್ರಜ್ಞಾನಂದ, ಫಿಡೆ ಪ್ರತಿನಿಧಿಸುತ್ತಿರುವ (ರಷ್ಯಾ ಮೂಲದ) ಅಲೆಕ್ಸಾಂಡರ್ ಗ್ರಿಶ್ಚುಕ್ ಮತ್ತು ಭಾರತದ ವಿದಿತ್ ಗುಜರಾತಿ ಅವರು ತಲಾ ಐದು ಪಾಯಿಂಟ್ ಪಡೆದರು.

ಆದರೆ ಟೈಬ್ರೇಕ್ ಆಧಾರದ ಮೇಲೆ ಕ್ರಮವಾಗಿ ಮೂರು, ನಾಲ್ಕು ಮತ್ತು ಐದನೇ ಸ್ಥಾನ ಪಡೆದರು.


ಫ್ರಾನ್ಸ್‌ನ ಗ್ರ್ಯಾಂಡ್‌ಮಾಸ್ಟರ್ ಮ್ಯಾಕ್ಸಿಮ್ ವಾಷಿಯರ್ ಲಗ್ರಾವ್ –ಪಿಟಿಐ ಚಿತ್ರ

ವಿಶ್ವಕಪ್ ರನ್ನರ್ ಅಪ್ ಆಗಿರುವ ಪ್ರಗ್ಗು ಗುರುವಾರ ಎರಡು ಪಂದ್ಯ ಗೆದ್ದರೂ, ಬಹುನಿರೀಕ್ಷಿತ ಪಂದ್ಯದಲ್ಲಿ ಭಾರತದ ಅಗ್ರಮಾನ್ಯ ಆಟಗಾರ ಡಿ.ಗುಕೇಶ್ ಎದುರು 45 ನಡೆಗಳಲ್ಲಿ ಸೋಲನುಭವಿಸಿದರು.

18 ವರ್ಷದ ಪ್ರಜ್ಞಾನಂದ ದಿನದ ಮೊದಲ ಪಂದ್ಯದಲ್ಲಿ ವಿದಿತ್ ಗುಜರಾತಿ ಅವರನ್ನು 38 ನಡೆಗಳಲ್ಲಿ ಸೋಲಿಸಿದರು. ಗುಕೇಶ್ ಎದುರು ಪಂದ್ಯ ಸೋತರೂ ಪ್ರಜ್ಞಾನಂದ ತಮ್ಮ ಕೊನೆಯ ಪಂದ್ಯದಲ್ಲಿ ಸ್ವದೇಶದ ಅರ್ಜುನ್ ಎರಿಗೇಶಿ ಅವರನ್ನು 39 ನಡೆಗಳಲ್ಲಿ ಮಣಿಸಿದರು.

ಬೀಲ್ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಐದು ಬಾರಿ ಚಾಂಪಿಯನ್ ಆಗಿರುವ ಮ್ಯಾಕ್ಸಿಮ್ ಲಗ್ರಾವ್ ತಮ್ಮ ಮೊದಲ ಪಂದ್ಯದಲ್ಲಿ ಅರ್ಜುನ್ ಎರಿಗೇಶಿ ಅವರನ್ನು ಸೋಲಿಸಿದರು. ನಂತರ ಭಾರತದ ಇನ್ನೊಬ್ಬ ಆಟಗಾರ ಪೆಂಟ್ಯಾಲ ಹರಿಕೃಷ್ಣ ಅವರ ಮೇಲೆ ಗೆಲುವು ಪಡೆದು ಒಂದು ಸುತ್ತು ಉಳಿದಿರುವಂತೆಯೇ ಪ್ರಶಸ್ತಿ ಖಚಿತಪಡಿಸಿಕೊಂಡರು. ಹೀಗಾಗಿ ತಮ್ಮ ಕೊನೆಯ ಪಂದ್ಯವನ್ನು ಆರೇ ನಡೆಗಳಲ್ಲಿ ರಾಜಾಬೋವ್ ವಿರುದ್ಧ ಡ್ರಾ ಮಾಡಿಕೊಂಡರು.

ರಾಜಾಬೋವ್ ವಿರುದ್ಧ ಮೊದಲ ಪಂದ್ಯ ಡ್ರಾ ಮಾಡಿಕೊಂಡಿದ್ದ ಗುಕೇಶ್, ಕೊನೆಯ ಪಂದ್ಯದಲ್ಲಿ ಜರ್ಮನಿಯ ಯುವಪ್ರತಿಭೆ ವಿನ್ಸೆಂಟ್ ಕೀಮರ್ ಎದುರು ಸೋತು ಒಟ್ಟು 4.5 ಅಂಕಗಳೊಡನೆ ಆರನೇ ಸ್ಥಾನಕ್ಕೆ ಸರಿದರು.

ಐಎಸ್‌ಎಲ್: 21ರಂದು ಬಿಎಫ್‌ಸಿಗೆ ಬ್ಲಾಸ್ಟರ್ಸ್ ಎದುರಾಳಿ

ಬೆಂಗಳೂರು: ಪ್ರಸಕ್ತ ಋತುವಿನ ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಆರಂಭಿಕ ಪಂದ್ಯದಲ್ಲಿ ಬೆಂಗಳೂರು ಎಫ್‌ಸಿ ತಂಡವು ಕೇರಳ ಬ್ಲಾಸ್ಟರ್ಸ್ ಎಫ್‌ಸಿ ವಿರುದ್ಧ ಕೊಚ್ಚಿಯಲ್ಲಿ ಸೆ.21ರಂದು ಅಭಿಯಾನ ಆರಂಭಿಸಲಿದೆ.

ಎರಡನೇ ಪಂದ್ಯದಲ್ಲಿ (ಸೆ.27) ಬಿಎಫ್‌ಸಿ ತಂಡವು ಹಾಲಿ ಚಾಂಪಿಯನ್ ಮೋಹನ್ ಬಾಗನ್ ಸೂಪರ್ ಜೈಂಟ್ ವಿರುದ್ಧ ಪೈಪೋಟಿ ನಡೆಸಲಿದೆ. ಬೆಂಗಳೂರು ತಂಡವು ತವರಿನಲ್ಲಿ ಅ.4ರಂದು ಈಸ್ಟ್ ಬೆಂಗಾಲ್ ಎಫ್‌ಸಿ ವಿರುದ್ಧ ಸೆಣಸಾಡಲಿದೆ.

ಇಂಡಿಯನ್ ಸೂಪರ್ ಲೀಗ್ ಟೂರ್ನಿಯ ಜತೆಜತೆಯಲ್ಲೇ ಏಷ್ಯನ್ ಕ್ರೀಡಾಕೂಟ ಆರಂಭವಾಗಲಿದೆ. ಬೆಂಗಳೂರು ಎಫ್‌ಸಿ ತಂಡದ ಆರು ಆಟಗಾರರು ಏಷ್ಯಾಡ್‌ಗಾಗಿ ಪ್ರಕಟಿಸಿದ 22 ಮಂದಿಯ ಭಾರತ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಬಾಕ್ಸಿಂಗ್: ಫೈನಲ್‌ಗೆ ಆಕಾಶ್

ನವದೆಹಲಿ (ಪಿಟಿಯ): ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಆಕಾಶ್ ಕುಮಾರ್ (57 ಕೆ.ಜಿ) ಅರು ಪ್ಯಾಲಸ್ಟೀನ್‌ನ ವಾಸಿಂ ಅಬುಸಲ್ ಅವರನ್ನು ಸೋಲಿಸಿ, ಬೋಸ್ನಿಯಾ– ಹರ್ಜೆಗೋವಿನಾದ ಸರಯೇವೊದಲ್ಲಿ ನಡೆಯುತ್ತಿರುವ ಮುಸ್ತಾಫಾ ಹಜ್ರುಲಾಹೋವಿಕ್ ಸ್ಮಾರಕ ಬಾಕ್ಸಿಂಗ್ ಟೂರ್ನಿಯಲ್ಲಿ 57 ಕೆ.ಜಿ. ವಿಭಾಗದ ಫೈನಲ್ ತಲುಪಿದರು.


ಆಕಾಶ್ ಕುಮಾರ್

2021ರ ವಿಶ್ವ ಕೂಟದಲ್ಲಿ ಕಂಚಿನ ಪದಕ ಜಯಿಸಿದ್ದ ಕುಮಾರ್ ಗುರುವಾರ ನಡೆದ ಸೆಣಸಾಟದಲ್ಲಿ ಮೊದಲ ಸುತ್ತಿನಿಂದಲೇ ಆಕ್ರಮಣಕಾರಿಯಾಗಿದ್ದು, ಹೋರಾಟದ ಬಹುತೇಕ ಅವಧಿಯಲ್ಲಿ ನಿಯಂತ್ರಣ ಸಾಧಿಸಿದ್ದರು. ಎರಡನೇ ಸುತ್ತಿನಲ್ಲಿ ಪ್ರತ್ಯಾಕ್ರಮಣಕ್ಕೆ ಅಬುಸಲ್ ಯತ್ನಿಸಿದರೂ, ಭಾರತೀಯ ಬಾಕ್ಸರ್‌ನ ಸತತ ಪಂಚ್‌ಗಳ ಮುಂದೆ ಅವರ ಆಟ ನಡೆಯಲಿಲ್ಲ. ನಂತರವೂ ಎದುರಾಳಿಗೆ ಪುನರಾಗಮನ ಮಾಡಲು ಆಕಾಶ್ ಅವಕಾಶ ನೀಡದೇ 5–0 ಸರ್ವಾನುಮತದ ಜಯಪಡೆದರು.

ಫೈನಲ್ ಶನಿವಾರ ನಡೆಯಲಿದೆ.

ಮನಿಷ್ ಕೌಶಿಕ್ (63.5 ಕೆ.ಜಿ) ಮತ್ತು ಮಂಜು ರಾಣಿ (50 ಕೆ.ಜಿ) ಅವರು ಶುಕ್ರವಾರ ತಮ್ಮ ತಮ್ಮ ವಿಭಾಗದ ಸೆಮಿಫೈನಲ್ ಪಂದ್ಯಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಡಾಡ್ಜ್‌ಬಾಲ್: 10ರಂದು ಟ್ರಯಲ್ಸ್

ಬೆಂಗಳೂರು: ಏಷ್ಯನ್ ಡಾಡ್ಜ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಪಾಲ್ಗೊಳ್ಳಲಿರುವ ಭಾರತ ಸೀನಿಯರ್ ಪುರುಷರ ಮತ್ತು ಮಹಿಳೆಯರ ತಂಡಗಳ ಆಯ್ಕೆಗೆ ಭಾರತ ಡಾಡ್ಜ್‌ಬಾಲ್ ಫೆಡರೇಷನ್, ಸೆ.10 ರಂದು ಟ್ರಯಲ್ಸ್ ಆಯೋಜಿಸಿದೆ.

ಆಸಕ್ತ ಆಟಗಾರರು www.dodgeball.co.in ವೆಬ್‌ಸೈಟ್ ಮೂಲಕ ಹೆಸರು ನೋಂದಾಯಿಸಬಹುದು. ಆಯ್ಕೆ ಟ್ರಯಲ್ಸ್ ನಡೆಯುವ ಸ್ಥಳ: ಟ್ರಾನ್‌ಸೆಂಡ್ ಗ್ರೂಪ್ ಆಫ್ ಇನ್‌ಸ್ಟಿಟ್ಯೂಷನ್ಸ್, ವೈ.ವಿ.ಅಣ್ಣಯ್ಯ. ಯಲಚೇನಹಳ್ಳಿ, ಮೆಟ್ರೊ ಪಿಲ್ಲರ್ ಸಂಖ್ಯೆ 93ರ ಹತ್ತಿರ, ಕುಮಾರಸ್ವಾಮಿ ಬಡಾವಣೆ, ಬೆಂಗಳೂರು–78

ಮಾಹಿತಿಗೆ ರಾಜೇಶ್ (ಮೊ: 9902111379) ಅವರನ್ನು ಸಂಪರ್ಕಿಸಬಹುದು.

ಏಕದಿನ ವಿಶ್ವಕಪ್: ನೆದರ್ಲೆಂಡ್ಸ್ ತಂಡಕ್ಕೆ ಸ್ಕಾಟ್ ಎಡ್ವರ್ಡ್ಸ್ ನಾಯಕ

ನಿಯುವೆಜಿನ್ (ಪಿಟಿಐ): ಅನುಭವಿ ಆಟಗಾರರಾದ ರೋಲೋಫ್ ವ್ಯಾನ್‌ಡೆರ್ ಮೆರ್ವ್ ಮತ್ತು ಕಾಲಿನ್ ಆ್ಯಕರ್‌ಮನ್ ಅವರು ಭಾರತದ ಆತಿಥ್ಯದಲ್ಲಿ ಅಕ್ಟೋಬರ್ ಮತ್ತು ನವೆಂಬರ್‌ನಲ್ಲಿ ನಡೆಯಲಿರುವ ಏಕದಿನ ವಿಶ್ವ ಕಪ್ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ನೆದರ್ಲೆಂಡ್ಸ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ.

ಗುರುವಾರ 15 ಆಟಗಾರರ ತಂಡವನ್ನು ಪ್ರಕಟಿಸಲಾಗಿದ್ದು, ವಿಕೆಟ್ ಕೀಪರ್ –ಬ್ಯಾಟರ್ ಸ್ಕಾಟ್ ಎಡ್ವರ್ಡ್ಸ್ ತಂಡದ ನೇತೃತ್ವ ವಹಿಸಿದ್ದಾರೆ.

ಕ್ವಾಲಿಫೈಯರ್ ಟೂರ್ನಿಯಲ್ಲಿಆಡಿದ್ದ ತಂಡದಲ್ಲಿ ಮೆರ್ವ್ ಮತ್ತು ಆ್ಯಕರ್‌ಮನ್ ಸ್ಥಾನ ಪಡೆದಿರಲಿಲ್ಲ. ಅಲ್ಲಿ ನೆದರ್ಲೆಂಡ್ಸ್ ತಂಡವು ರನ್ನರ್ ಅಪ್ ಆಗಿತ್ತು.

ತಂಡ ಇಂತಿದೆ: ಸ್ಕಾಟ್ ಎಡ್ವರ್ಡ್ಸ್ (ನಾಯಕ, ವಿಕೆಟ್ ಕೀಪರ್), ಮ್ಯಾಕ್ಸ್ ಒಡೌಡ್, ಬಾಸ್ ಡೆ ಲೀಡ್, ವಿಕ್ರಮ್ ಸಿಂಗ್, ತೇಜ ನಿಡಮನೂರು, ಪೌಲ್ ವ್ಯಾನ್ ಮೀಕೆರೆನ್, ಕಾಲಿನ್ ಆ್ಯಕರ್‌ಮನ್, ರೋಲೋಫ್ ವ್ಯಾನ್ ಡೆರ್ ಮೆರ್ವ್, ಲೋಗನ್ ವಾನ್ ಬೀಕ್, ಆರ್ಯನ್ ದತ್, ರಯಾನ್ ಕ್ಲೇನ್, ವೆಸ್ಲಿ ಬರೆಸಿ, ಸಕೀಬ್ ಜುಲ್ಫಿಕರ್, ಷರೀಜ್ ಅಹ್ಮದ್ ಮತ್ತು ಸೈಬ್ರಾಂಡ್ ಎಂಗೆಲ್‌ಬ್ರೆಕ್ಟ್.

ಕ್ರಿಕೆಟ್: ಆಸ್ಟ್ರೇಲಿಯಾ ತಂಡಕ್ಕೆ ಜಯ

ಬ್ಲೋಮ್‌ಫಾಂಟೇನ್ (ಎಎಫ್‌ಪಿ): ಮಾರ್ನಸ್ ಲಾಬುಶೇನ್ ಮತ್ತು ಆಸ್ಟನ್ ಅಗರ್ ಅವರು ಮುರಿಯದ ಎಂಟನೇ ವಿಕೆಟ್‌ಗೆ ಸೇರಿಸಿದ 112 ರನ್‌ಗಳ ಜತೆಯಾಟದ ನೆರವಿನಿಂದ ಆಸ್ಟ್ರೇಲಿಯಾ ತಂಡ ಮೊದಲ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ 3 ವಿಕೆಟ್‌ಗಳ ಜಯ ಸಾಧಿಸಿತು.

ಗುರುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ದಕ್ಷಿಣ ಆಫ್ರಿಕಾ, ನಾಯಕ ತೆಂಬಾ ಬವುಮಾ (ಅಜೇಯ 114) ಅವರ ಶತಕದ ನೆರವಿನಿಂದ 49 ಓವರ್‌ಗಳಲ್ಲಿ 222 ರನ್ ಕಲೆಹಾಕಿತು.

ಸಾಧಾರಣ ಗುರಿ ಬೆನ್ನಟ್ಟಿದ ಪ್ರವಾಸಿ ತಂಡ 113 ರನ್‌ಗಳಿಗೆ ಏಳು ವಿಕೆಟ್ ಕಳೆದುಕೊಂಡು ಸೋಲಿನ ಹಾದಿ ಹಿಡಿದಿತ್ತು. ಆದರೆ ಲಾಬುಶೇನ್ (ಅಜೇಯ 80, 93 ಎ.) ಮತ್ತು ಅಗರ್ (ಅಜೇಯ 48, 69 ಎ.) ಅವರು ತಾಳ್ಮೆಯ ಆಟವಾಡಿ ತಂಡವನ್ನು ಜಯದತ್ತ ಮುನ್ನಡೆಸಿದರು. 40.2 ಓವರ್‌ಗಳಲ್ಲಿ 7 ವಿಕೆಟ್‌ಗೆ 225 ರನ್ ಗಳಿಸಿತು. ಮಿಚೆಲ್ ಮಾರ್ಷ್ ಬಳಗ 5 ಪಂದ್ಯಗಳ ಸರಣಿಯಲ್ಲಿ 1–0 ಯಿಂದ ಮುನ್ನಡೆ ಸಾಧಿಸಿತು.